Digitization by eGangotri and Sarayu Trust. Funding by MoE-IKS

ಜ್ಞಾನ



Q31:21116
33P5

ಶ್ರೀ ಶಿವಾನಂದ ಸ್ವಾಮಿಗಳು

ಶ್ರೀ ಜಡೇಸಿದ್ಧ ಶಿವಯೋಗೀಶ್ವರ ಶಾಂತಾಶ್ರಮ

Digitization by eGangotri and Sarayu Trust. Funding by MoE-IKS

Q31:21116 7260
33P5
Shivananda Swami
Jnana tr by Anjaneya
Swami.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Q31:21116
33P5

7260

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಜಡೆ ಸಿದ್ಧ ಶಿವಯೋಗೀಶ್ವರ ಶಾಂತಾಶ್ರಮ

ಜ್ಞಾನ

ಶಿವಾದ್ವೈತ ತತ್ವಭೂಷಣ, ವೇದಾಂತಾಚಾರ್ಯ

ಶ್ರೋ|| ಬ್ರ|| ಪೂಜ್ಯಶ್ರೀ ಶಿವಾನಂದ ಸ್ವಾಮಿಗಳು ಎಂ.ಎ.,

ದಾವಣಗೆರೆ

ಅನುವಾದಕರು

ಪಿ.ಎಲ್. ಆಂಜನೇಯ ಸ್ವಾಮಿ

ದಾವಣಗೆರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನ

ಗ್ರಂಥಕರ್ತರು :
ಶ್ರೋ|| ಬ್ರ|| ಪೂಜ್ಯಶ್ರೀ ಶಿವಾನಂದ ಸ್ವಾಮಿಗಳು ಎಂ.ಎ., ದಾವಣಗೆರೆ
Shree Shivananda Swamy, Davangere

ಪ್ರಕಾಶಕರು : ಶ್ರೀ ಜಡೆ ಸಿದ್ಧಯೋಗಿಶ್ವರ ಶಾಂತಾಶ್ರಮ,
2ನೇ ಮುಖ್ಯರಸ್ತೆ 3ನೇ ತಿರುವು, ವಿನೋಬನಗರ, ದಾವಣಗೆರೆ
Publishers : Shree Jade Siddha Shivayogeshwara Shanthashrama,
II main, III cross, Vinoba Nagar, Davangere

ಅನುವಾದಕರು : ಪಿ.ಎಲ್. ಆಂಜನೇಯ ಸ್ವಾಮಿ, ದಾವಣಗೆರೆ
Translated by : P.L. Anjaneya Swamy, Davangere

ಪ್ರತಿ : 1000

Q32:2M6
3395

ಬೆಲೆ : ರೂ. 60.00

ಹಕ್ಕು : ಗ್ರಂಥಕರ್ತರದು

ಪ್ರಥಮ ಮುದ್ರಣ - 2005

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7260

ಮುದ್ರಕರು :
ಲಕ್ಷ್ಮಿ ಮುದ್ರಣಾಲಯ
ಶ್ರೀ ಶಿವಯೋಗಿ ಮಂದಿರ ಕಾಂಪ್ಲೆಕ್ಸ್
ಹದಡಿ ರಸ್ತೆ, ದಾವಣಗೆರೆ. ಫೋನ್ : 230979

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮರ್ಪಣೆ



ಶ್ರೀ ಜಡೆಸಿದ್ಧ ಶಿವಯೋಗಿಗಳು

ಶ್ರೀ ನಿರಂಜನ ಮಹಾಸ್ವಾಮಿಗಳು

ಶಿವಶರಣೆ ಶ್ರೀ ಸರ್ವಮಂಗಳಮ್ಮನವರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಶ್ರೀ ಜಗದ್ಗುರು ವಿಶ್ವಾರಾಧ್ಯಃ ಪ್ರಸೀದತು ॥

"ವಿದ್ಯಾವಾಚಸ್ಪತಿ" ಶ್ರೀಮತ್ ಕಾಶೀಜ್ಞಾನ ಸಿಂಹಾಸನಾಧೀಶ್ವರ
**ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ
ಶಿವಾಚಾರ್ಯ ಮಹಾಸ್ವಾಮಿಗಳು**
ಜಂಗಮವಾಡಿಮಠ, ವಾರಾಣಸಿ

ಶುಭಾಶೀರ್ವಚನ

ಶ್ರೋ॥ ಬ್ರ॥ ಶಿವಾನಂದಸ್ವಾಮಿಗಳು ಶ್ರೀ ಜಡಸಿದ್ಧಶಿವಯೋಗೀಶ್ವರ ಶಾಂತಾಶ್ರಮ ದಾವಣಗೆರೆ ಇವರು ಬರೆದ "ಜ್ಞಾನ" ಎಂಬ ಕಿರುಹೊತ್ತಿಗೆಯನ್ನು ನೋಡಿ ಸಂತೋಷ ಹಾಗೂ ಸಮಾಧಾನವಾಗಿದೆ. ಶ್ರೀ ಶಿವಾನಂದ ಸ್ವಾಮಿಗಳವರು ವಿದ್ಯಾನಗರಿಯಾದ ಶ್ರೀ ಕಾಶೀಕ್ಷೇತ್ರದಲ್ಲಿ ೧೦ ವರ್ಷಗಳವರೆಗೆ ಇದ್ದುಕೊಂಡು ವೇದಾಂತ ಹಾಗೂ ಸಿದ್ಧಾಂತಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಸದಾ ವಿದ್ಯಾವ್ಯಾಸಂಗದಲ್ಲಿರುವ ಇವರು ಪಾಠಪ್ರವಚನಗಳ ಮೂಲಕ ಸಮಾಜದಲ್ಲಿ ಉತ್ತಮವಾದ ಆಧ್ಯಾತ್ಮಿಕ ಪರಿಸರವನ್ನು ನಿರ್ಮಿಸುತ್ತಾ ಬಂದಿದ್ದಾರೆ. ತಾವು ಮಾಡಿದ ಸ್ವಾಧ್ಯಾಯದ ಪ್ರಯೋಜನವು ಜನರಿಗೆ ದೊರೆಯಲೆಂಬ ಉದ್ದೇಶದಿಂದ ಈ ಪೂರ್ವದಲ್ಲಿ "ಶಾಂತಿ" ಎಂಬ ಮರಾಠಿಭಾಷೆಯ ಕಿರುಗ್ರಂಥವನ್ನು ರಚಿಸಿ ಅಭ್ಯಾಸಿಗಳಿಗೆ ಅನುಕೂಲತೆಯನ್ನು ಮಾಡಿಕೊಟ್ಟಿದ್ದಾರೆ. ಸದ್ಯ ಜ್ಞಾನವೆಂಬ ಕಿರುಗ್ರಂಥವನ್ನು ಕನ್ನಡಭಾಷೆಯಲ್ಲಿ ರಚಿಸಿರುವುದನ್ನು ನೋಡಿ ಶ್ರೀ ಮಹಾಸನ್ನಿಧಿಗೆ ಸಂತೋಷವಾಗಿದೆ.

ಜ್ಞಾನವು ಪ್ರತಿಯೊಬ್ಬ ವ್ಯಕ್ತಿಯ ಬದುಕಿಗೆ ಅತ್ಯಂತ ಅವಶ್ಯವಾದುದು. ಈ ಜ್ಞಾನವು ಲೌಕಿಕ ಮತ್ತು ಆಧ್ಯಾತ್ಮಿಕವೆಂದು ಎರಡು ಬಗೆಯದು, ಲೌಕಿಕ ಜ್ಞಾನವು ವ್ಯಾವಹಾರಿಕ ಜೀವನಕ್ಕೆ ಉಪಯುಕ್ತವಾದರೆ ಆಧ್ಯಾತ್ಮಿಕವು ಪಾರಮಾರ್ಥಿಕ ಬದುಕಿಗೆ ಸಹಾಯಕವಾಗುವುದು. ಇಂತಹ ಆಧ್ಯಾತ್ಮಿಕ ಜ್ಞಾನವನ್ನು ಸಂಪಾದಿಸಿದಾಗಲೇ ಜೀವಾತ್ಮನು ತನ್ನ ಮನುಷ್ಯ ಜೀವನದ ಗುರಿಯನ್ನು ಸಾಧಿಸಿಕೊಳ್ಳಬಲ್ಲದು. ಈ ಆಧ್ಯಾತ್ಮಿಕ ಜ್ಞಾನವು ಕೇವಲ ಔಪಾದಿಕವಾಗಿರದೇ ಅನುಭವಾತ್ಮಕವಾದಾಗಲೇ ಪೂರ್ಣ ಪ್ರಯೋಜನಕಾರಿಯಾಗಬಲ್ಲದು. ಆತ್ಮಪರಮಾತ್ಮರ ಅಭೇದ ಸ್ಥಿತಿಗೆ ತಲುಪಬೇಕಾದರೆ ಈ ಅನುಭಾವಾತ್ಮಕ ಜ್ಞಾನವೇ ಸಹಾಯಕವಾಗುವುದು ಅಂತೆಯೇ ಉಪನಿಷತ್ತುಗಳು ಶ್ರೋತ್ರೀಯನಾದ ಬ್ರಹ್ಮನಿಷ್ಠ ಗುರುವಿಗೆ ಶರಣಾಗತನಾಗಬೇಕೆಂದು ಉಪದೇಶಿಸಿವೆ. ಸಕಲಶಾಸ್ತ್ರ ಪಂಡಿತನಾಗಿದ್ದರೂ ಬ್ರಹ್ಮನಿಷ್ಠನಾಗಿರದಿದ್ದರೆ ಅವನ ಉಪದೇಶವೂ ಪರಿಣಾಮಕಾರಿಯಾಗಲಾರದು. ಅಂತೆಯೇ ಶಾಸ್ತ್ರನಿಷ್ಠೆಯ ಜೊತೆಗೆ ಬ್ರಹ್ಮನಿಷ್ಠತ್ವವನ್ನು ಸಹ ಸಂಪಾದಿಸಿಕೊಳ್ಳುವುದು ಸದ್ಗುರುವಿನ ಆದ್ಯ ಕರ್ತವ್ಯವಾಗಿದೆ. ಇದೇ ವಿಷಯವನ್ನು 'ಜ್ಞಾನ' ವೆಂಬ ಈ ಕಿರುಹೊತ್ತಿಗೆಯಲ್ಲಿ ಶ್ರೀ ಶಿವಾನಂದ ಸ್ವಾಮಿಗಳವರು ಉಪನಿಷತ್ತು, ಭಗವದ್ಗೀತೆ ಮತ್ತು ಶ್ರೀ ಸಿದ್ಧಾಂತ ಶಿಖಾಮಣಿ ಅನೇಕ ಪ್ರಾಮಾಣಿಕ ಗ್ರಂಥಗಳ ಪ್ರಮಾಣ ಪುರಸ್ಸರವಾಗಿ ಈ ಗ್ರಂಥವನ್ನು ರಚಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಿಜ್ಞಾಸುಗಳಾದ ವಾಚಕರು ಲಕ್ಷ್ಯಗೊಟ್ಟು ಇದನ್ನು ಅಭ್ಯಾಸಿಸಿದಾಗ ಮೇಲೆ ಹೇಳಿದ ಶಾಸ್ತ್ರೀಯ ಹಾಗೂ ಅನುಭವಾತ್ಮಕವಾದ ಜ್ಞಾನವನ್ನು ಪಡೆದುಕೊಳ್ಳುವುದರಲ್ಲಿ ಸಂದೇಹವಿಲ್ಲ.

ಶಿವಾತ್ಮಕಮಿದಂ ಸರ್ವಂ ಶಿವಾದನ್ಯನ್ನ ವಿದ್ಯತೇ ।
ಶಿವೋऽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಮ್ ॥

ಈ ಜಗತ್ತಿನಲ್ಲಿ ಜ್ಞಾನದಷ್ಟು ಪವಿತ್ರವಾದದ್ದು ಬೇರೊಂದಿಲ್ಲ. ಈ ಜಗತ್ತು ಎಲ್ಲವೂ ಶಿವರೂಪವಾಗಿದೆ. ಶಿವನಿಗಿಂತಲೂ ಭಿನ್ನವಾದದ್ದು ಬೇರೊಂದಿಲ್ಲ. ನಾನು ಸಹ ಶಿವಸ್ವರೂಪನೇ ಆಗಿದ್ದೇನೆ ಎಂಬ ತಿಳುವಳಿಕೆಯ ಜ್ಞಾನವೆಂಬುದಾಗಿ ಶ್ರೀ ಜಗದ್ಗುರು ರೇಣುಕಾ ಭಗವತ್ಪಾದರು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಪ್ರತಿಪಾದಿಸಿದ್ದಾರೆ. ಇಂತಹ ಜ್ಞಾನವೇ ಅನುಭವಾತ್ಮಕ ಜ್ಞಾನವೆಂದು ಕರೆಸಿಕೊಳ್ಳುತ್ತದೆ. ಗ್ರಂಥಕಾರರು ಇಂತಹ ಜ್ಞಾನವು ಸರ್ವರಿಗೂ ದೊರೆಯಲೆಂಬ ಉದ್ದೇಶದಿಂದ ಅನೇಕ ಉಕ್ತಿ ಪ್ರಮಾಣ ಹಾಗೂ ದೃಷ್ಟಾಂತಗಳ ಮೂಲಕ ಪ್ರತಿಪಾದಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅವರ ಈ ಪ್ರಯತ್ನವು ಸಫಲವಾಗಬೇಕಾದರೆ ಜಿಜ್ಞಾಸುಗಳು ಇದರ ಅಭ್ಯಾಸವನ್ನು ಅವಶ್ಯವಾಗಿ ಮಾಡಬೇಕು.

ಗ್ರಂಥ ಪ್ರಕಟಣೆಯ ಈ ಶುಭಪ್ರಸಂಗದಲ್ಲಿ ಗ್ರಂಥಮುದ್ರಣಕ್ಕೆ ಆರ್ಥಿಕ ಸಹಾಯವನ್ನು ಒದಗಿಸಿದ ಕರ್ನಲ್ ಕೆ.ಬಿ. ಶಿವಕುಮಾರ ಹಾಗೂ ಶ್ರೀಮತಿ ಅನ್ನಪೂರ್ಣ ಶಿವಕುಮಾರ ಇವರಿಗೆ ಅನಂತ ಮಂಗಳ ಆಶೀರ್ವಾದಗಳು, ಶ್ರೀ ಶಿವಾನಂದ ಸ್ವಾಮಿಗಳವರು ಮುಂದಿನ ದಿನಮಾನಗಳಲ್ಲಿ ಇಂತಹ ಉತ್ಕೃಷ್ಟವಾದ ಸಾಹಿತ್ಯ ಕೃಷಿಯನ್ನು ಸದಾ ಮಾಡುತ್ತಿರಲೆಂದು ಆಶೀರ್ವದಿಸುತ್ತೇವೆ. ಈ ಗ್ರಂಥವನ್ನು ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯ, ದಾವಣಗೆರೆಯ ಮಾಲೀಕರಾದ ಶ್ರೀ ಎ.ಎಂ. ಪ್ರಕಾಶ್‌ರವರಿಗೂ, ಸಿಬ್ಬಂದಿ ವರ್ಗಕ್ಕೂ ಅನಂತ ಮಂಗಳ ಆಶೀರ್ವಾದಗಳು. ಸರ್ವವಾಚಕರಿಗೆ ಮತ್ತೊಮ್ಮೆ ಶುಭಾಶೀರ್ವಾದಗಳು.

ಇತ್ಯಾ ಶಿವಃ

ಕ್ಯಾಂಪ್ : ರಾಣೇಬೆನ್ನೂರು
ದಿನಾಂಕ : ೨೪-೧-೨೦೦೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



॥ ಶ್ರೀ ಶಿವಯೋಗೀಶ್ವರಾಯನಮಃ ॥

ಪರಮಪೂಜ್ಯ
ಶ್ರೋ॥ ಬ್ರ॥ ಸದ್ಗುರು ಶ್ರೀ ಶಿವಾನಂದ ಭಾರತಿ
ಮಹಾಸ್ವಾಮಿಗಳು
ಶ್ರೀ ಶಿವಯೋಗೀಶ್ವರ ಸಾಧು ಸಂಸ್ಥಾನ ಮಠ, ಇಂಚಲ

ಆಶೀರ್ವಚನ

ಪ್ರಪಂಚದಲ್ಲಿ ಅಗಣಿತವಾದ ಗ್ರಂಥಗಳು ಇದ್ದರೂ ಸಹಿತ ನಮ್ಮ ಭಾರತದೇಶದಲ್ಲಿ ಋಷಿಮುನಿಗಳು, ಯುಗಧರ್ಮವನ್ನು ಬೋಧಿಸುವ ಹಾಗೂ ಸನಾತನಧರ್ಮವನ್ನು ಬೋಧಿಸುವ ಗ್ರಂಥಗಳೆಂದು ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ದೇಶ, ಕಾಲ, ಪರಿಸ್ಥಿತಿ, ರಾಜ್ಯಾಡಳಿತ, ವಿಜ್ಞಾನ, ಆರ್ಥಿಕ ಇತ್ಯಾದಿಗಳನ್ನು ವಿವರಿಸುವ ಗ್ರಂಥಗಳಿಗೆ, ಯುಗಧರ್ಮ ಗ್ರಂಥಗಳೆಂದೂ, ಜೀವ, ಈಶ್ವರ, ಪ್ರಕೃತಿ, ಜೀವ-ಈಶ್ವರ ಸಂಬಂಧ, ಜೀವ-ಬ್ರಹ್ಮರ ಸಂಬಂಧ ಇತ್ಯಾದಿ ವಿಷಯಗಳನ್ನು ಬೋಧಿಸುವ ಗ್ರಂಥಗಳಿಗೆ ಸನಾತನಧರ್ಮ ಗ್ರಂಥಗಳೆಂದು ಹೆಸರಿಸಿದ್ದಾರೆ.

ಪೂಜ್ಯಶ್ರೀ ಶಿವಾನಂದ ಸ್ವಾಮಿಗಳು ಜಡಿಸಿದ್ಧಾಶ್ರಮ ದಾವಣಗೆರೆ ಇವರು ರಚಿಸಿರುವ ಶುದ್ಧ ಜ್ಞಾನವನ್ನೆ ಬೋಧಿಸುವ ಈ ಗ್ರಂಥವು ಸನಾತನ ಧರ್ಮಗ್ರಂಥಗಳ ಸಾಲಿಗೆ ಸೇರಿದ್ದಾಗಿದೆ.

'ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ' ಎಂಬ ಭಗವದ್ಗೀತೆಯ ೪ನೇ ಅಧ್ಯಾಯದ ೩೮ನೇ ಶ್ಲೋಕವನ್ನು ಆಧಾರವಾಗಿಟ್ಟುಕೊಂಡು ಜ್ಞಾನಗ್ರಂಥವನ್ನು ರಚಿಸಿರುತ್ತಾರೆ.

ಜ್ಞಾನದೊಂದಿಗೆ ಸಮಾನವಾದದ್ದು ಹಾಗೂ ಪವಿತ್ರವಾದದ್ದು ಈ ಜಗತ್ತಿನಲ್ಲಿ ಯಾವುದು ಇದೆ? ಎಂದು ಪ್ರಶ್ನಿಸಿದರೆ ಖಂಡಿತವಾಗಿಯೂ ಯಾವುದು ಇಲ್ಲ ಎಂದು ಹೇಳಬಹುದು.

ಜ್ಞಾನವು ಬಹಳ ಶ್ರೇಷ್ಠವಾದುದು. ಮಾನವನ ಅಂತಿಮ ಘಟ್ಟವೇ ಜ್ಞಾನ ಘಟ್ಟವಾಗಿರುತ್ತದೆ. ಸರ್ವವೂ ಇದ್ದು ಜ್ಞಾನ ಒಂದಿಲ್ಲದಿದ್ದರೆ ಏನೇನೂ ಫಲವಿಲ್ಲ ಎಂದು ಹೇಳಬಹುದು. ಶಂಕರ ಭಗವತ್ಪಾದಾಚಾರ್ಯರು ಒಂದೆಡೆ

'ಧಾತುರ್ಲೋಕಃ ಸಾಧಿತೋ ವಾತತಂ ಕಿಂ ।
ವಿಷ್ಣುರ್ಲೋಕೋ ವೀಕ್ಷಿತೋ ವಾ ತತಃ ಕಿಂ ।
ಶಂಭೋರ್ಲೋಕಃ ಶಾಸಿತೋ ವಾತತಂ ಕಿಂ ।
ಯೇನ ಸ್ವಾತ್ಮಾನೈವ ಸಾಕ್ಷಾತ್ಕೃತೋऽಭೂತ್ ॥'

ಆತ್ಮಸ್ವರೂಪದ ಜ್ಞಾನ ಸಾಕ್ಷಾತ್ಕಾರವನ್ನೇ ಸಂಪಾದಿಸದ ಮನುಷ್ಯನು ಬ್ರಹ್ಮದೇವನ ಸತ್ಯಲೋಕವನ್ನು ಸಾಧಿಸಿದರೂ, ವಿಷ್ಣುವಿನ ವೈಕುಂಠ ಲೋಕವನ್ನು ನೋಡಿದರೂ, ಪರಶಿವನ ಕೈಲಾಸಲೋಕದ ಆಡಳಿತ ಪದವಿ ಪಡೆದರೂ ಏನೇನೂ ಫಲವಿಲ್ಲ ಎಂಬುದನ್ನು ಹೇಳುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದರಿಂದ ಜ್ಞಾನದ ಹಿರಿಮೆ ಗರಿಮೆಗಳು ಎದ್ದು ತೋರುತ್ತದೆ. ದಿವ್ಯಜ್ಞಾನದಷ್ಟು ಭವ್ಯವಾದದ್ದು ಮತ್ತು ಪರಿಶುದ್ಧವಾದದ್ದು ಬೇರೇನೂ ಇಲ್ಲ ಅಜ್ಞಾನವೇ ನಮ್ಮ ಬಂಧನಕ್ಕೆ ಕಾರಣ. ಜ್ಞಾನವೇ ಮುಕ್ತಿಗೆ ಕಾರಣ. ದಿವ್ಯಜ್ಞಾನದ ನೆಲೆಯನ್ನು ಹೊಂದಿದವನು ಶಾಂತಿಗಾಗಿ ಬೇರೆಲ್ಲಿ ಹುಡುಕಬೇಕಾಗಿಲ್ಲ ಅವನು ತನ್ನಲ್ಲಿಯೇ ಶಾಂತಿಯನ್ನು ಸವಿಯುತ್ತಾನೆ. ಅವನು ಆಧ್ಯಾತ್ಮದ ತುತ್ತತುದಿಗೇರಿರುತ್ತಾನೆ. ಆ ಜ್ಞಾನವೇ ಅವನನ್ನು ಸರ್ವಬಂಧನದಿಂದ ಬಿಡುಗಡೆ ಮಾಡಿ ಮುಕ್ತಿಯನ್ನು ಕೊಡುತ್ತದೆ. ಆದ್ದರಿಂದ ಜ್ಞಾನವು ಶ್ರೇಷ್ಠವಾದುದು. ಈ ಜ್ಞಾನದ ಸಮ ಯಾವುದು ಇಲ್ಲವೇ ಇಲ್ಲ.

ಇಂತಹ ದಿವ್ಯಜ್ಞಾನವನ್ನು ಬೋಧಿಸುವ ಈ ಗ್ರಂಥವು ಪವಿತ್ರವೂ ಪರಿಶುದ್ಧವೂ ಆಗಿರುತ್ತದೆ. ಭಗವಂತನು ಅರ್ಜುನನ್ನು ಆಧಾರವಾಗಿಟ್ಟುಕೊಂಡು ಸಮಸ್ತಜೀವಿಗಳಿಗೆ ಬೋಧಿಸಿದ ಗೀತಾಸಾರದ ಸಾರವನ್ನೆ ಪೂಜ್ಯಶ್ರೀ ಶಿವಾನಂದ ಸ್ವಾಮಿಗಳು ಈ ಗ್ರಂಥದಲ್ಲಿ ಧಾರೆ ಎರೆದಿದ್ದಾರೆ. ಈ ಗ್ರಂಥವು ಸರ್ವಜೀವಿಗಳಿಗೆ ಬೇಕಾಗಿರುವ ಗ್ರಂಥವಾಗಿರುತ್ತದೆ. ಈ ಗ್ರಂಥವು ಜೀವಿಗಳ ಅಜ್ಞಾನದ ಕತ್ತಲೆಯನ್ನು ಅಳುಕಿಸಿ ಜ್ಞಾನದ ಬೆಳಗನ್ನು ಬೆಳಗಿಸಲಿ, ಅದರಂತೆ ವೇದಭಗವತಿಯು ಇವರಿಂದ ಇನ್ನೂ ಅನೇಕ ಗ್ರಂಥಗಳನ್ನು ಬರೆಯಿಸಲಿ, ಗ್ರಂಥಗಳ ರಚನೆಯಿಂದ ವೇದ ಭಗವತಿಯ ಆಶೀರ್ವಾದ ಇವರಿಗೆ ದೊರೆಯಲಿ ಎಂದು ಗುರುನಾಥನಲ್ಲಿ ಪ್ರಾರ್ಥಿಸುತ್ತ ಈ ಗ್ರಂಥವನ್ನು ಓದಿ, ಕೇಳಿದವರ ಸರ್ವಬಂಧನಗಳು ಹರಿದು ಶಾಶ್ವತ ಸುಖ ದೊರೆತು ಧನ್ಯರಾಗಲಿ ಎಂದು ಹಾರೈಸುತ್ತೇವೆ.

ಓಂ ತತ್ಸತ್

ಕ್ಯಾಂಪ್ : ಹುಬ್ಬಳ್ಳಿ

ದಿನಾಂಕ : ೨೬-೧-೨೦೦೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೋ|| ಬ್ರ|| ಪೂಜ್ಯ ಶ್ರೀ ಗುರು ನಿತ್ಯಾನಂದ ಸ್ವಾಮೀಜಿ

ಶ್ರೀಗುರು ಸಿದ್ಧಾಶ್ರಮ, ಯಲವಟ್ಟಿ ಸುಕ್ಷೇತ್ರ

ಶುಭ ಸಂದೇಶ

ವಿಶ್ವವಾಙ್ಮಯದಲ್ಲಿ ಅನೇಕ ವ್ಯಾಖ್ಯಾನಗಳಿವೆ. ಎಲ್ಲಾ ವ್ಯಾಖ್ಯಾನಗಳಿಗಿಂತ ಜ್ಞಾನ ಪ್ರತಿಪಾದನೆ ಬಹಳ ಉತ್ಕೃಷ್ಟವಾದುದು, ಪವಿತ್ರವಾದುದು, ಗುಪ್ತವಾದುದು, ಅವ್ಯಯವಾದುದು ಮತ್ತು ಸತ್ಯವಾದುದು. ಜ್ಞಾನ ಸ್ವರೂಪವು ಶಾಸ್ತ್ರಜ್ಞಾನವಲ್ಲ, ಅಪರೋಕ್ಷ ಜ್ಞಾನವಾಗಿದೆ, ಅದರಲ್ಲೂ ಅನುಭವ ಜ್ಞಾನವಾಗಿದೆ. ಯಾವುದೊಂದನ್ನು ಅನುಭವ ಮಾಡಿಕೊಂಡು ಮುನಿಗಳೆಲ್ಲರೂ ಪರಮಸಿದ್ಧಿಯನ್ನು ಪಡೆದರೋ ಅದು ನಿಜವಾದ ಜ್ಞಾನ ಸ್ವರೂಪವಾಗಿದೆ. 'ಪವಿತ್ರಮಿದ ಮುತ್ತಮಮ್' 'ಜ್ಞಾನಾನಾಂ ಜ್ಞಾನಮುತ್ತಮಮ್' ಎಂದು ಶ್ರೀಗೀತಾ ಸ್ಮೃತಿ ಹೇಳುತ್ತದೆ. ಇಲ್ಲಿ 'ಉತ್ತಮ' ಶಬ್ದದ ಬಳಕೆಯಾಗಿದೆ. ಉತ್ತಮ ಎಂದರೆ ಯಾವುದು? 'ಜಗವೆಂದುದುಂ ತಾನೆ। ಜಗದೀಶನೂ ತಾನೆ। ಜಗದಾತ್ಮರೆಲ್ಲರೂ ತಾನೆ ಎಂದು ಬಗೆವಾತನುತ್ತಮನು ನೋಡಾ||' ಎಂದು ಶ್ರೀಮಾನ್ ನಿಜಗುಣ ಶಿವಯೋಗಿಗಲು ಕೊಂಡಾಡಿದ್ದಾರೆ. ಯಾವ ಜೀವಾತ್ಮನು ಮನುಷ್ಯ ಜನ್ಮಧಾರಣೆ ಮಾಡಿ ಬಂದಿದ್ದಾನೆಯೋ ಅವನು ಜ್ಞಾನವನ್ನು ಆಶ್ರಯಿಸಿದರೆ ಮುಕ್ತನಾಗುತ್ತಾನೆ, ಭೋಗವನ್ನು ಆಶ್ರಯಿಸಿದರೆ ದುಃಖವನ್ನು ಅನುಭವಿಸಿರುತ್ತಾನೆ. ಜ್ಞಾನದ ಬಲ ದೈವಬಲಕ್ಕಿಂತಲೂ ಉತ್ಕೃಷ್ಟವಾದುದು. ಉತ್ತಮವಾದುದು ಎಂದು ಪ್ರಸ್ಥಾನತ್ರಯಗಳಲ್ಲಿ ವ್ಯಾಸಭಗವಂತನು ಪ್ರತಿಪಾದನೆ ಮಾಡಿದ್ದಾರೆ. ದೈವಬಲಕ್ಕಿಂತಲೂ ಜ್ಞಾನದ ಬಲ ಅಧಿಕವಾದುದು ಎಂಬುದಕ್ಕೆ ಒಂದು ದೃಷ್ಟಾಂತದಿಂದ ಕಂಡುಕೊಳ್ಳಬಹುದು. ಉಪನಿಷತ್ತಿನಲ್ಲಿ ಬರುವಂತಹ ಕಥೆ.

ಗೋದಾವರಿ ನದಿತೀರದಲ್ಲಿ 'ಪ್ರತಿಷ್ಠಾನ' ವೆಂಬ ನಗರವಿತ್ತು. ಆ ಪಟ್ಟಣದ ಚಕ್ರವರ್ತಿ 'ಜಾನುಶೃತಿ' ಮಹಾರಾಜನು ಸದ್ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದ. ರಾಜಧರ್ಮಕ್ಕೂ, ಪ್ರಜಾಹಿತ ಕಾರ್ಯಗಳಿಗೂ ಹಾಗೂ ಪ್ರಜಾವಾತ್ಸಲ್ಯಕ್ಕೆ ಮೆಚ್ಚಿ ದೇವತೆಗಳು ಆತನನ್ನು ಅನುಗ್ರಹಿಸುವುದಕ್ಕಾಗಿ ಹಂಸಪಕ್ಷಿಯ ರೂಪವನ್ನು ತಾಳಿ ರಾಜಭವನದ ಕಡೆಗೆ ಆಕಾಶಮಾರ್ಗದಿಂದ ಬರುತ್ತಿದ್ದರು. ಪಟ್ಟಣವು ಸಮೀಪಿಸುತ್ತಲೇ ಹಂಸಪಕ್ಷಿಗಳಲ್ಲಿ 'ಭದ್ರಾಶ್ವ' ನೆಂಬ ಪಕ್ಷಿಯು ತನ್ನ ಆತ್ಮೀಯ ಗೆಳೆಯನಾದ ಮತ್ತೊಂದು ಹಂಸಪಕ್ಷಿಯನ್ನು ಜೊತೆಗೆ ಕರೆದುಕೊಂಡು ಅಹಂಕಾರಯುಕ್ತನಾಗಿ ಉಳಿದ ಹಂಸಪಕ್ಷಿಗಳಿಗಿಂತಲೂ ಬಹಳ ವೇಗವಾಗಿ ಹಾರುತ್ತಾ ಹೋಗುವುದನ್ನು ಕಂಡು, 'ಹೇ ಭದ್ರಾಶ್ವ, ಇಂತಹ ಅಹಂಕಾರವು ನಿನಗೆ ಸರಿಯಾದುದಲ್ಲ. ದೊಡ್ಡವರಲ್ಲಿಗೆ ಹೋಗಬೇಕಾದರೆ ವಿನಯಶಾಲಿಯಾಗಿ ಹೋಗಬೇಕು, ಆತನ ಕೋಪಕ್ಕೆ ಪಾತ್ರನಾಗಬೇಡ' ಎಂದು ಹೇಳಿದವು. ಅದಕ್ಕೆ ಭದ್ರಾಶ್ವನು 'ಜಾನುಶೃತಿ ಮಹಾರಾಜನ ಧರ್ಮತೇಜಸ್ಸು, ಆಚರಿಸಿದ ಕರ್ಮಫಲಗಳಿಗಿಂತಲೂ 'ರೈಕ್ವ' ನ ಜ್ಞಾನತೇಜಸ್ಸು ಉತ್ಕೃಷ್ಟ ಮತ್ತು ಶ್ರೇಷ್ಠ' ಎಂದು ಹೇಳಿತು.

ಅನೇಕ ಧರ್ಮಕಾರ್ಯಗಳನ್ನು ಮಾಡಿದ ಫಲವಾಗಿ ಮಹಾರಾಜನಿಗೆ ಪಕ್ಷಿಗಳ ಭಾಷೆಯನ್ನು ತಿಳಿಯುವ ಶಕ್ತಿ ಬಂದಿತ್ತು. ಹಂಸಪಕ್ಷಿಯ ಮಾತನ್ನು ಅರಮನೆಯ ಮೇಲುಭಾಗದಲ್ಲಿ ಕುಳಿತಿದ್ದ 'ಜಾನುಶೃತಿ' ಮಹಾರಾಜನು ಕೇಳಿ ತಕ್ಷಣ ತನ್ನ ಧೂತನನ್ನು ಕರೆಯಿಸಿ 'ರೈಕ್ವ' ನನ್ನು ಹುಡುಕಿ ಕರೆದುಕೊಂಡು ಬರಬೇಕೆಂದು ಆಜ್ಞಾಪಿಸಿದನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ರೈಕ್ವ' ನು ಗಾಡಿಯ ಮೇಲೆ ಮೂಟೆಗಳನ್ನು ಸಾಗಿಸಿ ತನ್ನ ಮತ್ತು ಎತ್ತುಗಳ ಉಪಜೀವನ ಸಾಗಿಸುತ್ತಿದ್ದನು. ಅವನಲ್ಲಿ ಯಾವ ನಿತ್ಯ-ನೈಮಿತ್ತಕ ಕರ್ಮಗಳೂ ಕಾಣಲಿಲ್ಲ. ಅವನು ನಿತ್ಯವೂ ಸ್ನಾನ ಮಾಡುವುದು ಅನುಮಾನವೇ ಆಗಿತ್ತು. ಇಂಥವನು ಗಾಡಿಯಲ್ಲಿ ಕುಳಿತುಕೊಂಡು ಅಂತರ್ಮುಖನಾಗಿ 'ತದ್‌ಬ್ರಹ್ಮಮಹಂ ನಚ ಭೂತ ಸಂಘಃ' (ಸರ್ವಾತೀತವಾದ ಬ್ರಹ್ಮ ಭೌತಿಕ ದೇಹವಲ್ಲ), 'ಶಿವೋಹಂ' ಎಂಬ ಉಪಾಸನೆಯಲ್ಲಿದ್ದನು. ಅವನನ್ನು 'ರೈಕ್ವ' ನೆಂದು ಗುರುತಿಸಿದ ದೂತನು 'ಮಹಾತ್ಮ! ಬ್ರಹಜ್ಞಾನಿಗಳಾಗಿ ತಾವು ಹೀಗೆ ಕುಳಿತುಕೊಳ್ಳಲು ಕಾರಣವೇನು?' ಎಂದು ಕೇಳಲು, ರೈಕ್ವನು 'ನನ್ನ ದೃಷ್ಟಿಯಲ್ಲಿ ಎಲ್ಲಾ ಸ್ಥಳಗಳೂ ಒಂದೇ, ಎಲ್ಲ ಸ್ಥಳಗಳು ನನ್ನ ಸ್ವರೂಪದಲ್ಲಿ ಕಲ್ಪಿತಗಳು, ಸ್ಥಳಗಳಲ್ಲಿ ನಾನೇ ಅಧಿಷ್ಠಾನ, ನನಗೆ ಸ್ಥಳಗಳು ಆಶ್ರಯವಲ್ಲ, ನಾನೇ ಸ್ಥಳಗಳಿಗೆ ಆಶ್ರಯನು' ಎಂದು ಹೇಳಿದನು. ದೂತನು ಅವನ ಪೂರ್ಣತ್ವಕ್ಕೆ ಆಶ್ಚರ್ಯಪಟ್ಟು ರಾಜನಲ್ಲಿಗೆ ಹೋಗಿ ನಡೆದ ವೃತ್ತಾಂತವನ್ನು ತಿಳಿಸಿದನು. ಅದನ್ನು ಕೇಳಿದ ರಾಜನು ಆ ಮಹಾಪುರುಷನ ದರ್ಶನದಿಂದ ಧನ್ಯನಾಗಬೇಕು ಎಂದು ಬಯಸಿ ಸಾಕಷ್ಟು ಗೋಧನ ಸಂಪತ್ತನ್ನು ತೆಗೆದುಕೊಂಡು, ತನ್ನ ಅನುಚರರೊಂದಿಗೆ ಭಕ್ತಿಯಿಂದ ಬಂದು ನಮಸ್ಕರಿಸಿ 'ಮಹಾತ್ಮನೇ! ಈ ಸಂಪತ್ತನ್ನು ಸ್ವೀಕರಿಸಿ ನಿನ್ನಲ್ಲಿರುವ ಜ್ಞಾನವನ್ನು ನನಗೆ ಪ್ರಸಾದಿಸಿ ಕೃತಾರ್ಥನನ್ನಾಗಿ ಮಾಡಬೇಕು' ಎಂದು ಪ್ರಾರ್ಥಿಸಲು, ಆ ಮಹಾಪುರುಷನು ಕೋಪಗೊಂಡವನಂತೆ ನಟಿಸಿ 'ನೀನು ಶೂದ್ರನು, ಜ್ಞಾನಕ್ಕೆ ಅಧಿಕಾರಿಯಲ್ಲ, ನೀನು ತಂದ ಸಂಪತ್ತನ್ನು ತೆಗೆದುಕೊಂಡು ಹೋಗಿ ನಿನಗೆ ಇಷ್ಟಬಂದಂತೆ ಉಪಯೋಗಿಸಿಕೋ' ಎಂದು ಗದರಿಸಿದನು. 'ನಾನು ಶೂದ್ರನಲ್ಲಿ ಕ್ಷತ್ರಿಯನು, ನಾನು ಬ್ರಹ್ಮಜ್ಞಾನಕ್ಕೆ ಅಧಿಕಾರಿ' ಎಂದು ಹೇಳಲು, ರೈಕ್ವನು 'ಶೂದ್ರತ್ವವೆಂಬುದು ಜಾತಿಯಿಂದ ನಿರ್ಣಯವಾಗುವುದಿಲ್ಲ. ನಶ್ವರವಾದ ಧನವನ್ನು ಕೊಟ್ಟು ಬ್ರಹ್ಮಜ್ಞಾನವನ್ನು ಪಡೆದುಕೊಳ್ಳಬೇಕೆನ್ನುವ ಬುದ್ಧಿ ಉಳ್ಳವನು ಶೂದ್ರನು' ಎಂದು ಹೇಳಿದನು. ಆಗ ರಾಜನು ಅವನ ವೈರಾಗ್ಯ ವಿಚಾರಕ್ಕೆ ಆಶ್ಚರ್ಯಪಟ್ಟು ಇಂತಹ ಜ್ಞಾನ ಹೇಗೆ ಪ್ರಾಪ್ತವಾಯಿತು ಎಂದು ಕೇಳಲು, ನಾನು 'ಗೀತಾಜ್ಞಾನ' ವನ್ನು ಆಶ್ರಯಿಸಿ ಉತ್ತಮ ಫಲವನ್ನು ಹೊಂದಿದೆ ಎಂದು ಹೇಳಿದನು. 'ರೈಕ್ವ' ನ ಕೃಪಾಶೀರ್ವಾದದಿಂದ ಧರ್ಮತೇಜಸ್ಸಿಗಿಂತಲೂ ಜ್ಞಾನತೇಜಸ್ಸಿನ ಬಲ ಉತ್ತಮವಾದುದು ಎಂಬುದು ಮಹಾರಾಜನಿಗೆ ಅರಿವಾಯಿತು. 'ಬ್ರಹ್ಮಜ್ಞಾನ' ಬ್ರಹ್ಮವಿದ್ಯಾ ಸಂಪ್ರದಾಯ ಕರ್ತೃಗಳಿಂದ ಮೊದಲುಗೊಂಡು ಋಷಿ-ಮುನಿಗಳ ಮೂಲಕವಾಗಿ ರಾಜಮಹಾರಾಜರವರೆಗೆ ಪ್ರಸಿದ್ಧವಾಗಿ ವ್ಯಾಪಿಸಿಕೊಂಡಿರುವುದಾಗಿದೆ. ಪರಮಪವಿತ್ರವಾದ ಜ್ಞಾನವನ್ನು ಮಾನವಮಾತ್ರರೆಲ್ಲ ಪಡೆದು ಕೃತಾರ್ಥರಾಗಲೆಂದು ಪರಮಪೂಜ್ಯ, ಶಿವಾದ್ವೈತ ತತ್ವಭೂಷಣರಾದ, ಶ್ರೋ। ಬ್ರ। ಶ್ರೀ ಶ್ರೀ ಶ್ರೀ ಸದ್ಗುರು ಶಿವಾನಂದ ಮಹಾಸ್ವಾಮೀಜಿಯವರು, ಜಡೇಸಿದ್ಧಶಾಂತಾಶ್ರಮ, ದಾವಣಗೆರೆ ಇವರು ಲೋಕಕಲ್ಯಾಣಕ್ಕಾಗಿ, ಪ್ರಸ್ಥಾನತ್ರಯಗಳಲ್ಲಿ ಉಪನಿಷತ್, ಶ್ರೀಮದ್ ಭಗವದ್ಗೀತಾ ಇವೆರಡನ್ನು ಆಧಾರವಾಗಿಟ್ಟುಕೊಂಡು ತಮ್ಮ ವಿದ್ವತ್ ಬಲದಿಂದಲೂ, ಸ್ವ ಅನುಭವದಿಂದಲೂ 'ಜ್ಞಾನ' ವೆಂಬ ಅಂಕಿತನಾಮವನ್ನಿಟ್ಟು ಪವಿತ್ರಗ್ರಂಥ ರಚಿಸಿ ಅಚ್ಚು ಹಾಕಿಸಿದ್ದಾರೆ.

ಇಂತಹ ಪವಿತ್ರಗ್ರಂಥವನ್ನು ಸರ್ವಭಕ್ತರು, ಮುಮುಕ್ಷುಗಳು, ಅಭ್ಯಾಸಿಗಳು ಲಿಂಗಭೇದವಿಲ್ಲದೆ ಸರ್ವರೂ ಓದಿ ಅದರ ಅನುಭವವನ್ನು ಪಡೆದು ಜೀವನದಲ್ಲಿ ಅಳವಡಿಸಿಕೊಂಡು ಧನ್ಯರಾಗಲೆಂದು ಗುರುಪರಮಾತ್ಮನಲ್ಲಿ ಪ್ರಾರ್ಥಿಸಿ ಸರ್ವರೂ ಆತ್ಮಕಲ್ಯಾಣ ಮಾಡಿಕೊಳ್ಳಲೆಂದು ಶುಭಸಂದೇಶ ಕೋರುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗ್ರಂಥಕರ್ತರ ನುಡಿ

ವೇದಗಳು ಭಾರತೀಯ ಜ್ಞಾನ-ವಿಜ್ಞಾನದ ಉಗಮ ಕೇಂದ್ರಗಳಾಗಿವೆ. ಅವುಗಳ ಮಹತ್ವಪೂರ್ಣ ಸ್ಥಳಗಳ ವಿಸ್ತಾರ ಉಪನಿಷದ್‌ಗಳಲ್ಲಿ ಸ್ಪಷ್ಟವಾಗಿದೆ.

'ಉಪನಿಷದ್' ಶಬ್ದದ ಅರ್ಥ ಬ್ರಹ್ಮಜ್ಞಾನ (ಆತ್ಮಜ್ಞಾನ) ವೆಂದು ಹೇಳಲ್ಪಟ್ಟಿದೆ - "ಉಪಸಾಮೀಪ್ಯೆನ ನಿ-ನಿತರಾಂ ಪ್ರಾಪ್ನುವಂತಿ ಪರಂ ಬ್ರಹ್ಮ ಯಯಾ ವಿದ್ಯಯಾ ಸಾ ಉಪನಿಷದ್". ಅರ್ಥಾತ್ - "ಯಾವ ಜ್ಞಾನದಿಂದ ಪರಬ್ರಹ್ಮನ ಸಾಮೀಪ್ಯ ಹಾಗೂ ತಾದಾತ್ಮ್ಯ ಸಂಬಂಧ ಪ್ರಾಪ್ತವಾಗುವುದೋ ಅದೇ ಉಪನಿಷದ್" ಎಂಬುದಾಗಿದೆ.

ಉಪ + ನಿ ಈ ಎರಡೂ ಉಪಸರ್ಗ "ಸದ್" ಧಾತುವಿನಿಂದ ಕ್ವಿಪ್ ಪ್ರತ್ಯಯ ಮಾಡಿದ ಮೇಲೆ "ಉಪನಿಷದ್" ಶಬ್ದವು ಉಂಟಾಗುತ್ತದೆ. "ಸದ್" ಧಾತುವು ಮೂರು ಅರ್ಥಗಳಲ್ಲಿ ಸ್ಪಷ್ಟವಾಗುತ್ತದೆ. (೧) "ವಿಶರಣ" (ವಿನಾಶ) (೨) "ಗತಿ" (ಜ್ಞಾನ ಮತ್ತು ಪ್ರಾಪ್ತಿ) (೩) "ಅವಸಾದನ" (ಶಿಥಿಲಗೊಳ್ಳುವುದು). ಈ ಆಧಾರದ ಮೇಲೆ "ಉಪನಿಷದ್" ಶಬ್ದದ ಅರ್ಥ ಉಂಟಾಗುತ್ತದೆ.

"ಯಾವುದು ಪಾಪ-ತಾಪಗಳ ನಾಶ ಮಾಡುತ್ತದೋ ಅದೇ ಉಪನಿಷದ್"

ಸ್ವಾಮಿ ವಿವೇಕಾನಂದರು ತಮ್ಮ ಒಂದು ಭಾಷಣದಲ್ಲಿ ಹೀಗೆ ಹೇಳುತ್ತಾರೆ, "ನಾನು ಉಪನಿಷದ್‌ಗಳನ್ನು ಓದುತ್ತಾ ಇದ್ದರೆ ನನ್ನ ನೇತ್ರಗಳು ಅಶ್ರುಮಯವಾಗುತ್ತವೆ ಮತ್ತು ಅಶ್ರುಗಳ ಧಾರೆ ಹರಿಯಲಾರಂಭಿಸುತ್ತವೆ", ಕಾರಣ ಇದರಲ್ಲಿ ಅಂತಹ ಮಹಾನ್ ಜ್ಞಾನ ಅಡಗಿದೆ. ನಮಗೆ ಇದರ ಅವಶ್ಯಕತೆಯಿದೆ. ಉಪನಿಷತ್‌ಗಳಲ್ಲಿರುವ "ತೇಜಸ್ವಿತಾ" (ಆತ್ಮಜ್ಞಾನ) ವನ್ನು ನಮ್ಮ ಜೀವನದಲ್ಲಿ ವಿಶೇಷ ರೂಪದಿಂದ ಧಾರಣೆ ಮಾಡಬೇಕು - ನಮಗೆ ಶಕ್ತಿಬೇಕು. ಈ ಶಕ್ತಿ ಎಲ್ಲಿಂದ ಪ್ರಾಪ್ತವಾಗುತ್ತದೆ? ಉಪನಿಷತ್ತುಗಳೇ ಶಕ್ತಿಯ ಖಜಾನೆಗಳಾಗಿವೆ. ಇವುಗಳಲ್ಲಿ ಎಂತಹ ಶಕ್ತಿ ತುಂಬಿದೆಯೆಂದರೆ, ಅದು ಸಂಪೂರ್ಣ ವಿಶ್ವಕ್ಕೆ ಬಲ, ಶೌರ್ಯ ಹಾಗೂ ಹೊಸ ಜೀವನವನ್ನು ಕೊಡಬಲ್ಲದು.

ಉಪನಿಷತ್ತುಗಳು ಯಾವುದೇ ಒಂದು ದೇಶ, ಜಾತಿ, ಮತ, ಸಂಪ್ರದಾಯಗಳ ಭೇದವನ್ನು ಮಾಡದೆ, ದೀನ ದುರ್ಬಲ ದುಃಖಿತರನ್ನು ಉದ್ದೇಶಿಸಿ ಕೂಗಿ ಕೂಗಿ ಹೇಳುತ್ತದೆ, "ಏಳಿ, ಎದ್ದೇಳಿ, ತಮ್ಮ ಕಾಲ ಮೇಲೆ ನಿಂತುಕೊಳ್ಳಿ. ನಾನಾ ರೀತಿಯ ಬಂಧನಗಳನ್ನು ಕಡಿದು ಹಾಕಿ ಶಾರೀರಿಕ, ಮಾನಸಿಕ, ಆಧ್ಯಾತ್ಮಿಕ ಸ್ವಾಧೀನತೆಯನ್ನು ಪಡೆದುಕೊಳ್ಳಿ". ಇದುವೆ ಉಪನಿಷತ್ತುಗಳ ಮೂಲಮಂತ್ರವಾಗಿದೆ.

"ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲ ನಂದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ತ ॥"

"ಸಮಸ್ತ ಉಪನಿಷತ್ತುಗಳೇ ಹಸು (ಆಕಳು), ಇವುಗಳನ್ನು ಹಿಂಡುವವನೇ ಗೋಪಾಲನಂದನ ಶ್ರೀಕೃಷ್ಣನು, ಅರ್ಜುನನೇ ಕರುವು, ಶ್ರೇಷ್ಠ ಬುದ್ಧಿವಂತನಾದ ಪುರುಷ ಈ ಜ್ಞಾನಾಮೃತ ರೂಪಿ ಕ್ಷೀರವನ್ನು ಕುಡಿಯುವಂತವನಾಗಿದ್ದಾನೆ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರುಣಾಮಯಿಯಾದ ಪರಮಾತ್ಮನು ಅರ್ಜುನನ್ನು ನಿಮಿತ್ತವನ್ನಾಗಿ ಮಾಡಿಕೊಂಡು ಸಮಸ್ತ ಮಾನವಕುಲಕ್ಕೆ ಗೀತಾಶಾಸ್ತ್ರವನ್ನು ಉಪದೇಶಿಸಿದ್ದಾನೆ. ಗೀತೆಗೆ ಶಾಸ್ತ್ರವೆಂದು ಕರೆದಿದ್ದು ಅನ್ವರ್ಥವಾಗಿದೆ.

"ಗೀತಾಶಾಸ್ತ್ರಮಿದಂ ಪುಣ್ಯಂ" - "ಶಾಸ್ತ್ರವೆಂಬ ಶಬ್ದವು - ಶಾಸು" ಅನುಶಾಸನೆ - ಅನುಶಿಷ್ಟೆ ಎಂಬ ಧಾತುವಿನಿಂದ ನಿರ್ಮಿತವಾಗಿದೆ.

"ಶಾಸ್ತಿ ಹಿತಾಹಿತಂ ಯತ್‌ತತ್ ಶಾಸ್ತ್ರಂ", ಅಂದರೆ ಹಿತ ಮತ್ತು ಅಹಿತಗಳ ಅರಿವನ್ನು ಮಾಡಿಕೊಡುವ ಮೂಲಕ ಶಾಸ್ತ್ರವೆನಿಸಿಕೊಳ್ಳುತ್ತದೆ. ಇಂತಹ ಗೀತಾಶಾಸ್ತ್ರವು ಜ್ಞಾನ ಪ್ರಧಾನವೊ ಅಥವಾ ಕರ್ಮಪ್ರಧಾನವೊ ಎಂಬುದರ ಬಗ್ಗೆ ಪಂಡಿತರಲ್ಲಿ ವಾದವಿವಾದಗಳಿವೆ. ಆದರೆ ಶ್ರೀ ಶಂಕರಾಚಾರ್ಯರೇ ಮೊದಲುಗೊಂಡು ಸಮಸ್ತ ಆಚಾರ್ಯರೂ ಹಾಗೂ ವಿದ್ವಾಂಸರೂ ಸಹ ಗೀತಾಶಾಸ್ತ್ರವು ಜ್ಞಾನ ಪ್ರಧಾನಶಾಸ್ತ್ರವೆಂದೇ ಪ್ರತಿಪಾದಿಸಿದ್ದಾರೆ. ಇದರ ವಿವರಣೆಯು ಈ "ಜ್ಞಾನ" ವೆಂಬ ಗ್ರಂಥದ ಗರ್ಭದಲ್ಲಿ ವಿಸ್ತಾರವಾಗಿ ಸ್ಪಷ್ಟಪಡಿಸಿದೆ. "ಇದಂ ಜ್ಞಾನ ಮುಪಾಶ್ರಿತ್ಯ ಮಮ ಸಾಧರ್ಮ್ಯ ಮಾಗತಾ" ಮುಂತಾದ ಜ್ಞಾನ ಸಂಬಂಧ ಶ್ಲೋಕಗಳನ್ನು ಪರಮಾತ್ಮನು ಬೋಧಿಸಿದ್ದಾನೆ. ಅರ್ಥಾತ್ ತತ್ವಜ್ಞಾನವನ್ನು ಬೋಧಿಸುವ ಎಲ್ಲಾ ಉಪನಿಷತ್ತುಗಳ ಸಾರಸರ್ವಸ್ವವೇ ಶ್ರೀ ಮದ್ಭಗವದ್ ಗೀತೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. 'ಗಿ ಕಾರ ತ್ಯಾಗ ರೂಪಸ್ಯಾತ್, ತ ಕಾರಂ ತತ್ವ ಬೋಧಕಮ್ ಗೀತಾವಾಕ್ಯಮಿದಂ ಗೇಯಂ ಸರ್ವ ಮುಮುಕ್ಷುಭಿಃ' ಎಂದು ಗೀತಾಶಬ್ದಕ್ಕೆ ಅರ್ಥ.

ಜ್ಞಾನ ಪ್ರಧಾನವಾಗಿರುವ ಉಪನಿಷತ್ತು ಹಾಗೂ ಶ್ರೀಮದ್ಭಗವದ್ ಗೀತೆಯನ್ನು ಆಧಾರವಾಗಿಟ್ಟುಕೊಂಡು ಈ "ಜ್ಞಾನ" ವೆಂಬ ಕಿರುಗ್ರಂಥವನ್ನು ಹೊರತರಲಾಗಿದೆ.

"ಜ್ಞಾನೇನ ಹಿನಾ ಪಶುಭಿ ಸಮಾನಃ"

ಜ್ಞಾನವೊಂದಿಲ್ಲದಿದ್ದರೆ. ಅವನು ಪಶುವಿಗೆ ಸಮಾನವೆಂದಿದ್ದಾರೆ.

ಸರ್ವೇ ಸಾಮಾನ್ಯರಿಗೂ "ಜ್ಞಾನ" ದ ಅರಿವು ಉಂಟಾಗಲಿ, ಮುಮುಕ್ಷುಗಳಿಗೂ, ಸಜ್ಜನರಿಗೂ ಈ ಗ್ರಂಥದಿಂದ ಲಾಭಾನ್ವಿತವಾಗಲಿ ಎಂಬ ಸದುದ್ದೇಶದಿಂದ ಈ ಗ್ರಂಥವನ್ನು ರಚಿಸಲಾಗಿದೆ.

ಇದರಲ್ಲಿ "ಜ್ಞಾನ" ವೆಂದರೆ ಏನು? ಜ್ಞಾನಕ್ಕೆ ಸಾಧನಗಳಾವುವು? ಜ್ಞಾನದ ನಂತರದ ಫಲದ ವಿಚಾರ, ಜ್ಞಾನಿ ಪುರುಷನ ಇರುವಿಕೆ, ಪ್ರಾರಬ್ಧ ಕರ್ಮ ವಿವರ, ಮುಂತಾದ ವಿಷಯಗಳ ವಿವೇಚನೆಯನ್ನು ಸಣ್ಣ-ಸಣ್ಣ ಉದಾಹರಣೆಗಳ ಮೂಲಕ ಸಾಮಾನ್ಯರಿಗೂ ಅರ್ಥವಾಗುವ ಹಾಗೆ ಅನೇಕ ಗ್ರಂಥಗಳ ಅಭಿಪ್ರಾಯಗಳನ್ನು ಮುಂದಿಟ್ಟುಕೊಂಡು ಉಪನಿಷತ್ತು-ಗೀತಾ ಪ್ರಮಾಣ ಸಹಿತ "ಜ್ಞಾನ" ಎಂಬ ಗ್ರಂಥವನ್ನು ರಚಿಸಲಾಗಿದೆ.

ನಾನು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುವಾಗ ಮರಾಠಿ ಭಾಷೆಯಲ್ಲಿ ಬರೆದ "ಶಾಂತಿ" ಎಂಬ ಗ್ರಂಥವನ್ನು "ಶೈವ ಭಾರತಿ ಭವನ ಶ್ರೀ ಜಂಗಮವಾಡಿ ಮಠ ವಾರಾಣಾಸಿ" ಯಿಂದ ಮುದ್ರಿಸಲಾಗಿತ್ತು. ಆ ಬಳಿಕ ಪರಮಶಾಂತಿಗೆ ಕಾರಣವಾದ "ಜ್ಞಾನ" ದ ಬಗ್ಗೆ ಬರೆಯಬೇಕು ಎಂಬ ಸಂಕಲ್ಪ ಉಂಟಾದಾಗ ಅದನ್ನು ಹಿಂದಿಭಾಷೆಯಲ್ಲಿ ಬರೆದಿದ್ದೆ. ಅದನ್ನು ಶ್ರೀ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಪರಮಪೂಜ್ಯ ಜಗದ್ಗುರು ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ತೋರಿಸಿದಾಗ ಅದನ್ನು ಓದಿ ಬಹಳಷ್ಟು ಸಂತೋಷವನ್ನು ವ್ಯಕ್ತಪಡಿಸಿದರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಗೂ ಆಶೀರ್ವದಿಸಿದರು. ಕಾಶಿ ಮಹಾಸನ್ನಿಧಿಯ ಶ್ರೀ ಚರಣಗಳಲ್ಲಿ ಅನಂತಾನಂತ ನಮಸ್ಕಾರಗಳು. ಇನ್ನೇನು ಮುದ್ರಣಗೊಳಿಸಬೇಕು ಎನ್ನುವುದರಲ್ಲಿ ಕೆಲವು ನನ್ನ ಸ್ನೇಹಿತರು ಸಲಹೆ ನೀಡಿದಂತೆ ನಮ್ಮ ಕಾರ್ಯಕ್ಷೇತ್ರ ಕರ್ನಾಟಕವಾಗಿರುವುದರಿಂದ ಅಲ್ಲಿಯ ಭಕ್ತ ಸಮೂಹಕ್ಕೆ ಇದರ ಲಾಭ ಉಂಟಾಗಲಿ ಎನ್ನುವ ದೃಷ್ಟಿಯಿಂದ ಹಿಂದಿ ಭಾಷೆಯಲ್ಲಿ ಬರೆದ ಬರಹ ದಾವಣಗೆರೆಯ ನಿವೃತ್ತ ಇಂಜಿನಿಯರ್ ಶ್ರೀ ಪಿ.ಎಲ್. ಆಂಜನೇಯಸ್ವಾಮಿಯವರನ್ನು ಕೇಳಿಕೊಂಡಾಗ ಕನ್ನಡಕ್ಕೆ ಅನುವಾದಿಸುತ್ತೇನೆ ಎಂದು ಸಹರ್ಷದಿಂದ ಒಪ್ಪಿಕೊಂಡರು. ಅವರು ಬಹಳಷ್ಟು ಶ್ರಮ, ಶ್ರದ್ಧೆ ನಿಷ್ಠೆ ವಹಿಸಿ ಕನ್ನಡಕ್ಕೆ ಅನುವಾದಿಸಿದ್ದಾರೆ.

ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವುದು ಕಷ್ಟವಾದ ಕೆಲಸವೇ ಸರಿ. ಆದಾಗ್ಯೂ ಅವರು ತಮಗೆ ಸಾಧ್ಯವಾದ ಮಟ್ಟಿಗೆ ಪ್ರಯತ್ನಪೂರ್ವಕವಾಗಿ ಕೆಲವೇ ದಿನಗಳಲ್ಲಿ ಅನುವಾದ ಮಾಡಿ ನನ್ನ ಕೈಯಲ್ಲಿ ತಂದುಕೊಟ್ಟಿದ್ದಾರೆ. ಅವರ ಈ ಅಪಾರಸೇವೆ ಸ್ತುತ್ಯವಾಗಿದೆ ಹಾಗೂ ತಮ್ಮ ಅನೇಕ ಕೆಲಸಕಾರ್ಯಗಳಿದ್ದರೂ ಸಹ ಅವುಗಳನ್ನು ಬದಿಗೊತ್ತಿ ಪ್ರೆಸ್ ಕಾಪಿ, ಪ್ರೂಫ್ ನೋಡಲು ನನಗೆ ಬಹಳಷ್ಟು ಸಹಾಯ ಮಾಡಿದ್ದಾರೆ. ಪರೋಕ್ಷ-ಅಪರೋಕ್ಷವಾಗಿ ಸಹಾಯ ಮಾಡಿದ ಎಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಈ ಗ್ರಂಥಕ್ಕೆ ಆಶೀರ್ವಚನವನ್ನು ನೀಡಿರುವ ಪೂಜ್ಯರಾದ ಶ್ರೀಶ್ರೀಶ್ರೀ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ವಾರಣಾಸಿ ಹಾಗೂ ಶ್ರೀಶ್ರೀಶ್ರೀ ಸದ್ಗುರು ಶಿವಾನಂದ ಭಾರತಿ ಮಹಾಸ್ವಾಮಿಗಳು ಇಂಚಲ, ಹಾಗೂ ಶ್ರೀ ಶ್ರೀ ನಿತ್ಯಾನಂದ ಮಹಾಸ್ವಾಮಿಗಳು ಯಲವಟ್ಟಿ ಇವರ ಶುಭಸಂದೇಶ ಈ ಗ್ರಂಥಕ್ಕೆ ಲಭ್ಯವಾಗಿರೋಣದಿಂದ ಗ್ರಂಥದ ಅಂದವು ಇನ್ನೂ ಹೆಚ್ಚಾಗಿದೆ. ಅವರ ಸನ್ನಿಧಾನದಲ್ಲಿ ನನ್ನ ಅನಂತ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ಗ್ರಂಥ ಮುದ್ರಣಕ್ಕೆ ಉದಾರವಾಗಿ ಧನಸಹಾಯ ಮಾಡಿರುವ ಮಹಾದಾನಿಗಳಾದ ಶ್ರೀ ಕರ್ನಲ್ ಶ್ರೀ ಕೆ.ಜಿ. ಶಿವಕುಮಾರ್, ಶ್ರೀಮತಿ ಅನ್ನಪೂರ್ಣ ಶಿವಕುಮಾರ್ ದಾವಣಗೆರೆ, ಶ್ರೀ ಸಂಗಪ್ಪ ವಿ. ರೋಡಗಿ, ಗುಳೇದಗುಡ್ಡ ಇವರಿಗೂ ನಾನು ಕೃತಜ್ಞನಾಗಿದ್ದೇನೆ.

ಮುದ್ರಣಾಲಯದ ಮಾಲೀಕರಾದ ಶ್ರೀ ಎ.ಎಂ. ಪ್ರಕಾಶ್ ಹಾಗೂ ಅವರ ಸಿಬ್ಬಂದಿವರ್ಗದವರು ಸಕಾಲಕ್ಕೆ ಅಂದವಾಗಿ ಮುದ್ರಿಸಿ ಕೊಟ್ಟಿರುವುದರಿಂದ ಪರಮಾತ್ಮನು ಅವರೆಲ್ಲರಿಗೂ ಶುಭವನ್ನುಂಟು ಮಾಡಲೆಂದು ಹಾರೈಸುತ್ತೇನೆ.

ವಿದ್ವತ್ ಜನ ವಿಧೇಯ

ಶಿವಾನಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುವಾದಕರ ಅಭಿಪ್ರಾಯ

ಪರಮಪೂಜ್ಯ ಶ್ರೀಶ್ರೀಶ್ರೀ ಶಿವಾನಂದಸ್ವಾಮೀಜಿಯವರ ಚರಣಾರವಿಂದಗಳಲ್ಲಿ ನನ್ನ ಅನಂತಾನಂತ ವಂದನೆಗಳನ್ನು ಅರ್ಪಿಸುತ್ತಾ ಮತ್ತು ಈ ಕಿರುಗ್ರಂಥವನ್ನು ಓದಲು ಕೈಗೆತ್ತಿಕೊಂಡಿರುವ ಭಕ್ತಜನರಿಗೆ ನನ್ನ ಪ್ರಣಾಮಗಳನ್ನು ಸಲ್ಲಿಸುತ್ತಾ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ.

"ಜ್ಞಾನ" ಎಂಬ ಈ ಕಿರುಗ್ರಂಥವನ್ನು ಪರಮಪೂಜ್ಯ ಶ್ರೀ ಶಿವಾನಂದ ಸ್ವಾಮೀಜಿಯವರು ತಮ್ಮ ವಿದ್ಯಾರ್ಥಿ ದೆಶೆಯಲ್ಲಿ ಕಾಶಿಯಲ್ಲಿದ್ದಾಗ ಬರೆದಿದ್ದು. ಪ.ಪೂ. ಸ್ವಾಮೀಜಿಯವರು ಈ ಗ್ರಂಥವನ್ನು ಹಿಂದಿಭಾಷೆಯಲ್ಲಿ ರಚಿಸಿದ್ದರು. ಈ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಿ ಕೊಡಿ ಎಂದು ಪ.ಪೂ. ಸ್ವಾಮೀಜಿಯವರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದಾಗ ನನಗೆ ಇಲ್ಲವೆನ್ನಲಾಗಲಿಲ್ಲ. ಕಾರಣ, ಪ್ರತಿದಿನ ಪ್ರಾತಃಕಾಲದಲ್ಲಿ ನಡೆಯುತ್ತಿದ್ದ ಪ.ಪೂ. ಸ್ವಾಮೀಜಿಯವರ ಭಗವದ್ಗೀತೆಯ ಪ್ರವಚನ ಕಾರ್ಯಕ್ರಮಕ್ಕೆ ನಾನೊಬ್ಬ ಸದಸ್ಯನಾಗಿದ್ದೆ. ವಿಷಯವನ್ನು ಪ್ರತಿಪಾದಿಸುವ ಶೈಲಿ, ನಿರೂಪಣೆ ಮತ್ತು ವಿಷಯದಲ್ಲಿನ ಆಳವಾದ ಜ್ಞಾನ ಇವುಗಳನ್ನು ಕಂಡು ನಾನು ಮೊದಲನೆಯ ದಿವಸದಲ್ಲಿಯೇ ನಾನು ಅವರ ಶಿಷ್ಯನಾಗಿ ಹೋಗಿದ್ದೆ. ಯಾವುದಾದರೊಂದು ರೀತಿಯಲ್ಲಿ ಪ.ಪೂ. ಸ್ವಾಮೀಜಿಯವರ ಸೇವೆಯನ್ನು ಮಾಡಬೇಕು ಎಂಬ ಇಚ್ಛೆ ಉಂಟಾಗುತ್ತಿತ್ತು. ಪ.ಪೂ. ಸ್ವಾಮೀಜಿಯವರು ತಾವಾಗಿಯೇ ಈ ಭಾಷಾಂತರದ ವಿಷಯವನ್ನು ವ್ಯಕ್ತಪಡಿಸಿದಾಗ ಆ ಭಗವಂತನೇ ಗುರುಗಳ ಸೇವೆಗೈಯ್ಯಲು ಒದಗಿಸಿಕೊಟ್ಟ ಸದಾವಕಾಶವೆಂದು ತಿಳಿದು ನಾನು ತಕ್ಷಣವೇ ಒಪ್ಪಿಕೊಂಡೆ. ಇದು ನನ್ನ ಪರಮಭಾಗ್ಯವೆ ಸರಿ. ನನ್ನ ಇಚ್ಛೆಯನ್ನು ನೆರವೇರಿಸಿದ ಆ ಭಗವಂತನಿಗೆ ನನ್ನ ಕೃತಜ್ಞತೆಗಳು.

"ಜ್ಞಾನ" ವೆಂಬ ಈ ಗ್ರಂಥ ಸಣ್ಣದಾಗಿದ್ದರೂ ಸಹ, ಇದರಲ್ಲಿ ಉಲ್ಲೇಖವಾಗಿರುವ ವಿಷಯ ಅತ್ಯಂತ ಗಹನವಾಗಿದೆ. ಗ್ರಂಥಕರ್ತರು ಉಪನಿಷತ್ತು, ಗೀತೆ ಭಾಗವತ ಮುಂತಾದ ಅನೇಕ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು, ತಮ್ಮದೇ ಆದ ಶೈಲಿಯಲ್ಲಿ ನಿರೂಪಿಸಿದ್ದಾರೆ. ಸರ್ವಸಾಮಾನ್ಯ ಜನರಿಗೆ ಅರ್ಥವಾಗಲು ಕಠಿಣವಾಗಿರುವ ವಿಷಯಗಳನ್ನು ಸಣ್ಣ ಸಣ್ಣ ಕತೆಗಳ ಮೂಲಕ ತಿಳಿಯಪಡಿಸಿದ್ದಾರೆ. ಯಾವ ಭಕ್ತ ಜನರು ಆಧ್ಯಾತ್ಮದಲ್ಲಿ ಪ್ರವೇಶವನ್ನು ಹೊಂದಿ ಸಾಧಕ, ಮುಮುಕ್ಷು, ಜಿಜ್ಞಾಸು ಅವಸ್ಥೆಯಲ್ಲಿದ್ದಾರೊ ಅವರಿಗೆ ಇದು ಒಂದು ಕೈಪಿಡಿಯಿದ್ದಂತೆ. ಅಂತಹವರಿಗೆ ಈ ಗ್ರಂಥವು ಅವರ ಕೈಹಿಡಿದು ಮೋಕ್ಷದವರೆಗೆ ಕರೆದೊಯ್ಯುತ್ತದೆ ಎಂಬ ದೃಢ ನಂಬಿಕೆ ನನಗಿದೆ. ಈ ಗ್ರಂಥವನ್ನು ಭಾಷಾಂತರಿಸುವುದರಲ್ಲಿ ನಿರತನಾಗಿದ್ದಾಗ, ಈ ಸೃಷ್ಟಿಯಲ್ಲಿ ಆ ಪರಮಾತ್ಮನೇ ಅಣು, ರೇಣು, ತೃಣ, ಕಾಷ್ಠಗಳಲ್ಲಿ ತುಂಬಿದ್ದರೂ, ಕಿಂಬುಹುನಾ, ಈ ಸೃಷ್ಟಿಯಲ್ಲಿ ವ್ಯಕ್ತವಾಗಿರುವ ಪ್ರತಿಯೊಂದು ವಸ್ತುವು ಅವನದೇ ಸ್ವರೂಪವಾಗಿದ್ದರೂ ಸಹ, ಮಾಯೆ, ಅವಿದ್ಯಾ, ಮೋಹದಿಂದ ಜೀವಾತ್ಮನು ಹೇಗೆ ಬಂಧನಕ್ಕೊಳಪಟ್ಟಿದ್ದಾನೆ ಎಂಬ ವಿಷಯವನ್ನು ಭಾಷಾಂತರಿಸಿ ಬರೆಯುತ್ತಿದ್ದಾಗ, ಗ್ರಂಥಕರ್ತರ ನಿರೂಪಣೆಯನ್ನು ಓದಿ ಮಸ್ತಕದಲ್ಲಿ ಯಾವುದೋ ಒಂದು ಪ್ರಕಾಶ ಮಿಂಚಿದಂತಹ ಅನುಭವವಾಗುತ್ತಿತ್ತು. ಬರೆಯುವುದನ್ನು ಸ್ವಲ್ಪ ಹೊತ್ತು ನಿಲ್ಲಿಸಿ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುತ್ತಿದ್ದೆ. ಯಾವುದೋ ಲೋಕದಲ್ಲಿ ತೇಲಾಡುತ್ತಿದ್ದೇನೆ ಎಂಬ ಅನುಭವವಾಗುತ್ತಿತ್ತು. ಇಂತಹ ದಿವ್ಯ ಅನುಭವವನ್ನು ಕೊಡಬಲ್ಲವಾಗಿದೆ ಈ ಗ್ರಂಥ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗ್ರಂಥಕರ್ತರು ಸ್ವಭಾವತಃ ಪ್ರವಚನಕಾರರು, ಆದ ಕಾರಣ ಅವರ ನಿರೂಪಣೆ ಸರ್ವಸಾಧಾರಣ ಜನ ಸಮೂಹಕ್ಕೆ ಅರ್ಥವಾಗುವ ಶೈಲಿಯಲ್ಲಿದೆ. ಎಲ್ಲಿ ಅನಿವಾರ್ಯವೋ ಅಲ್ಲಿ ಪಾರಿಭಾಷಿಕ ಶಬ್ದದ ಉಪಯೋಗವಾಗಲ್ಪಟ್ಟಿದೆ. ಈ ಗ್ರಂಥದಲ್ಲಿ ಜ್ಞಾನಾಮೃತವನ್ನೇ ಹರಿಸಿದ್ದಾರೆ. ಯಾರೂ ಬೇಕಾದರೂ ಯಥೇಚ್ಛವಾಗಿ ಪಾನ ಮಾಡಬಹುದು. ಯಾರಿಗೆ ಪಾನ ಮಾಡುವುದು ಕಷ್ಟವಾಗಿ ಕಾಣುತ್ತದೆಯೋ ಅಂತಹವರಿಗೂ ಸಹ, ಹೇಗೆ ತಾಯಿಯು ತನ್ನ ಮಗುವಿಗೆ ಹಾಡನ್ನು ಹಾಡುತ್ತಾ, ಚಂದ್ರನನ್ನು ತೋರಿಸುತ್ತಾ ಉಣ್ಣಿಸುತ್ತಾಳೆಯೋ, ಹಾಗೆ ಗ್ರಂಥಕರ್ತರು ಸಣ್ಣ ಸಣ್ಣ ಕತೆಗಳ ಮುಖಾಂತರ ವಾಚಕರನ್ನು ರಂಜಿಸುತ್ತಾ ತುತ್ತು ತುತ್ತಾಗಿ ಜ್ಞಾನಾಮೃತವನ್ನು ಉಣ್ಣಿಸಿದ್ದಾರೆ.

ಕನ್ನಡ ಭಾಷೆಯಂತೂ ಅತ್ಯಂತ ಸರಳವಾಗಿದೆ. ಆದುದರಿಂದ ಸಾಧಾರಣ ಕನ್ನಡ ಭಾಷೆಯನ್ನು ಅರಿತಿರುವ ಜನರು ಇದನ್ನು ಓದಿ ಅರ್ಥಮಾಡಿಕೊಳ್ಳಬಹುದು. ಇದನ್ನು ನಾನು ಭಾಷಾಂತರಿಸಿದ್ದೇನೆ ಎನ್ನುವುದಕ್ಕಿಂತ ಪ.ಪೂ. ಸ್ವಾಮೀಜಿಯವರು ನನ್ನ ಮೂಲಕ ಭಾಷಾಂತರಿಸಿಕೊಂಡರು ಎನ್ನುವುದೇ ಹೆಚ್ಚು ಸೂಕ್ತವಾಗಿ ಕಾಣುತ್ತದೆ.

ಈ ಗ್ರಂಥದ ಬಗ್ಗೆ, ಅದರ ಉಪಯುಕ್ತತೆ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅಧಿಕಾರ ನನಗಿಲ್ಲ, ಅಂತಹ ಅಧಿಕಾರವನ್ನು ನಾನಿನ್ನೂ ಪಡೆದುಕೊಂಡಿಲ್ಲ. ಈ ಸಂಸಾರಕ್ಕೆ ಬಂದು ೬೫ ವರ್ಷಗಳಾದರೂ ಸಹ ಈ ಸಂಸಾರದಲ್ಲಿ ಎಡುವುತ್ತಾ, ಕುಂಟುತ್ತಲೇ ನಡೆಯುತ್ತಿದ್ದೇನೆ. ಅಂದ ಮೇಲೆ ನನ್ನಂತಹ ಪಾಮರನಿಗೆ ಆತ್ಮಸಾಕ್ಷಾತ್ಕಾರ, ಮೋಕ್ಷದ ಬಗ್ಗೆ ಮಾತನಾಡುವ ಅಧಿಕಾರ ಎಲ್ಲಿಂದ ಬರಬೇಕು. ಪ.ಪೂ. ಸ್ವಾಮೀಜಿಯವರ ಪ್ರೇಮಾಗ್ರಹದಿಂದಾಗಿ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದೇನೆ.

ಈ ಗ್ರಂಥದಲ್ಲಿನ ಕೆಲವೊಂದು ವಿಷಯಗಳನ್ನು ಗ್ರಂಥಕರ್ತರೊಂದಿಗೆ ಚರ್ಚಿಸಿ, ವಿಶದಪಡಿಸಿಕೊಂಡು, ಆದಷ್ಟೂ ಮೂಲ ಅರ್ಥಕ್ಕೆ ಲೋಪವಾಗದಂತೆ ಬರೆಯಲು ಪ್ರಯತ್ನಿಸಿದ್ದೇನೆ. ಇದರಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದಿದ್ದರೆ ಅವು ಸರ್ವಥಾ ನನ್ನದಾಗಿವೆಯೆ ಹೊರತು ಗ್ರಂಥಕರ್ತರದ್ದಲ್ಲ. ವಾಚಕರು, ಭಕ್ತರು, ಮುಮುಕ್ಷುಗಳು, ಹಂಸಕ್ಷೀರ ನ್ಯಾಯದಂತೆ ಇದನ್ನು ಸ್ವೀಕರಿಸಬೇಕಾಗಿ ಕೋರುತ್ತೇನೆ. ಆದಾಗ್ಯೂ ಕನ್ನಡಭಾಷೆಯಲ್ಲಿ ಅತೀವ ಗತಿವುಳ್ಳ ನನ್ನ ಬಾಲ್ಯ ಸ್ನೇಹಿತರಾದ ಶ್ರೀ ಜಯರಾಮಸ್ವಾಮಿ ನಿವೃತ್ತ ಉಪಾಧ್ಯಾಯರು, ದಾವಣಗೆರೆ ಇವರ ಸೇವೆಯೂ ಲಭ್ಯವಾಗಿದೆ.

ಭಗವಂತನು ಎಲ್ಲರಿಗೂ ಸುಖ, ಶಾಂತಿ, ಆನಂದವನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

ವಿಧೇಯ
ಪಿ.ಎಲ್. ಆಂಜನೇಯಸ್ವಾಮಿ
ದಾವಣಗೆರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾನಿಗಳು



ಕರ್ನಲ್ ಶ್ರೀ ಕೆ.ಜಿ. ಶಿವಕುಮಾರ್
ದಾವಣಗೆರೆ

ಶ್ರೀಮತಿ ಅನ್ನಪೂರ್ಣ ಶಿವಕುಮಾರ್
ದಾವಣಗೆರೆ

ಯೆನೇರಿತಾಃ ಪ್ರವರ್ತಂತೆ ಪ್ರಾಣಿನಃ ಸ್ವೇಷು ಕರ್ಮಸು ।
ತಂ ವಂದೇ ಪರಮಾತ್ಮಾನಂ ಸ್ವಾತ್ಮಾನಂ ಸರ್ವದೇಹಿನಾಂ ॥
ಯಸ್ಯ ಪಾದಾಂಶು ಸಂಭೂತಂ ವಿಶ್ವಂ ಭಾತಿ ಚರಾಚರಂ ।
ಪೂರ್ಣಾನಂದಂ ಗುರುಂ ವಂದೇತಂ ಪೂರ್ಣಾನಂದ ವಿಗ್ರಹಮ್ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವ ಜೀವನವು ಪಾವನವಾಗಬೇಕೆಂದರೆ, ಮಾನವನಿಗೆ ತನ್ನದೇ ಆದ ಪರಮ ಲಕ್ಷ್ಯವಿರಬೇಕು. ಅಂತಹ ಒಂದು ಲಕ್ಷ್ಯವೆಂದರೆ ಪರಮ ಪುರುಷಾರ್ಥವೆಂಬ ಉತ್ಕೃಷ್ಟ ಧ್ಯೇಯವೇ "ಮೋಕ್ಷ". ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವೇ ನಾಲ್ಕು ಪುರುಷಾರ್ಥಗಳು. ಇದರಲ್ಲಿ ಮೊದಲಿನ ಮೂರು ಪುರುಷಾರ್ಥಗಳು ಗೌಣವಾಗಿವೆ. ಗ್ರಹಿಸಲು ಯೋಗ್ಯವಾದ ಪುರುಷಾರ್ಥವೇ "ಮೋಕ್ಷ". ಮೋಕ್ಷವೆಂದರೆ ಸ್ವರ್ಗ, ವೈಕುಂಠ, ಕೈಲಾಸವೆಂಬ ಅರ್ಥವಲ್ಲ. ಮೋಕ್ಷವೆಂದರೆ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯಗಳೂ ಅಲ್ಲ. ಜನನ ಮರಣಗಳಿಂದ ಬಿಡುಗಡೆ ಹೊಂದಿ (ಸರ್ವ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತಿ), ಬ್ರಹ್ಮನಲ್ಲಿ ಲಯವಾಗುವುದೇ ಮೋಕ್ಷ. ಉದಾಹರಣೆಗೆ: ಹೇಗೆ ಉಪ್ಪಿನ ಗೊಂಬೆಯು ಸಮುದ್ರದ ಆಳವನ್ನು ನೋಡಲು ಹೋಗಿ ಅದರಲ್ಲಿಯೇ ಲಯ ಹೊಂದುತ್ತದೋ ಹಾಗೆಯೇ (ಅದರಿಂದಲೇ ಉತ್ಪತ್ತಿಯಾಗಿ ಅದರಲ್ಲಿಯೇ ಲೀನವಾಗುತ್ತದೆ). ಜೀವಾತ್ಮನೂ ಕೂಡ ದೇವನಿಂದಲೇ ಹೊರಬಂದು ಆ ದೇವನಲ್ಲಿಯೇ ಲಯ ಹೊಂದುತ್ತಾನೆ. ಅರ್ಥಾತ್ ಮೋಕ್ಷವನ್ನು ಪಡೆಯುತ್ತಾನೆ.

ಮೋಕ್ಷವನ್ನು ಪಡೆಯಲು ಬ್ರಹ್ಮಜ್ಞಾನದ (ಆತ್ಮಜ್ಞಾನ) ನಿತಾಂತ ಅವಶ್ಯಕತೆಯಿದೆ. ಎಲ್ಲಿಯವರೆಗೆ ಆತ್ಮಜ್ಞಾನವಾಗುವುದಿಲ್ಲವೋ ಅಲ್ಲಿಯವರೆಗೆ ಜನನಮರಣಾದಿ ಚಕ್ರದಿಂದ ಬಿಡುಗಡೆಯಾಗುವುದಿಲ್ಲ. ಅಂಡಜ, ಪಿಂಡಜ, ಸ್ವೇದಜ, ಉದ್ಭಿಜವೆಂಬ ಎಂಬತ್ನಾಲ್ಕು ಲಕ್ಷ ಯೋನಿಗಳಲ್ಲಿ ತಿರುಗಬೇಕಾಗುತ್ತದೆ. ಇಂತಹ ನಿಕೃಷ್ಟ ಯೋನಿಗಳಿಂದ ಪಾರಾಗಲು 'ಜೀವಾತ್ಮ'ನು ಈ ಶ್ರೇಷ್ಠ ಮನುಷ್ಯ ಜನ್ಮದ ಸಾಫಲ್ಯವನ್ನು ಮಾಡಿಕೊಳ್ಳಬೇಕಾಗುತ್ತದೆ. "ಜ್ಞಾನಾ ದೇವತು ಕೈವಲ್ಯಂ" ಎಂದು ಶ್ರುತಿ ಹೇಳಿದ ಹಾಗೆ "ಆತ್ಮಜ್ಞಾನ" ವೊಂದರಿಂದಲೇ ಭವ ದುಃಖದ ಬಿಡುಗಡೆಯಾಗಲು ಸಾಧ್ಯ. ಆತ್ಮಜ್ಞಾನಕ್ಕೆ ವೇದಾಂತದ ಉಪದೇಶದ ಅವಶ್ಯಕತೆಯಿದೆ. ವೇದಾಂತದ ಅಭಿಲಾಷೆ ಏನೆಂದರೆ, ನಾನು, ನನ್ನದು, ನನಗೆ ಎಂಬುದನ್ನು ಬಿಟ್ಟು, ಮೋಹ ಮತ್ತು ದೇಹಸೌಖ್ಯದ ಅಭಿಮಾನವನ್ನು ತೊರೆದು, ನಿಷ್ಕಲಂಕವಾದ, ಶುದ್ಧವಾದ ದೈವೀ ಪ್ರೇಮವನ್ನು ಮೈಗೂಡಿಸಿಕೊಳ್ಳಬೇಕೆಂಬುದೇ ವೇದಾಂತ ಶಾಸ್ತ್ರದ ಅಭಿಪ್ರಾಯ. ವೇದಾಂತದ ಭವ್ಯವಾದ ತತ್ವಜ್ಞಾನವೊಂದೇ ಮಾನವನ ದುಃಖವನ್ನು ನಾಶಮಾಡಿ ನಿತ್ಯಶಾಂತಿ ಮತ್ತು ದುಃಖವನ್ನು ಕೊಡಬಲ್ಲದು. ಇಂತಹ ತತ್ವಜ್ಞಾನವನ್ನು ಶ್ರೋತ್ರೀಯ ಬ್ರಹ್ಮನಿಷ್ಠ ಸದ್ಗುರುವಿಗೆ ಶರಣಾಗತನಾಗಿ ಶ್ರವಣಾದಿಗಳನ್ನು ಮಾಡಿ ಆತ್ಮಜ್ಞಾನವನ್ನು ಪಡೆಯಬೇಕು.

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವ ದರ್ಶಿನಃ ॥

- ಗೀತಾ ೪-೩೪

"ಆ ಜ್ಞಾನವನ್ನು ನೀನು ತತ್ತ್ವದರ್ಶಿಗಳಾದ ಜ್ಞಾನಿಗಳ ಬಳಿಗೆ ಹೋಗಿ ತಿಳಿದುಕೋ. ಅವರಿಗೆ ಶ್ರದ್ಧೆಯಿಂದ ದಂಡವತ್ ಪ್ರಣಾಮ ಮಾಡುವುದರಿಂದ, ಅವರ ಸೇವೆ ಮಾಡುವುದರಿಂದ ಮತ್ತು ಕಪಟವನ್ನು ಬಿಟ್ಟು ಸರಳತಾ ಪೂರ್ವಕವಾಗಿ ಪ್ರಶ್ನೆ ಮಾಡುವುದರಿಂದ, ಪರಮಾತ್ಮ ತತ್ತ್ವವನ್ನು ಚೆನ್ನಾಗಿ ತಿಳಿದಿರುವ ಆ ಜ್ಞಾನಿಗಳು, ಮಹಾತ್ಮರು ನಿನಗೆ ತತ್ತ್ವಜ್ಞಾನದ ಉಪದೇಶವನ್ನು ಮಾಡುವರು".

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಸಾರದಲ್ಲಿ ಜ್ಞಾನಕ್ಕೆ ಸಮಾನವಾದ, ಪವಿತ್ರಗೊಳಿಸುವಂತಹ ಮಾರ್ಗ ನಿಸ್ಸಂದೇಹವಾಗಿ ಬೇರೆ ಯಾವುದೂ ಇಲ್ಲ. ಆದರೆ ಶ್ರದ್ಧಾವಂತನೂ, ಜಿತೇಂದ್ರಿಯನೂ ಆದವನಿಗೆ ಮಾತ್ರ ಜ್ಞಾನವು ಲಭಿಸುತ್ತದೆ. ಜ್ಞಾನವನ್ನು ಹೊಂದಿದ ಕೂಡಲೇ ಅವನು ಮುಕ್ತಿಯನ್ನು ಪಡೆಯುತ್ತಾನೆ.

ಗುರೂಪದೇಶ :

ವೇದಾಂತದಲ್ಲಿ ಗುರೂಪದೇಶಕ್ಕೆ ಬಹಳಷ್ಟು ಮಹತ್ವವಿದೆ. ಎಲ್ಲಾ ಶಾಸ್ತ್ರಗಳನ್ನು ಅರಿತುಕೊಳ್ಳಲು ಗುರುವು ಬೇಕೇ ಬೇಕು. ಶ್ರೀಮನ್ ನಿಜಗುಣ ಶಿವಯೋಗಿಗಳು ಗುರುವಿನ ಆರು ಪ್ರಕಾರದ ಬೇಧಗಳನ್ನು ಹೇಳಿದ್ದಾರೆ. ಗುರುವು ಶಿಷ್ಯನಿಗೆ ಭಿನ್ನ ಭಿನ್ನ ರೀತಿಯಾಗಿ ಬೋಧಿಸುವುದರಿಂದ ಆರು ಪ್ರಕಾರಗಳು ಉಂಟಾಗುತ್ತವೆ.

೧. ನಿಷಿದ್ಧ ಗುರು: ಕಾಮಿನಿ, ಕಾಂಚನ, ಅಧಿಕಾರ, ಕೀರ್ತಿಗಳಲ್ಲಿ ತೊಡಗಿ ಉಪದೇಶ ಮಾಡುವವನು.

೨. ಕಾಮ್ಯ ಗುರು: ಯಜ್ಞಯಾಗಾದಿ ಅನೇಕ ಕಾಮ್ಯ ಕರ್ಮಗಳಲ್ಲಿ ಶಿಷ್ಯನ ಪ್ರವೃತ್ತಿಯನ್ನು ತೊಡಗಿಸುವುದರಿಂದ ಇವನಿಗೆ ಕಾಮ್ಯಗುರು ಎನ್ನುತ್ತಾರೆ. (ಸ್ವರ್ಗಾದಿ ಭೋಗಗಳ ಆಶೆ)

೩. ಸೂಚಕ ಗುರು: ಶಮಾದಿ ಷಟ್ ಸಂಪತ್ತು ಮೊದಲಾದ ಗುಣಗಳನ್ನು ನಿನ್ನದಾಗಿ ಮಾಡಿಕೋ ಎಂದು ಸೂಚನೆ ನೀಡುವವನು.

೪. ವಾಚಕ ಗುರು: ವೇದ ವಿಹಿತವಾದ ಸತ್ಯ, ವೇದ ನಿಂದಿತವಾದ ಮಿಥ್ಯ. ಇವುಗಳ ವಿಚಾರವನ್ನು ಮಾಡು ಎಂದು ಬೋಧಿಸುವವನು.

೫. ಕಾರಕ ಗುರು: 'ಶಿವ-ಜೀವ' ರ ಐಕ್ಯ, ಅಭೇದ ಜ್ಞಾನ ಬೋಧಕ ಗುರುವೇ ಕಾರಕ ಗುರು.

೬. ವಿಹಿತ ಗುರು: ಪಾವನಾತ್ಮಕ ಶಂಭು ಲಿಂಗವೇ ತಾನಾದ ನಿಜ।
ಕೈವಲ್ಯ ಪದವೀವನೇ ವಿಹಿತ ಗುರುವಹನು॥

ಸಾಕ್ಷಾತ್ ಪರಬ್ರಹ್ಮ ಸ್ವರೂಪವೇ ನೀನಾಗಿರುವೆ ಎಂಬ ನಿಶ್ಚಯ ಜ್ಞಾನ ರೂಪ, ಸ್ವ-ಸ್ವರೂಪ ಸ್ಥಿತಿ, ಲಕ್ಷಣಾತ್ಮಕ ಮೋಕ್ಷ ಮಾಡಿಕೊಡವಾತನೇ ವಿಹಿತ ಗುರು. ಇಲ್ಲಿ ವಿಹಿತ ಗುರುವೇ ಶ್ರೇಷ್ಠನೆನ್ನಲಾಗಿದೆ. ಅನ್ಯ ಅನೇಕ ಶಾಸ್ತ್ರಗಳನ್ನು ಉಪದೇಶಿಸುವ ಗುರುವಿಗೂ, ಅದ್ವೈತ ಜ್ಞಾನವನ್ನು ಉಪದೇಶಿಸುವ ಗುರುವಿಗೂ ಅಜಗಜಾಂತರ ವ್ಯತ್ಯಾಸವಿದೆ. ಪುಸ್ತಕೀಯ ಜ್ಞಾನವಾಗಿರಬಹುದು ಅಥವಾ ತರ್ಕ ಸಮ್ಮತ ಜ್ಞಾನವಾಗಿರಬಹುದು, ಆದರೆ ಅದ್ವೈತ ಶಾಸ್ತ್ರದಲ್ಲಿ ಕೇವಲ ಪುಸ್ತಕಜ್ಞಾನ ಅಥವಾ ತರ್ಕಸಮ್ಮತಜ್ಞಾನಕ್ಕೆ ಬೆಲೆಯಿಲ್ಲ. ಈ ಕಾರಣಗಳಿಂದಲೇ ಶ್ರುತಿ ಹೀಗೆ ಹೇಳಿದೆ.

"ನೈಷಾ ತರ್ಕೇಣ ಮತಿರಾಪ ನೇಯಾ"

ಆತ್ಮಜ್ಞಾನ ವಿಷಯದಲ್ಲಿ ಯಾವ ತರ್ಕವಾಗಲಿ ಪಾಂಡಿತ್ಯವಾಗಲಿ ನಡೆಯುವುದಿಲ್ಲ.

ಆತ್ಮಜ್ಞಾನ (ಬ್ರಹ್ಮಜ್ಞಾನ) ಅನುಭವದ ವಿಷಯವಾಗಿರುವುದರಿಂದ ಅದನ್ನು ಬ್ರಹ್ಮಜ್ಞಾನಿಯಾದ ಗುರುವಿನ ಮುಖದಿಂದಲೇ ಕೇಳಿ ಪಡೆಯಬೇಕಾಗುತ್ತದೆ. ಆದುದರಿಂದ, ಉಪನಿಷತ್ತುಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಹ್ಮಜ್ಞಾನವನ್ನು ಪಡೆಯಬೇಕೆಂಬುವವರು ಸಮಿಧಪಾಣಿಗಳಾಗಿ ಗುರುವನ್ನು ಹುಡುಕಿಕೊಂಡು ಹೋಗುವುದನ್ನು ನಾವು ಕಾಣುತ್ತೇವೆ. ಗುರುವಿನ ಶುಶ್ರೂಷೆಯನ್ನು ಮಾಡಿ ಅವನ ಅನುಗ್ರಹವನ್ನು ಸಂಪಾದಿಸಿ ಬ್ರಹ್ಮಜ್ಞಾನವನ್ನು ಪಡೆದಿದ್ದಾರೆ ಎಂಬುದನ್ನು ನಾವು ಅಲ್ಲಿ ಕಾಣಬಹುದು.

ಒಟ್ಟಿನಲ್ಲಿ, ಆತ್ಮಜ್ಞಾನವಾಗಬೇಕೆಂದರೆ ಗುರುವಿನ ಅನುಗ್ರಹವನ್ನು ಪಡೆಯಬೇಕು. ಅದ್ವೈತ ದರ್ಶನಗಳಲ್ಲಿ ಗುರು ಉಪದೇಶಕ್ಕೆ ಬಹಳ ಮಹತ್ವವಿದೆ. ಈ ಕಾರಣದಿಂದಲೇ

"ಗುರು ಸಾಕ್ಷಾತ್ ಪರಬ್ರಹ್ಮಂ
ತಸ್ಮೈ ಶ್ರೀ ಗುರುವೇ ನಮಃ"

ಎಂದು ವರ್ಣಿಸಿದ್ದಾರೆ ಮತ್ತು ವಂದಿಸಿದ್ದಾರೆ. ನಿಜವಾದ ಜ್ಞಾನವನ್ನು ಕೊಡುವ ಗುರುವು ಪರಬ್ರಹ್ಮ ಸ್ವರೂಪನಾಗಿದ್ದಾನೆ. ಅವನು ತನ್ನ ಶಿಷ್ಯನನ್ನು ಪರಬ್ರಹ್ಮನನ್ನಾಗಿ ಮಾಡುತ್ತಾನೆ.

ಜ್ಞಾನದಲ್ಲಿನ ಪ್ರಕಾರಗಳ ಬಗ್ಗೆ ತಿಳಿಯೋಣ. ಜ್ಞಾನದಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳು. ಮೊದಲನೆಯದು "ಪರೋಕ್ಷಜ್ಞಾನ" ಮತ್ತು ಎರಡನೆಯದು "ಅಪರೋಕ್ಷ ಜ್ಞಾನ".

ಪರೋಕ್ಷಜ್ಞಾನ : ಬ್ರಹ್ಮನನ್ನು ಶಾಸ್ತ್ರಗಳ ಮೂಲಕ ತಿಳಿದುಕೊಳ್ಳುವುದೇ ಪರೋಕ್ಷಜ್ಞಾನ. ಬ್ರಹ್ಮನನ್ನು ತಿಳಿಸುವ ಶಾಸ್ತ್ರಗಳೆಂದರೆ ಶ್ರುತಿಗಳು (ಉಪನಿಷತ್ತುಗಳು). ಇವುಗಳಿಂದ ಮಾತ್ರವೇ ಬ್ರಹ್ಮನು ನಮಗೆ ತಿಳಿದು ಬರುವುದರಿಂದ ಬ್ರಹ್ಮನಿಗೆ "ಔಪನಿಷದ್ ಪುರುಷ", ಎಂದು ವಿಶಿಷ್ಟವಾದ ಹೆಸರು ಬಂದಿದೆ. ಪರೋಕ್ಷ ಜ್ಞಾನವು ಅಪರೋಕ್ಷಜ್ಞಾನಕ್ಕೆ ಸಾಧನವಾಗಿದೆ ಮತ್ತು ಪೂರಕವಾಗಿದೆ.

ಅಪರೋಕ್ಷಜ್ಞಾನ : ಶಾಸ್ತ್ರಗಳಿಂದ ಅಥವಾ ಶಾಸ್ತ್ರ ಬಲ್ಲವರಿಂದ ಅಪ್ರತ್ಯಕ್ಷವಾಗಿ ಬ್ರಹ್ಮನ ಬಗ್ಗೆ ತಿಳಿದ ಮೇಲೆ ಆ ಬ್ರಹ್ಮಾನುಭವವನ್ನು ಹೊಂದುವುದೇ ಅಪರೋಕ್ಷಜ್ಞಾನ.

ವೇದಾಂತದಲ್ಲಿ ಬ್ರಹ್ಮಾನುಭವವೇ ಬ್ರಹ್ಮಜ್ಞಾನ. ಬ್ರಹ್ಮಜ್ಞಾನವೆಂದರೆ ಬ್ರಹ್ಮನ ಬಗ್ಗೆ ಅರಿಯುವುದು. ಬ್ರಹ್ಮನ ಬಗ್ಗೆ ಸರಿಯಾಗಿ ತಿಳಿದುಕೊಳ್ಳುವುದೆಂದರೆ ಬ್ರಹ್ಮವೇ ತಾನಾಗುವುದಾಗಿದೆ. ಬ್ರಹ್ಮಾನುಭವವಿಲ್ಲದ ಬ್ರಹ್ಮಜ್ಞಾನವು ಬರೀ ಶಬ್ದಾಡಂಬರ. ಅಪರೋಕ್ಷ ಜ್ಞಾನವೇ ನಿಜವಾದ ಬ್ರಹ್ಮಜ್ಞಾನ. ಇಂತಹ ಅಮೂಲ್ಯ ಜ್ಞಾನವನ್ನು ಪಡೆಯುವ ಸಲುವಾಗಿ ಮನುಷ್ಯನು ನಿರಂತರ ಸಾಧನೆಯನ್ನು ಮಾಡಬೇಕಾಗುತ್ತದೆ. ಮನುಷ್ಯ ಜೀವನದ ಅಮೂಲ್ಯ ಸಮಯವನ್ನು ಪಶುವಿನಂತೆ ಸಂಸಾರಿಕ ಭೋಗವನ್ನು ಭೋಗಿಸುವುದಕ್ಕಾಗಿ ನಷ್ಟ ಮಾಡಿದರೆ ಮತ್ತೆ ಮತ್ತೆ ಜನನ-ಮರಣ ಸಂಸಾರ ಚಕ್ರದಲ್ಲಿ ಸಿಲುಕಬೇಕಾಗುತ್ತದೆ. ಮುಕ್ತನಾಗುವ ಸಲುವಾಗಿಯೇ ಶ್ರೇಷ್ಠವಾದ ಮನುಷ್ಯ ಜನ್ಮ ಲಭ್ಯವಾಗಿದೆ. ಇದರ ಸದುಪಯೋಗವನ್ನು ಮಾಡಿಕೊಳ್ಳುವುದೇ ಪುರುಷಾರ್ಥ.

ಚಿಂತನ, ಮನನ, ಸ್ವಾಧ್ಯಾಯ ಹಾಗೂ ಸತ್ಸಂಗದ ಪ್ರಭಾವದಿಂದ ಜ್ಞಾನದ ಅಭಿವೃದ್ಧಿಯನ್ನು ಮಾಡಿಕೊಂಡು ಅಜ್ಞಾನವನ್ನು ದೂರ ಮಾಡಲು ಸತತ ಪ್ರಯತ್ನವನ್ನು ಮಾಡುವುದೇ ಜೀವಾತ್ಮನ ಕರ್ತವ್ಯ. 'ತೃಷ್ಣಾ, ಮಮತ ಮತ್ತು ವಾಸನಾ', ಇವುಗಳೇ ಬಂಧನಕ್ಕೆ ಕಾರಣವಾಗಿವೆ. ಇದರಿಂದಲೇ ಜನನ - ಮರಣ ಚಕ್ರದಲ್ಲಿ ತಿರುಗಬೇಕಾಗುತ್ತದೆ. ಈ ಮೂರರಿಂದ ಬಿಡುಗಡೆ ಹೊಂದುವುದೇ 'ಮುಕ್ತಿ'. ಇದರ ಅಭ್ಯಾಸದ ಸಲುವಾಗಿಯೇ ಪ್ರಾಚೀನ ಕಾಲದಲ್ಲಿ ಸಂನ್ಯಾಸಾಶ್ರಮ ಸ್ವೀಕಾರ ಮಾಡುತ್ತಿದ್ದರು. ಆದರೆ ವರ್ತಮಾನ ಕಾಲದಲ್ಲಿ ಆ ಪದ್ಧತಿ ನಶಿಸಿ ಹೋಗಿರುವುದರಿಂದ, ಸನ್ಯಾಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನೋಭೂಮಿ ನಿರ್ಮಿಸುವ ಸಲುವಾಗಿ ಮನೆಯಲ್ಲಿಯೇ (ಗೃಹಸ್ಥಾಶ್ರಮದಲ್ಲಿ) ನಿರ್ಮಲ ವಾತಾವರಣವನ್ನು ನಿರ್ಮಾಣ ಮಾಡಬೇಕು. ವೃದ್ಧಾವಸ್ಥೆಯ ಜೊತೆಜೊತೆಗೆ ವೈರಾಗ್ಯವನ್ನು ಹೆಚ್ಚಿಸಿಕೊಳ್ಳಬೇಕು, ನಿಸ್ಪೃಹತೆ ಉಂಟಾಗಬೇಕು. ಜೀವನ ಸಮಾಪ್ತವಾಗುವ ಸಂದರ್ಭದಲ್ಲಿ ಯಾವ ಆಕಾಂಕ್ಷೆಯೂ ಉಳಿಯಬಾರದು. ಯಾವುದೇ ಪ್ರಕಾರದ ಭಯ ಹಾಗೂ ದುಃಖ ಇಲ್ಲದೆ ಆನಂದಯುಕ್ತರಾಗಿ ದೇಹವನ್ನು ಬಿಡಬೇಕು. ಇದಕ್ಕಾಗಿ ಬ್ರಹ್ಮ ಚಿಂತನೆ, ಆತ್ಮ ಚಿಂತನೆಯ ನಿತಾಂತ ಅವಶ್ಯಕತೆಯಿದೆ. ಇಂತಹ ಚಿಂತನದಿಂದ ಮನಸ್ಸಿನ ದುಷ್ಟಭಾವನೆಗಳು ದೂರಾಗುತ್ತವೆ. ವಿಷಯ ಚಿಂತನದಿಂದ ವಿಷಯ ವಾಸನೆ ಮೋಹ ತೃಷ್ಣಾದಿಗಳಿಂದ ಭಾವ ಅಶುದ್ಧವಾಗಿ ಅಂಹಕಾರ, ದಂಭಾ, ದರ್ಪವೆಂಬ ಅಸುರಗುಣಗಳು ತಾಂಡವವಾಡುತ್ತವೆ.

ಗೀತೆಯಲ್ಲಿ ಹೇಳಿದ ಹಾಗೆ.

ದಂಭೋ ದರ್ಪೋsಭಿಮಾನಶ್ಚಕ್ರೋಧ: ಪಾರುಷ್ಯ ಮೇವಚ
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್

- ಗೀತಾ ೧೬-೪

"ಹೇ ಅರ್ಜುನಾ! ದಂಭ, ಅಹಂಕಾರ, ಅಭಿಮಾನ, ಕ್ರೋಧ, ಕಠೋರತೆ ಮತ್ತು ಅಜ್ಞಾನ, ಇವೆಲ್ಲಾ ಆಸುರೀ ಸಂಪತ್ತನ್ನು ಪಡೆದು ಹುಟ್ಟಿರುವ ಪುರುಷರ ಲಕ್ಷಣವಾಗಿವೆ."

ಆಗ ಜ್ಞಾನ ಸಾಧನಗಳಿಂದ ನಾವು ವಂಚಿತರಾಗಬೇಕಾಗುತ್ತದೆ. ಯಾವ ರೀತಿಯಾದ ಭಾವನೆಗಳು ನಮ್ಮಲ್ಲಿರುತ್ತವೆಯೋ ಅದೇ ತರಹ ಪ್ರಪಂಚವು ತೋರುತ್ತದೆ.

"ಯದ್ ಭಾವಂ ತದ್ ಭವತಿ"

ಈ ಉಕ್ತಿಯ ಭಾವವನ್ನು ಒಂದು ಸಣ್ಣ ದೃಷ್ಟಾಂತದ ಮೂಲಕ ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

ಒಂದು ದಿನ ದ್ರೋಣಾಚಾರ್ಯರ ಶಿಷ್ಯರೆಲ್ಲಾ ಒಂದುಗೂಡಿ ತಮ್ಮ ಗುರುಗಳನ್ನು ಈ ರೀತಿ ಪ್ರಶ್ನಿಸಿದರು. "ಗುರುವರ್ಯಾ! ನಮಗೆ ಒಂದು ಸಂದೇಹ ಉಂಟಾಗಿದೆ. ದಯವಿಟ್ಟು ಅದನ್ನು ಪರಿಹರಿಸಬೇಕೆಂದು ವಿನಂತಿಸುತ್ತೇವೆ" ಎಂದರು. ಸಂದೇಹವೇನೆಂದು ಕೇಳಲಾಗಿ ಆ ಶಿಷ್ಯರು ಇಂತೆಂದರು, "ಯುಧಿಷ್ಠರನನ್ನು ಧರ್ಮ ಪ್ರತೀಕವಾಗಿಯೂ ಮತ್ತು ದುರ್ಯೋಧನನನ್ನು ದುಷ್ಟತನದ ಪ್ರತೀಕವನ್ನಾಗಿಯೂ ಪರಿಗಣಿಸಲಾಗುತ್ತಿದೆ. ಇದು ಏಕೆ?". ಆಗ ದ್ರೋಣಾಚಾರ್ಯರು ಗಂಭೀರವದನರಾಗಿ ನಸುನಗುತ್ತಾ "ಇವರಿಬ್ಬರೂ ದಾಯಾದಿ ಅಣ್ಣತಮ್ಮಂದಿರು. ಅವರು ತಮ್ಮ ಪ್ರತೀಕತೆಯನ್ನು ತಮ್ಮ ಮೂಲಭೂತ ಗುಣದಿಂದಲೇ ಪಡೆದಿದ್ದಾರೆ." ಇದು ಹೇಗೆ ಎಂಬುದನ್ನು ಪರೀಕ್ಷಸಲೋಸುಗ ಶಿಷ್ಯರ ಸಮ್ಮುಖದಲ್ಲಿಯೇ ಒಂದು ಪರೀಕ್ಷೆಯನ್ನು ನಡೆಸುತ್ತಾರೆ. ದುರ್ಯೋಧನನ್ನು ಬರಮಾಡಿ "ದುರ್ಯೋಧನ! ನೀನು ಒಬ್ಬ ಧಾರ್ಮಿಕ ಮನುಷ್ಯನನ್ನು ಹುಡುಕಿ ಕರೆದುಕೊಂಡು ಬಾ" ಎಂದು ಹೇಳಿ ಕಳುಹಿಸುತ್ತಾರೆ. ದುರ್ಯೋಧನನು ಹೋದ ಮೇಲೆ, ಧರ್ಮರಾಯನನ್ನು ಕರೆಯಿಸಿ "ಧರ್ಮರಾಯ! ನೀನು ಒಬ್ಬ ದುಷ್ಟ ವ್ಯಕ್ತಿಯನ್ನು ಹುಡುಕಿ ಕರೆದುಕೊಂಡು ಬಾ" ಎಂದು ಹೇಳಿದರು. ಇಬ್ಬರಿಗೂ ಮಾರನೆಯ ದಿನ ಬೆಳಿಗ್ಗೆ ಎಲ್ಲಾ ಶಿಷ್ಯ ಸಮುದಾಯದ ಮುಂದೆ ಆ ವ್ಯಕ್ತಿಗಳನ್ನು ಕರೆತರಬೇಕೆಂದು ಷರತ್ತನ್ನು ವಿಧಿಸಿದರು. ದುರ್ಯೋಧನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಧರ್ಮರಾಯ ಆ ವ್ಯಕ್ತಿಗಳ ಶೋಧಕ್ಕಾಗಿ ಆ ಪಟ್ಟಣದಲ್ಲೆಲ್ಲಾ ದಿನ ರಾತ್ರಿ ತಿರುಗಾಡ ಹತ್ತಿದರು. ಮಾರನೆಯ ದಿನ ಎಂದಿನಂತೆ ಎಲ್ಲಾ ಶಿಷ್ಯರ ಸಮುದಾಯದ ಮುಂದೆ ದ್ರೋಣಾಚಾರ್ಯರ ಸಮ್ಮುಖದಲ್ಲಿ ಹಾಜರಾದರು. ಆಚಾರ್ಯರು ದುರ್ಯೋಧನನನ್ನು ವಿಚಾರಿಸಲಾಗಿ ದುರ್ಯೋಧನನು ಹೀಗೆಂದನು "ಗುರುವರ್ಯಾ! ನಾನು ಇಡೀ ಪಟ್ಟಣವನ್ನೇ ಶೋಧಿಸಿದೆ, ಧರ್ಮವಂತನಾದ ಒಬ್ಬ ವ್ಯಕ್ತಿಯೂ ನನಗೆ ಕಾಣಸಿಗಲಿಲ್ಲ. ಎಲ್ಲೆಲ್ಲಿಯೂ ದುಷ್ಟರೇ ತುಂಬಿದ್ದಾರೆ" ಎಂದನು. ನಂತರ ಆಚಾರ್ಯರು ಅಲ್ಲೇ ಪಕ್ಕದಲ್ಲಿ ನಿಂತಿದ್ದ ಧರ್ಮರಾಜನನ್ನು ವಿಚಾರಿಸಲಾಗಿ ಅವನು ಇಂತೆಂದನು "ಗುರುದೇವ! ತಾವು ಹೇಳಿದ ಪ್ರಕಾರ, ಈ ಪಟ್ಟಣವನ್ನೆಲ್ಲಾ ಶೋಧಿಸಿದೆ. ಆದರೆ ನನಗೆ ಒಬ್ಬ ದುಷ್ಟ ವ್ಯಕ್ತಿ ಕಾಣಸಲಿಲ್ಲ. ಎಲ್ಲೆಲ್ಲಿಯೂ ಧರ್ಮವಂತರೇ ಇದ್ದಾರೆ" ಎಂದನು.

ಇದನ್ನು ಕೇಳಿದ ದ್ರೋಣಾಚಾರ್ಯರು ಪ್ರಸನ್ನ ಚಿತ್ತದಿಂದ ನೆರೆದಿದ್ದ ಶಿಷ್ಯ ವೃಂದಕ್ಕೆ "ನೋಡಿದಿರಾ ಶಿಷ್ಯರೆ, ದುರ್ಯೋಧನ ಮತ್ತು ಧರ್ಮರಾಯನಲ್ಲಿರುವ ವ್ಯತ್ಯಾಸವನ್ನು" ಎಂದರು.

ಕಪಟ, ಮೋಸ, ಅಸೂಯೆಯಿಂದ ಕೂಡಿದ ದುರ್ಯೋಧನನಿಗೆ ಸಂಪೂರ್ಣ ಪಟ್ಟಣವೇ ದುರ್ಮಾರ್ಗಿಗಳಿಂದ ತುಂಬಿರುವಂತೆ ಕಂಡಿತು. ಅದೇ ಧರ್ಮಬುದ್ಧಿಯುಳ್ಳ ಧರ್ಮರಾಯನಿಗೆ ಇಡೀ ಪಟ್ಟಣವೇ ಧರ್ಮಿಷ್ಠರಿಂದ ತುಂಬಿರುವಂತೆ ಕಂಡಿತು.

ಭಾವ ಪರಿವರ್ತನೆಯನ್ನು ಮಾಡಿಕೊಂಡು, ತನ್ನಲ್ಲಿರುವ ದುಷ್ಟವಾಸನೆಗಳಿಂದ ದೂರಾಗಿ ತತ್ವಜ್ಞಾನದ ಸಾಧನೆಯಲ್ಲಿ ತೊಡಗಬೇಕು, ಇಲ್ಲವೆ ನಮ್ಮ ಇಂದ್ರಿಯಗಳು ನಮ್ಮನ್ನು ವಿಷಯಾದಿಗಳ ಕಡೆಗೆ ಸೆಳೆದುಕೊಂಡು ಹೋಗುತ್ತವೆ. ಮನ, ಬುದ್ಧಿ, ಇಂದ್ರಿಯಗಳು, ಈ ಮೂರು ಮನುಷ್ಯನಿಗೆ ಉಪಕರಣಗಳಾಗಿವೆ. ಮನಸ್ಸನ್ನು ಇಂದ್ರಿಯಗಳ ಕಡೆಗೆ ಹರಿಸಿದರೆ ವಿಷಯಾದಿಗಳಲ್ಲಿ ರಮಿಸುತ್ತದೆ. ಅದರಿಂದ, ದುಃಖ, ಚಿಂತೆಗಳು ಉಂಟಾಗುತ್ತವೆ. ಮನಸ್ಸನ್ನು ಬುದ್ಧಿಯ ಕಡೆಗೆ ಹರಿಸಿದರೆ ಸದ್ವಿಚಾರ ವಿವೇಕ ಉಂಟಾಗುತ್ತದೆ. ಕರ್ಮೋಪಾಸನೆಗಳಿಂದ ಶುದ್ಧವಾದ ಚಿತ್ತದಲ್ಲಿ ಜ್ಞಾನ ದ್ವಾರ ಮೋಕ್ಷ ಪ್ರಾಪ್ತಿಯಾಗುತ್ತದೆ. ಮೋಕ್ಷವು ಜ್ಞಾನಕ್ಕೆ ಗಮ್ಯವಾಗಿರುವುದರಿಂದ ನಿರತಿಶಯಾನಂದ ಪ್ರಾಪ್ತಿಗೆ ಜ್ಞಾನವೇ ಕಾರಣ. ಜ್ಞಾನವೇ ಮೋಕ್ಷಕ್ಕೆ ಪರಮ ಸಾಧನವೆಂದು ಶ್ರೀ ಮದ್ಭಗವದ್ಗೀತೆಯಲ್ಲಿ ಭಗವಂತನು ಸಂದರ್ಭನುಸಾರ ಬ್ರಹ್ಮಜ್ಞಾನವೇ ಮುಕ್ತಿಗೆ ಕಾರಣವೆಂಬ ಅರ್ಥವನ್ನು ಸ್ಪಷ್ಟಪಡಿಸಿದ್ದಾನೆ.

ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ।
ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ॥

- ಗೀತಾ ೧೪-೨

"ಈ ಜ್ಞಾನವನ್ನಾಶ್ರಯಿಸಿ ಅರ್ಥಾತ್ ಧಾರಣೆ ಮಾಡಿ ನನ್ನ ಸ್ವರೂಪವನ್ನು ಪ್ರಾಪ್ತಿ ಮಾಡಿಕೊಂಡ ಪುರುಷರು ಸೃಷ್ಟಿಯ ಆದಿಯಲ್ಲಿ ಪುನಃ ಹುಟ್ಟುವುದಿಲ್ಲ ಮತ್ತು ಪ್ರಳಯ ಕಾಲದಲ್ಲಿಯೂ ಸಹ ದುಃಖಿತರಾಗುವುದಿಲ್ಲ"

ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ।
ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್॥

- ಗೀತಾ ೯-೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಶ್ರೀ ಭಗವಂತನು ಹೇಳಿದನು - ದೋಷ-ದೃಷ್ಟಿ ರಹಿತ ಭಕ್ತನಾದ ನಿನಗೆ ಈ ಪರಮ ಗೋಪ್ಯವಾದ, ವಿಜ್ಞಾನ ಸಹಿತವಾದ ಜ್ಞಾನವನ್ನು ಪುನಃ ಚೆನ್ನಾಗಿ ಹೇಳುವೆನು, ಅದನ್ನು ತಿಳಿದು ನೀನು ದುಃಖ ರೂಪೀ ಜಗತ್ತಿನಿಂದ ಪಾರಾಗಿ ಹೋಗುವೆ."

ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾ ಸ್ತತ್ಪರಾಯಣಾಃ।
ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ॥

- ಗೀತಾ ೫-೧೭

"ಯಾರ ಮನಸ್ಸು ಪರಮಾತ್ಮನಲ್ಲಿ ತದ್ರೂಪವಾಗಿದೆಯೋ, ಯಾರ ಬುದ್ಧಿಯು ಪರಮಾತ್ಮನಲ್ಲಿ ತದ್ರೂಪವಾಗಿದೆಯೋ ಮತ್ತು ಸಚ್ಚಿದಾನಂದಘನ ಪರಮಾತ್ಮನಲ್ಲಿಯೇ ಯಾರಿಗೆ ನಿರಂತರವಾದ ಏಕೀಭಾವದ ಸ್ಥಿತಿಯಿದೆಯೋ ಅಂತಹ ಪರಮಾತ್ಮ ಪರಾಯಣರಾದ ಪುರುಷರು ಜ್ಞಾನದ ಮೂಲಕ ಪಾಪ ರಹಿತರಾಗಿ ಅಪುನರಾವೃತ್ತಿಯನ್ನು ಅರ್ಥಾತ್ ಪರಮಗತಿಯನ್ನು ಪಡೆಯುತ್ತಾರೆ."

ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ॥

- ಗೀತಾ ೪-೩೬

"ಒಂದು ವೇಳೆ ನೀನು ಬೇರೆಲ್ಲ ಪಾಪಿಗಳಿಗಿಂತಲೂ ಹೆಚ್ಚು ಪಾಪಗಳನ್ನು ಮಾಡಿರುವೆ ಎಂದರೂ ಸಹ ನೀನು ಜ್ಞಾನ ರೂಪಿ ದೋಣಿಯ ಮೂಲಕ ನಿಸ್ಸಂದೇಹವಾಗಿ ಸಂಪೂರ್ಣವಾದ ಪಾಪ ಸಮುದ್ರದಿಂದ ಸುಲಭವಾಗಿ ಪಾರಾಗಿಬಿಡುವೆ"

ಶ್ರೇಯಾನ್ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ।
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ॥

- ಗೀತಾ ೪-೩೩

"ಹೇ ಪರಂತಪ, ಅರ್ಜುನನೇ। ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನಯಜ್ಞವು ಅತ್ಯಂತ ಶ್ರೇಷ್ಠವಾಗಿದೆ, ಹಾಗೂ ಯಾವನ್ಮಾತ್ರ ಸಂಪೂರ್ಣಕರ್ಮಗಳು ಜ್ಞಾನದಲ್ಲಿ ಸಮಾಪ್ತಿಯಾಗುತ್ತವೆ."

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ।
ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ॥

- ಗೀತಾ ೪-೩೮

"ಈ ಜಗತ್ತಿನಲ್ಲಿ ಜ್ಞಾನಕ್ಕೆ ಸಮಾನವಾಗಿ ಪವಿತ್ರಗೊಳಿಸುವಂತಹುದು ನಿಃಸಂದೇಹವಾಗಿ ಯಾವುದೂ ಇಲ್ಲ. ಆ ಜ್ಞಾನವನ್ನು ಎಷ್ಟೋ ಕಾಲದಿಂದ ಕರ್ಮಯೋಗದ ಮೂಲಕ ಶುದ್ಧಾಂತಃಕರಣವುಳ್ಳ ಮನುಷ್ಯನು, ತನ್ನಿಂದ ತಾನೇ ಆತ್ಮನಲ್ಲಿ ಪಡೆದುಕೊಳ್ಳುತ್ತಾನೆ."

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ॥

- ಗೀತಾ ೪-೩೯

"ಜಿತೇಂದ್ರಿಯನೂ, ಸಾಧನಪರಾಯಣನೂ ಮತ್ತು ಶ್ರದ್ಧಾವಂತನೂ ಆದ ಮನುಷ್ಯನು ಜ್ಞಾನವನ್ನು ಪಡೆಯುತ್ತಾನೆ ಹಾಗೂ ಜ್ಞಾನವನ್ನು ಪಡೆದುಕೊಂಡು ಅವನು ವಿಳಂಬವಿಲ್ಲದೆ ಭಗವತ್ ಪ್ರಾಪ್ತಿರೂಪೀ ಪರಮಶಾಂತಿಯನ್ನು ಹೊಂದುತ್ತಾನೆ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ಕ್ರಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್।
ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ॥

- ಗೀತಾ ೧೫-೧೦

"ಶರೀರವನ್ನು ಬಿಟ್ಟು ಹೋಗುವವನನ್ನು ಅಥವಾ ಶರೀರದಲ್ಲಿ ಸ್ಥಿತನಾಗಿರುವವನನ್ನು ಅಥವಾ ವಿಷಯಗಳನ್ನು ಭೋಗಿಸುವವನನ್ನು - ಈ ಪ್ರಕಾರವಾಗಿ ಮೂರು ಗುಣಗಳಿಂದ ಕೂಡಿದವನನ್ನು ಸಹ ಅಜ್ಞಾನಿಗಳು ಅದರ ಯಥಾರ್ಥ ಸ್ವರೂಪವನ್ನು ತಿಳಿಯಲಾರರು. ಕೇವಲ ಜ್ಞಾನರೂಪೀ ನೇತ್ರಗಳುಳ್ಳ ವಿವೇಕಶೀಲರಾದ ಜ್ಞಾನಿಗಳೇ ತತ್ವದಿಂದ ತಿಳಿಯುತ್ತಾರೆ."

ಯಥೈಧಾಂಸಿ ಸಮಿದ್ಧೋಽಗ್ನಿರ್ಭ ಸಾತ್ಕುರತೇಽರ್ಜುನ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರತೇ ತಥಾ॥

- ಗೀತಾ ೪-೩೭

"ಏಕೆಂದರೆ ಹೇ ಅರ್ಜುನನೇ! ಹೇಗೆ ಪ್ರಜ್ವಲಿತವಾದ ಅಗ್ನಿಯು ಇಂಧನಗಳನ್ನು ಭಸ್ಮಮಯಮಾಡಿ ಬಿಡುತ್ತಿರ್ದೆಯೋ, ಹಾಗೆಯೇ ಜ್ಞಾನರೂಪೀ ಅಗ್ನಿಯು ಸಂಪೂರ್ಣ ಕರ್ಮಗಳನ್ನು ಭಸ್ಮಮಯ ಮಾಡಿಬಿಡುತ್ತದೆ."

ಜ್ಞಾನ ಶಬ್ದದ ಪ್ರಯೋಗ ಗೀತೆಯಲ್ಲಿ ಏಳು ಅರ್ಥದಲ್ಲಿದೆ. ೧. ತತ್ವಜ್ಞಾನ ೨. ಸಾಂಖ್ಯಜ್ಞಾನ ೩. ಪರೋಕ್ಷಜ್ಞಾನ ೪. ಸಾಧನಜ್ಞಾನ ೫. ವಿವೇಕಜ್ಞಾನ ೬. ಲೌಕಿಕ ಜ್ಞಾನ ೭. ಶಾಸ್ತ್ರಜ್ಞಾನ

೧. ತತ್ವಜ್ಞಾನವು ಸಂಪೂರ್ಣ ಕರ್ಮಗಳನ್ನು ಭಸ್ಮಮ್ಮಾಡುವಂತಹದಾಗಿದೆ. ಅಗ್ನಿಯಂತೆ ಪವಿತ್ರವೆಂದು ಹೇಳಲ್ಪಟ್ಟಿದೆ. (ಗೀತಾ ೪-೩೭)

೨. ಸಾಂಖ್ಯಜ್ಞಾನ : "ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ" (ಗೀತಾ ೫-೫)

ಸಾಂಖ್ಯ (ಜ್ಞಾನಿ) ಜ್ಞಾನದಿಂದ ಯಾವ ಮೋಕ್ಷ ಪದಕ್ಕೆ ಪ್ರಾಪ್ತನಾಗುತ್ತಾನೋ, ಕರ್ಮಯೋಗಿಯೂ ಕೂಡ ಜ್ಞಾನದ ಮೂಲಕ ಅದೇ ಮೋಕ್ಷಪದಕ್ಕೆ ಪ್ರಾಪ್ತನಾಗುತ್ತಾನೆ.

೩. ಪರೋಕ್ಷಜ್ಞಾನ : ಜ್ಞಾನವನ್ನು ಶಾಸ್ತ್ರಗಳ ಮೂಲಕ ತಿಳಿಯುವುದೇ ಪರೋಕ್ಷಜ್ಞಾನ.

೪. ಸಾಧನಜ್ಞಾನ : ಈ ಜ್ಞಾನ ತತ್ವಜ್ಞಾನದ ಅರ್ಥರೂಪ ಪರಮಾತ್ಮ ಪ್ರಾಪ್ತಿಗೆ ಕಾರಣವಾಗಿದೆ.

೫. ವಿವೇಕ ಜ್ಞಾನ : ಸತ್ವಗುಣದಿಂದ ಉಂಟಾಗುವ ಗುಣವೇ ವಿವೇಕಜ್ಞಾನ (ಗೀತಾ ೧೪-೧೭)

೬. ಲೌಕಿಕ ಜ್ಞಾನ : ಈ ಜ್ಞಾನದಿಂದ ಮನುಷ್ಯ ಎಲ್ಲಾ ಪ್ರಾಣಿಗಳಲ್ಲಿ ಭಿನ್ನ-ಭಿನ್ನ ಭಾವನೆಗಳನ್ನು ಕಾಣುತ್ತಾನೆ. ಆದುದರಿಂದ ಇದು ರಾಜಸಜ್ಞಾನ, ಲೌಕಿಕ ಜ್ಞಾನ (ಗೀತಾ ೧೮-೨೧)

೭. ಶಾಸ್ತ್ರಜ್ಞಾನ : ವೇದಶಾಸ್ತ್ರಗಳ ಅಧ್ಯಯನದಿಂದ ಪಡೆಯುವ ಜ್ಞಾನ. ಇದು ಬ್ರಾಹ್ಮಣರ ಸ್ವಾಭಾವಿಕವಾದ ಧರ್ಮ (ಗೀತಾ ೧೮-೪೨)

ಈಗ ಉಪನಿಷತ್ತುಗಳಲ್ಲಿ -

"ಋತೇ ಜ್ಞಾನಾನ್ನ ಮುಕ್ತಿ"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಜ್ಞಾನಾ ದೇವತು ಕೈವಲ್ಯಂ"

"ಜ್ಞಾತ್ವಾ ದೇವಂ ಸರ್ವಪಾಶಾಪಹಾನಿ"

"ಜ್ಞಾನ ಸಮಕಾಲ ಮುಕ್ತಾಹಃ ಕೈವಲ್ಯಂ ಯತಿ ಹತಶೋಕ"

"ತಮೇವ ವಿದಿತ್ವಾತಿ ಮೃತ್ಯುಮೇತಿ ನಾನ್ಯ ಪಂಥಾ ವಿದ್ಯತೇ ನಾಯ"

"ತರತಿ ಹಿ ಶೋಕ ಮಾತ್ಮವಿತ್"

"ಸಮೋಹ ವೈ ತತ್ ಪರಂ ಬ್ರಹ್ಮ ವೇದ ಬ್ರಹ್ಮೈವ ಭವತಿ"

"ಬ್ರಹ್ಮವಿದಾಪ್ನೋತಿ ಪರಂ"

ಇತ್ಯಾದಿ ವಾಕ್ಯಗಳು ಜ್ಞಾನವೇ ಮೋಕ್ಷ ಪ್ರಾಪ್ತಿಗೆ ಕಾರಣವೆಂದು ಪ್ರತಿಪಾದನೆ ಮಾಡುತ್ತವೆ.

ಜ್ಞಾನದ ಸಾಧನೆಗಳು

೧) ವಿವೇಕ ೨) ವೈರಾಗ್ಯ ೩) ಶಮ ೪) ದಮ ೫) ಉಪರತಿ ೬) ತಿತಿಕ್ಷಾ ೭) ಶ್ರದ್ಧಾ ೮) ಸಮಾಧಾನ ೯) ಮುಮುಕ್ಷತೆ ೧೦) ಶ್ರವಣ ೧೧) ಮನನ ೧೨) ನಿಧಿಧ್ಯಾಸನ ೧೩) ತತ್ವದ - ತ್ವಂಪದ ಅರ್ಥದ ಶೋಧನೆ.

ಈ ಸಾಧನೆಗಳ ಸ್ಥೂಲ ವಿವರಣೆ ಹೀಗಿದೆ-

೧. ವಿವೇಕ : 'ಆತ್ಮ ಅವಿನಾಶಿ, ಅಜರ, ಅಮರ, ಅಚಲವಾಗಿದೆ. ಅಂದರೆ ಕ್ರಿಯಾ ರಹಿತವಾಗಿದೆ. ಜಗತ್ತು ಮಾತ್ರ ಆತ್ಮಕ್ಕೆ ವಿರುದ್ಧವಾಗಿ, ವಿಪರೀತ ಸ್ವಭಾವ ಉಳ್ಳದ್ದಾಗಿ, ವಿನಾಶಿ ಹಾಗೂ ವಿಕಾರಗಳಿಂದ ಕೂಡಿದೆ', ಎಂಬ ಜ್ಞಾನಕ್ಕೆ 'ವಿವೇಕ' ವೆನ್ನುತ್ತಾರೆ. ತತ್ವದ ಯಥಾರ್ಥ ಅನುಭವ ಮಾಡಿಕೊಳ್ಳುವುದೇ 'ವಿವೇಕ'. ವಿವೇಕದ ಉದಯವಾಯಿತೆಂದರೆ ಸತ್-ಅಸತ್, ನಿತ್ಯ - ಅನಿತ್ಯ ವಸ್ತುಗಳ ಹಂಸಕ್ಷೀರ ನ್ಯಾಯದಂತೆ ಪ್ರತ್ಯಕ್ಷ ಅನುಭವ ಉಂಟಾಗುತ್ತದೆ.

ಎಲ್ಲಾ ಅವಸ್ಥೆಗಳಲ್ಲಿಯೂ ಮತ್ತು ಪ್ರತಿಯೊಂದು ವಸ್ತುವಿನಲ್ಲಿಯೂ ಪ್ರತಿಕ್ಷಣ "ಆತ್ಮ ಮತ್ತು ಅನಾತ್ಮ"ದ ವಿಶ್ಲೇಷಣೆಯನ್ನು ಮಾಡುತ್ತಾ ಹೋದರೆ ವಿವೇಕ ಸಿದ್ಧಿಸುತ್ತದೆ. ಈ 'ವಿವೇಕ' ಎಲ್ಲಾ ಸಾಧನೆಗಳ ಮೂಲ. ಮೊದಲು ವಿವೇಕ ಉಂಟಾದರೆ ಮಾತ್ರವೇ ವೈರಾಗ್ಯಾದಿ ಉತ್ತರ ಸಾಧನೆಗಳು ಲಭ್ಯವಾಗುತ್ತವೆ. ವಿವೇಕ ಉಂಟಾಗದಿದ್ದರೆ ನಂತರದ ಸಾಧನೆಗಳು ಸಾಧ್ಯವಾಗಲಾರವು. ಆದ ಕಾರಣ. 'ಸತ್-ಅಸತ್' ಮತ್ತು 'ನಿತ್ಯ-ಅನಿತ್ಯ' ವಸ್ತುಗಳ ವಿವೇಚನೆಯನ್ನು ಮಾಡುತ್ತಿರಬೇಕು.

೨. ವೈರಾಗ್ಯ : ಈ ಜಗತ್ತಿನಿಂದ ಆರಂಭಗೊಂಡು ಆ ಬ್ರಹ್ಮಲೋಕದವರೆಗಿನ ಸಮಸ್ತ ಬೋಗಗಳಲ್ಲಿ 'ತೃಷ್ಣೆ ಮತ್ತು ಆಸಕ್ತಿ' ಯ ಅತ್ಯಂತ ಅಭಾವವೇ 'ವೈರಾಗ್ಯ' ವೆನಿಸಿಕೊಳ್ಳುತ್ತದೆ.

ಯಾರಿಗೆ ನಿಜವಾದ ವೈರಾಗ್ಯ ಪ್ರಾಪ್ತವಾಗಿದೆಯೋ ಅವರು ಅಸತ್ ಮತ್ತು ಅನಿತ್ಯದಿಂದ ದೂರ ಸರಿದು ಅಖಂಡವಾಗಿ ಸತ್ ಮತ್ತು ನಿತ್ಯದಲ್ಲಿ ತಲ್ಲೀನರಾಗಿರುತ್ತಾರೆ. ಇದಕ್ಕೆ ವೈರಾಗ್ಯವೆನ್ನುತ್ತಾರೆ.

ಮನಸ್ಸಿನಲ್ಲಿ ಭೋಗದ ಅಭಿಲಾಷೆಗಳನ್ನು ಹೊಂದಿ ಮತ್ತು ತೋರಿಕೆಗೋಸ್ಕರ ಮೇಲ್ಮೇಲೆ ಸಂಸಾರದ 'ದ್ವೇಷ ಮತ್ತು ಘೃಣ'ವನ್ನು ಮಾಡುತ್ತಿದ್ದರೆ, ಅದಕ್ಕೆ ವೈರಾಗ್ಯವೆನ್ನುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿವೇಕದಿಂದ 'ಸತ್-ಅಸತ್' ಮತ್ತು 'ನಿತ್ಯ-ಅನಿತ್ಯ' ಗಳ ಪೃಥಕ್ಕರಣವಾದ ಮೇಲೆ ಅಸತ್ ಮತ್ತು ಅನಿತ್ಯಗಳ ಮೇಲಿನ ಮಮಕಾರ ಅತ್ಯಂತ ಸಹಜವಾಗಿ ದೂರಾಗುತ್ತದೆ. ಆಗ ಮನಸ್ಸಿನ ಧಾರೆ 'ಸತ್ ಮತ್ತು ನಿತ್ಯಗಳ' ಕಡೆಗೆ ಹರಿಯಲ್ಪಡುತ್ತದೆ. ಶರೀರಕ್ಕೆ ಸಂಭಂಧಪಟ್ಟ ಸ್ಥೂಲ ಬೋಗವನ್ನು ಬಿಟ್ಟು ಮತ್ತು ಮನಸ್ಸಿನಲ್ಲಿ ಆ ಭೋಗದ ಕಾಮನೆಗಳನ್ನಿಟ್ಟುಕೊಂಡಿದ್ದಾರೆ, ಅದಕ್ಕೆ ವೈರಾಗ್ಯವೆನ್ನುವುದಿಲ್ಲ. (ಎಲ್ಲಾ ತರಹದ ಭೋಗಗಳ ಆಸಕ್ತಿಯನ್ನು ಮನಸ್ಸಿನಿಂದ ಸಹಜವಾಗಿ ದೂಡಲ್ಪಟ್ಟು ಮತ್ತು ಅವುಗಳ ಅತ್ಯಂತ ಅಭಾವ ಉಂಟಾಗುವುದೇ 'ವೈರಾಗ್ಯ')

ಒಬ್ಬ ಗೃಹಸ್ಥನು ತನ್ನ ಸಂಸಾರದಲ್ಲಿ ಅತ್ಯಂತ ದುಃಖಿತನಾಗಿ ಸನ್ಯಾಸವನ್ನು ಸ್ವೀಕರಿಸಿದನು. ತನ್ನ ಸಾಮರ್ಥ್ಯಕ್ಕನುಗುಣವಾಗಿ ಸಾಧನಾ ಪಥದಲ್ಲಿ ಸಾಗುತ್ತಿದ್ದನು. ಕೆಲವು ವರ್ಷಗಳ ನಂತರ ಅವನ ಜೊತೆಗಾರರೊಂದಿಗೆ ಚರ್ಚೆ ಮಾಡುತ್ತಿರುವಾಗ, ಅವನು ಹೀಗೆಂದ "ನಾನು ಮನೆ ಮಕ್ಕಳು, ಹಣ, ಸಂಪತ್ತು, ಎಲ್ಲವನ್ನೂ ಸಹ ಬಿಟ್ಟು ಬಂದಿದ್ದೇನೆ, ನಾನು ಎಂತಹ ದೊಡ್ಡ ತ್ಯಾಗಿ." ಈ ಮಾತುಗಳನ್ನು ಪದೇ ಪದೇ ಅವನ ಜೊತೆಗಾರರೊಂದಿಗೆ ಹೇಳುತ್ತಲಿದ್ದ.

ಇದೇನು ನಿಜವಾದ ವೈರಾಗ್ಯವಾಯಿತೇ? ನಾನೊಬ್ಬ ತ್ಯಾಗಿ ಎನ್ನುವ ಭಾವನೆಯನ್ನೂ ಸಹ ತ್ಯಜಿಸಬೇಕು. 'ನಾನು ಎಲ್ಲವನ್ನು ಬಿಟ್ಟು ಬಂದಿದ್ದೇನೆ' ಎಂಬ ವಿಚಾರವೂ ಕೂಡ ಇರಬಾರದು. ನಿರಂತರವಾಗಿ ಮನಸ್ಸು ಭಗವಂತನ ಹೊರತು ಬೇರೆ ಯಾವ ಕಾಮನೆ ಮತ್ತು ಅಭಿಲಾಷೆಗಳನ್ನು ಹೊಂದಿರಬಾರದು. ಹೇಗೆ ಶುಕ, ವಾಮದೇವ ಮುಂತಾದ ತ್ಯಾಗಿಗಳು ತಮ್ಮ ಜೀವನವನ್ನು ನಿಸ್ಪೃಹತೆಯಿಂದ ಜೀವಿಸಿದರೋ ಹಾಗೆಯೇ ನಮ್ಮ ಜೀವನವಿರಬೇಕು. ಎಲ್ಲಿಯ ತನಕ ಇಂತಹ ವೈರಾಗ್ಯ ಉಂಟಾಗುವುದಿಲ್ಲವೋ ಅಲ್ಲಿಯ ತನಕ ನಮ್ಮ ವಿವೇಕದಲ್ಲಿ ಏನಾದರೊಂದು ನ್ಯೂನತೆ ಇದೆಯೆಂದು ತಿಳಿಯಬೇಕು.

ಷಟ್ ಸಂಪತ್ತಿ: ವಿವೇಕ ಮತ್ತು ವೈರಾಗ್ಯದ ಫಲ ಸ್ವರೂಪವಾಗಿ ಸಾಧಕನಿಗೆ ಆರು ಪ್ರಕಾರದ ಪರಮ ಸಂಪತ್ತಿಯು ದೊರೆಯುತ್ತದೆ. ಇವು ಪೂರ್ಣವಾಗಿ ದೊರೆಯದಿದ್ದರೆ ನಮ್ಮ ವಿವೇಕ. ವೈರಾಗ್ಯದಲಲ್ಲಿ ಸ್ವಲ್ಪವಾದರೂ ದೋಷ ಉಳಿದಿದೆ ಎಂದು ತಿಳಿಯಬೇಕು. ವಿವೇಕ-ವೈರಾಗ್ಯಗಳು ಪರಿಪೂರ್ಣವಾಗಿ ಅಳವಡಿಕೆ ಆಗಿದ್ದೇ ಆದರೆ ಈ ಸಂಪತ್ತಿಗಳ ಪ್ರಾಪ್ತಿಯು ಬಹಳ ಸಹಜ ಸಾಧ್ಯವಾಗಿದೆ. ಇವುಗಳಿಗೆ "ಷಟ್ ಸಂಪತ್ತಿ" ಯೆಂದು ಕರೆಯುತ್ತಾರೆ. ಅವುಗಳ ಸ್ಥೂಲ ವಿವರಣೆ ಹೀಗಿದೆ -

೧. ಶಮ : ಅಂತರ್ ಇಂದ್ರಿಯಗಳ ನಿಗ್ರಹವೇ "ಶಮ". ಅರ್ಥಾತ್ ವಿಷಯಗಳಿಂದ ಪೂರ್ಣವಾಗಿ ಮನಸ್ಸಿನ ನಿಗ್ರಹವನ್ನು ಮಾಡಿ ನಿಶ್ಚಲ ಮತ್ತು ಶಾಂತವಾಗಿರುವುದೇ 'ಶಮ'ವಾಗಿದೆ.

ಪರಮಾತ್ಮನನ್ನು ಬಿಟ್ಟು ಬೇರೆ ಯಾವುದೇ ಚಿಂತನೆಯನ್ನು ಮಾಡದೇ ಇರಬೇಕು. ಆದರೆ, ಎಷ್ಟೇ ಸಾವಧಾನದಿಂದ ಇದ್ದರೂ ಕೂಡ, ಸ್ವಲ್ಪ ಅವಕಾಶ ದೊರಕಿದರೂ ಸಾಕು, ಮನಸ್ಸು ತನ್ನೆಲ್ಲಾ ಶಕ್ತಿಯನ್ನು ಒಂದು ಗೂಡಿಸಿಕೊಂಡು ಹೊರಗೆ ಓಡುತ್ತದೆ; ಲಗಾಮಿಲ್ಲದ ಕುದುರೆಯಂತೆ, ಕ್ಷಣ ಭಂಗುರ, ಅನಿತ್ಯವಾದ-ದುಃಖದಾಯಕ ವಿಷಯಾದಿಗಳಲ್ಲಿ ಹರಿಯುತ್ತದೆ. ಇಂತಹ ಚಂಚಲಯುಕ್ತವಾದ ಮನಸ್ಸನ್ನು ಪೂರ್ಣವಾಗಿ ನಿಗ್ರಹಿಸುವುದಕ್ಕೆ 'ಶಮ' ಎನ್ನುತಾರೆ.

೨. ದಮ : ಬಾಹ್ಯ ಇಂದ್ರಿಯಗಳನ್ನು ಶಬ್ದಾದಿ ವಿಷಯಗಳಿಂದ ಪೂರ್ಣವಾಗಿ ನಿಗ್ರಹಿಸುವುದಕ್ಕೆ 'ದಮ' ಎನ್ನುತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಬ್ದ, ಸ್ಪರ್ಶ, ರೂಪ, ರಸ, ಗಂಧ ಈ ಐದು ವಿಷಯಗಳು ಬಾಹ್ಯ ಇಂದ್ರಿಯಗಳ ಸ್ಥೂಲ ವಿಷಯಗಳಾಗಿದ್ದು ಹೊರಗಡೆ ಸ್ಥಿತಗೊಂಡಿದೆ. ಇವುಗಳ ಬಗ್ಗೆ ಕಠೋಪನಿಷತ್ತಿನಲ್ಲಿ ಹೇಳಿರುವುದೇನೆಂದರೆ,

ಪರಾಂಚ್ಚಿ ಖಾನಿ ವ್ಯತೃಣತ್ ಸ್ವಯಂಭೂ।
ಸ್ತಸ್ಮಾತ್ಪರಾಂಗ್ಗಪಶ್ಯತಿ ನಾಂತರಾತ್ಮನ್॥

- ಕಠೋಪನಿಷತ್ತು ೨-೧-೧

ಎಲ್ಲಾ ಬಾಹ್ಯ ಇಂದ್ರಿಯಗಳ ನಿರ್ಮಾಣ, ಮನುಷ್ಯನು ಇಂದ್ರಿಯಗಳ ಮುಖಾಂತರ ಸುಬುದ್ಧಿದಾಯಕ. ವಿಶುದ್ಧ ವಿಷಯಗಳ ಗ್ರಹಣವನ್ನು ಮಾಡಿ ಸುಖಕರವಾದ ಜೀವನವನ್ನು ನಡೆಸುತ್ತಾ ಪರಮಾತ್ಮನೆಡೆಗೆ ಹೋಗುವುದಕ್ಕೋಸ್ಕರ ಉಂಟಾಗಿದೆ. ಸ್ವಯಂಭೂ ಭಗವಂತನು ಇಂದ್ರಿಯಗಳ ಮುಖಗಳನ್ನು ಹೊರಗಡೆ ಇಟ್ಟಿದ್ದಾನೆ. ಮನುಷ್ಯನು ಇದರ ಮರ್ಮಗಳನ್ನು ಅರಿಯದೆ ಇಂದ್ರಿಯಗಳನ್ನು ವಿಷಯ ಭೋಗಗಳಿಗೆ ಮಾತ್ರ ಉಪಯೋಗಿಸಿಕೊಳ್ಳುತ್ತಾನೆ. ಹೊರಗಿನ ವಿಷಯಗಳಿಂದ ಇಂದ್ರಿಯಗಳನ್ನು ಸೆಳೆದು ವಿಮುಖ ಮಾಡಿ ಅಂತರ್ಯಾಮಿ ಪರಮಾತ್ಮನಲ್ಲಿ ತೊಡಗಿಸುವುದೇ "ದಮ"

೩. ಉಪರತಿ : ವಿಷಯಗಳಿಂದ ಚಿತ್ತವು ಹೊರತಾಗುವುದೇ 'ಉಪರತಿ'. ಅರ್ಥಾತ್ ವಿಷಯಗಳ ಇಚ್ಛೆಯ ಅಭಾವವೇ 'ಉಪರತಿ'. ಯಾವಾಗ ಮನ ಇಂದ್ರಿಯಗಳಿಗೆ ವಿಷಯದಲ್ಲಿ ರಸಾನುಭೂತಿ ಇಲ್ಲದಂತಾಗುತ್ತದೋ ಆಗ ಸ್ವಾಭಾವಿಕವಾಗಿ ಉಪರತಿ ಉಂಟಾಗುತ್ತದೆ. ಈ 'ಉಪರತಿ'ಯು ಕೇವಲ ಹೊರಗಿನ ವಿಷಯಗಳ ಭೋಗದ ತ್ಯಾಗಮಾತ್ರವಲ್ಲದೆ ಮನಸ್ಸಿನಿಂದ ಭೋಗದ ಅಂತ್ಯವಾಗಬೇಕು. ಭೋಗಗಳ ಕಡೆಗೆ ವೃತ್ತಿಗಳು ಎಂದೆಂದಿಗೂ ಹೋಗದೇ ಇರುವುದಕ್ಕೆ 'ಉಪರತಿ' ಎನ್ನುತ್ತಾರೆ.

ಹೇಗೆಂದರೆ ಮನೆಯನ್ನು ಬಿಟ್ಟು ಬಹುದೂರ ಹೋದ ಒಬ್ಬ ವ್ಯಕ್ತಿಯ ಮನಸ್ಸು ಮನೆಯಲ್ಲಿಯೇ ಉಳಿದುಕೊಂಡಿತ್ತು. ಎಲ್ಲಿ ಮನಸ್ಸು ಕುಳಿತಿದೆಯೋ ಅದರ ನಾಲ್ಕೂ ಕಡೆಯಲ್ಲೂ ಭೋಗ ಸಾಮಗ್ರಿಗಳು ತುಂಬಿವೆ. ಅವುಗಳನ್ನು ಬಿಟ್ಟು ಮನಸ್ಸು ಹೊರಬರಲೊಲ್ಲದು. ಸ್ಥೂಲ ರೂಪದಲ್ಲಿ ಆ ವ್ಯಕ್ತಿ ಎಲ್ಲಾ ಭೋಗ ಸಾಮಗ್ರಿಗಳಿಂದ ದೂರವಿದ್ದರೂ ಸಹ ಸೂಕ್ಷ್ಮ ರೂಪದಿಂದ ಆ ಭೋಗ ಸಾಮಗ್ರಿಗಳಲ್ಲಿಯೇ ತಲ್ಲೀನನಾಗಿದ್ದನು. ಇಂತಹ ತ್ಯಾಗದಿಂದ ಯಾವ ಉಪಯೋಗವೂ ಇಲ್ಲ. ಮನಸ್ಸಿಗೆ ಈ ಭೋಗ ಸಾಮಗ್ರಿಗಳು ಹೇಯ ವಸ್ತುಗಳಾಗಿ ಕಾಣಬೇಕು. ಭೋಗದ ಕಡೆಗೆ ಮನಸ್ಸಿನ ವೃತ್ತಿಗಳು ಎಂದಿಗೂ ಹೋಗಬಾರದು. ಈ ರೀತಿಯಾದ ವಿಷಯಗಳ ಇಚ್ಛೆಯ ಸಂಪೂರ್ಣ ಅಭಾವವೇ 'ಉಪರತಿ'.

೪. ತಿತಿಕ್ಷಾ : ಶೀತ-ಉಷ್ಣ, ಕ್ಷುಧಾ-ತೃಷ್ಣಾ, ಸುಖ-ದುಃಖ, ಮಾನ-ಅಪಮಾನ ಮುಂತಾದ ದ್ವಂದ್ವಗಳ ಸಹನೆಯನ್ನು ಮಾಡುವುದರ ಹೆಸರೇ 'ತಿತಿಕ್ಷಾ' ಎಂದಾಗಿದೆ. ಜಗತ್ತು ದ್ವಂದ್ವ ಯುಕ್ತವಾಗಿದೆ. ಇಂತಹ ದ್ವಂದ್ವಗಳ ಸಹನೆಯನ್ನು ಮಾಡುವುದೇ ಉತ್ತಮ ಸಾಧನೆ, ಇದೇ ತಪಸ್ಸು. ಸಹನಶೀಲತೆ ಎಂಬುದು ವಿಶೇಷಗುಣ. 'ತಿತಿಕ್ಷೆ', ವಿವೇಕ ವೈರಾಗ್ಯ ಶಮ ದಮ ಮತ್ತು ಉಪರತಿಯ ನಂತರ ಪ್ರಾಪ್ತವಾಗುವ ಸ್ಥಿತಿ. ಇದೊಂದು ಅತ್ಯಂತ ವಿಲಕ್ಷಣವಾದ ಸ್ಥಿತಿ. ಮನಸ್ಸು 'ತಿತಿಕ್ಷಾ' ಸ್ತರವನ್ನು ಮುಟ್ಟಿದ ಮೇಲೆ, ಸುಖ-ದುಃಖ ಮಾನಪಮಾನಗಳಿಂದ, ವಿಚಲಿತವಾಗುವುದಿಲ್ಲ. ಯಾರೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದರಿಂದ ತಪ್ಪಿಸಿಕೊಳ್ಳಲಾರರು. ಆದುದರಿಂದ, ಯಾವುದಾದರೂ ಮಾರ್ಗದಿಂದ ಇದನ್ನು ಸಹಿಸುವುದೇ ಉತ್ತಮ. ಅರ್ಥಾತ್-ದ್ವಂದ್ವಗಳನ್ನು ಸಹಜ ರೀತಿಯಲ್ಲಿ ಸ್ವೀಕಾರ ಮಾಡುವುದೇ 'ತಿತಿಕ್ಷಾ'.

೫. ಶ್ರದ್ಧಾ : ವೇದ, ಸತ್ ಶಾಸ್ತ್ರ, ಗುರುವಾಕ್ಯ ಮತ್ತು ಸಾಧನೆ ಮುಂತಾದುವುಗಳಲ್ಲಿ ಯಾವ ಭಕ್ತಿ ಇದೆಯೋ ಅದಕ್ಕೆ 'ಶ್ರದ್ಧೆ' ಎನ್ನುತ್ತಾರೆ. ಮೊದಲು ಶಾಸ್ತ್ರ, ಗುರು ಮುಂತಾದುವುಗಳಲ್ಲಿ ಶ್ರದ್ಧೆ ಉಂಟಾಗುತ್ತದೆ. ಇದರಿಂದಾಗಿ ಆತ್ಮ ಶ್ರದ್ಧೆ ವೃದ್ಧಿಯಾಗುತ್ತದೆ. ಇಂತಹ ಶ್ರದ್ಧೆಯೇ ಎಲ್ಲಾ ಸಾಧನಗಳಗೆ ತಾಯಿಯಂತಿರುತ್ತದೆ. ಶ್ರದ್ಧೆಯಿಲ್ಲದೆ ಯಾವ ಸಾಧನೆಯೂ ಸಿದ್ಧಿಸದು. 'ಷಟ್ ಸಂಪತ್ತಿ' ನಲ್ಲಿ 'ಶ್ರದ್ಧೆ' ಎಂಬುದು ಅತಿ ಮುಖ್ಯವಾದ ಸಂಪತ್ತು. ದೇವರು, ಗುರು, ಶಾಸ್ತ್ರಗಳಲ್ಲಿ ಅಚಲವಾದ ವಿಶ್ವಾಸವನ್ನಿಡುವುದಕ್ಕೆ 'ಶ್ರದ್ಧಾ' ಎನ್ನುತ್ತಾರೆ.

೬. ಸಮಾಧಾನ : ಸತ್-ಚಿತ್-ಸ್ವರೂಪವನ್ನು ತಿಳಿದುಕೊಳ್ಳುವ ಸಮಯದಲ್ಲಿ ಉಂಟಾಗುವ ಚಿತ್ತದ ಏಕಾಗ್ರತೆಯೇ 'ಸಮಾಧಾನ'. ಅರ್ಥಾತ್-ಮನಸ್ಸಿನ ವಿಕ್ಷೇಪದ ನಾಶ. ಮನಸ್ಸು ಮತ್ತು ಬುದ್ಧಿಯನ್ನು ಪೂರ್ಣತಯಾ ಪರಮಾತ್ಮನಲ್ಲಿ ಸಮಾವಿಷ್ಟಗೊಳಿಸುವುದು ಮತ್ತು ಮನಸ್ಸಿನ ಸಂಕಲ್ಪ-ವಿಕಲ್ಪಾದಿ ಎಲ್ಲಾ ಕಾರ್ಯಗಳು ರಹಿತವಾಗಿ ಒಂದೇ ಒಂದು ಲಕ್ಷ್ಯದಲ್ಲಿ ಸಮಾಗಮವಾದ ಬಳಿಕ ಯಾವ ಆನಂದದ ಆವಿರ್ಭಾವ ಆಗುತ್ತದೆಯೋ ಅದುವೇ 'ಸಮಾಧಾನ'.

ಹೇಗೆ ಅರ್ಜುನನಿಗೆ, ಗುರು ದ್ರೋಣಾಚಾರ್ಯರ ಮುಂದೆ ಪರೀಕ್ಷೆಯನ್ನು ಕೊಡುವಾಗ ವೃಕ್ಷದ ಮೇಲಿಟ್ಟಿದ್ದ ಕೃತಕ ಪಕ್ಷಿಯ ಒಂದೇ ಒಂದು ಕಣ್ಣು ಕಾಣುತ್ತಿತ್ತೋ ಹಾಗೆ ಏಕಾಗ್ರತೆಯನ್ನು ಹೊಂದಬೇಕು. ಸತಿ, ಸುತ, ಧನ, ಕನಕ ವಸ್ತು, ವಾಹನಗಳಲ್ಲಿ ಸ್ಥಿತವಾಗಿರುವ ವಿಕ್ಷಿಪ್ತ ಮನ ಮತ್ತು ಬುದ್ಧಿಯನ್ನು ಅಲ್ಲಿಂದ ಬೇರ್ಪಡಿಸಿ ನಿರಂತರವಾಗಿ ಏಕಮಾತ್ರ ಲಕ್ಷ್ಯವಸ್ತು ಬ್ರಹ್ಮನ ದರ್ಶನ ಪಡೆಯುವುದೇ 'ಸಮಾಧಾನ'.

೭. ಮುಮುಕ್ಷತ್ವ : ವಿವೇಕ, ವೈರಾಗ್ಯ ಮತ್ತು ಷಟ್ ಸಂಪತ್ತಿನಗಳ ಪ್ರಾಪ್ತಿಯ ನಂತರ, ಸ್ವಾಭಾವಿಕವಾಗಿ ಅವಿದ್ಯಾ ಬಂಧನದಿಂದ ಮುಕ್ತವಾಗಿ ಮತ್ತು ಎಲ್ಲಾ ಕಡೆಯಿಂದಲೂ ಚಿತ್ತವನ್ನೂ ಬೇರ್ಪಡಿಸಿ ಏಕಮಾತ್ರ ಪರಮಾತ್ಮನ ತೀವ್ರ ಕಾಮನೆಗೆ "ಮುಮುಕ್ಷತ್ವ" ಎನ್ನುತ್ತಾರೆ.

ಹೇಗೆ ಒಬ್ಬ ಮನುಷ್ಯನ ಮನೆಗೆ ಬೆಂಕಿ ಹತ್ತಿಕೊಂಡಾಗ, ಆ ವಿಷಯ ಅವನಿಗೆ ತಿಳಿದೊಡನೆ ಓಡೋಡಿ ಬಂದು ಆ ಬೆಂಕಿಯನ್ನು ಆರಿಸುವ ಪ್ರಯತ್ನವನ್ನು ಮಾಡುತ್ತಾನೆಯೋ ಹೊರತು, ಆ ಬೆಂಕಿಯನ್ನು ಯಾರು ಹಚ್ಚಿದರು, ಹೇಗೆ ಹತ್ತಿತ್ತು, ಹಚ್ಚಲಿಕ್ಕೆ ಬೆಂಕಿ ಎಲ್ಲಿಂದ ದೊರಕಿತು ಎಂಬ ವ್ಯರ್ಥ ವಿಚಾರಗಳನ್ನು ಮಾಡುವುದಿಲ್ಲ. ಆ ರೀತಿಯಾಗಿ ವಿಚಾರ ಮಾಡುತ್ತಾ ಕುಳಿತರೆ ಮನೆ ಸುಟ್ಟು ಭಸ್ಮವಾದೀತು. ಇಂತಹ ವಿಚಾರಗಳನ್ನು ಬಿಟ್ಟು ಬೆಂಕಿಯನ್ನು ಕಂಡ ತಕ್ಷಣವೇ ಅದನ್ನು ಆರಿಸುವ ಕ್ರಮಕ್ಕೆ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ. ಇದು ಹೇಗೆ ವ್ಯಾವಹಾರಿಕವೋ, ಹಾಗೆಯೇ, ಮುಮುಕ್ಷುವು ತಿಳಿಯುವುದೇನೆಂದರೆ, ನಾನು ಅಧ್ಯಾತ್ಮ, ಆದಿಭೂತ, ಆದಿದೈವಿಕ ಎಂಬ ತ್ರಿತಾಪಗಳಿಂದ ಸುಟ್ಟು ಹೋಗುತ್ತಿದ್ದೇನೆ. ಆದಷ್ಟು ಬೇಗ ಜೀವನದ ಸಫಲತೆಯನ್ನು ಪಡೆಯಬೇಕು ಎಂದು ಪರಾಕಾಷ್ಠೆಯ ಪ್ರಯತ್ನವನ್ನು ಮಾಡುತ್ತಾನೆ. ಇದನ್ನು ಬಿಟ್ಟು, ಜಗತ್ತಿನ ಸೃಷ್ಟಿ ಯಾವಾಗಾಯಿತು, ಅದು ಎಲ್ಲಿದೆ, ಯಾರು ಮಾಡಿದರು ಎಂಬ ಶಂಕೆ-ಸಂದೇಹಗಳ ಪರಿಹಾರವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹುಡುಕುವ ಸಲುವಾಗಿ ತನ್ನ ಆಯುಷ್ಯವನ್ನು ವ್ಯಯಿಸಲಾರ. ಆದುದರಿಂದ, ಸ್ವಾಭಾವಿಕವಾಗಿ ಮುಮುಕ್ಷುವು ಪರಮಾತ್ಮ ಪ್ರಾಪ್ತಿಗೋಸ್ಕರ ತೀವ್ರತರವಾದ ಪ್ರಯತ್ನದಲ್ಲಿ ತೊಡಗುತ್ತಾನೆ. ಇಂತಹ ಪ್ರಯತ್ನಕ್ಕೆ 'ಮುಮುಕ್ಷುತ್ವ' ಎನ್ನುತ್ತಾರೆ.

ಈ ಎಲ್ಲಾ ಸಾಧನೆಗಳಿಂದ ಪ್ರಾಪ್ತವಾಗುವ 'ಜ್ಞಾನ'ವೇ, ಪರಮಾತ್ಮ ಸ್ವರೂಪವನ್ನು ಪ್ರತ್ಯಕ್ಷಗೊಳಿಸಿ ಮತ್ತು ಜೀವಾತ್ಮನನ್ನು ಪ್ರಪಂಚದ ಬಂಧನದಿಂದ ಬಿಡಿಸಿ ಮುಕ್ತಿಯನ್ನು ಕೊಡುವಂತಹದಾಗಿದೆ. ಈ ಕಾರಣದಿಂದ 'ಜ್ಞಾನದ ಆಶ್ರಯ'ವನ್ನು ಪಡೆಯುವುದು ಅತ್ಯವಶ್ಯಕವಾಗಿದೆ. ಜ್ಞಾನದಿಂದ, ಪ್ರಕೃತಿ ಮತ್ತು ಪುರುಷನ ಸ್ವರೂಪವನ್ನು ತಿಳಿದು, ಗುಣಗಳ ಸಹಿತವಾಗಿ ಪ್ರಕೃತಿಯಿಂದ ಸರ್ವಥಾ ಅತೀತನಾಗಿ, ನಿರ್ಗುಣ-ನಿರಾಕಾರ ಸಚ್ಚಿದಾನಂದ ಪರಮಾತ್ಮನ ಸ್ವರೂಪದಲ್ಲಿ ಅಭಿನ್ನ ಭಾವದಿಂದ ಸ್ಥಿತನಾಗುವುದಕ್ಕೆ 'ಜ್ಞಾನದ ಆಶ್ರಯ' ವೆನ್ನುತ್ತಾರೆ.

ಗೀತೆಯಲ್ಲಿ ಜ್ಞಾನದ ಬಗ್ಗೆ ಈ ರೀತಿ ಹೇಳಲ್ಪಟ್ಟಿದೆ-

ಯಥೈಧಾಂಸಿ ಸಮಿದ್ಧೋಗ್ನಿರ್ಭಸ್ಮಸಾತ್ಕುರುತೇ ರ್ಜುನ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ॥

- ಗೀತಾ - ೪-೩೭

"ಹೇಗೆ ಪ್ರಜ್ವಲಿತವಾದ ಅಗ್ನಿಯು ಇಂಧನವನ್ನು ಭಸ್ಮಮಯವನ್ನಾಗಿಸುತ್ತದೋ ಹಾಗೆಯೇ ಜ್ಞಾನರೂಪ ಅಗ್ನಿಯು ಸಂಪೂರ್ಣಕರ್ಮಗಳನ್ನು ಭಸ್ಮಮಯವಾಗಿಸುತ್ತದೆ"

ಜ್ಞಾನರೂಪ ಅಗ್ನಿಯು, ಎಷ್ಟೇ ಶುಭಾಶುಭ ಕರ್ಮಗಳಿದ್ದರೂ ಸಹ, ಅವುಗಳೆಲ್ಲವನ್ನು, ಅಂದರೆ, ಅವುಗಳ ಫಲ ಸ್ವರೂಪವಾಗಿ ಪ್ರಾಪ್ತವಾಗುವ ಸುಖ ದುಃಖ, ಅಹಂತಾ, ಮಮತಾ, ರಾಗ-ದ್ವೇಷ ಮುಂತಾದ ಸಮಸ್ತ ವಿಕಾರಗಳ ಸಹಿತವಾಗಿ ಕರ್ಮಗಳನ್ನು ನಷ್ಟಪಡಿಸುತ್ತದೆ.

ಈ ವಿಷಯದಲ್ಲಿ ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಹೇಳಿರುವುದೇನೆಂದರೆ -

"ನ ಹಿ ಸಾಕ್ಷಾದ್ ಏವ ಜ್ಞಾನಾಗ್ನಿಃ ಕರ್ಮಾಣಿ
ಇಂಧನವದ್ ಭಸ್ಮೀಕರ್ತುಂ ಶಕ್ನೋತಿ ತಸ್ಮಾತ್
ಸಮ್ಯಗ್ದರ್ಶನಂ ಸರ್ವಕರ್ಮಣಾಂ ನಿರ್ಬೀಜತ್ವೇ
ಕಾರಣಂ ಇತಿ ಅಭಿಪ್ರಾಯಃ"

"ಅಗ್ನಿಯು ಇಂಧನವನ್ನು ಭಸ್ಮಮಾಡುವಂತೆ ಜ್ಞಾನರೂಪ ಅಗ್ನಿಯು ಕರ್ಮಗಳನ್ನು ಭಸ್ಮಮಾಡುವುದಿಲ್ಲ" ಆದುದರಿಂದ ಈ ಉಕ್ತಿಯ ಅಭಿಪ್ರಾಯವೇನೆಂದರೆ, ಯಥಾರ್ಥಜ್ಞಾನವು ಎಲ್ಲಾ ಕರ್ಮಗಳನ್ನು ನಿರ್ಬೀಜಗೊಳಿಸುತ್ತದೆ ಎಂಬ ಆಶಯವನ್ನು ಹೊಂದಿದೆ.

ಈ ಜನ್ಮದಲ್ಲಿ 'ಯಥಾರ್ಥಜ್ಞಾನ'ದ ಉತ್ಪತ್ತಿಗಿಂತ ಮೊದಲು ಸಾಧಾರಣ ಜ್ಞಾನದಿಂದ ಮಾಡಿದ ಕರ್ಮಗಳನ್ನೂ, ಮೊದಲಿನ ಅನೇಕ ಜನ್ಮಗಳಲ್ಲಿ ಮಾಡಿದ ಕರ್ಮಗಳನ್ನೂ, ಇನ್ನೂ ಫಲಗಳನ್ನು ಕೊಡಲು ಪ್ರವೃತ್ತವಲ್ಲದ ಕರ್ಮಗಳನ್ನೂ, ಜ್ಞಾನಾಗ್ನಿಯು ಭಸ್ಮಮಾಡುತ್ತದೆ, ಪ್ರಾರಬ್ಧ ಕರ್ಮಗಳನ್ನಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರುತಿಯಲ್ಲಿಯೂ ಸಹ ಜ್ಞಾನದ ಮಹತ್ವದ ಬಗ್ಗೆ ಈ ರೀತಿಯಾಗಿ ಸ್ಪಷ್ಟಪಡಿಸಿದ್ದಾರೆ-

ಭಿದ್ಯತೆ ಹೃದಯಗ್ರಂಥಿಶ್ಛಿದ್ಯಂತೆ ಸರ್ವಸಂಶಯಾಃ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್‌ದೃಷ್ಟೆ ಪರಾವರೆ॥

- ಮುಂಡಕೋಪನಿಷತ್-೨-೨-೮

ಪರಬ್ರಹ್ಮ ಪರಮಾತ್ಮನ ಸಾಕ್ಷಾತ್ಕಾರವಾದ ಮೇಲೆ "ಜೀವ"ನ ಹೃದಯದ ಅವಿದ್ಯಾರೂಪ ಗ್ರಂಥಿಗಳು ನಾಶ ಹೊಂದಿ ಜಡ ದೇಹದಲ್ಲಿನ ಅಜ್ಞಾನದಿಂದ ಕೂಡಿದ ಆತ್ಮಾಭಿಮಾನ ಹಾಗೂ ಸಮಸ್ತ ಸಂಶಯಗಳು ನಾಶಹೊಂದುತ್ತವೆ ಮತ್ತು ಶುಭಾಶುಭ ಸಮಸ್ತ ಕರ್ಮಗಳೂ ಕೂಡ ನಷ್ಟವಾಗುತ್ತವೆ. ಅರ್ಥಾತ್ "ಜೀವ"ನು ಎಲ್ಲಾ ಬಂಧನಗಳಿಂದ ಮುಕ್ತನಾಗುತ್ತಾನೆ. ಆದರೆ ಪ್ರಾರಬ್ಧ ಕರ್ಮಗಳು ಉಳಿದುಕೊಳ್ಳುತ್ತವೆ. ಅವುಗಳನ್ನು ಭೋಗಿಸಲೇ ಬೇಕಾಗುತ್ತದೆ.

"ಪ್ರಾರಬ್ಧಂ ಭೋಗತೋ ನಶ್ಯೇತ್"

ಎಂಬುದಾಗಿ ಹೇಳಲ್ಪಟ್ಟಿದೆ. ಸುಖ ದುಃಖ ಭೋಗ ರೂಪ ಪ್ರಾರಬ್ಧ ಕರ್ಮವು ದೇಹದ ತಲೆಯ ಮೇಲೆ ಇದ್ದೇ ಇದೆ. ಅರ್ಥಾತ್-ಸ್ಥೂಲ ದೇಹವು "ಭೋಗಾಯತನ" ವಾಗಿದೆ. ಇಂದ್ರಿಯಗಳು ಭೋಗಕ್ಕೆ ಸಾಧನಗಳಾಗಿವೆ. ಜೀವಾತ್ಮನೇ ಭೋಗರೂಪ ಸುಖ ದುಃಖ ಪ್ರಾರಬ್ಧ ಕರ್ಮವನ್ನು ಭೋಗಿಸುತ್ತಾನೆ. ಆದರೆ ತತ್ವಜ್ಞಾನ ರೂಪವಾದ ಅಗ್ನಿಯು ಪ್ರಕಟವಾದ ಕೂಡಲೆ, ಸಮಸ್ತ ಪೂರ್ವ ಸಂಚಿತ ಸಂಸ್ಕಾರಗಳ ಅಭಾವವುಂಟಾಗುತ್ತದೆ. ಮನ, ಬುದ್ಧಿ, ಶರೀರ, ಇವುಗಳಿಂದ ಆತ್ಮವು ಅಸಂಗನೆಂದು ಅರಿವಾದ ಕಾರಣ, ಆ ಮನ ಬುದ್ಧಿ ಮತ್ತು ಶರೀರಗಳ ಜೊತೆಗೆ ಪ್ರಾರಬ್ಧದ ಭೋಗಗಳಿದ್ದರೂ ಸಹ, ಆ ಬೋಗಗಳಿಂದ ಅವನ ಅಂತಃಕರಣದಲ್ಲಿ ಶೋಕ-ಮೋಹ ಮುಂತಾದ ವಿಕಾರಗಳು ಉಂಟಾಗುವುದಿಲ್ಲ, ಆದುದರಿಂದ ಅವುಗಳು ಇದ್ದರೂ ಸಹ ನಷ್ಟವಾದಂತೆಯೇ ಸರಿ ಮತ್ತು 'ಕ್ರಿಯಮಾಣ' ಕರ್ಮದ ಬಗ್ಗೆ ಕರ್ತೃತ್ವಾಭಿಮಾನ, ಮಮಕಾರ, ಆಸಕ್ತಿ, ವಾಸನೆ ಇಲ್ಲದೇ ಇರುವುದರಿಂದ ಅವುಗಳ ಸಂಸ್ಕಾರಗಳು ಉತ್ಪತ್ತಿಯಾಗುವುದಿಲ್ಲ. ಆದ ಕಾರಣ ಆ ಕರ್ಮಗಳು ವಾಸ್ತವವಾಗಿ 'ಕರ್ಮಗಳು' ಎಂದೆನಿಸಿಕೊಳ್ಳುವುದಿಲ್ಲ.

'ಜ್ಞಾನ' ಶಬ್ದದ ಬಳಕೆಯನ್ನು ವಿಭಿನ್ನ ಅರ್ಥದಲ್ಲಿ ಬಳಸಿದ್ದಾರೆ ಮತ್ತು ಉಪಮಾನ ಕೊಟ್ಟಿದ್ದಾರೆ. ವಿವೇಕ-ಜ್ಞಾನ, ತತ್ವ-ಜ್ಞಾನ, ಯೋಗ ಶಬ್ದದ ಜೊತೆಯಲ್ಲಿರುವುದರಿಂದ ಜ್ಞಾನ-ಯೋಗ, ಸಾಂಖ್ಯಯೋಗ, ರಾಜಸಜ್ಞಾನ, ಸಾಧನ ಜ್ಞಾನ, ಪರೋಕ್ಷಜ್ಞಾನ, ಲೌಕಿಕ ಜ್ಞಾನ, ಶಾಸ್ತ್ರಜ್ಞಾನ ಎಂಬುದಾಗಿದೆ. ಕೆಲವೆಡೆಯಲ್ಲಿ ಜ್ಞಾನ ಶಬ್ಧದ ಅರ್ಥವನ್ನು ಸಮಾಯಾನುಸಾರ ಉಪಯೋಗಿಸಲಾಗಿದೆ. ಗೀತೆಯಲ್ಲಿ ಉಪನಿಷತ್ತಿನಲ್ಲಿ ಜ್ಞಾನದ ಮಹಿಮೆಯನ್ನು ಮತ್ತು ಫಲದ ಬಗ್ಗೆ ಹೇಳಲ್ಪಟ್ಟಿದೆ. 'ಜ್ಞಾನ'ವೇ ಮುಕ್ತಿಗೆ ಉಪಾಯವಾಗಿದೆ. ಸಾಕ್ಷಿ, ನಿರ್ಗುಣ, ಅಕ್ರೀಯವಾದ ಆತ್ಮನಲ್ಲಿ ಬುದ್ಧಿ ಭ್ರಮೆಯಿಂದ ಜೀವ-ಭಾವದ ಪ್ರಾಪ್ತಿಯಾಗುತ್ತದೆ. ಇದು ವಾಸ್ತವವಾದುದಲ್ಲ, ಏಕೆಂದರೆ ಇದು ಅವಸ್ತು ರೂಪವಾಗಿರುವುದರಿಂದ ಮೋಹವು ದೂರವಾದ ಮೇಲೆ ಸ್ವ-ಭಾವವು ಉಳಿಯುತ್ತದೆ. ಹೇಗೆ ಭ್ರಮೆಯ ಸ್ಥಿತಿ ಇರುವುವವರೆಗೂ ರಜ್ಜು (ಹಗ್ಗ) ವಿನಲ್ಲಿ ಸರ್ಪದ ಪ್ರತೀತಿ ಉಂಟಾಗುತ್ತದೋ ಮತ್ತು ಭ್ರಮೆಯ ಸ್ಥಿತಿ ನಾಶವಾದ ಕೂಡಲೆ ಸರ್ಪದ ಪ್ರತೀತಿಯ ನಾಶ ಉಂಟಾಗುತ್ತದೋ, ಹಾಗೆಯೇ ಎಲ್ಲಿಯವರೆಗೆ ಭ್ರಮೆಯಿರುತ್ತದೋ ಅಲ್ಲಿಯವರೆಗೆ ಪ್ರಮಾದ ವಶದಿಂದ, ಮಿಥ್ಯಾಜ್ಞಾನದಿಂದ ಪ್ರಕಟವಾದ ಈ ಜೀವ-ಭಾವ ಇರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಿದ್ಯಾ ಮತ್ತು ಅದರ ಕಾರ್ಯವಾದ ಜೀವ-ಭಾವವನ್ನು ಅನಾದಿತ್ವವೆಂದು ತಿಳಿಯಲಾಗಿದೆ. ಆದರೆ ನಿದ್ರೆಯಿಂದ ಎಚ್ಚೆತ್ತ ಕೂಡಲೇ ಹೇಗೆ ಸಂಪೂರ್ಣ ಸ್ವಪ್ನ ಪ್ರಪಂಚ ತನ್ನ ಮೂಲಸಹಿತವಾಗಿ ನಷ್ಟವನ್ನು ಹೊಂದುತ್ತದೆಯೋ ಹಾಗೆಯೇ ಜ್ಞಾನೋದಯವಾದ ಮೇಲೆ ಅವಿದ್ಯಾಜನ್ಯವಾದ ಜೀವ-ಭಾವವು ನಾಶವನ್ನು ಹೊಂದುತ್ತದೆ.

ಶ್ರೀ ಶಂಕರಾಚಾರ್ಯರು ತಮ್ಮ ವಿವೇಕ ಚೂಡಾಮಣಿಯಲ್ಲಿ ಜ್ಞಾನದ ಬಗ್ಗೆ ಹೇಳಿರುವುದೇನೆಂದರೆ -

ಯದ್‌ಬುದ್ಧ್ಯುಪಾದಿಸಂಬಂಧಾತ್ಪರಿಕಲ್ಪಿತಮಾತ್ಮನಿ।
ಜೀವತ್ವಂ ನ ತತೋನ್ಯತ್ತು ಸ್ವರೂಪೇಣ ವಿಲಕ್ಷಣಂ।
ಸಂಭಂದಃ ಸ್ವಾತ್ಮನೋ ಬುದ್ಧ್ಯಾ ಮಿಥ್ಯಾಜ್ಞಾನಪುರಃಸರಃ।
ವಿರ್ನಿವೃತ್ತಿರ್ಭವೇತ್ತಸ್ಯ ಸಮ್ಯಕ್‌ಜ್ಞಾನೇನ ನಾನ್ಯಥಾ।
ಬ್ರಹ್ಮಾತ್ಮೈಕತ್ವವಿಜ್ಞಾನಂ ಸಮ್ಯಕ್‌ಜ್ಞಾನಂ ಶ್ರುತೇರ್ಮತಂ।

ಅರ್ಥಾತ್ : "ಯಾವ ಜೀವತ್ವದ ಬುದ್ಧಿರೂಪ ಉಪಾಧಿಯ ಸಂಬಂಧದಿಂದ ಆತ್ಮನಲ್ಲಿ ಕಲ್ಪನೆಯುಂಟಾಗಿದೆಯೋ ಅದು ಸ್ವರೂಪತಃ ಆತ್ಮನಿಂದ ಹೊರತಾಗಿಲ್ಲ. ಬುದ್ಧಿಯ ಜೊತೆಗೆ ಈ ಆತ್ಮನ ಸಂಬಂಧ ಮಿಥ್ಯಾಜ್ಞಾನಕ್ಕೆ ಕಾರಣವಾಗಿದೆ. ಇದರ ನಿವೃತ್ತಿ ಯಥಾರ್ಥ ಜ್ಞಾನವಾಗುವುದರಿಂದ ಮಾತ್ರ ಆಗಬಲ್ಲದು, ಅನ್ಯ ಪ್ರಕಾರಗಳಿಂದ (ಸಾಧನೆಗಳಿಂದ) ಇದು ಆಗಲಾರದು. ಬ್ರಹ್ಮ ಮತ್ತು ಆತ್ಮದ ಏಕತೆಯ ಜ್ಞಾನವೇ ವಾಸ್ತವಿಕವಾದ ಜ್ಞಾನವಾಗಿದೆ - ಎಂಬುದಾಗಿ ಶ್ರುತಿಗಳ ಸಿದ್ಧಾಂತವಿದೆ."

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಿರುವಂತೆ ಯಾಜ್ಞವಲ್ಕ್ಯ ಮುನಿಗಳು ತನ್ನ ಪತ್ನಿ ಮೈತ್ರೇಯಿಗೆ ಹೇಳಿದುದೇನೆಂದರೆ "ಮೋಕ್ಷದ ಸಾಧನವಾದ ಜ್ಞಾನದ ಕಥನವನ್ನು ಮಾಡುತ್ತೇನೆ ಸಾವಧಾನ ಚಿತ್ತದಿಂದ ಕೇಳು" ಎಂದರು. ಯಾಜ್ಞವಲ್ಕ್ಯ ಮುನಿಗಳು ಸನ್ಯಾಸವನ್ನು ಗ್ರಹಣ ಮಾಡುವ ಕಾಲದಲ್ಲಿ ತನ್ನ ಜೇಷ್ಠ ಪತ್ನಿ ಮೈತ್ರೇಯಿಯನ್ನು ಕರೆದು ಹೀಗೆಂದರು "ಮೈತ್ರೇಯಿ, ನಿನಗೆ ಮತ್ತು ಕಾತ್ಯಾಯಿನಿಗೆ ಬೇರೆ ಬೇರೆ ಧನವನ್ನು ಕೊಟ್ಟು ನಿಮ್ಮನ್ನು ವಿಭಾಗಿಸಿ ಮತ್ತು ನಾನು ಸನ್ಯಾಸವನ್ನು ಗ್ರಹಿಸುವ ಸಂಕಲ್ಪವನ್ನು ಮಾಡಿದ್ದೇನೆ" ಎಂದರು. ಆಗ ಮೈತ್ರೇಯಿಯು ಯಾಜ್ಞವಲ್ಕ್ಯ ಮುನಿಗಳಿಗೆ ಒಂದು ಬಹು ಮುಖ್ಯವಾದ ಪ್ರಶ್ನೆಯನ್ನು ಕೇಳುತ್ತಾಳೆ.

ಸರ್ವಾ ಪೃಥ್ವಿವಿತ್ತೇನೆ ಪೂರ್ಣಾಸ್ಯಾತ್
ಕಥಂ ತೇನಾಮೃತಾ ಸ್ಯಾಮ್॥

ಅರ್ಥಾತ್ : ಧನ ಹಾಗೂ ಸಂಪೂರ್ಣ ಪೃಥ್ವಿ ನನಗೆ ಪ್ರಾಪ್ತವಾದರೂ ಮತ್ತು ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡಿದರೂ ಸಹ ನಾನು ಮುಕ್ತಿಯನ್ನು ಪಡೆಯಬಲ್ಲನೆ? ಎಂದು ಪ್ರಶ್ನಿಸಿದಳು. ಆಗ ಯಾಜ್ಞವಲ್ಕ್ಯರು ಹೇಳಿದುದೇನೆಂದರೆ "ಹೆ! ಮೈತ್ರೇಯಿ! ಧನದಿಂದ ಈ ಲೋಕದಲ್ಲಿ ಅನೇಕ ಭೋಗಗಳು ಪ್ರಾಪ್ತವಾಗುತ್ತವೆ ಹಾಗೂ ಅದರಿಂದ ಜೀವನವು ಸುಗಮವಾಗಿ ನಡೆಯಬಲ್ಲದು, ಆದರೆ ಮೋಕ್ಷವು ದೊರಕಲಾರದು" ಎಂಬುದನ್ನು ವಿಶದಪಡಿಸುತ್ತಾರೆ.

"ಅಮೃತತ್ವಸ್ಯತು ನಾಶಾಸ್ತಿವಿತ್ತೇನ"

ಮೋಕ್ಷದ ಪ್ರಾಪ್ತಿಗೆ ಧನದ ಆಶೆಯನ್ನು ಮಾಡಬಾರದು ಎಂದು ಹೇಳಿದ ನಂತರ, ಮೈತ್ರೇಯಿಯು "ಯಾವ ಧನದಿಂದ ನನಗೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲವೋ ಅಂತಹ ಧನವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಡೆದು ನಾನೇನು ಮಾಡಲಿ? ತಾವು ಮೋಕ್ಷದ ಯಾವ ಸಾಧನೆಯನ್ನು ತಿಳಿದಿರಿವಿರೋ ಅದನ್ನು ದಯಮಾಡಿ ನನಗೆ ತಿಳಿಸಿರಿ" ಎಂದು ವಿನಂತಿಸುತ್ತಾಳೆ. ಆಗ ಯಾಜ್ಞವಲ್ಕ್ಯ ಮುನಿಗಳು ಜ್ಞಾನಕ್ಕೆ ಸಾಧನವಾದ ವೈರಾಗ್ಯ ಮುಂತಾದ ಸಾಧನಗಳನ್ನು ಬೋಧಿಸುತ್ತಾರೆ.

"ನ ವಾ ಅರೆ ಪತ್ಯುಃ ಕಾಮಾಯ ಪತಿಃ ಪ್ರಿಯೋ
ಭವತ್ಯಾತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ"

ಹೀಗೆ ಈ ಸಂಸಾರದಲ್ಲಿ ಪ್ರಸಿದ್ಧಿಯನ್ನು ಹೊಂದಿದೆ, ಅದೇನೆಂದರೆ

ಪತ್ನಿಗೆ, ಪತಿ ದೃಷ್ಟಿಯಿಂದ, ಪತಿಯು ಪ್ರಿಯನಾಗಿರುವುದಿಲ್ಲ, ಆದರೆ ತನ್ನ (ಪತ್ನಿಯ) ಹಿತಕ್ಕಾಗಿ ಪತ್ನಿಗೆ ಪತಿಯು ಪ್ರಿಯನಾಗಿರುತ್ತಾನೆ. ಹಾಗೆಯೇ ಪತಿಗೆ ಪತ್ನಿಯ ದೃಷ್ಟಿಯಿಂದ ಪತ್ನಿಯು ಪ್ರಿಯಳಾಗಿರುವುದಿಲ್ಲ. ಆದರೆ ತನ್ನ (ಪತಿಯ) ಸ್ವಾರ್ಥಕ್ಕಾಗಿ, ಹಿತಕ್ಕಾಗಿ ಪತಿಗೆ ಪತ್ನಿಯು ಪ್ರಿಯಳಾಗಿರುತ್ತಾಳೆ.

"ವಿತ್ತಾತ್ಪುತ್ರಃ ಪ್ರಿಯಃ ಪುತ್ರಾತ್ಪಿಂಡಃ ಪಿಂಡಾತ್ ಥೇಂದ್ರಿಯಂ
ಇಂದ್ರಿಯಾಂಚ ಪ್ರಿಯಃ ಪ್ರಾಣಾಃ ಪ್ರಾಣದಾತ್ಮಾ ಪರಃ ಪ್ರಿಯಃ"

ಅರ್ಥಾತ್ : ಧನ, ಪುತ್ರ, ದೇಹ, ಇಂದ್ರಿಯಗಳು, ಪ್ರಾಣ ಇವೆಲ್ಲವೂ ಸಾಮಾನ್ಯವಾಗಿ ಎಲ್ಲರಿಗೂ ಪ್ರಿಯವಾಗಿರುತ್ತವೆ. ಆದರೂ ಪ್ರತಿಯೊಬ್ಬನಿಗೂ ತನ್ನ ಆತ್ಮವೇ ಪರಮ ಪ್ರೇಮಾಸ್ಪದವಾಗಿರುತ್ತದೆ. ಪುತ್ರ, ಧನ, ಪಶು ಭುರ್ವಾದಿ ಲೋಕ, ದೇವತೆಗಳು, ಭೂತ ಮುಂತಾದ ಎಲ್ಲಾ ಜಗತ್ತು ನಮ್ಮ ಪ್ರಯೋಜನಕ್ಕಾಗಿಯೇ ಪ್ರಿಯವಾಗಿವೆ. ನಮ್ಮ ಪ್ರಯೋಜನಕ್ಕೆ ಬಾರದೆ ಇದ್ದಲ್ಲಿ ಅದರಲ್ಲಿ ನಮಗೆ ಪ್ರೇಮವಿರುವುದಿಲ್ಲ. ಈ ಜಗತ್ತಿನ ಮೇಲಿನ ಪ್ರೇಮ ಗೌಣವಾಗಿದೆ. ಮುಖ್ಯವಾದ ಪ್ರೇಮ ನಮಗೆ ನಮ್ಮ ಆತ್ಮನಲ್ಲಿದೆ.

ಒಂದು ಕಾಡಿನಲ್ಲಿ ಒಂದು ಮಂಗವು ತನ್ನ ಮರಿಯನ್ನು ಹೊಟ್ಟೆಗೆ ಅಪ್ಪಿಕೊಂಡು ಮಳೆಯಿಂದ ಸಂರಕ್ಷಣೆ ಪಡೆಯಲು ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರುತ್ತಾ ಹೋಗುತ್ತಿತ್ತು. ಮಳೆಯ ರಭಸ ಇನ್ನೂ ಹೆಚ್ಚುತ್ತಾ ಹೋಯಿತು. ಬಿರುಗಾಳಿ ಬೀಸುತ್ತಿತ್ತು. ತನ್ನ ಮರಿಯನ್ನು ಅಪ್ಪಿ ಹಿಡಿದುಕೊಂಡು ಮರದಿಂದ ಮರಕ್ಕೆ ಹಾರುವ ಪ್ರಯತ್ನದಲ್ಲಿ ಆ ಮಂಗವು ಜಾರಿಕೊಂಡು ಒಂದು ಆಳವಾದ ಗುಂಡಿಯಲ್ಲಿ ಬಿದ್ದು ಬಿಟ್ಟಿತು. ಎಷ್ಟೇ ಪ್ರಯತ್ನ ಪಟ್ಟರು ಮೇಲಕ್ಕೆ ಬರಲಾಗುತ್ತಿರಲಿಲ್ಲ. ದೈವವಶಾತ್ ಯಾವುದೇ ಪ್ರಾಣ ಹಾನಿ ಉಂಟಾಗಲಿಲ್ಲ. ಮಳೆಯು ಧಾರಾಕಾರವಾಗಿ ಸುರಿಯಹತ್ತಿತ್ತು ನಿಲ್ಲುವ ಸೂಚನೆಗಳು ಕಂಡು ಬರುತ್ತಿರಲಿಲ್ಲ. ಆ ಮಂಗನಿಗೆ, ಸದ್ಯಕ್ಕೆ ಇದೇ ಸುರಕ್ಷಿತವಾದ ಸ್ಥಳ ಎನ್ನಿಸಿತು. ಸ್ವಲ್ಪ ಸಮಯದ ನಂತರ ಸೂಚನೆಗಳು ಕಂಡು ಬರುತ್ತಿರಲಿಲ್ಲ. ಆ ಮಂಗನಿಗೆ, ಸದ್ಯಕ್ಕೆ ಇದೇ ಸುರಕ್ಷಿತವಾದ ಸ್ಥಳ ಎನ್ನಿಸಿತು. ಸ್ವಲ್ಪ ಸಮಯದ ನಂತರ ಆ ಗುಂಡಿಯೊಳಕ್ಕೆ ನೀರು ಬರಲಾರಂಭಿಸಿತು. ಮೆಲ್ಲ ಮೆಲ್ಲನೆ ಅದರ ಮಟ್ಟ ಏರುತ್ತಿತ್ತು. ಆ ಮಂಗವು ತನ್ನ ಮರಿಯನ್ನು ರಕ್ಷಿಸುವ ಪರಾಕಾಷ್ಠೆಯ ಪ್ರಯತ್ನವನ್ನು ಮಾಡುತ್ತಿತ್ತು. ನೀರಿನ ಮಟ್ಟ ಆ ಮಂಗದ ಎದೆಯವರೆಗೆ ಬಂದಿತು. ಆಗ ಮಂಗವು ತನ್ನ ಮರಿಯನ್ನು ಹೆಗಲಮೇಲಿಟ್ಟು ಕೊಂಡು ನೀರಿನಲ್ಲಿ ಮುಳುಗಿ ಸಾಯಲು ಬಿಡಲಿಲ್ಲ. ಈಗ ನೀರು ಮಂಗನ ಕುತ್ತಿಗೆಯ ಮಟ್ಟದವರೆಗೆ ಬಂತು. ಮಂಗನು ತನ್ನ ಮರಿಯನ್ನು ತಲೆಯಮೇಲಿಟ್ಟು ಕೊಂಡು ಅದನ್ನು ರಕ್ಷಿಸುವ ಪ್ರಯತ್ನ ಪಡುತ್ತಿತ್ತು. ಮಳೆಯು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧಾರಾಕಾರವಾಗಿ ಸುರಿಯುತ್ತಿದ್ದರಿಂದ ನೀರಿನ ಮಟ್ಟ ಹೆಚ್ಚಿ ಮಂಗನ ಮುಳುಗಡೆಯಾಯಿತು. ಆಗ ತಕ್ಷಣವೇ ಆ ಮಂಗನು ತನ್ನ ಮರಿಯನ್ನು ಕೆಳಕ್ಕಿಳಿಸಿ ತಾನು ಅದರ ಮೇಲೆ ನಿಂತು ತನ್ನ ರಕ್ಷಣೆಯನ್ನು ಮಾಡಿಕೊಳ್ಳಹತ್ತಿತು.

ಇದರರ್ಥವಿಷ್ಟೇ ಪ್ರತಿಯೊಬ್ಬರೂ ತಮ್ಮ ಆತ್ಮರಕ್ಷಣೆಗೆ ಆದ್ಯತೆಯನ್ನು ಕೊಡುತ್ತಾರೆ. ಯಾಕೆಂದರೆ ಪ್ರತಿಯೊಬ್ಬರಿಗೂ ತಮ್ಮ ಆತ್ಮವೇ ಪ್ರಿಯವಾಗಿರುತ್ತದೆ.

ಈ ಮಾತನ್ನು ಶ್ರುತಿಯಲ್ಲಿ ಸ್ಪಷ್ಟಪಡಿಸಿದೆ.

"ಆತ್ಮಾ ವಾ ಅರೆ ದೃಷ್ಟವ್ಯಃ ಶ್ರೋತವ್ಯೋ
ಮಂತವ್ಯೋ ನಿಧಿಧ್ಯಾಸತವ್ಯಃ"

ಅರ್ಥಾತ್ : ಪರಮ ಪ್ರೀತಿಗೆ ಪಾತ್ರವಾದದು ಆತ್ಮ. ಈ ಆತ್ಮ ಸಾಕ್ಷಾತ್ಕಾರಕ್ಕೋಸರ ಆಚಾರ್ಯರಿಂದ ಶಾಸ್ತ್ರಗಳ ಶ್ರವಣವನ್ನು ಮಾಡುವುದು ಹಾಗೂ ಭೇದ-ಭಾದಕ ಯುಕ್ತಿಯಿಂದ ಮಾನನ ಮಾಡುವುದು ಮತ್ತು ಪದೇ ಪದೇ ಧ್ಯಾನ, ಶ್ರವಣ, ಮನನ, ನಿಧಿ ಧ್ಯಾಸನವನ್ನು ಪ್ರಯತ್ನ ಪೂರ್ವಕವಾಗಿ ಮಾಡುವುದರಿಂದ ಆತ್ಮಜ್ಞಾನ ಉಂಟಾಗುತ್ತದೆ. ಆತ್ಮವು ಅಸ್ತಿ, ಭಾತಿ, ಪ್ರೀಯ ರೂಪದಿಂದ ವ್ಯಾಪಕವಿದೆ ಮತ್ತು ಈ ಸಂಪೂರ್ಣ ಜಗತ್ತು ಬ್ರಹ್ಮನಲ್ಲಿ ಸ್ಥಿತವಾಗಿದೆ ಎಂಬ ಜ್ಞಾನದಿಂದ ಸರ್ವಾತ್ಮಕ ಭಾವ ಉಂಟಾಗುತ್ತದೆ. ಜ್ಞಾನದ ಹೊರತು ಅನ್ಯ ಸಾಧನೆಗಳಿಂದ ಮೋಕ್ಷ ಸಿದ್ಧಿಯಾಗಲಾರದು. ಮೂಢ ಜನರು ಸಕಾಮ ಕರ್ಮಗಳನ್ನೇ ಕಲ್ಯಾಣದ ಉಪಾಯವೆಂದು ತಿಳಿದು, ಅವುಗಳ ಫಲದಲ್ಲಿಯೇ ಪರಮ ಸುಖವಿದೆಯೆಂದು ಕೊಂಡು ಅವುಗಳ ಪ್ರಶಂಸೆಯನ್ನು ಮಾಡುತ್ತಾ ಇರುತ್ತಾರೆ.

ಮುಂಡಕೋಪನಿಷತ್ತಿನಲ್ಲಿ ಜ್ಞಾನಪ್ರಾಪ್ತಿಯನ್ನು ಬಿಟ್ಟು ಅನ್ಯವಾದ ಫಲಗಳಿಗೋಸ್ಕರ ಮಾಡಿದ ಕರ್ಮಗಳನ್ನು ನಿಂದಿಸಲ್ಪಟ್ಟಿದೆ.

"ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾ
ಅಷ್ಟಾದಶೋಕ್ತಮವರಂ ಯೇಷು ಕರ್ಮ
ಏತಚ್ಛ್ರೇಯೋ ಯೇऽಭಿನಂದಂತಿ ಮೂಢಾ
ಜರಾಮೃತ್ಯುಂ ತೆ ಪುನರೇವಾಪಿ ಯಾಂತಿ"

- ಮುಂಡಕೋಪನಿಷತ್ತು ೧-೨-೭

"ಈ ಯಜ್ಞ ಸ್ವರೂಪವಾದ ದೋಣಿಯು ಸಂಸಾರವೆಂಬ ಸಮುದ್ರವನ್ನು ದಾಟಲು ಅಸಮರ್ಥವಾಗಿದೆ. ಇದರ ಮುಖಾಂತರ ಸಂಸಾರ ಸಮುದ್ರವನ್ನು ದಾಟುವುದಿರಲಿ, ಈ ಲೋಕದ ವರ್ತಮಾನದ ದುಃಖದ ಸಣ್ಣ ನದಿಯನ್ನು ದಾಟಿ ಸ್ವರ್ಗದ ತನಕ ತಲುಪುವುದೂ ಸಹ ಸಂದೇಹಹಾಸ್ಪದವಾಗಿದೆ. ಸಂಸಾರ ರೂಪಿ ಸಮುದ್ರವನ್ನು ಪಾರು ಮಾಡಲು ಜ್ಞಾನ ರೂಪಿ ದೋಣಿಯ ಅವಶ್ಯಕತೆಯಿದೆ. ಕರ್ಮವು ಜ್ಞಾನಕ್ಕಿಂತ ದೋಷಪೂರಿತವಾಗಿದೆ ಮತ್ತು ಈ ಕರ್ಮದಲ್ಲಿ ಷೋಡಶ ಋತ್ವಿಜ ಅಂದರೆ ಯಜ್ಞವನ್ನು ಮಾಡುವವ ಬ್ರಾಹ್ಮಣ ಹಾಗೂ ಯಜಮಾನ ಮತ್ತು ಯಜಮಾನನ ಪತ್ನಿ, ಯಜ್ಞದ ನಿತ್ಯ, ದರ್ಶ, ಚಾತುರ್ಮಾಸ್ಯ ಮುಂತಾದ ಹದಿನೆಂಟು ಪ್ರಧಾನ ಭೇದಗಳಿವೆ. ಈ ಕರ್ಮಕ್ಕೆ ಮೂಢರು ಮೋಕ್ಷದ ಸಾಕ್ಷಾತ್ ಸಾಧನೆಯೆಂದು ತಿಳಿಯುತ್ತಾರೆ ಮತ್ತು ಇಂತಹ ಮೂಢರು ಪದೇ ಪದೇ ಜನ್ಮ ಮೃತ್ಯುಗಳಿಗೆ ಪ್ರಾಪ್ತರಾಗುತ್ತಾರೆ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾವನು ಪಾಪಿಗಳೆಲ್ಲೆಲ್ಲಾ ಅತ್ಯಂತ ಪಾಪಿಯಾಗಿರುತ್ತಾನೋ, ಅವನೂ ಸಹ ಜ್ಞಾನ ರೂಪ ನೌಕೆಯ ಮುಖಾಂತರ ನಿಸ್ಸಂದೇಹವಾಗಿ ಸಂಪೂರ್ಣವಾಗಿ ಪಾಪ-ಸಮುದ್ರದಿಂದ ತೇಲಿಕೊಂಡು ಹೋಗುತ್ತಾನೆ.

ಗೀತೆಯಲ್ಲಿ ಸ್ಪಷ್ಟ ಪಡಿಸಿದೆ.

ಅಪಿ ಚೆದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ।
ಸರ್ವಂ ಜ್ಞಾನಪ್ರವೇನೈವ ವೃಜಿನಂ ಸಂತರಿಷ್ಯಸಿ॥

- ಗೀತಾ ೪-೩೬

"ಒಂದು ವೇಳೆ ನೀನು ಬೇರೆಲ್ಲ ಪಾಪಿಗಳಿಂತಲೂ ಹೆಚ್ಚು ಪಾಪಗಳನ್ನು ಮಾಡಿರುವೆ ಎಂದರೂ ಸಹ ನೀನು ಜ್ಞಾನ ರೂಪಿ ದೋಣಿಯ ಮೂಲಕ ನಿಸ್ಸಂದೇಹವಾಗಿ ಸಂಪೂರ್ಣವಾಗಿ ಪಾಪ-ಸಮುದ್ರದಿಂದ ಸುಲಭವಾಗಿ ಪಾರಾಗಿ ಬಿಡುವೆ."

ಯಾವ ರೀತಿಯಾಗಿ ಹಡಗಿನಲ್ಲಿ ಕುಳಿತುಕೊಂಡು ಮನುಷ್ಯನು ಅಗಾಧವಾದ ಜಲರಾಶಿಯ ಮೇಲೆ ತೇಲುತ್ತಾ ದಾಟಿ ಹೊಗುತ್ತಾನೋ. ಹಾಗೆಯೇ ಜ್ಞಾನದಲ್ಲಿ ಸ್ಥಿತವಾಗಿ, ಜ್ಞಾನದ ಮೂಲಕ ತನ್ನನ್ನು ತಾನು ಸರ್ವಥಾ, ಸಂಸಾರದಿಂದ ಅಸಂಗ, ನಿರ್ವಿಕಾರ, ನಿತ್ಯ ಮತ್ತು ಅನುತನೆಂದು ತಿಳಿದು, ಮೊದಲಿನ ಅನೇಕ ಜನ್ಮಗಳ ಮತ್ತು ಈ ಜನ್ಮದಲ್ಲಿ ಮಾಡಿದ ಸಮಸ್ತ ಪಾಪಗಳ ರಾಶಿಯನ್ನು ದಾಟಿ ಹೋಗುತ್ತಾನೆ. ಸಮಸ್ತ ಕರ್ಮಬಂಧನಗಳಿಂದ ಸರ್ವಥಾ ಮುಕ್ತನಾಗುತ್ತಾನೆ.

ನೌಕೆಯಲ್ಲಿ ಕುಳಿತು ಜಲರಾಶಿಯ ಮೇಲೆ ತೇಲುತ್ತಿರುವ ಮನುಷ್ಯ ಕದಾಚಿತ್ ಆ ನೌಕೆಯಲ್ಲಿ ತೂತು ಬೀಳುವುದರಿಂದ ಅಥವಾ ಅದು ಒಡೆದು ಹೋಗುವುದರಿಂದ ನೌಕೆಯ ಜೊತೆಯಲ್ಲಿ ತಾನೂ ಮುಳುಗಿ ಹೋಗುವ ಸಂಭವವಿದೆ. ಆದರೆ, ಈ ಜ್ಞಾನ ರೂಪ ನೌಕೆಯು ನಿತ್ಯವಾಗಿದೆ. ಇದನ್ನು ನಂಬಿರುವ ಮನುಷ್ಯ ನಿಸ್ಸಂದೇಹವಾಗಿ ಪಾಪಗಳಿಂದ ಪಾರಾಗುತ್ತಾನೆ. ಅವನ ಪತನವು ಎಂದೆಂದಿಗೂ ಆಗಲಾರದು. ಆದ ಕಾರಣ 'ಜ್ಞಾನ'ವನ್ನೇ ಪರಮ ಶ್ರೇಯಸ್ಕರ ಎಂದು ತಿಳಿದು 'ಜ್ಞಾನ' ಸಾಧನೆಯಲ್ಲಿ ತೊಡಗಬೇಕು. ಆದ್ದರಿಂದ 'ಜ್ಞಾನ' ಪ್ರಾಪ್ತಿಯಾಗಿ ಶ್ರೋತ್ರೀಯ ಬ್ರಹ್ಮನಿಷ್ಠ ಗುರುಗಳ ಅವಶ್ಯಕತೆ ಇದೆ.

ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ
ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ್।
ತದ್ವಿಜ್ಞಾನಾರ್ಥ ಸ ಗುರುಮೇವಾಭಿಗಚ್ಛೆತ್
ಸಮಿತ್ಪಾಣಿಃ ಶ್ರೋತ್ರೀಯಂ ಬ್ರಹ್ಮನಿಷ್ಠಮ್॥

- ಮುಂಡಕೋಪನಿಷತ್ ೧-೨-೧೨

ಸಕಾಮ ಕರ್ಮದ ಫಲಸ್ವರೂಪವಾಗಿ ದೊರೆಯುವ ಈ ಲೋಕದ ಮತ್ತು ಪರಲೋಕದ ಸಮಸ್ತ ಸಂಸಾರಿಕ ಸುಖಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ವಿವೇಕದಿಂದ ಅವುಗಳ ಅನಿತ್ಯತೆ ಮತ್ತು ದುಃಖ ರೂಪವನ್ನು ಅರಿತುಕೊಂಡು, ಎಲ್ಲಾ ಪ್ರಕಾರದ ಭೋಗಗಳಿಂದ ವಿರಕ್ತವಾಗಬೇಕು. ಒಂದು ಮಾತನ್ನು ನಿಶ್ಚಯ ಮಾಡಿಕೊಳ್ಳಬೇಕಾದುದೇನೆಂದರೆ, "ಕರ್ತೃತ್ವದ ಅಭಿಮಾನದಿಂದ ಸಕಾಮ ಭಾವವನ್ನಿಟ್ಟುಕೊಂಡು ಮಾಡುವ ಕರ್ಮಗಳು ಸ್ವಯಂ ಅನಿತ್ಯವಾಗಿರುವುದರಿಂದ ಅವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನಿತ್ಯ ಫಲವನ್ನು ಕೊಡುತ್ತವೆ." ಯಾವುದು ಸರ್ವಥಾ ಅಕೃತವಾಗಿದೆಯೋ, ಅರ್ಥಾತ್ ಕ್ರಿಯಾ ಸಾಧ್ಯವಲ್ಲವೋ ಅಂತಹ ನಿತ್ಯ ಪರಮೇಶ್ವರನ ಪ್ರಾಪ್ತಿಯನ್ನು ಅವು ಕೊಡಲಾರವು ಎಂಬುದನ್ನು ತಿಳಿದುಕೊಂಡ ಜಿಜ್ಞಾಸು, ಪರಮಾತ್ಮನ ವಾಸ್ತವಿಕ ತತ್ವಜ್ಞಾನವನ್ನು ಪಡೆಯಲಿಕ್ಕೆ, ಕೈಯಲ್ಲಿ ಸಮಿಧೆಯನ್ನು ಹಿಡಿದು ಶ್ರದ್ಧಾ ಮತ್ತು ವಿನಯಭಾವದಿಂದ ಸದ್ಗುರುವಿನಲ್ಲಿ ಶರಣಾಗಬೇಕು.

ಶ್ರುತಿಯು ಹೇಳುವುದೇನೆಂದರೆ-

ನ ಚಕ್ಷುಷಾ ಗೃಹ್ಯತೆ ನಾಪಿ ವಾಚಾ
ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ।
ಜ್ಞಾನಪ್ರಸಾದೇನ ವಿಶುದ್ಧಸ್ತವ
ಸ್ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ॥

- ಮುಂಡಕೋಪನಿಷತ್ ೩-೧-೮

"ಪರಬ್ರಹ್ಮನನ್ನು ಮನುಷ್ಯನು ಕಣ್ಣುಗಳಿಂದ ನೋಡಲಾರನು. ಅಷ್ಟೇ ಅಲ್ಲ, ವಾಣಿ ಮುಂತಾದ ಇಂದ್ರಿಯಗಳ ಮುಖೇನ ಗ್ರಹಸಲಾರನು, ಮತ್ತು ನಾನಾ ಪ್ರಕಾರದ ತಪಶ್ಚರ್ಯ, ಕರ್ಮಗಳಿಂದಲೂ ಮನುಷ್ಯ ಅವನನ್ನು ಪಡೆಯಲಾರ. ಅವಯವ ರಹಿತನಾದ ಪರಮ ವಿಶುದ್ಧ ಪರಮಾತ್ಮನನ್ನು, ಮನುಷ್ಯನು ಎಲ್ಲಾ ಭೋಗಗಳಿಂದ ವಿಮುಖನಾಗಿ ನಿಃಸ್ಪೃಹ ಮತ್ತು ವಿಶುದ್ಧ ಅಂತಃಕರಣದಿಂದ ನಿರಂತರವಾಗಿ ಅವನ ಧ್ಯಾನವನ್ನು ಮಾಡುತ್ತಾ ಮಾಡುತ್ತಾ ಜ್ಞಾನದ ನಿರ್ಮಲತೆಯಿಂದ ಮಾತ್ರವೇ ನೋಡಬಲ್ಲನು. ಯಾರು ಆ ಪರಮಾತ್ಮನನ್ನು ಪಡೆಯುವುದು ಉಚಿತವೆಂದು ತಿಳಿಯುತ್ತಾರೋ ಅವರು ಸಂಸಾರ ಭೋಗಗಳಿಂದ ವಿರಕ್ತರಾಗಿ, ಕಾಮನೆಗಳನ್ನು ತ್ಯಾಗಮಾಡಿ, ಅವನ ಚಿಂತನೆಯಲ್ಲಿಯೇ ನಿಮಗ್ನರಾಗಿರಬೇಕು."

'ಯಾವಾಗ ಯಥಾರ್ಥ ಜ್ಞಾನ ಉಂಟಾಗುತ್ತದೋ, ಆಗ ಆ ಯಾಥಾರ್ಥ ಜ್ಞಾನದಿಂದ ತತ್‌ಕ್ಷಣವೇ ಮೋಕ್ಷ ಪ್ರಾಪ್ತಿಯಾಗುತ್ತದೆ. ಇದು ಎಲ್ಲಾ ಶಾಸ್ತ್ರ ಮತ್ತು ಉಕ್ತಿಗಳಿಂದ ಉಲ್ಲೇಖಿಸಲ್ಪಟ್ಟ ಸುನಿಶ್ಚಿತವಾದ ಮಾತು' ಎಂಬುದನ್ನು ಶ್ರೀ ಶಂಕರಾಚಾರ್ಯರು ಗೀತೆಯ ಭಾಷ್ಯೆಯಲ್ಲಿ ಹೇಳಿದ್ದಾರೆ.

"ಸಮ್ಯಗ್ದರ್ಶನಾತ್ ಕ್ಷಿಪ್ರಂ ಮೋಕ್ಷೋ ಭವತಿ ಇತಿ
ಸರ್ವಶಾಸ್ತ್ರನ್ಯಾಯಪ್ರಸಿದ್ಧಃ ಸುನಿಶ್ಚಿತಃ ಅರ್ಥಃ"

- ಗೀತಾ ಭಾಷ್ಯ ೪-೩೯

ಕಠೋಪನಿಷತ್ತಿನಲ್ಲಿಯೂ ಸಹ ಯಮರಾಜನು ನಚಿಕೇತನಿಗೆ ಉಪದೇಶಿಸುವುದೇನೆಂದರೆ 'ಹೇ ನಚಿಕೇತ! ಈ ಸಂಸಾರದಲ್ಲಿ ಎರಡು ಪ್ರಕಾರದ ಫಲಗಳಿವೆ. ಒಂದು 'ಶ್ರೇಯ' ಮತ್ತು 'ಪ್ರೇಯ'. ಜ್ಞಾನದಿಂದ ಪ್ರಾಪ್ತವಾಗುವ ಫಲವೇ ನಿತ್ಯವಾದ ಫಲ. ಅದಕ್ಕೆ 'ಶ್ರೇಯ' ವೆನ್ನುತ್ತಾರೆ. ಎಲ್ಲಾ ಪ್ರಕಾರದ ದುಃಖಗಳಿಂದ ದೂರನಾಗಿ ನಿತ್ಯ ಆನಂದ - ಸ್ವರೂಪ ಪರಬ್ರಹ್ಮನನ್ನು ಪಡೆಯುವ ಉಪಾಯವೇ 'ಜ್ಞಾನ'ವಾಗಿದೆ.'

'ಪ್ರೇಯ' ವೆಂದರೆ, ಸ್ತ್ರೀ, ಪುತ್ರ, ಧನ, ಮನೆ, ಸನ್ಮಾನ, ಯಶಸ್ಸು, ಕೀರ್ತಿ ಇತ್ಯಾದಿ ಇಹಲೋಕದ ಮತ್ತು ಸ್ವರ್ಗಲೋಕದ ಎಲ್ಲಾ ಪ್ರಾಕೃತ ಸುಖಭೋಗಗಳ ಸಾಮಗ್ರಿಗಳಿಂದ ಪಡೆಯುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುಖಭೋಗಕ್ಕೆ 'ಪ್ರೇಯ' ವೆನ್ನುತ್ತಾರೆ. ಅಜ್ಞಾನಿ ಜನರು ಕಾಮ್ಯ ಕರ್ಮಗಳನ್ನು ಮಾಡಿ ವಿಷಯ ಸುಖರೂಪವಾದ ಪ್ರೇಯವನ್ನು ಪಡೆಯುತ್ತಾರೆ. ಇಂತಹ ವಿಷಯಾರ್ಥಿಗಳು 'ಪ್ರೇಯ'ದ ಪ್ರಾಪ್ತಿಗೋಸ್ಕರ ಅನೇಕ ಪ್ರಕಾರದ ಕರ್ಮಗಳನ್ನು ಮಾಡುತ್ತಿರುತ್ತಾರೆ. ಆದ ಕಾರಣ ಇವರು ಮೋಕ್ಷ ರೂಪ ಪುರುಷಾರ್ಥದಿಂದ ವಂಚಿತರಾಗುತ್ತಾರೆ. ಈ 'ಶ್ರೇಯ' ಮತ್ತು 'ಪ್ರೇಯ'ಗಳು ಅವಿವೇಕಿ ಜನರಿಗೆ ಭಿನ್ನ ಭಿನ್ನ ರೂಪವಾಗಿ ಕಾಣುವುದೇ ಇಲ್ಲ. ಆದರೆ ವಿವೇಕಿ ಜನರು ತಮ್ಮ ವಿವೇಕದಿಂದ ಶ್ರೇಯ ಮತ್ತು ಪ್ರೇಯಗಳನ್ನು ಭಿನ್ನ ಭಿನ್ನವಾಗಿ ತಿಳಿಯುತ್ತಾರೆ, ನಿತ್ಯಾನಿತ್ಯಗಳ ವಿಚಾರವನ್ನು ಮಾಡಿ ಮತ್ತು ಶ್ರೇಯ ರೂಪ ಮೋಕ್ಷದ ಪ್ರಾಪ್ತಿಗೋಸ್ಕರ ಸಾಧನದ ಸಂಪಾದನೆಯನ್ನು ಮಾಡುತ್ತಾರೆ. ಅಲ್ಪ ಬುದ್ಧಿಯ ಅವಿವೇಕಿ ಜನರು ಶರೀರಾದಿಗಳ ವೃದ್ಧಿಗೋಸ್ಕರ ಮತ್ತು ಭೋಗದ ಪ್ರಾಪ್ತಿಗೋಸ್ಕರ ಕರ್ಮವನ್ನು ಮಾಡುತ್ತಾರೆ.

ನಚಿಕೇತನು ಮೂರು ವರಗಳಲ್ಲಿ ಮೂರನೇ ವರವನ್ನು ಆತ್ಮ ಜ್ಞಾನವನ್ನು ಪಡೆಯಲಿಕ್ಕೆಂದು ಯಾಚನೆ ಮಾಡಿದನು. ಆದರೆ ಯಮರಾಜನು ಅದನ್ನು ಬಿಟ್ಟು ಪ್ರೇಯ ಮಾರ್ಗದ ಸ್ತ್ರೀ, ಪುತ್ರ, ಧನ, ಧಾನ್ಯಗಳಿಂದ ಕೂಡಿದ ಎಲ್ಲಾ ಭೋಗಗಳನ್ನು ಕೊಡಲು ಮುಂದಾದ, ಆದರೆ ನಚಿಕೇತನು ಅವುಗಳನ್ನು ಅನಿತ್ಯವೆಂದು ತಿಳಿದು ಅವುಗಳನ್ನು ತಿರಸ್ಕರಿಸಿದನು.

ನಚಿಕೇತನು ಹೇಳಿದುದೇನೆಂದರೆ :

ನವಿತ್ತೇನ ತರ್ಪಣಿಯೋ ಮನುಷ್ಯೋ
ಲಪ್ಸ್ಯಾಮಹೇ ವಿತ್ತಮದ್ರಾಕ್ಷಮ್ ಚೇತ್ ತ್ವಾ।
ಜೀವಿಷ್ಯಾಮೋ ಯಾವದಿಶಿಷ್ಯಸಿ ತ್ವಂ
ವರಸ್ತು ಮೆ ವರಣೀಯಃ ಸ ಏವ॥

- ಕಠೋಪನಿಷತ್ತು ೧-೧-೨೭

ಅರ್ಥಾತ್ : "ಧನದಿಂದ ಮನುಷ್ಯನು ತೃಪ್ತನಾಗುವುದಿಲ್ಲ. ಹೇಗೆ ಬೆಂಕಿಯಲ್ಲಿ ತುಪ್ಪವನ್ನು ಸುರಿಯುವುದರಿಂದ ಬೆಂಕಿಯು ಹೆಚ್ಚಾಗುತ್ತದೋ ಹಾಗೆಯೇ ಧನ ಮತ್ತು ಭೋಗಗಳ ಪ್ರಾಪ್ತಿಯಿಂದ ಭೋಗ-ಕಾಮನೆಗಳು ವಿಸ್ತಾರವನ್ನು ಹೊಂದುತ್ತಾ ಹೋಗುತ್ತವೆ. ಅಲ್ಲಿ ತೃಪ್ತಿಯೆಲ್ಲಿಯದು? ಅಲ್ಲಿ ದಿನರಾತ್ರಿ ಅಪೂರ್ಣತೆ ಮತ್ತು ಅಭಾವದ ಅಗ್ನಿಯಲ್ಲಿ ಬೇಯುತ್ತಿರಬೇಕಾಗುತ್ತದೆ. ಇಂತಹ ದುಃಖಮಯವಾದ ಧನ ಮತ್ತು ಭೋಗಗಳನ್ನು ವಿವೇಕವನ್ನು ಹೊಂದಿದ ಪುರುಷನು ಎಂದಿಗೂ ಬೇಡಲಾರ." ನಚಿಕೇತನು ಯಮನಿಗೆ ಹೇಳಿದುದೇನೆಂದರೆ, "ನನಗೆ ನನ್ನ ಜೀವನ ನಿರ್ವಾಹಕ್ಕೆ ಎಷ್ಟು ಧನದ ಅವಶ್ಯಕತೆ ಇದೆಯೋ ಅಷ್ಟು ತಮ್ಮ ದರ್ಶನ ಮಾತ್ರದಿಂದಲೇ ತಾನಾಗಿಯೇ ನನಗೆ ಪ್ರಾಪ್ತವಾಗಿದೆ. ಇದು ಜೀವನ ನಿರ್ವಾಹದ ಮಾತು. ಎಲ್ಲಿಯವರೆಗೆ ಮೃತ್ಯುವಿನ ಮೇಲೆ ತಮ್ಮ ಶಾಸನವಿದೆಯೋ ಅಲ್ಲಿಯವರೆಗೆ ನನಗೆ ಮೃತ್ಯುವಿನ ಭಯವಿಲ್ಲ. ಆದುದರಿಂದ ಬೇರೆಯ ವರವನ್ನು ಕೇಳುವುದು ಉಚಿತವಲ್ಲ. ನನ್ನ ಪ್ರಾರ್ಥನೆಯೆಂದರೆ, ಆತ್ಮಜ್ಞಾನದ ವರವನ್ನು ತಾವು ದಯಪಾಲಿಸಬೇಕು ಆದರ ಹೊರತು ನನಗೆ ಇನ್ನೇನು ಬೇಕಿಲ್ಲ." ಆಗ ಯಮರಾಜನಿಗೆ, ನಚಿಕೇತನ ದೃಢನಿಶ್ಚಯ, ಪರಮ ವೈರಾಗ್ಯ ಮತ್ತು ನಿರ್ಭಯನೆಂಬ ಅರಿವಾಯಿತು ಮತ್ತು ಬ್ರಹ್ಮವಿದ್ಯಾ ಪ್ರಾಪ್ತಿಗೆ ಯೋಗ್ಯ ಅಧಿಕಾರಿಯೆಂಬುದು ಮನವರಿಕೆಯಾದ ಮೇಲೆ ಬ್ರಹ್ಮಜ್ಞಾನದ ಉಪದೇಶವನ್ನು ಆರಂಭ ಮಾಡುವುದಕ್ಕಿಂತ ಮುಂಚೆ ಅದರ ಮಹತ್ವವನ್ನು ಪ್ರಕಟಗೊಳಿಸಲು ಪ್ರಾರಂಭಿಸಿದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲು ಯಮರಾಜನು 'ಶ್ರೇಯ' ಮತ್ತು 'ಪ್ರೇಯ'ಗಳ ಬಗ್ಗೆ ತಿಳಿಸಿ ಕರ್ಮಗಳ ಬಗ್ಗೆ ಹೇಳಿದುದೇನೆಂದರೆ, ಈ ಸಂಸಾರದಲ್ಲಿ ಕರ್ಮ ಮತ್ತು 'ಜ್ಞಾನ' ಎಂಬ ಎರಡು ಮಾರ್ಗಗಳಿವೆ. ಕರ್ಮದಿಂದ ಅನಿತ್ಯವಾದ ಸ್ವರ್ಗಾದಿ ಲೋಕಗಳು ಪ್ರಾಪ್ತವಾಗುತ್ತವೆ ಮತ್ತು ಜ್ಞಾನದಿಂದ ನಿತ್ಯ ಮೋಕ್ಷ ರೂಪವಾದ ಫಲ ಪ್ರಾಪ್ತವಾಗುತ್ತದೆ.

ಕರ್ಮವು ಎರಡು ಪ್ರಕಾರದ್ದಾಗಿದೆ. ಒಂದು ವಿಹಿತ ಕರ್ಮವಾಗಿದೆ, ಇದು ವೇದವಂದಿತ ಕರ್ಮ. ಇದನ್ನು ಆಚರಿಸುವುದರಿಂದ ಸುಖಪ್ರಾಪ್ತಿಯಾಗುತ್ತದೆ. ಎರಡನೆಯದು ನಿಷಿದ್ಧ ಕರ್ಮ, ಇದು ವೇದನಿಂದಿತವಾಗಿದೆ. ಇದರ ಆಚರಣೆಯಿಂದ ನರಕಾದಿ ದುಃಖಗಳು ಪ್ರಾಪ್ತವಾಗುತ್ತವೆ.

ವಿಹಿತ ಕರ್ಮಗಳಲ್ಲಿ ಪುನಃ ಎರಡು ಭಾಗಗಳುಂಟು. ಒಂದನೆಯದು ನಿಷ್ಕಾಮ ಕರ್ಮ ಮತ್ತು ಎರಡನೆಯದು ಸಕಾಮ ಕರ್ಮ. ನಿಷ್ಕಾಮ ಕರ್ಮವನ್ನು ಆಚರಿಸುವುದರಿಂದ ಚಿತ್ತ ಶುದ್ಧಿಯಾಗಿ ಮೋಕ್ಷವು ಪ್ರಾಪ್ತವಾಗುವುದು. ಏಕೆಂದರೆ ಈ ಕರ್ಮದಲ್ಲಿ ಸ್ವರ್ಗ, ಸ್ತ್ರೀ, ಪುತ್ರಾದಿಕ ಇತರೆ ಯಾವ ಇಚ್ಛೆಯೂ ಇರುವುದಿಲ್ಲ. ಎರಡನೆಯ ಸಕಾಮ ಕರ್ಮದಲ್ಲಿ ಜನ್ಮ-ಮೃತ್ಯುಗಳು ಪ್ರಾಪ್ತವಾಗುತ್ತವೆ. ಸಕಾಮ ಕರ್ಮವನ್ನು ಮಾಡುವ ಪುರುಷನು ನಿಶ್ಚಯವಾಗಿ ಅಹಂಕಾರಯುಕ್ತನಾಗಿರುತ್ತಾನೆ. ಅವನು ತನಗೆ ತಾನೇ ಅತ್ಯಂತ ಬುದ್ಧಿಮಾನನೆಂದು ಮತ್ತು ವಿದ್ವಾನನೆಂದು ತಿಳಿಯುತ್ತಾನೆ. ವಿದ್ಯಾ ಬುದ್ಧಿಯ ಮಿಥ್ಯಾಭಿಮಾನದಿಂದ ಶಾಸ್ತ್ರಗಳ ಮತ್ತು ಮಹಾಪುರುಷರ ವಚನಗಳನ್ನು ಲೆಕ್ಕಿಸದೆ ಅವುಗಳ ಅವಹೇಳನವನ್ನು ಮಾಡುತ್ತಾನೆ. ಇಂತಹ ಅವಿದ್ಯೆಯಿಂದ ಕೂಡಿದ ಮೂಢ ಜನರು ಕುಟಿಲಗತಿಯನ್ನು ಪಡೆಯುತ್ತಾರೆ.

ಅಂಧೇನೈವ ನಿಯಮಾನಾ ಯಥಾಂಧಾಃ

ಹೇಗೆ, ಅಂಧರ ಹಿಂದೆ ಅಂಧರು ಅನುಕರಣೆ ಮಾಡಿ ನಡೆಯುತ್ತಾರೋ ಹಾಗೆಯೇ ಸಕಾಮ ಕರ್ಮಗಳನ್ನು ಮಾಡುವ ಅಂಧ ಗುರುಗಳ ಹಿಂದೆ ನಡೆಯುವ ಅಂಧ ಶಿಷ್ಯರೂ ಸಹ ಸಕಾಮ ಕರ್ಮವನ್ನೇ ಮಾಡುತ್ತಾರೆ.

ಮುಂದೆ ಯಮರಾಜನು ಹೇಳಿದುದೇನೆಂದರೆ ಸಕಾಮ ಕರ್ಮವನ್ನು ಮಾಡುವ ಜನರು ಸ್ವರ್ಗಾದಿ ಲೋಕಗಳ ಸುಖಭೋಗವನ್ನು ಭೋಗಿಸಿ ಕೊನೆಗೆ ನನ್ನ ಕಡೆಗೆ ಬರುತ್ತಾರೆ ಅಥವಾ ಯಾವಾಗಲೋ ಮಾಡಿದ ಯಾವುದಾದರೂ ನಿಷ್ಕಾಮ ಕರ್ಮದ ಪ್ರಭಾವದಿಂದ ಶುದ್ಧ ಅಂತಃಕರಣ ಯುಕ್ತರಾಗಿ ಜ್ಞಾನ ಪ್ರಾಪ್ತಿಯಿಂದ ಮೋಕ್ಷ ಪಡೆಯುತ್ತಾರೆ.

ನಿಷಿದ್ಧ ಕರ್ಮವನ್ನು ಮಾಡುವ ಜನರು ಸಾಕ್ಷಾತ್ ನನ್ನ ವಶದಲ್ಲಿರುತ್ತಾರೆ ಮತ್ತು ಅನಂತ ದುಃಖಗಳನ್ನು ಅನುಭವಿಸುತ್ತಾರೆ.

ಅಂತಹ ಪಾಪಿ ಜನಗಳಿಗೆ ಆತ್ಮದ ಶ್ರವಣವೂ ಸಹ ದುರ್ಲಭವಾಗಿದೆ ಮತ್ತು ಬಹಳ ಜನರು ಭೂತ, ಭಾವಿ (ಭವಿಷ್ಯ), ವರ್ತಮಾನ ಪ್ರತಿಬಂಧಗಳಿಂದ ಆಧ್ಯಾತ್ಮ ಶ್ರವಣ ಮಾಡಿದರೂ ಸಹ ಯಥಾರ್ಥ ಜ್ಞಾನವನ್ನು ಪಡೆಯುವುದಿಲ್ಲ.

ಭೂತ ಪ್ರತಿಬಂಧ : ವೇದಾಂತ ಶ್ರವಣ ಸಮಯದಲ್ಲಿ ತ್ಯಾಗಿಸಲ್ಪಟ್ಟ ಸ್ತ್ರೀ, ಪುತ್ರ, ಧನ ಮುಂತಾದುವುಗಳ ಪದೇ ಪದೇ ಸ್ಮರಣೆಯಾಗುವುದು. ಯಾವಾಗ ವಿಷಯ ಸ್ಮರಣೆಗಳು ಮನಸ್ಸಿನಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬರುತ್ತವೆಯೋ ಆಗ ಮನಸ್ಸು ಶ್ರವಣದಲ್ಲಿ ಸ್ಥಿತವಾಗುವುದಿಲ್ಲ. ವ್ಯಕ್ತಿಯು ಸತ್ಸಂಗದಲ್ಲಿ ಶ್ರವಣ ಮಾಡುತ್ತಿರುವಂತೆ ಕಂಡರೂ ಸಹ ಅವನ ಮನಸ್ಸು ವಿಷಯ ಸ್ಮರಣೆಯಲ್ಲಿ ತೊಡಗಿರುತ್ತದೆ. ಶ್ರವಣ ಮಾಡಬೇಕಾದರೆ "ಸಾವಧಾನ ಯುಕ್ತವಾದ ಮನಸ್ಸು, ಕಿವಿಯಿರಬೇಕೆಂದು ಹೇಳಿದ್ದಾರೆ. ಕಿವಿಯ ಜೊತೆಯಲ್ಲಿ ಮನಸ್ಸಿರಬೇಕು. ವಿಷಯ ಸ್ಮರಣೆಯನ್ನು ಮಾಡುವ ವ್ಯಕ್ತಿಯು ಬಹಳ ಹೊತ್ತಿನ ತನಕ ಒಂದೆಡೆ ಕುಳಿತುಕೊಳ್ಳಲಾರ. ಏಕೆಂದರೆ ಮನಸ್ಸು ಅವನನ್ನು ಎಬ್ಬಿಸಿಕೊಂಡು ಹೋಗುತ್ತದೆ. ಇದಕ್ಕೆ ಭೂತ ಪ್ರತಿಬಂಧವೆನ್ನುತ್ತಾರೆ."

ಭಾವಿ ಪ್ರತಿಬಂಧ : ಯಾವುದು ಬೇರೆ ಜನ್ಮಗಳಿಂದ ಪ್ರಾಪ್ತವಾದ ಪ್ರಾರಬ್ಧ ಕರ್ಮವೊ ಮತ್ತು ಅದನ್ನು ಭೋಗಿಸದೆ ನಿವೃತ್ತಿಯಾಗುವುದಿಲ್ಲವೊ, ಅದಕ್ಕೆ ಭಾವಿ ಪ್ರತಿಬಂಧವೆನ್ನುತ್ತಾರೆ. ಇಲ್ಲಿ ವಾಮದೇವ ಮಹಾತ್ಮನ ಉದಾಹರಣೆಯು ಅತ್ಯಂತ ಅರ್ಥಪೂರ್ಣ ಮತ್ತು ಸಮರ್ಪಕವಾಗಿದೆ.

ಬ್ರಹ್ಮವಿಚಾರವನ್ನು ಮಾಡುವ ಸಮಯದಲ್ಲಿ ವಾಮದೇವ ಎಂಬ ಹೆಸರಿನ ಮಹಾತ್ಮನ ಮೃತ್ಯುವಾಯಿತು. ಭಾವಿ ಪ್ರತಿಬಂಧದ ಕಾರಣದಿಂದ ಸನಕಾದಿಗಳ ಉಪದೇಶವಾಗಿದ್ದರೂ ವಾಮದೇವ ಮಹಾತ್ಮನಿಗೆ ಜ್ಞಾನ ಪ್ರಾಪ್ತವಾಗಲಿಲ್ಲ. ತಾಯಿಯ ಗರ್ಭದಲ್ಲಿ ನವಮಾಸಗಳ ನಂತರ ಪ್ರಾರಬ್ಧ ಕರ್ಮದ ಭೋಗದಿಂದ ನಿವೃತ್ತರಾದರು. ಆ ಕರ್ಮರೂಪ ಭಾವಿ ಪ್ರತಿಬಂಧದ ಅಭಾವದಿಂದಾಗಿ ವಾಮದೇವ ಮಹಾತ್ಮನಿಗೆ ಜ್ಞಾನ ಪ್ರಾಪ್ತಿಯಾಯಿತು. ಯಾವ ಋಷಿಗಳ ಜೊತೆಗೂಡಿ ಬ್ರಹ್ಮವಿಚಾರಗಳನ್ನು ಮಾಡುತ್ತಿದ್ದರೋ ಆ ಮಿತ್ರರೂಪ ಋಷಿಗಳ ಬ್ರಹ್ಮಜ್ಞಾನದ ವಚನಗಳನ್ನು ತಾಯಿಯ ಗರ್ಭದಲ್ಲಿ ಸ್ಥಿತರಾಗಿದ್ದ ವಾಮದೇವರು ಕೇಳುತ್ತಿದ್ದರು. ವಾಮದೇವನು ತನ್ನ ಅನುಭವವನ್ನು ಈ ರೀತಿ ವರ್ಣಿಸುತ್ತಾರೆ.

ಗರ್ಭೆನು ಸನ್ನನ್ವೇಷಾಮವೆದಮಹಂ ದೇವಾನಾಂ ಜನಿಮಾನಿ ವಿಶ್ವಾ।
ಶತಂ ಮಾ ಪುರ ಆಯಸೀರರಕ್ಷನ್ನಧಃ ಶ್ಯೇನೊ ಜವಸಾ ನಿರದೀಯಮಿತಿ।
ಗರ್ಭ ಏವೈತಚ್ಛಯಾನೋ ವಾಮದೇವ ಏವಮುವಾಚ।

- ಐತರೇಯೋಪನಿಷತ್ ೨-೧-೫

ಅರ್ಥಾತ್ : ಗರ್ಭದಲ್ಲಿರುವಾಗಲೇ ವಾಮದೇವ ಋಷಿಗೆ ಜ್ಞಾನವಾಗಿತ್ತು. ಅವರು ತಾಯಿಯ ಉದರದಲ್ಲಿಯೇ ಹೇಳಿದ್ದರು. "ಎಷ್ಟೊಂದು ಆಶ್ಚರ್ಯ ಮತ್ತು ಆನಂದದ ಮಾತಾಗಿದೆ. ಗರ್ಭದಲ್ಲಿ ಇದ್ದಾಗಲೇ ನಾನು ಈ ಅಂತಃಕರಣ ಮತ್ತು ಇಂದ್ರಿಯ ರೂಪ ದೇವತೆಗಳ ಅನೇಕ ಜನ್ಮಗಳ ರಹಸ್ಯವನ್ನು ಚೆನ್ನಾಗಿ ತಿಳಿದುಕೊಂಡೆನು. ನಾನು ಈ ಮಾತುಗಳನ್ನು ಸಹ ಅರಿತುಕೊಂಡೆನು, ಅದೇನೆಂದರೆ, ಈ ಜನ್ಮಗಳು ವಾಸ್ತವರೂಪದಲ್ಲಿ ಈ ಅಂತಃಕರಣ ಮತ್ತು ಇಂದ್ರಿಯಗಳದಾಗಿರುತ್ತವೆ, ಆತ್ಮನದಲ್ಲ. ಈ ರಹಸ್ಯವನ್ನು ತಿಳಿಯುವುದಕ್ಕಿಂತ ಮುಂಚೆ ನೂರಾರು ಕಬ್ಬಿಣದ ಸಮಾನರೂಪವಾದ ಶರೀರ ರೂಪಿ ಪಂಜರದಲ್ಲಿ ಕೈದಿಯಾಗಿದ್ದೆ. ಅದರಲ್ಲಿ ನನ್ನ ಭಾವನೆ ಎಷ್ಟೊಂದು ದೃಢವಾಗಿತ್ತೆಂದರೆ, ಆ ಪಂಜರದಿಂದ ಹೊರಬರಲಿಕ್ಕೆ ಸಾಧ್ಯವೇ ಇಲ್ಲ ಎನ್ನುವುದಾಗಿತ್ತು. ಈಗ ನಾನು ಗರುಡಪಕ್ಷಿಯಂತೆ ಜ್ಞಾನ ರೂಪ ಬಲದ ವೇಗದಿಂದ ಪಂಜರಗಳನ್ನು ಒಡೆದು ಹಾಕಿ ಅವುಗಳಿಂದ ಬೇರೆಯಾಗಿದ್ದೇನೆ. ಆ ಶರೀರ ರೂಪದ ಪಂಜರಗಳಿಗೂ ನನಗೂ ಯಾವ ಸಂಬಂಧವಿಲ್ಲ. ನಾನು ಎಂದೆಂದಿಗೂ ಆ ಶರೀರಗಳ ಅಹಂಕಾರದಿಂದ ಮುಕ್ತನಾಗಿದ್ದೇನೆ." ಈ ರೀತಿಯಾಗಿ ಜನ್ಮ-ಜನ್ಮಾಂತರದ ತತ್ವಗಳನ್ನು ತಿಳಿದುಕೊಳ್ಳುವವನು, ಅರ್ಥಾತ್ ಎಲ್ಲಿಯವರೆಗೆ ಈ 'ಜೀವ'ವು ಈ ಶರೀರದೊಂದಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದಾಗಿರುತ್ತದೋ, ಶರೀರವನ್ನೇ ತನ್ನ ಸ್ವರೂಪವೆಂದು ತಿಳಿದಿರುತ್ತದೋ, ಅಲ್ಲಿಯವರೆಗೆ ಈ ಜೀವಕ್ಕೆ ಜನ್ಮ-ಮೃತ್ಯುಗಳಿಂದ ಬಿಡುಗಡೆಯಿಲ್ಲ. ಈ ಜೀವಕ್ಕೆ ಪದೇ ಪದೇ ನಾನಾ ತರಹದ ಯೋನಿಗಳಲ್ಲಿ ಜನ್ಮವೆತ್ತಿ ನಾನಾ ಪ್ರಕಾರದ ಕಷ್ಟಗಳನ್ನು ಭೋಗಿಸಬೇಕಾಗುತ್ತದೆ. ಈ ರಹಸ್ಯವನ್ನು ತಿಳಿದ ಜ್ಞಾನಿಯಾದ ವಾಮದೇವ ಋಷಿಯು ಗರ್ಭದಿಂದ ಹೊರಬಂದು ಅಂತ್ಯದಲ್ಲಿ ಶರೀರದ ನಾಶವಾದ ಮೇಲೆ ಸಂಸಾರದಿಂದ ಮೇಲೆದ್ದು ಮತ್ತು ಉರ್ಧ್ವಗತಿಯ ಮುಖಾಂತರ ಭಗವಂತನ ಪರಮಧಾಮವನ್ನು ತಲುಪಿ ಅಲ್ಲಿಯ ಸಮಸ್ತ ಕಾಮನೆಗಳನ್ನು ಹೊಂದಿದನು ಅರ್ಥಾತ್ ಸರ್ವಥಾ ಅಪ್ತಕಾಮನಾಗಿ ಅಮೃತನಾದನು.

ಜ್ಞಾನ ಸಾಧನದ ಸಾಧ್ಯವೆನಿಸಿಕೊಂಡ ಪರಮಾತ್ಮನ ಪ್ರಾಪ್ತಿಯ ಬಗ್ಗೆ ಜಿಜ್ಞಾಸೆ :

ಪರಮಾತ್ಮನು ಜ್ಞಾನವಾಗುವುದಕ್ಕಿಂತ ಮೊದಲು ಒಂದು ಜಾಗದಲ್ಲಿ ಮತ್ತು ಜ್ಞಾನವಾದ ಮೇಲೆ ಮತ್ತೊಂದು ಕಡೆ, ಈ ತರಹ ಸ್ಥಲಾಂತರವಾಗುವುದಿಲ್ಲ, ಅವನು

"ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ"

ಅರ್ಥಾತ್ : "ಅವನು ಚರಾಚರ ಎಲ್ಲಾ ಭೂತಗಳ ಹೊರಗೂ-ಒಳಗೂ ಪರಿಪೂರ್ಣನಾಗಿದ್ದಾನೆ." ಆದರೆ ಎಲ್ಲರ ಹೃದಯದಲ್ಲಿ ವಿಶೇಷ ರೂಪದಿಂದಿರುತ್ತಾನೆ. ಹೃದಯವು ಉಪಲಬ್ಧಿಯ ವಿಶೇಷ ಸ್ಥಾನವಾಗಿದೆ.

"ನಾನು ಎಲ್ಲರ ಹೃದಯದಲ್ಲೂ ಸ್ಥಿತನಾಗಿದ್ದೇನೆ" ಎಂದು ಗೀತೆಯಲ್ಲಿ ಬಹಳ ಕಡೆ ಭಗವಾನನು ಹೇಳಿದ್ದಾನೆ.

"ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟೋ"

ಯಾರ ಅಂತಃಕರಣವು ಶುದ್ಧ ಮತ್ತು ಸ್ವಚ್ಛವಾಗಿರುತ್ತದೋ ಅವರ ಹೃದಯದಲ್ಲಿ ಪ್ರತ್ಯಕ್ಷ ದರ್ಶನವಾಗುತ್ತದೆ. ಆದರೆ ಪರಮಾತ್ಮನು ವಿಷಯ ಜನಗಳಿಗೆ ಬಹಳ ದೂರನಾಗಿದ್ದಾನೆ ಮತ್ತು ಅವನ ಜ್ಞಾನಿ ಜನರಿಗೆ ನಿಕಟದಲ್ಲಿಯೇ ವಿದ್ಯಾಮಾನನಾಗಿದ್ದಾನೆ. ಶೌನಕ ಮುನಿಯೂ ಸಹ ಹೇಳಿದುದೇನೆಂದರೆ -

ಪರಾಂಗ್‌ಮುಖಾನಾಂ ಗೋವಿಂದೇ ವಿಷಯಾ ಸಕ್ತ ಚೇತಸಾಮ್।
ತೇಷಾಂ ತತ್ಪರಂ ಬ್ರಹ್ಮ ದೂರಾದ್ ದೂರತರೇ ಸ್ಥಿತಮ್॥
ತನ್ಮಯತ್ವೇನ ಗೋವಿಂದೇ ಯೆ ನರಾ ನ್ಯಸ್ತಚೇತಸಃ।
ವಿಷಯತ್ಯಾಗಿನಾಸ್ತೇಷಾಂ ವಿಜ್ಞೇಯಂ ಚ ತದಂತಿಕೆ॥

- ವಿಷ್ಣುಧರ್ಮೋತ್ತರ ೯೯-೧೩-೧೪

ಅರ್ಥಾತ್ : ಯಾವ ಜೀವವು ಭಗವಾನ್ ಗೋವಿಂದನಿಂದ ಪರಾಙ್ಮುಖವಾಗಿ ಕೇವಲ ಶಬ್ದಾದಿ ವಿಷಯಗಳ ಸೇವನೆಯಲ್ಲೇ ಆಸಕ್ತನಾಗಿರುತ್ತದೋ ಅಂತಹ ಜೀವವು ಅಂತಸ್ಥ ಆತ್ಮವನ್ನು ತಿಳಿಯದೇ ಹೋಗುತ್ತದೆ ಮತ್ತು ಪರಮಾತ್ಮನ ದರ್ಶನ ಪಡೆಯಲು ಮನಸ್ಸು ಕಾಶಿಗೆ ಹೋಗುತ್ತದೆ. ಅಲ್ಲಿ ಭಗವಾನನ ದರ್ಶನದಿಂದ ಮನಸ್ಸು ತೃಪ್ತಿಗೊಳ್ಳದೆ ಕೇದಾರ, ಬದ್ರಿ, ಶ್ರೀಶೈಲ ಮತ್ತು ಅನ್ಯ ಅನ್ಯ ಪುಣ್ಯ ಕ್ಷೇತ್ರಗಳಿಗೆ ಹೋಗುತ್ತದೆ. ಆದರೂ ಸಹ ತೃಪ್ತಿಯನ್ನು ಪಡೆಯುವುದಿಲ್ಲ. ವಿಷಯಾಸಕ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವಗಳಿಂದ ಪರಬ್ರಹ್ಮನು ಅತ್ಯಂತ ದೂರದಲ್ಲಿರುತ್ತಾನೆ. ಸಂಪೂರ್ಣ ಜಗತ್ತಿನಲ್ಲಿ ಪರಮಾತ್ಮನ ನಿತ್ಯ ವ್ಯಾಪ್ತಿಯಿದೆ ಎಂದು ತಿಳಿದು ಯಾರ ಚಿತ್ತ ಪರಮಾತ್ಮನಲ್ಲಿಯೇ ವ್ಯಗ್ರವಾಗಿರುತ್ತದೋ ಮತ್ತು ಸಂಸಾರಿಕ ವಿಷಯಗಳಿಂದ ಸದಾ ದೂರವಿರುತ್ತದೋ ಅಂತಹ ಜೀವರುಗಳ ಸನ್ನಿಕಟವೇ ಪರಮಾತ್ಮನು ಸ್ಥಿತನಾಗಿರುತ್ತಾನೆ.

ಲೋಕದಲ್ಲಿ ಕಾಣುವುದೇನೆಂದರೆ, ಯಾವುದೇ ಪದಾರ್ಥವು ಯಾವುದೇ ಒಂದು ಜಾಗದಲ್ಲಿ ಇದ್ದದು ಕಂಡೂ ಬಂದರೆ ಆ ಪದಾರ್ಥವು ಇನ್ನೊಂದು ಜಾಗದಲ್ಲಿ ಕಂಡು ಬರಲು ಸಾಧ್ಯವಿಲ್ಲ. ಉದಾಹರಣೆಗೆ ಘಟ ಮುಂತಾದ ವಸ್ತುಗಳು, ಒಂದು ಕೊಠಡಿಯಲ್ಲಿವೆ ಎಂದು ಇಟ್ಟುಕೊಂಡರೆ, ಘಟ ಮುಂತಾದ ವಸ್ತುಗಳು ಕೊಠಡಿಯ ಹೊರಗೆ ಇರಲು ಸಾಧ್ಯವಿಲ್ಲ. ಒಂದು ಪಕ್ಷ ಆ ವಸ್ತುಗಳು ಕೊಠಡಿಯ ಹೊರಗಿದ್ದರೆ ಅವು ಕೊಠಡಿಯ ಒಳಗೆ ಕಂಡು ಬರಲು ಸಾಧ್ಯವಿಲ್ಲ. ಈ ಸಂಸಾರದ ಯಾವುದೇ ವಸ್ತುಗಳು ಪೂರ್ಣ ರೂಪದಲ್ಲಿ ಒಳಗೂ ಮತ್ತು ಹೊರಗು ವ್ಯಾಪಿಸಿಕೊಂಡಿರಲು ಸಾಧ್ಯವಿಲ್ಲ. ಕೇವಲ ಪರಮಾತ್ಮನು ಮಾತ್ರ ಈ ವಿಚಿತ್ರತೆಯನ್ನು ಹೊಂದಿದ್ದಾನೆ. ಅವನು ಈ ಸಂಪೂರ್ಣ ಜಗತ್ತಿನ ಹೊರಗೂ ಪೂರ್ಣ ರೂಪದಿಂದ್ದಾನೆ ಮತ್ತು ಒಳಗೂ ಪೂರ್ಣ ರೂಪದಿಂದ್ದಾನೆ.

ಶ್ರುತಿಗಳು ಹೇಳುವುದೇನೆಂದರೆ,

ಯಚ್ಚ ಕಿಂಚ್ಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತ್ಯೇಪಿ ವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥

- ತೈನಾ.೫

ಅರ್ಥಾತ್ : "ಈ ಜಗತ್ತಿನಲ್ಲಿ ಯಾವುದೇ ವಸ್ತುವು ಕಾಣಲಿಕ್ಕೆ ಸಿಗುತ್ತದೋ ಮತ್ತು ಕೇಳಲಿಕ್ಕೆ ಸಿಗುತ್ತದೋ ಆ ಎಲ್ಲಾ ವಸ್ತುಗಳ ಒಳಗಡೆ ಅಂದರೆ ಅಂತರ್ಯದಲ್ಲಿ ವ್ಯಾಪಕ ರೂಪದಲ್ಲಿ ನಾರಾಯಣನು ವಿದ್ಯಾಮಾನನಾಗಿರುತ್ತಾನೆ."

ಹೇಗೆ ಸಮುದ್ರದಲ್ಲಿ ಬಿದ್ದುಕೊಂಡಿರುವ ಮಂಜುಗಡ್ಡೆಯ ಹೊರಗೆ ಮತ್ತು ಒಳಗೆ ಎಲ್ಲಾ ಕಡೆಯಲ್ಲಿಯೂ ಜಲವೇ ವ್ಯಾಪಿಸಿಕೊಂಡಿರುತ್ತದೆಯೋ ಹಾಗೆಯೇ ಸಮಸ್ತ ಚರಾಚರ ಭೂತಗಳ ಹೊರಗಡೆ-ಒಳಗಡೆ ಪರಮಾತ್ಮನು ಪರಿಪೂರ್ಣವಾಗಿ ವ್ಯಾಪಿಸಿಕೊಂಡಿದ್ದಾನೆ. ಅವನು ಚರಾಚರ ಭೂತಗಳಿಂದ ಭಿನ್ನನಾಗಿಲ್ಲ. ಚರಾಚರ ಭೂತಗಳೇ ಅವನಾಗಿವೆ. ಅರ್ಥಾತ್ ಹೇಗೆ ಮಂಜುಗಡ್ಡೆಯ ಹೊರಗೆ-ಒಳಗೆ ಜಲವಿದೆಯೋ ಮತ್ತು ಸ್ವಯಂ ಮಂಜುಗಡ್ಡೆಯೇ ಜಲದ ಇನ್ನೊಂದು ರೂಪ ಜಲವನ್ನು ಬಿಟ್ಟು ಬೇರೆ ಯಾವ ಪದಾರ್ಥವೂ ಇಲ್ಲ. ಅದೇ ರೀತಿಯಾಗಿ ಸಮಸ್ತ ಚರಾಚರ ಜಗತ್ತು ಆ ಪರಮಾತ್ಮನ ಸ್ವರೂಪವಾಗಿದೆ. ಅವನನ್ನು ಬಿಟ್ಟು ಬೇರೇ ಏನೂ ಇಲ್ಲ. ಎಲ್ಲವೂ ಅವನೇ ಆಗಿದ್ದಾನೆ. ಹೀಗಿದ್ದರೂ ಸಹ ಎಲ್ಲರೂ ಅವನನ್ನೂ ಏಕೆ ತಿಳಿಯಲಾರರು ? ಹೇಗೆ ಸೂರ್ಯನ ಕಿರಣದಲ್ಲಿರುವ ಪರಮಾಣು ರೂಪ ಜಲವು ಸಾಧಾರಣ ಮನುಷ್ಯನ ಗ್ರಹಿಕೆಗೆ ಬರಲಾರದೋ ಅದೇ ರೀತಿಯಾಗಿ ಸರ್ವವ್ಯಾಪಿ ಪರಬ್ರಹ್ಮ ಪರಮಾತ್ಮನು ಆ ಪರಮಾಣು ರೂಪ ಜಲದಂತೆ ಅತ್ಯಂತ ಸೂಕ್ಷ್ಮವಾಗಿರುವುದರಿಂದ ಸಾಧಾರಣ ಮನುಷ್ಯನ ಗ್ರಹಿಕೆಗೆ ಸಿಗಲಾರನು. ಯಾರು ಜ್ಞಾನಿಯೋ ಅವನು ಮಾತ್ರ ಅದನ್ನು ಗ್ರಹಿಸಬಲ್ಲನು. ಹೇಗೆ ಒಬ್ಬ ಮನುಷ್ಯನು ಕಾಮ ರೂಪದ ಅಂಧಕಾರದಲ್ಲಿ ಮುಳುಗಿರುವಾಗ ಅವನಿಗೆ ಈ ಸರ್ವ ಜಗತ್ತು ಸ್ತ್ರೀಮಯವಾಗಿ ಕಾಣುತ್ತದೋ ಹಾಗೆಯೇ ಜ್ಞಾನದ ರೂಪದ ಅಂಜನವನ್ನು ಹಾಕಿಕೊಂಡಾಗ ಅವನ ದೃಷ್ಟಿ ಸಮವಾಗುತ್ತದೆ ಆಗ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನಿಗೆ ಈ ತ್ರೈಲೋಕವು ಬ್ರಹ್ಮಮಯವಾಗಿ ಕಾಣಿಸುತ್ತದೆ. ಹೇಗೆ ನೀರಿನಲ್ಲಿರುವ ಮೀನಿಗೆ ಎಲ್ಲ ಕಡೆಗೂ ನೀರೇ ನೀರು ಕಾಣಿಸುತ್ತದೋ ಮತ್ತು ಆಕಾಶದಲ್ಲಿ ವಿಹಂಗಮಿಸುವ ಪಕ್ಷಿಗೆ ಎಲ್ಲಾ ಕಡೆಗೂ ಆಕಾಶವೇ ಆಕಾಶ ಕಾಣುತ್ತದೆಯೇ, ಹಾಗೆಯೇ ಜ್ಞಾನಿಗೆ ಎಲ್ಲ ಕಡೆಯೂ ಬ್ರಹ್ಮನೇ ಕಂಡು ಬರುತ್ತದೆ. ಯಾವ ರೀತಿಯಾಗಿ ಅಲುಗಾಡುತ್ತಿರುವ ಕನ್ನಡಿ ಮತ್ತು ನೀರಿನಲ್ಲಿ, ನಾವು ನಮ್ಮ ಪ್ರತಿಬಿಂಬವನ್ನು ಸರಿಯಾಗಿ ಕಾಣಲಾರವೋ, ಹಾಗೆಯೇ ಸ್ಥಿರವಾದ ಕನ್ನಡಿ ಮತ್ತು ನೀರಿನಲ್ಲಿ ಹೇಗೆ ನಮ್ಮ ಪ್ರತಿಬಿಂಬವನ್ನು ಸ್ಪಷ್ಟವಾಗಿ ಕಾಣ ಬಲ್ಲೆವೊ, ಅದೇ ರೀತಿಯಾಗಿ ಸರ್ವವ್ಯಾಪಿ ಪರಮಾತ್ಮನು ನಮ್ಮ ಹೃದಯದಲ್ಲಿಯೇ ಸ್ಥಿತನಾಗಿದ್ದರೂ ಸಹ ರಜೋ ಗುಣದಿಂದ ಕೂಡಿದ ಇಚ್ಛಾರೂಪಿಯಾದ ವಾಯುವಿನಿಂದ ಅಲುಗಾಡುತ್ತಿರುವ ನಮ್ಮ ಹೃದಯ ರೂಪಿ ಕನ್ನಡಿಯಲ್ಲಿ ಅದರ ಅಭಿವ್ಯಕ್ತಿ ಉಂಟಾಗುವುದಿಲ್ಲ. ಇಚ್ಛಾರೂಪಿ ವಾಯುವು ಹೊರಟು ಹೋದ ಮೇಲೆ ಸ್ಥಿರ ಅಂತಃಕರಣದಲ್ಲಿ ಅದರ ಅಭಿವ್ಯಕ್ತಿ ಉಂಟಾಗುತ್ತದೆ.

ಪ್ರತಿಯೊಂದು ಜೀವಾತ್ಮನ ಹೃದಯದಲ್ಲಿ ಪರಮಾತ್ಮನು ನಿತ್ಯ ಪ್ರಾಪ್ತನಾಗಿದ್ದರೂ ಸಹ ಅಪ್ರಾಪ್ತನಾಗಿರುತ್ತಾನೆ. ಏಕೆಂದರೆ ಅಜ್ಞಾನದ ಫಲ ಸ್ವರೂಪವಾಗಿ ಜೀವಾತ್ಮನ ಹೃದಯದಲ್ಲಿ ಮಲ, ವಿಕ್ಷೇಪ ಮತ್ತು ಆವರಣ ಇವುಗಳು ಮುಖ್ಯವಾದ ಮೂರು ದೋಷಗಳು ಸ್ವಾಭಾವಿಕವಾಗಿ ನೆಲೆಸಿರುತ್ತವೆ. (ಅನ್ಯ ದೋಷಗಳು ಈ ಮೂರು ಮುಖ್ಯ ದೋಷಗಳ ಶಾಖೆ - ಪ್ರಶಾಖೆಗಳಾ ಗಿರುತ್ತವೆ). ಇದನ್ನೇ ಅಜ್ಞಾನ ಅಂಧಃಕಾರವೆನ್ನುತ್ತಾರೆ. ಈ ಕಾರಣದಿಂದಲೇ ಪ್ರಾಪ್ತ ಪರಮಾತ್ಮನು ಅಪ್ರಾಪ್ತನಂತೆ ಗೋಚರಿಸುತ್ತಾನೆ.

ಒಬ್ಬ ಸ್ತ್ರೀ ತನ್ನ ಮೂಗಿನಲ್ಲಿ ದೊಡ್ಡದಾದ ಮೂಗುತಿಯನ್ನು ಧರಿಸಿದ್ದಳು. ಅವಳು ಸ್ನಾನವನ್ನು ಮಾಡುವಾಗ ಆ ಮೂಗುತಿಯನ್ನು ತೆಗೆದು ತನ್ನ ಮಂಗಳ ಸೂತ್ರಕ್ಕೆ ಸಿಕ್ಕಿಸಿಕೊಂಡಳು. ಸ್ನಾನವಾದ ಮೇಲೆ ಬಹಳ ಸಮಯದ ನಂತರ ಮೂಗಿನಲ್ಲಿದ್ದ ಮೂಗುತಿಯ ನೆನಪಾಯಿತು. ಕೈಯ್ಯಲ್ಲಿ ಮುಟ್ಟಿ ನೋಡಿಕೊಂಡಾಗ ಅದು ಅಲ್ಲಿರಲಿಲ್ಲ. ನನ್ನ ಮೂಗುತಿಯು ಕಳೆದು ಹೋಯಿತು ಎಂದು ಭಾವಿಸಿ ಕೊಂಡು ಹೆದರಿ ಅಳಲು ಪ್ರಾರಂಭಿಸಿದಳು. ವಾಸ್ತವಿಕವಾಗಿ ಅವಳ ಮೂಗುತಿ ಕಳೆದು ಹೋಗಿರಲಿಲ್ಲ, ಕಳೆದಂತೆ ಭಾಸವಾಗುತ್ತಿತ್ತು. ಆ ಸ್ತ್ರೀ ಒಬ್ಬ ಜ್ಯೋತಿಷಿಯ ಹತ್ತಿರ ಹೋಗಿ ಎಲ್ಲ ವೃತ್ತಾಂತವನ್ನು ತಿಳಿಸಿದಳು. ಜ್ಯೋತಿಷಿಗೆ ಅವಳ ಮೂಗುತಿ ಅವಳ ಮಂಗಳ ಸೂತ್ರದಲ್ಲಿ ಸಿಕ್ಕಿಸಿಕೊಂಡಿರುವುದು ಕಂಡು ಬಂತು. ಆಗ ಅವನು ಒಳಗಿನಿಂದ ಒಂದು ದೊಡ್ಡ ಕನ್ನಡಿಯನ್ನು ತಂದು ಅವಳ ಮುಂದೆ ಹಿಡಿದ. ಆಗ ಅವಳಿಗೆ ಸ್ಪಷ್ಟವಾಗಿ ಮೂಗುತಿಯು ಮಂಗಳ ಸೂತ್ರದಲ್ಲಿ ತೂಗಾಡುತ್ತಿರುವುದು ಕಂಡು ಬಂತು. "ಅಯ್ಯೋ ನನ್ನ ಮೂಗುತಿ ಇಲ್ಲೇ ಇದೆ" ಎಂದು ಉದ್ಗರಿಸುತ್ತಾ ಬಹಳ ಆನಂದಿತಳಾದಳು. ವಾಸ್ತವಿಕವಾಗಿ ಮೂಗುತಿ ನಿತ್ಯಪ್ರಾಪ್ತವಾಗಿಯೇ ಇತ್ತು ಆದರೂ ಅಪ್ರಾಪ್ತದಂತೆ ಭಾಸವಾಗುತ್ತಿತ್ತು.

ನಾನು ಕರ್ತಾ, ಭೋಕ್ತಾ, ಸುಖಿ, ದುಃಖಿ ಪಾಪ-ಪುಣ್ಯಗಳ ಕರ್ತ, ಜನ್ಮ-ಮರಣ ಉಳ್ಳವನು, ಸಂಸಾರಿ ಎಂಬ ಭಾವನೆಗಳೇ ಆವರಣವಾಗಿದೆ. ಈ ಆವರಣದ ತಳದಲ್ಲಿಯೇ ಪರಮ ಆನಂದ ಅಡಗಿದೆ. ಈ ರೀತಿಯ ಆವರಣವನ್ನು ದೂರಮಾಡಲಿಕ್ಕೊಸ್ಕರ ಜ್ಞಾನದ ಅವಶ್ಯಕತೆಯಿದೆ. ಮಲ ವಿಕ್ಷೇಪ ಮತ್ತು ಆವರಣ ದೋಷಗಳ ನಿವೃತ್ತಿಗೆ ಕ್ರಮಶಃ ಕರ್ಮ, ಉಪಾಸನಾ ಮತ್ತು ಜ್ಞಾನ ಎಂಬ ಈ ಮೂರು ಸಾಧನಗಳಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲು ನಿಷ್ಕಾಮ ಕರ್ಮದಿಂದ ಬುದ್ಧಿ ದುರ್ವಾಸನೆಗಳಿಂದ (ಕುಸಂಸ್ಕಾರ) ನಿರ್ಮಲಗೊಳ್ಳುವುದು. ತದ ನಂತರ ಉಪಾಸನಾ ಮಾರ್ಗದಿಂದ ಚಂಚಲ ರೂಪಿಯಾಗಿರುವ ವಿಕ್ಷೇಪವು ದೂರಗೊಳ್ಳುವುದು. ಆಗ ಜ್ಞಾನರೂಪಿ ಸೂರ್ಯನ ಉದಯವಾಗಿ ಅಜ್ಞಾನಿ ರೂಪಿ ಆವರಣವು ದೂರಗೊಳ್ಳುತ್ತದೆ. ಒಂದೇ ಒಂದು ಸ್ವಲ್ಪ ಅಜ್ಞಾನದ ಪ್ರಭಾವದಿಂದ ಈ ನಿತ್ಯ ಪ್ರಾಪ್ತನಾಗಿರುವ ಪರಮಾತ್ಮನು ಅಪ್ರಾಪ್ತನಾಗಿರುವಂತೆ ಭಾಸವಾಗುತ್ತದೆ. ಇದನ್ನು ವಿಶದಪಡಿಸಲಿಕ್ಕೆ ವೇದಾಂತದಲ್ಲಿ "ದಶಮ" ನ ದೃಷ್ಟಾಂತ ಪ್ರಸಿದ್ಧವಾಗಿದೆ.

ಹತ್ತು ಜನ ಮಿತ್ರರು ಸೇರಿಕೊಂಡು ದೇಶಾಟನೆಗೆ ಹೊರಟರು. ಮಾರ್ಗದಲ್ಲಿ ಅವರಿಗೆ ಒಂದು ದೊಡ್ಡನದಿ ಅಡ್ಡ ಸಿಕ್ಕಿತು. ಆಗ ಈಜಾಡಿಕೊಂಡು ಆ ನದಿಯನ್ನು ಪಾರುಮಾಡಿ ಇನ್ನೊಂದು ದಡಕ್ಕೆ ಬಂದರು. ಎಲ್ಲರೂ ಒಟ್ಟಿಗೆ ಸೇರಿಕೊಂಡು ವಿಚಾರ ಮಾಡಿದುದೇನೆಂದರೆ "ನಾವೆಲ್ಲರೂ ಈಜಿಕೊಂಡು ನದಿಯನ್ನು ದಾಟುವಾಗ ನಮ್ಮಲ್ಲಿ ಯಾರಾದರೂ ಒಬ್ಬರು ತೇಲಿಕೊಂಡು ಹೋಗಿರಬಾರದೇಕೆ?" ಎಂಬ ಸಂಶಯ ಎಲ್ಲರಲ್ಲಿಯೂ ಮೂಡಿತು. ಆದುದರಿಂದ ನಾವೆಲ್ಲರೂ ಸೇರಿಕೊಂಡು ಎಣಿಕೆ ಮಾಡಿಕೊಳ್ಳುವುದು ಒಳ್ಳೆಯದು ಎಂದು ವಿಚಾರ ಮಾಡಿದರು. ಆಗ ಅವರಲ್ಲಿ ಒಬ್ಬ ಮುಂದೆ ಬಂದು ಎಲ್ಲರನ್ನೂ ಸಾಲಾಗಿ ನಿಲ್ಲಿಸಿ ಎಣಿಕೆ ಮಾಡಲು ಪ್ರಾರಂಭಿಸಿದ. ತನ್ನನ್ನು ಬಿಟ್ಟು ಉಳಿದ ಒಂಬತ್ತು ಜನರನ್ನು ಎಣಿಕೆಮಾಡಿ ಹತ್ತನೆಯವನು ನದಿಯಲ್ಲಿ ಈಜಾಡಿಕೊಂಡು ಬರುವಾಗ ನದಿಯಲ್ಲಿ ಮುಳುಗಿ ಸತ್ತಿದ್ದಾನೆ ಎಂಬುವ ತೀರ್ಮಾನಕ್ಕೆ ಬಂದ. ಆಗ ಇನ್ನೊಬ್ಬ ಮಿತ್ರನು ನಾನು ಎಣಿಕೆ ಮಾಡುತ್ತೇನೆ ಎಂದು ಮುಂದೆ ಬಂದನು. ಅವನೂ ಸಹ ಅದೇ ತಪ್ಪನ್ನು ಮಾಡಿದ. ತನ್ನನ್ನು ಬಿಟ್ಟು ಒಂಬತ್ತು ಜನರನ್ನು ಎಣಿಕೆಮಾಡಿದ. ಇದೇ ರೀತಿ ಎಲ್ಲರೂ ಒಬ್ಬರಾದ ಮೇಲೊಬ್ಬರು ಎಣಿಕೆ ಮಾಡಿದರು. ಎಲ್ಲರೂ ಅದೇ ತಪ್ಪನ್ನು ಪುನರಾವರ್ತಿಸಿದರು. ತನ್ನನ್ನು ಬಿಟ್ಟು ಉಳಿದವರನ್ನು ಎಣಿಸುತ್ತಿದ್ದರು. ಆಗ ಅವರೆಲ್ಲರೂ ಹತ್ತನೆಯವನು ಖಂಡಿತವಾಗಿಯೂ ನೀರಿನಲ್ಲಿ ಮುಳುಗಿ ಸತ್ತಿದ್ದಾನೆ ಎಂಬ ತೀರ್ಮಾನಕ್ಕೆ ಬಂದರು. ಆಗ ಅವರೆಲ್ಲರಿಗೂ ತಮ್ಮ ಪರಮ ಮಿತ್ರನಾದ ಹತ್ತನೆಯವನು ತೇಲಿಕೊಂಡು ಹೋದ ವಿಷಯದ ಬಗ್ಗೆ ಅಸಹನೀಯವಾದ ದುಃಖ ಉಂಟಾಯಿತು. ಎಲ್ಲರೂ ಗೋಲಾಕಾರವಾಗಿ ಕುಳಿತುಕೊಂಡು ಮನಸೋಕ್ತವಾಗಿ ಅಳಲು ಪ್ರಾರಂಭಿಸಿದರು. ಅವರಿಗಾದ ದುಃಖ ಹೇಳತೀರದು. ಹೀಗೆಯೇ ಸುಮಾರು ಹೊತ್ತು ಅಳುತ್ತಿದ್ದಾಗ, ಅಲ್ಲಿಯೇ ದೂರದಲ್ಲಿ ಕುಳಿತು ನೋಡುತ್ತಿದ್ದ ಒಬ್ಬ ಮಹಾಪುರುಷನು ಇವರ ಹತ್ತಿರ ಬಂದು, ಅನುಕಂಪದಿಂದ ಇವರ ದುಃಖವನ್ನು ಕಡಿಮೆ ಮಾಡಲೋಸುಗ ದುಃಖದ ಕಾರಣವನ್ನು ಕೇಳಿದ. ಆಗ ಅವರು ಭಾರವಾದ ಹೃದಯದಿಂದ ನಡೆದ ಸಂಗತಿಯನ್ನು ಹೇಳಿ ತಮ್ಮ ಹತ್ತನೆಯ ಮಿತ್ರನ ಸಾವಿನ ಬಗ್ಗೆ ದುಃಖಿಸತೊಡಗಿದರು. ಅವರ ವೃತ್ತಾಂತವನ್ನು ತಿಳಿದುಕೊಂಡ ಮೇಲೆ ಆ ಮಹಾಪುರುಷನು ಹೇಳಿದ "ತಾವು ಅಳಬೇಡಿರಿ, ಹತ್ತನೆಯ ನಿಮ್ಮ ಮಿತ್ರ ಇಲ್ಲಿಯೇ ಇದ್ದಾನೆ, ಅವನು ಸತ್ತಿಲ್ಲ" ಎಂದು ಹೇಳಿದನು. ಆಗ ಅವರೆಲ್ಲರಿಗೂ ಆಶ್ಚರ್ಯವಾಯಿತು. ಅವರಲ್ಲಿ ಒಬ್ಬನು ಅಂಜುತ್ತಾ ಕೇಳಿದನು "ಹತ್ತನೆಯನು ಎಲ್ಲಿದ್ದಾನೆ?". ಆಗ ಆ ಮಹಾಪುರುಷನು ಆ ವ್ಯಕ್ತಿಗೆ ಪುನಃ ಎಣಿಸಲಿಕ್ಕೆ ಹೇಳಿದನು. ಅವನು ಪುನಃ ಮೊದಲಿನಂತೆಯೇ ತನ್ನನ್ನು ಬಿಟ್ಟು ಉಳಿದ ಒಂಬತ್ತು ಜನರನ್ನು ಎಣಿಕೆ ಮಾಡಿ, ಹತ್ತನೆಯನು "ಎಲ್ಲಿದ್ದಾನೆ ತೋರಿಸಿ," ಎಂದು ಆ ಮಹಾಪುರುಷನ ಮುಂದೆ ಬಂದು ನಿಂತನು. ಆಗ ಆ ಮಹಾಪುರುಷನು ಅವನ ಕೈಯ್ಯನ್ನು ಹಿಡಿದು "ಇಲ್ಲಿದ್ದಾನೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹತ್ತನೆಯವವನು" ಎಂದು ತೋರಿಸಿದನು. ಆಗ ಎಲ್ಲರಿಗೂ ತಾವು ಮಾಡಿದ ತಪ್ಪಿನ ಅರಿವಾಯಿತು. ಹತ್ತನೆಯವನು ಪ್ರಾಪ್ತನಾದನೆಂಬ ಸಂತಸದಿಂದ ಅವರ ಶೋಕವೆಲ್ಲವೂ ನಿವೃತ್ತವಾಯಿತು.

ಈ ರೀತಿಯಾಗಿ 'ಹತ್ತನೆಯವ' ನು ತಾನೇ ಆಗಿದ್ದರೂ ಸಹ ಅಜ್ಞಾನದಿಂದಾಗಿ, ಪ್ರಾಪ್ತನಾಗಿರಲಿಲ್ಲ. ಅಜ್ಞಾನದ ನಿವಾರಣೆಯ ನಂತರ 'ಹತ್ತನೆಯವ' ಪ್ರಾಪ್ತನಾದ. ಪರಮಾತ್ಮ ತನ್ನ ನಿಜ ಸ್ವರೂಪವಾಗಿದ್ದರೂ ಸಹ ಅವನ ಪ್ರಾಪ್ತಿಗೋಸ್ಕರ ಜ್ಞಾನದ ಅವಶ್ಯಕತೆಯಿದೆ. ಪರಮಾತ್ಮನ ಪ್ರಾಪ್ತಿಗೆ ಏಕಮಾತ್ರ ಜ್ಞಾನವೇ ಸಾಕ್ಷಾತ್ ಸಾಧನವಾಗಿದೆ.

'ಜೀವ'ನು ತನ್ನ ಪರಮ ಶಾಂತಿಯ ಸಾಧನವಾದ 'ಜ್ಞಾನ'ವನ್ನು ಬಿಟ್ಟು ಅಜ್ಞಾನದಿಂದ ಮೋಹಿತನಾಗಿ ಇಚ್ಛಿತ ವಿಷಯಗಳಿಂದ ಸುಖ ಸಿಗುತ್ತದೆ ಎಂಬ ಭ್ರಾಂತಿಯಿಂದ ಅಧಿಕಾಧಿಕವಾಗಿ ವಿಷಯಗಳ ಇಚ್ಛೆಯನ್ನು ಮನಸ್ಸಿನಲ್ಲಿ ತುಂಬಿಕೊಂಡು ತನ್ನ ಹೃದಯವನ್ನು ಚಂಚಲಗೊಳಿಸಿ ಕೊಳ್ಳುತ್ತಾನೆ ಮತ್ತು ಆ ಪರಮಾನಂದದಿಂದ ದೂರ-ದೂರಕ್ಕೆ ಹೋಗುತ್ತಾನೆ. ಈ ಒಂದು ಅಜ್ಞಾನವೇ 'ಜೀವ'ದ ಅನಂತ ದುಃಖಗಳ ಮೂಲವಾಗಿದೆ. ಈ ಅಜ್ಞಾನದಿಂದ ಪ್ರಭಾವಿತನಾಗಿ ವಿಷಯದಿಂದೊಡಗೂಡಿದ "ಜೀವ"ನು ಮೃಗಗಳಂತೆ ಈ ಮೃಗತೃಷ್ಣಾ ರೂಪಿಯಾದ ವಿಷಯದ ಹಿಂದೆ ಓಡಿ-ಓಡಿ ತನ್ನ ಜೀವನವನ್ನು ವ್ಯರ್ಥಮಾಡಿಕೊಳ್ಳುತ್ತಾನೆ. ಈ ವಿಷಯದಲ್ಲಿ ಕಬೀರದಾಸರು ಹೇಳುವುದೇನೆಂದರೆ,

"ಕಸ್ತೂರಿ ಕುಂಡಲಿ ಬಸ್ಸೈ ಮೃಗ ಡೂಂಡೇ ಬನಮಾಹಿ
ಐಸೇ ಘಟಿಘಟಿ ರಾಮ ಹೈ ದುನಿಯಾ ದೇಖಿ ನಾಹಿ"

"ಕಸ್ತೂರಿ, ಇರುವುದು ಹೊಕ್ಕಳದಲ್ಲಿ ಮೃಗ ಹುಡುಕುವುದು ವನದಲ್ಲಿ ಹೀಗೆ ರಾಮನಿಲ್ಲದ ಜಾಗವಿಲ್ಲ ಜಗತ್ತು ಅವನನ್ನು ನೋಡುವುದಿಲ್ಲ"

ಅರ್ಥಾತ್ : ಕಸ್ತೂರಿ ಮೃಗದ ನಾಭಿಯಲ್ಲಿ (ಹೊಕ್ಕುಳದಲ್ಲಿ) ಕಸ್ತೂರಿಯ ಸುವಾಸನೆಯಿದೆ, ಆದರೆ ಭ್ರಮೆಯಿಂದ ಈ ಸುವಾಸನೆ ಹೊರಗಿನಿಂದ ಬರುತ್ತದೆ ಎಂದು ತಿಳಿದು ಆ ಮೃಗವು ಆ ಸುವಾಸನೆಯನ್ನು ಪಡೆಯಲಿಕ್ಕೆ ವನದಲ್ಲಿ ಎಲ್ಲಾ ಕಡೆಗೂ ಹುಡುಕಾಡುತ್ತಿರುತ್ತದೆ.

ಇದೇ ರೀತಿ 'ಜೀವ'ನು ಅಜ್ಞಾನ ವಶದಿಂದ ನಿತ್ಯ ಪ್ರಾಪ್ತನಾಗಿರುವ ಪರಮಾನಂದವನ್ನು ಅಪ್ರಾಪ್ತನೆಂದು ತಿಳಿದು ಅವನ ಪ್ರಾಪ್ತಿಗೋಸ್ಕರ ಅನ್ಯ ಪ್ರಯತ್ನವನ್ನು ಮಾಡುತ್ತಿರುತ್ತಾನೆ. ಅವನ ಆತ್ಮವೇ ಆ ಪರಮಾನಂದದ ಮೂಲವಾಗಿದೆ. ಅದರ ಪ್ರಾಪ್ತಿಗೆ ಕೇವಲ 'ಜ್ಞಾನ'ವೇ ಏಕಮಾತ್ರ ಸಾಧನವಾಗಿದೆ. ಅನ್ಯ ಯಾವುದೇ ಮಾರ್ಗವಿಲ್ಲ. ಆದುದರಿಂದ ವೇದಗಳು ಮುಕ್ತಕಂಠದಿಂದ ಘೋಷಿಸುವುದೇನೆಂದರೆ,

"ಋತೆ ಜ್ಞಾನಾನ್ನ ಮುಕ್ತಿ" ಜ್ಞಾನವಿಲ್ಲದೆ ಮುಕ್ತಿಯಿಲ್ಲ *"ಜ್ಞಾನಾದೇವತು ಕೈವಲ್ಯಮ್"* ಕೇವಲ ಜ್ಞಾನದಿಂದಲೇ ಮುಕ್ತಿಯುಂಟಾಗುತ್ತದೆ *"ನಾನ್ಯಃ ಪಂಥಾ ವಿದ್ಯತ್ಯೇಯನಾಯ"* ಮೋಕ್ಷಕ್ಕೋಸ್ಕರ ಅನ್ಯ ಯಾವುದೇ ಮಾರ್ಗವೇ ಇಲ್ಲ.

ಕರ್ಮ-ಉಪಾಸಾನಾದಿ ಅನ್ಯ ಯಾವುದೇ ಮಾರ್ಗ ಜ್ಞಾನವನ್ನು ಪಡೆಯುವ ಮಾರ್ಗಗಳಾಗಬಹುದು. ಆದರೆ ಅವೆಲ್ಲವುಗಳು ಪರಮಾನಂದದ ಜ್ಞಾನದ ಪ್ರಾಪ್ತಿಯಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿಬಂಧಕವಾದ "ಜೀವ"ನ ಹೃದಯದಲ್ಲಿರುವ ಭಿನ್ನ ಭಿನ್ನವಾದ ದೋಷಗಳನ್ನು ನಿವಾರಿಸಿಕೊಳ್ಳುವ ಪರಂಪರೆಯಿಂದ ಬಂದ ಸಾಧನೆಗಳಾಗಬಹುದು, ಆದರೆ ಅವು ಯಾವುಗಳೂ ಪರಮಾನಂದದ ಪ್ರಾಪ್ತಿಯ ಸಾಕ್ಷಾತ್ ಸಾಧನಗಳಾಗುವುದಿಲ್ಲ. ಪರಮಾನಂದದ ಪ್ರಾಪ್ತಿಯ ಸಾಕ್ಷಾತ್ ಸಾಧನವೆಂದರೆ, ಪರಮಾನಂದದ ಜ್ಞಾನವೇ ಆಗಬಲ್ಲದು. ಆದುದರಿಂದ ವೇದದಲ್ಲಿ ವರ್ಣಿಸಿರುವುದೇನೆಂದರೆ ಪರಮಾನಂದ ಪ್ರಾಪ್ತಿಯ ಒಂದೇ ಒಂದು ಮಾರ್ಗವೆಂದರೆ ಅದು 'ಜ್ಞಾನ'. ಅನ್ಯ ಯಾವುದೇ ಸಾಧನಗಳಿದ್ದರೂ ಅವುಗಳು ಜ್ಞಾನ ಮಾರ್ಗದ ಮೆಟ್ಟಿಲುಗಳಿಂತಿರುತ್ತವೆ. ಎಂದೆಂದಿಗೂ ಸ್ವತಂತ್ರ ಮಾರ್ಗಗಳಾಗಿರುವುದಿಲ್ಲ. ಜ್ಞಾನಕ್ಕೆ ಪ್ರತಿಬಂಧಕವಾಗಿರುವ ದೋಷಗಳ ನಿವೃತ್ತಿಯಿಂದಲೇ ಪರಮಾನಂದ ಪ್ರಾಪ್ತಿ ಉಂಟಾಗಲು ಸಾಧ್ಯ. 'ಜ್ಞಾನ' ಮಾತ್ರವೇ ಮೋಕ್ಷದ ಒಂದೇ ಒಂದು ಸಾಧನವೆಂದು ತೋರಿಸಿದ್ದಾರೆ. ಜ್ಞಾನ ಸಾಧನದಿಂದ ಪ್ರಾಪ್ತವಾದ ಪರಮಾನಂದಕ್ಕಿಂತ ದೊಡ್ಡದಾದ ಯಾವ ಆನಂದವೂ ಇಲ್ಲ. ಎಷ್ಟೊಂದು ಪ್ರಕಾರವಾದ ಹೊರಗಿನ ಆನಂದಗಳಿವೆಯೋ ಅವು ಬಾಹ್ಯವಸ್ತುಗಳಲ್ಲಿಲ್ಲ. ಆ ಆನಂದವು ಬ್ರಹ್ಮಾನಂದದ ಎಳ್ಳು ಕಾಳಿನಷ್ಟು ಮಾತ್ರ ವಿಷಯಾನಂದ ವಾಗಿರುತ್ತದೆ. ಇದು ಬ್ರಹ್ಮಾನಂದದಿಂದಲೇ ಹೊರಹೊಮ್ಮುತ್ತದೆ. ಅಂತಃಕರಣದ ವೃತ್ತಿಗಳು ನೇತ್ರದಿಂದ ಹೊರಬಂದು ವಿಷಯಗಳ ಮೇಲೆ ಸ್ಫುರಣಗೊಳ್ಳುತ್ತವೆ. ಆನಂದ ಒಳಗಿರುತ್ತದೆ, ವಿಷಯಗಳು ಹೊರಗಿರುತ್ತವೆ, ಮಧ್ಯವರ್ತಿಗಳಾಗಿ ಕರಣಗಳಿರುತ್ತವೆ. ಜ್ಞಾನೇಂದ್ರಿಯಗಳು ಮಧ್ಯವರ್ತಿಗಳಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಲ್ಲಿ ಸ್ಫುರಣಗೊಳ್ಳುವುದರಿಂದ ಆನಂದದ ಆವಿರ್ಭಾವ ಉಂಟಾಗುತ್ತದೆ. ಇದು ಶಾಶ್ವತವಾದ ಆನಂದವಲ್ಲ. ಬ್ರಹ್ಮಾನಂದ ಪ್ರಾಪ್ತಿಯಾದ ಮೇಲೆ ಬೇರೆ ಯಾವ ವಿಷಯಗಳ ಇಚ್ಛೆ ಉಂಟಾಗುವುದಿಲ್ಲ. ಅವನು ಪೂರ್ಣಕಾಮನಾಗುತ್ತಾನೆ.

"ವಿಶ್ವೈಶ್ವರ್ಯಂ ಕೇವಲ ಆಪ್ತ ಕಾಮಃ"

ಯಾವುದೇ ಪ್ರಕಾರದ ಕಾಮನೆಗಳಿರುವುದಿಲ್ಲ. ಏಕೆಂದರೆ ಅವನು ಸಂಪೂರ್ಣ ಕಾಮನೆಗಳ ಫಲವನ್ನು ಪಡೆದಿರುತ್ತಾನೆ.

ಯಾವ ಪದಾರ್ಥಗಳ ಇಚ್ಛೆ ಉಂಟಾಗುತ್ತದೆಯೋ ಆ ಎಲ್ಲಾ ಪದಾರ್ಥಗಳೂ ಆತ್ಮದಲ್ಲಿ ಸ್ಥಿತವಾಗಿರುತ್ತವೆ. ಆ ರೀತಿಯಾದ ಎಲ್ಲಾ ಪದಾರ್ಥಗಳ ಪ್ರಾಪ್ತಿಯು ಆತ್ಮದ ಧ್ಯಾನದಿಂದ ಲಭ್ಯವಾಗುತ್ತವೆ. ಆತ್ಮದ ಅಜ್ಞಾನದಿಂದ ಆತ್ಮದಲ್ಲಿ ಸ್ಥಿತವಾಗಿರುವ ಪದಾರ್ಥಗಳನ್ನು ಪಡೆಯಲಾಗುವುದಿಲ್ಲ. ಹೇಗೆ, ಒಂದು ಜಾಗದಲ್ಲಿ ಬಂಗಾರದ ನಿಧಿ ಹೂತಿಟ್ಟುಕೊಂಡಿದ್ದರೂ ಅದನ್ನು ತಿಳಿಯದೇ ಇದ್ದ ವ್ಯಕ್ತಿ ಆ ಜಾಗದ ಮೇಲೆಯೇ ನಡೆದಾಡುತ್ತಿದ್ದರೂ ಸಹ ಆ ನಿಧಿಯ ಬಗ್ಗೆ ಏನನ್ನೂ ಅರಿಯಲಾರ. ಅಜ್ಞಾನದಿಂದ ಪ್ರಾಪ್ತ ನಿಧಿಯನ್ನು ಅವನು ತನ್ನದಾಗಿಸಿಕೊಳ್ಳಲಾರ.

ಈ ವಿಷಯದ ಬಗ್ಗೆ ಛಾಂದೋಗ್ಯ ಉಪನಿಷತ್ತಿನಲ್ಲಿ ಬಹಳ ಸುಂದರವಾಗಿ ಉದಾಹರಣೆ ಸಹಿತವಾಗಿ ಸ್ಪಷ್ಟಪಡಿಸಿದ್ದಾರೆ.

"ಹಿರಣ್ಯನಿಧಿಂ ನಿಹಿತಮಕ್ಷೇತ್ರಜ್ಞಾ
ಉಪರ್ಯೂಪರಿ ಸಂಚರಂತೋ ವಿಂದೇಯುರೇವಮೇವೇಮಾಃ
ಸರ್ವಾಃ ಪ್ರಜಾ ಅಹರಹರ್ಗಚ್ಛಾಂತ್ಯ ಏತಂ
ಬ್ರಹ್ಮಲೋಕಂ ನ ವಿಂದಂತ್ಯ ನೃತೇನ ಹಿ ಪ್ರತ್ಯೂಢಾಃ"

- ಛಾಂದ್ಯೋಗ್ಯಪನಿಷತ್ತು ೮-೩-೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಥಾತ್ : "ಹೇಗೆ ಭೂಮಿಯಲ್ಲಿ ಅಡಗಿರುವ ಬಂಗಾರದ ಖಜಾನೆಯನ್ನು ಅದೇ ಸ್ಥಾನದಲ್ಲಿರುವ ಒಬ್ಬ ಅನಬಿಜ್ಞ ವ್ಯಕ್ತಿಯು ಆ ಜಾಗದ ಮೇಲೆ ಓಡಾಡಿಕೊಂಡಿದ್ದರೂ ಆ ಖಜಾನೆಯ ಬಗ್ಗೆ ಏನನ್ನೂ ಅರಿಯಲಾರನೋ, ಹಾಗೆಯೇ ಈ ಸಂಪೂರ್ಣ ಪ್ರಜೆಗಳು ಪ್ರತಿದಿನ ಬ್ರಹ್ಮಲೋಕದಲ್ಲಿ ವಿಹರಿಸುತ್ತಿದ್ದರೂ ಅದರ ಬಗ್ಗೆ ಏನನ್ನೂ ಅರಿಯಲಾರರು. ಏಕೆಂದರೆ ಅವರು ಮಿಥ್ಯಾ ರೂಪ ಆವರಣದಿಂದ ಆವರಿಸಲ್ಪಟ್ಟಿರುತ್ತಾರೆ".

ಈ ಆತ್ಮವು ಹೃದಯ ದೇಶದಲ್ಲಿ (ಹೃದಯ ಕಮಲ) ಸ್ಥಿತವಾಗಿದೆ. ಈ ಅರ್ಥದಲ್ಲಿ ಯಾವ ಸಂಶಯವೂ ಇಲ್ಲ. ಹೃದಯದ ಅರ್ಥವೇನೆಂದರೆ, "ಹೃದಿ ಅಯಮ್ ಹೃದಯಮ್" ಅಂದರೆ, ಹೃದಯ ಕಮಲದಲ್ಲಿ ಈ ಆತ್ಮವು ವಿರಾಜಿಸುತ್ತಿರುತ್ತದೆ. ಆದುದರಿಂದ ಹೃದಯ ಕಮಲಕ್ಕೆ ಹೃದಯವೆಂದು ಹೇಳಲ್ಪಟ್ಟಿದೆ. ಯಾವ ಪುರುಷನು ಹೃದಯ ದೇಶದಲ್ಲಿರುವ ಬ್ರಹ್ಮನನ್ನು ತಿಳಿಯುತ್ತಾನೋ ಆ ಪುರುಷನು ಪ್ರತಿದಿನವೂ ಬ್ರಹ್ಮಾನಂದವನ್ನು ಪಡೆಯುತ್ತಾನೆ.

ಒಂದು ತೇಜೋ ಮಯವಾದ ರತ್ನವು ಕೆಸರು ಹತ್ತಿಕೊಂಡಿರುವುದರಿಂದ ಮುಚ್ಚಿಕೊಂಡು ಹೋಗಿ ತನ್ನ ನಿಜ ರೂಪವನ್ನು ಪ್ರಕಟಗೊಳಿಸಲಾರದಾಗಿದೆ. ಆದರೆ, ಅದಕ್ಕೆ ಹತ್ತಿಕೊಂಡಿದ್ದ ಮಣ್ಣು, ಕೇಸರನ್ನು ಒರೆಸಿ ಅದನ್ನು ನೀರಿನಿಂದ ತೊಳೆದ ಮೇಲೆ ಅದು ತನ್ನ ನಿಜ ರೂಪದಿಂದ ಹೊಳೆಯಲಾರಂಭಿಸುತ್ತದೆ. ಅದೇ ರೀತಿ ಈ ಜೀವಾತ್ಮನ ವಾಸ್ತವಿಕ ಸ್ವರೂಪವು ಅತ್ಯಂತ ಸ್ವಚ್ಛ ಮತ್ತು ಆನಂದ, ತೇಜೋಮಯವಾಗಿದ್ದರೂ ಸಹ ಅನಂತ ಜನ್ಮದಲ್ಲಿ ಮಾಡಿದ ಕರ್ಮಗಳ ಸಂಸ್ಕಾರಗಳಿಂದ ಮತ್ತು ಅವಿದ್ಯಾ, ಮಾಯಾ, ಮನ ರೂಪಿ ಮಣ್ಣಿನಿಂದ ಮುಚ್ಚಲ್ಪಟ್ಟಿದೆ.

ಅವಿದ್ಯಾ : ನಿತ್ಯತೇಜೋಮಯವಾದ ಆತ್ಮವು ಮುಚ್ಚಲ್ಪಟ್ಟಿದೆ. ಅದರ ವಾಸ್ತವಿಕ ಸ್ವರೂಪವು ಅಜ್ಞಾನದ ಆವರಣದಿಂದಾಗಿ ಕಂಡುಬರುತ್ತಿಲ್ಲ. ಈ ಅಜ್ಞಾನ ಆವರಣ ವಿಕ್ಷೇಪವು ಅನಾದಿ ಭಾವ ರೂಪವಾಗಿದೆ. ಆವರಣ ಯುಕ್ತವಾಗಿರುವುದರಿಂದ ಜೀವಾತ್ಮವೆಂಬ ರತ್ನವು ಅಜ್ಞಾನವೆಂಬ ಮಣ್ಣಿನಲ್ಲಿ ಮುಚ್ಚಲ್ಪಟ್ಟಿದೆ.

ಮಾಯಾ : ಇದು ಸಹ ಒಂದು ತರಹದ ಅಂಧಕಾರದ ಪರದೆಯಾಗಿದೆ. ಈ ಅಂಧಕಾರವನ್ನು ಪಾರುಮಾಡಿ ಪ್ರಕಾಶದ ಕಡೆಗೆ ಹೋಗುವುದು ಬಹಳ ಕಷ್ಟಕರವಾಗಿದೆ.

ಭಗವಾನನು ಗೀತೆಯಲ್ಲಿ ಹೇಳಿರುವುದೇನೆಂದರೆ :

"ದೈವೀ ಹ್ಯೇಷಾ ಗುಣಮಯಿ ಮಮ ಮಾಯಾ ದುರತ್ಯಯಾ"

ಗೀತಾ ೭-೧೪

"ಈ ಅಲೌಕಿಕವಾದ ಅತಿ ಅದ್ಭುತವಾದ ತ್ರಿಗುಣಮಯವಾದ ನನ್ನ ಮಾಯೆಯು ಜಯಿಸಲಿಕ್ಕೆ ಬಹಳ ದುಸ್ತರವಾಗಿದೆ." ಗುಣ ಮತ್ತು ಗುಣಗಳ ಕಾರ್ಯ ರೂಪವಾದ ಈ ಜಡವಾದ ದೃಶ್ಯ ಪ್ರಪಂಚವು ಈ ಮಾಯೆಯಲ್ಲಿಯೇ ಅವತರಿಸಿದೆ. ಆದುದರಿಂದ, ಇದಕ್ಕೆ "ಗುಣಮಯಿ" ಎಂದೆನ್ನುತ್ತಾರೆ. ಈ ಮಾಯೆಯು ಮಾಂತ್ರಿಕನ ಅಥವಾ ದಾನವರ ಮಾಯೆಯ ತರಹ ಸಾಧಾರಣವಲ್ಲ, ಇದು ಭಗವಂತನ ಅನನ್ಯ ಸಾಧಾರಣವಾದ ಅತ್ಯಂತ ವಿಚಿತ್ರ ಶಕ್ತಿಯಾಗಿದೆ. ಆದುದರಿಂದಲೇ ಇದಕ್ಕೆ "ದೈವೀ" ಎಂದು ಹೇಳುತ್ತಾರೆ ಮತ್ತು ಕೊನೆಯಲ್ಲಿ ಭಗವಂತನು ಮಾಯೆಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನ್ನ (ಮಮ)ದು ಎಂದು ಮತ್ತು ಇದನ್ನು "ದುರತ್ಯಯಾ" ಎಂದು ಹೇಳಿದ್ದಾನೆ. ಇಂತಹ ಮಾಯೆಯು ಜೀವಾತ್ಮ ಎಂಬ ಹೆಸರಿನ ರತ್ನದಲ್ಲಿ ಅಡಗಿದೆ.

ಮನಸ್ಸು : ತನ್ನ ತನ್ನ ವಿಷಯದಲ್ಲಿಯೇ ವಿಹರಿಸುವ ಅರ್ಥಾತ್ ವಿಷಯದಲ್ಲಿ ಪ್ರವೃತ್ತನಾಗಿರುವಂತಹದು. ಇಂದ್ರಿಯಗಳ ಮೂಲಕ ಯಾವ ವಿಷಯಗಳ ಹಿಂದೆ ಹಿಂದೆ ಸಂಚರಿಸುತ್ತಾ ವಿಷಯಗಳಲ್ಲಿ ಪ್ರವೃತ್ತಿ ಹೊಂದುತ್ತದೋ ಅದು ಮನಸ್ಸು. ಆ ಇಂದ್ರಿಯಗಳ ವಿಷಯಗಳನ್ನು ಗ್ರಹಿಸಲು ಮಗ್ನನಾಗಿರುವ ಮನಸ್ಸು ಆತ್ಮ-ಅನಾತ್ಮ ಸಂಬಂಧದ ವಿವೇಕ-ಜ್ಞಾನದಿಂದ ಉತ್ಪನ್ನವಾದ ಬುದ್ಧಿಯನ್ನು ಹರಣ ಮಾಡುತ್ತದೆ ಅರ್ಥಾತ್ ನಾಶಪಡಿಸುತ್ತದೆ.

ಹೇಗೆ ನೀರಿನಲ್ಲಿರುವ ನೌಕೆಯನ್ನು ವಾಯುವು ತನ್ನ ಪ್ರಚಂಡ ರಭಸದಿಂದ ದಿಕ್ಕು ತಪ್ಪಿಸುತ್ತದೆಯೋ ಹಾಗೆಯೆ ಜೀವನದಲ್ಲಿ ವಿಹರಿಸುತ್ತಿರುವ ಮಾಯೆಯೆಂಬ, ಸಂಸಾರ ನೌಕೆಯನ್ನು ವಾಯುವು ತನ್ನ ಪ್ರಚಂಡ ರಭಸದಿಂದ ದಿಕ್ಕನ್ನು ತಪ್ಪಿಸಿ ವಿರುದ್ಧ ಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಈ ಮನಸ್ಸು ಆತ್ಮನ ವಿಷಯದಲ್ಲಿ ತಲ್ಲೀನವಾಗಿರುವ ಬುದ್ಧಿಯನ್ನು ವಿಚಲಿತಗೊಳಿಸಿ ವಿಷಯದಲ್ಲಿ ತೊಡಗಿಸುತ್ತದೆ. ವಿಷಯಯುಕ್ತ ಮನರೂಪಿಯಾದ ಮಣ್ಣಿನಿಂದ ಜೀವಾತ್ಮನೆಂಬ ರತ್ನವು ಮುಚ್ಚಲ್ಪಟ್ಟಿದೆ.

ಆದರೆ, ಯಾವಾಗ ಮನುಷ್ಯನು ವಿವೇಕಾದಿ ಸಾಧನಗಳಿಂದ ಜ್ಞಾನ ಪ್ರಾಪ್ತಿಯನ್ನು ಹೊಂದಿ, ಆ ಜ್ಞಾನದಿಂದ ಈ ಸಮಸ್ತ ಮಲ ವಿಕ್ಷೇಪಗಳನ್ನು ತೊಳೆದು, ಆತ್ಮದ ಯಥಾರ್ಥ ಸ್ವರೂಪವನ್ನು ಬೆಳಗಿಸುತ್ತಾನೋ, ಆಗ ಅವನು ಅಸಂಗನಾಗುತ್ತಾನೆ. ಅರ್ಥಾತ್, ಯಾವ ಜಡ ಪದಾರ್ಥಗಳೊಂದಿಗೆ ಇದುವರೆವಿಗೂ ಸಂಯೋಗವನ್ನು ಹೊಂದಿದ್ದನೋ, ಈಗ ಅವೆಲ್ಲವುಗಳ ನಾಶವಾಗಿ ಅವನು ಕೈವಲ್ಯದ ಅವಸ್ಥೆಗೆ ಪ್ರಾಪ್ತನಾಗುತ್ತಾನೆ ಮತ್ತು ಅವನ ಎಲ್ಲಾ ಪ್ರಕಾರದ ದುಃಖಗಳ ಅಂತ್ಯವಾಗಿ ಸರ್ವಥಾ ಕೃತಕೃತ್ಯನಾಗುತ್ತಾನೆ.

ಯಾವನು ಅಜ್ಞಾನಿಯಾಗಿರುತ್ತಾನೋ ಅವನು ಜನ್ಮ-ಜನ್ಮಾಂತರದಿಂದ ದುಃಖಗಳನ್ನು ಅನುಭವಿಸುತ್ತಿರುತ್ತಾನೆ. ಈ ರೀತಿಯಾಗಿ ಎಷ್ಟು ಸಾರಿ ಜನನ-ಮರಣವನ್ನು ಹೊಂದುತ್ತಾನೋ ಗೊತ್ತಿಲ್ಲ. ಮನುಷ್ಯ ಜನ್ಮವನ್ನು ಪಡೆದ ಮೇಲೆ ಯಥಾರ್ಥ ಜ್ಞಾನವನ್ನು ಪಡೆಯದೇ ಹೋದರೆ ಮನುಷ್ಯ ಜನ್ಮವೇ ವ್ಯರ್ಥವಾಗುತ್ತದೆ. ಈ ಮಾನವ ಜನ್ಮ ಪ್ರತಿಸಾರಿಯೂ ಸಿಗುವಂತಹದ್ದಲ್ಲ. ಇದು ಅತ್ಯಂತ ದುರ್ಲಭವಾದದ್ದು. ಉದಾಹರಣೆಗೆ : ಒಬ್ಬ ಮನುಷ್ಯ ಒಂದು ದೊಡ್ಡ ರಸ್ತೆಯ ಪಕ್ಕದಲ್ಲಿ ಕುಳಿತಿದ್ದ. ಅವನ ಸಂಕಲ್ಪವೇನಿತ್ತೆಂದರೆ, ಎರಡೂ ಕೈಗಳನ್ನು ಮೇಲೆತ್ತಿಕೊಂಡು ಚಪ್ಪಾಳೆ ತಟ್ಟುತ್ತಿರುವಾಗ ಒಂದು ಕಾಗೆ ಬಂದು ಎರಡು ಕೈಗಳ ಮಧ್ಯೆ ಸಿಕ್ಕಿಕೊಂಡು ಸತ್ತು ಹೋಗಬೇಕು, ಆಗ ನಾನು ಈ ಜಾಗದಿಂದ ಚಲಿಸುತ್ತೇನೆ ಎಂಬುದಾಗಿತ್ತು. ಇದು ಎಂತಹ ದುರ್ಲಭವಾದ ಸಂಕಲ್ಪ ಎಂಬುದನ್ನು ನೋಡಿ. ಮೊದಲನೆಯ ಮಾತೆಂದರೆ ಕಾಗೆಯು ಮನುಷ್ಯನ ಹತ್ತಿರ ಬರುವುದೇ ಇಲ್ಲ. ಎರಡನೆಯದಾಗಿ ಅವನು ರಸ್ತೆಯ ಪಕ್ಕದಲ್ಲಿ ಕುಳಿತಿದ್ದಾನೆ. ರಸ್ತೆಯಲ್ಲಿನ ಜನ ಜಂಗುಳಿ, ಗಲಾಟೆ, ವಾಹನಗಳ ಚಲಿಸುವ ಶಬ್ದ ಇವುಗಳಿಂದಾಗಿ ಕಾಗೆಯು ಅಲ್ಲಿ ಸುಳಿಯಲೂ ಸಾಧ್ಯವಿಲ್ಲ. ಮೂರನೆಯದಾಗಿ ಇವನು ಕೈಗಳನ್ನು ಮೇಲೆತ್ತಿ ಚಪ್ಪಾಳೆ ತಟ್ಟುತ್ತಿದ್ದಾನೆ. ಚಪ್ಪಾಳೆ ತಟ್ಟಿ ಶಬ್ದ ಮಾಡುತ್ತಿರುವುದರಿಂದ ಕಾಗೆಯು ಹತ್ತಿರಕ್ಕೆ ಬರಲು ಸುತಾರಾಂ ಶಕ್ಯವಿಲ್ಲ. ನಾಲ್ಕನೆಯದಾಗಿ ಚಪ್ಪಾಳೆ ತಟ್ಟುತ್ತಿರುವ ಹಸ್ತಗಳ ಮಧ್ಯೆ ಕಾಗೆಯು ಬಂದು ಸಿಕ್ಕಿಕೊಂಡು ಸಾಯಬೇಕು. ಅಂದ ಮೇಲೆ ಇದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂತಹ ಅತ್ಯಂತ ದುರ್ಲಭವಾದ ಮಾತಾಯಿತು. ಇಷ್ಟೇ ದುರ್ಲಭವಾದ ಮಾತೆಂದರೆ ಮನುಷ್ಯ ಜನ್ಮ ಪ್ರಾಪ್ತಿಯಾಗುವುದು.

ಈಗ ಮಾನವ ಜನ್ಮ ಪ್ರಾಪ್ತಿಯಾಗಿದೆ ಇದರ ಸಾಫಲ್ಯ ಉಂಟಾಗಬೇಕು.

"ಇಹ ಚೇದವೇದಿದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತಿ ವಿನಿಷ್ಟಿಃ"

- ಕೆನೋಪನಿಷತ್ತು ೨-೫

ಅರ್ಥಾತ್ : "ಎಲ್ಲಿಯವರೆಗೆ ಈ ದುರ್ಲಭವಾದ ಮಾನವ ಶರೀರ ವಿದ್ಯಾಮಾನವಾಗಿದೆಯೋ ಮತ್ತು ಭಗವಂತನ ಕೃಪೆಯಿಂದ ಸಾಧನ-ಸಾಮಗ್ರಿಗಳು ಉಪಲಬ್ದವಾಗಿವೆಯೋ ಅಷ್ಟರಲ್ಲಿ ಶೀಘ್ರಾತಿಶೀಘ್ರವಾಗಿ ಪರಮಾತ್ಮನನ್ನು ಅರಿತುಕೊಂಡರೆ ಅದು ಎಲ್ಲಾ ಪ್ರಕಾರದಿಂದ ಉತ್ತಮವಾಗುತ್ತದೆ. ಮಾನವ ಜನ್ಮದ ಪರಮ ಸಾರ್ಥಕತೆ ಉಂಟಾಗುತ್ತದೆ. ಒಂದು ಪಕ್ಷ ಈ ಸಂಧಿಯನ್ನು ಕಳೆದುಕೊಂಡರೆ ಮಹಾನ್ ವಿನಾಶ ಉಂಟಾಗುತ್ತದೆ". ಪದೇ ಪದೇ ಮೃತ್ಯುರೂಪವಾದ ಸಂಸಾರದ ಪ್ರವಾಹದಲ್ಲಿ ಬಿದ್ದು ದುಃಖಪಡಬೇಕಾಗುತ್ತದೆ ಮತ್ತು ಅತ್ತು ಅತ್ತು ಪಶ್ಚಾತ್ತಾಪ ಪಡುವುದನ್ನು ಬಿಟ್ಟರೆ ಇನ್ನೇನು ನಮ್ಮ ಕೈಯ್ಯಲ್ಲಿ ಇರುವುದಿಲ್ಲ. ಈ ಸಂಸಾರದ ತ್ರಿವಿಧ ತಾಪಗಳು ಮತ್ತು ವಿವಿಧ ಶೂಲಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಇದೇ ಒಂದು ಪರಮ ಸಾಧನವಾಗಿದೆ. ಜೀವನು ಮಾನವ ಜನ್ಮದಲ್ಲಿ ದಕ್ಷತೆಯಿಂದ ಸಾಧನ ಪರಾಯಣನಾಗಿ ತನ್ನ ಜೀವನವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳಬೇಕು. ಈ ಸಂಸಾರಿ ಜೀವಾತ್ಮನಲ್ಲಿ ವಿವೇಕವಿಲ್ಲ. ವೈರಾಗ್ಯವಿಲ್ಲ, ಶ್ರವಣವನ್ನು ಮಾಡಲಿಲ್ಲ ಮನನವು ತಿಳಿದಿಲ್ಲ. ಈ ಜೀವನಿಗೆ ಸಂಸಾರದ ಅಭ್ಯಾಸ ಬಹಳ ದೃಢವಾಗಿಬಿಟ್ಟಿದೆ. ಸಂಸಾರದ ಮೋಹ ಬಿಡುತ್ತಿಲ್ಲ. ಆದುದರಿಂದ ಆಧ್ಯಾತ್ಮದ ಶ್ರವಣವನ್ನು ಮಾಡಿದರೂ ಸಹ ಅದು ಅಂತಃಕರಣದಲ್ಲಿ ನಾಟುವುದಿಲ್ಲ.

"ಕೇಲಾ ಸಂಸಾರಾಭ್ಯಾಸ ಝಾಲಾ ಆಯುಷ್ಯಾಚಾ ನಾಶ
ರಾಮೀ ರಾಮದಾಸ ಮ್ಹಣೆ ಐಸೇಚಿ ಜನ್ಮ ವಾಯಗೇಲೆ"

ವೇದಾಂತ, ಆಧ್ಯಾತ್ಮ, ಶ್ರವಣದ ಅಭ್ಯಾಸವನ್ನು ಅರ್ಥಾತ್ ಮನನವನ್ನು ಮಾಡುವುದನ್ನು ಬಿಟ್ಟು ಸಂಸಾರದ ಮನನ ಮಾಡುತ್ತಾನೆ.

"ವೇದಾಂತಚ ಶ್ರವಣ ಸಂಸಾರಾಚ ಮನನ"

ಮನುಷ್ಯನು ವೇದಾಂತದ ಶ್ರವಣ ಮಾಡುತ್ತಾನೆ ಆದರೆ ಮನನ ಮಾತ್ರ ಸಂಸಾರದ ಬಗ್ಗೆ ಮಾಡುತ್ತಾನೆ.

"ಯತ್ ಕಥನಂ ತತ್ ಚಿಂತನಮ್"

ಯಾವುದನ್ನು ಶ್ರವಣ ಮಾಡಿದ್ದಾನೆಯೋ ಅದನ್ನೇ ಮನನ ಮಾಡಬೇಕು. ಶ್ರವಣ, ಮನನ ನಿಧಿಧ್ಯಾಸನದಿಂದ ಜ್ಞಾನಾಗ್ನಿ ಪ್ರಜ್ವಲಿತವಾಗಬೇಕು. ಇದು ಆಗುವುದಿಲ್ಲ, ಏಕೆಂದರೆ ನಾವು ಶ್ರವಣ ಮಾಡಿದ್ದನ್ನು ಅಲ್ಲಿಯೇ ಬಿಡುತ್ತೇವೆ.

ಹೇಗೆಂದರೆ : ಒಬ್ಬ ಮನುಷ್ಯ ಒಬ್ಬ ಸಾಧುವಿನ ಹತ್ತಿರ ಪ್ರವಚನವನ್ನು ಕೇಳಲು ಸುಮಾರು ೩೦ ವರ್ಷಗಳಿಂದ ತಪ್ಪದೇ ಹೋಗುತ್ತಿದ್ದ. ಒಂದು ದಿನ ಆ ಮನುಷ್ಯನಿಗೆ ಬೇರೆ ಊರಿಗೆ ಹೋಗುವ ಸಂದರ್ಭ ಒದಗಿ ಬಂತು. ಆಗ ಅವನು ಸಾಧುಗಳ ಹತ್ತಿರ ಹೋಗಿ, "ನಾನು ನಾಳೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಊರಿಗೆ ಹೋಗುತ್ತಿದ್ದೇನೆ, ಪ್ರವಚನವನ್ನು ಕೇಳಲು ಬರಲಾಗುವುದಿಲ್ಲ" ಎಂದು ಹೇಳಿದನು. ಆದಕ್ಕೆ ಸಾಧು ಮಹರಾಜರು "ಅರೆ, ನೀನು ಹೋದರೆ ನಾನು ಇಲ್ಲಿ ಒಬ್ಬಂಟಿಗನಾಗುತ್ತೇನೆ. ಪ್ರವಚನವನ್ನು ಕೇಳುವರಾರು? ನೀನು ಊರಿನಿಂದ ಹಿಂತಿರುಗಿ ಬರುವವರೆಗೂ ಪ್ರವಚನವನ್ನು ಕೇಳಲು ನಿನ್ನ ಮಗನನ್ನು ಕಳುಹಿಸಿಕೊಡು" ಎಂದರು. ಆಗ ಆ ಮನುಷ್ಯನು ಬಹಳ ನಮ್ರತೆಯಿಂದ "ಇಲ್ಲ, ಇಲ್ಲ, ಮಹರಾಜರೇ ನಾನು ಐದು ದಿವಸದಲ್ಲಿ ಹಿಂತಿರುಗುತ್ತೇನೆ." ಎಂದನು. ಆಗ ಮಹರಾಜರು "ಐದು ದಿನದ ಮಟ್ಟಿಗಾದರೂ ಪ್ರವಚನವನ್ನು ಏಕೆ ನಿಲ್ಲಿಸಬೇಕು, ನಿನ್ನ ಮಗನನ್ನು ಕಳುಹಿಸಿಕೊಡು, ಅವನಾದರೂ ಪ್ರವಚನವನ್ನು ಕೇಳಲಿ" ಎಂದರು. ಆದಕ್ಕೆ ಆ ಮನುಷ್ಯನು "ನನ್ನ ಮಗ ಪ್ರವಚನವನ್ನು ಕೇಳಿದನೆಂದರೆ ಅವನು ಸನ್ಯಾಸಿಯಾಗುತ್ತಾನೆ" ಎಂದು ಬಹಳ ಆತಂಕದಿಂದ ನುಡಿದನು. ಸಾಧು ಮಹಾರಾಜರು ಹಣೆಯನ್ನು ಚಚ್ಚಿಕೊಳ್ಳುತ್ತಾ ಹೇಳಿದರು. "ಅರೆ, ಐದು ದಿನದಲ್ಲಿ ಅವನು ಹೇಗೆ ಸನ್ಯಾಸಿಯಾಗಲು ಸಾಧ್ಯ. ನೀನಾದರೋ ೩೦ ವರ್ಷಗಳಿಂದ ಪ್ರವಚನವನ್ನು ಕೇಳುತ್ತಿದ್ದಿಯ. ಆದರೂ ನೀನು ಇನ್ನೂ ಸನ್ಯಾಸಿಯಾಗಿಲ್ಲ, ನಿನ್ನ ಮಗ ಹೇಗೆ ಐದು ದಿನದಲ್ಲಿ ಸನ್ಯಾಸಿಯಾಗಬಲ್ಲ" ಎಂದರು. ಆಗ ಆ ಮನುಷ್ಯನು ಮುಗುಳ್ನಗೆ ಬೀರುತ್ತಾ ಹೇಳುತ್ತಾನೆ "ನಾನು ಬಹಳ ಬುದ್ಧಿವಂತಿಕೆಯಿಂದ ಪ್ರವಚನವನ್ನು ಕೇಳುತ್ತಾ ಬಂದಿದ್ದೇನೆ. ಇಲ್ಲಿಯವರೆಗೆ ಒಂದು ಶಬ್ದವನ್ನೂ ಮನೆಗೆ ತೆಗೆದುಕೊಂಡು ಹೋಗಿಲ್ಲ, ಕೇಳಿದ್ದೆಲ್ಲವನ್ನು ಇಲ್ಲಿಯೇ ಬಿಟ್ಟು ಹೋಗುತ್ತೇನೆ, ಇಲ್ಲದಿದ್ದರೆ ನಾನು ಸನ್ಯಾಸಿಯಾಗುತ್ತಿರಲಿಲ್ಲವೆ?".

ಜ್ಞಾನಾಗ್ನಿ ಪ್ರಜ್ವಲಿತವಾಗಲಿಕ್ಕೆ ಶ್ರವಣ, ಮನನ ನಿಧಿಧ್ಯಾಸನಗಳ ನಿರಂತರ ಅವಶ್ಯಕತೆಯಿದೆ. ಶ್ರವಣವೇ ಇಲ್ಲದ ಮೇಲೆ ಮನನ ಮತ್ತು ನಿಧಿ ಧ್ಯಾಸನಗಳು ಎಲ್ಲಿಂದ ಬರಬೇಕು? ಆದುದರಿಂದ ಶ್ರವಣದ ನಿತಾಂತ ಅವಶ್ಯಕತೆಯಿದೆ. ಅದರ ಪ್ರಯೋಜನವನ್ನು ನೀತಿ ಶಾಸ್ತ್ರದಲ್ಲಿ ಈ ರೀತಿ ಹೇಳಿದ್ದಾರೆ.

ಶ್ರುತ್ವಾ ಧರ್ಮಂ ವಿಜಾನಾತಿ ಶ್ರುತ್ವಾ ತ್ಯಜತಿ ದುರ್ಮತಿಂ।
ಶ್ರುತ್ವಾ ಜ್ಞಾನಮವಾಪ್ನೋತಿ ಶ್ರುತ್ವಾ ಮೋಕ್ಷ ಮವಾಪ್ನುಯಾತ್॥

ಅರ್ಥಾತ್ : "ಮನುಷ್ಯನು ಶಾಸ್ತ್ರಗಳನ್ನು ಕೇಳಿ ಧರ್ಮವನ್ನು ತಿಳಿಯುತ್ತಾನೆ. ಶ್ರವಣವನ್ನು ಮಾಡಲಿಕ್ಕೆ ಶಮ, ದಮ, ಶ್ರದ್ಧಾ ಸಂಪನ್ನನಾಗಿ ಸದ್ಗುರು ಮತ್ತು ಸತ್ ಶಾಸ್ತ್ರಗಳಿಗೆ ಶರಣು ಹೋಗಬೇಕು ಹಾಗೂ ಶ್ರವಣ, ಮನನ ನಿಧಿ ಧ್ಯಾಸನದಿಂದ ಸಂಶಯ-ವಿಪರ್ಯರೂಪ ಸರ್ಪ ಹೊರಗೆ ಬರುತ್ತದೆ. ಅವನ ಅಜ್ಞಾನ ರೂಪಿ ಆವರಣವು ಸವೆಯುತ್ತಾ ಸವೆಯುತ್ತಾ ನಾಶವಾಗುತ್ತದೆ. ಆಗ "ತತ್ವಮಸಿ" ಎಂಬ ಮಹಾವಾಕ್ಯದ ಶ್ರವಣ ಮಾತ್ರದಿಂದಲೇ ಒಂದೇ ಸಾರಿಗೆ ಅವನಿಗೆ "ಅಹಂ ಬ್ರಹ್ಮಾಸ್ಮಿ"ಯ ರೂಪದಲ್ಲಿ ಬ್ರಹ್ಮಾಕಾರವೃತ್ತಿ ಉತ್ಪನ್ನವಾಗುತ್ತದೆ. ಆಗ ನಾನು ಕರ್ತ-ಬೋಕ್ತಾ, ಸಂಸಾರಿ ಎಂಬ ಆವರಣ ತತ್ಕಾಲವೇ ನಷ್ಟವನ್ನು ಹೊಂದುತ್ತದೆ. ಹಾಗೂ ಪರಮಾನಂದ ಪ್ರಾಪ್ತವಾಗುತ್ತದೆ. ಪರಮಾತ್ಮನ ಪ್ರಾಪ್ತಿಗೆ ಇರುವುದು ಇದೊಂದೇ ಮಾರ್ಗ. ಇದಕ್ಕಿಂತ ಭಿನ್ನವಾದ ಮಾರ್ಗಗಳು ಎಂದೆಂದೂ ಇರಲಿಲ್ಲ ಮತ್ತು ಎಂದಿಂದಿಗೂ ಮುಂದೆ ಇರುವ ಸಂಭವವಿಲ್ಲ. ವೇದಗಳ ಸೂಚನೆಗಳೇನೆಂದರೆ "ನಾನ್ಯಃ ಪಂಥಾ ವಿದ್ಯತೇಽಯ ನಾಯ". ಅರ್ಥಾತ್ "ಮೋಕ್ಷಕ್ಕೆ ಬೇರೆ ಯಾವ ಮಾರ್ಗಗಳೇ ಇಲ್ಲ ಎಂಬುದಾಗಿದೆ." (ಜ್ಞಾನ ಮಾರ್ಗವನ್ನು ಬಿಟ್ಟು)

ಪರಮಾತ್ಮನ ಪ್ರಾಪ್ತಿಗೆ ಜ್ಞಾನವೇ ಏಕಮಾತ್ರವಾದ ಮಾರ್ಗವೆಂಬದು ಕನ್ನಡಿಯ ತರಹ ಸ್ಪಷ್ಟವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಆತ್ಮ ತತ್ವವು, ಮಂದ ಬುದ್ಧಿಯ ಜನರಿಗೆ ವಿಷಯಾಸಕ್ತ ಮನಸ್ಸಿನ ಕಾರಣದಿಂದಾಗಿ, ತಿಳಿಯಲು ಸಾಧ್ಯವಿಲ್ಲ. ಕೆಲವು ಅಜ್ಞಜೀವಿಗಳು ಈ ರೀತಿಯೂ ಇದ್ದಾರೆ. ಅವರು ಪ್ರಾತಃಕಾಲದಲ್ಲಿ ಎಚ್ಚರಗೊಳ್ಳುವುದರಿಂದ ಹಿಡಿದು ರಾತ್ರಿ ಮಲಗುವವರೆಗೆ ಕೇವಲ ವಿಷಯ ಚರ್ಚೆಗಳನ್ನೇ ಮಾಡುತ್ತಿರುತ್ತಾರೆ. ಅವರ ಮನಸ್ಸು ದಿನವೆಲ್ಲಾ ವಿಷಯ ಚಿಂತನೆಯಲ್ಲೇ ಮುಳುಗಿರುತ್ತದೆ. ಅವರ ಮನಸ್ಸಿನಲ್ಲಿ ಆತ್ಮ ತತ್ವವನ್ನು ಕೇಳುವುದಾಗಲಿ, ತಿಳಿಯುವುದಾಗಲಿ ಅದರ ಕಲ್ಪನೆಯೆ ಅವರಲ್ಲಿ ಬರುವುದಿಲ್ಲ. ಶ್ರುತಿ ಹೇಳುವುದೇನೆಂದರೆ,

ನ ನರೇಣಾವರೇಣ ಪ್ರೋಕ್ತ ಏಷ
ಸುವಿಜ್ಞೆಯೋ ಬಹುಧಾ ಚಿಂತ್ಯಮಾನಃ।
ಅನನ್ಯಪ್ರೋಕ್ತೆ ಗತಿರತ್ರ ನಾಸ್ತಿ
ಅಣೀಯಾನ್ ಹ್ಯತರ್ಕ್ಯಮಣುಪ್ರಮಾಣಾತ್॥

- ಕಠೋಪನಿಷತ್ತು ೧-೨-೮

ಅರ್ಥಾತ್ : "ಪ್ರಕೃತಿಯಲ್ಲಿ ಯಾವ ಸೂಕ್ಷ್ಮಾತಿ ಸೂಕ್ಷ್ಮ ತತ್ವವಿದೆಯೋ, ಆ ಪ್ರಕೃತಿ ತತ್ವಕ್ಕಿಂತಲೂ ಆತ್ಮ ತತ್ವವು ಅತಿ ಸೂಕ್ಷ್ಮವಾಗಿದೆ. ಇದು ಎಷ್ಟು ಗಹನವಾಗಿದೆಯೆಂದರೆ ಸಾಧಾರಣ ಬುದ್ಧಿಯನ್ನು ಹೊಂದಿರತಕ್ಕ ಮನುಷ್ಯನು ಇದನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ ಮತ್ತು ಯಥಾರ್ಥರೂಪದಿಂದ ಅರಿತುಕೊಂಡಿರುವ ಮಹಾಪುರುಷರು ಸಿಗುವುದು ಬಹಳ ಕಠಿಣ ಸಾಧ್ಯ. ಎಲ್ಲಿಯವರೆಗೆ ಅಭೇದ ದರ್ಶಿ, ಯಥಾರ್ಥ ಸ್ವರೂಪವನ್ನು ತಿಳಿದಿರತಕ್ಕಂತಹ ಆಚಾರ್ಯರು ಸಿಗುವುದಿಲ್ಲವೊ ಅಲ್ಲಿಯವರೆಗೆ ಮನುಷ್ಯನಿಗೆ ಇದರಲ್ಲಿ ಪ್ರವೇಶ ಮಾಡುವುದು ಅತ್ಯಂತ ಕಠಿಣವಾಗಿದೆ. ಒಂದು ಪಕ್ಷ ಸಾಧಾರಣವಾದ ಜ್ಞಾನವನ್ನು ಹೊಂದಿದವರಿಂದ ಇದನ್ನು ಅರಿಯಲು ಹೋದರೆ, ಅವರು ತಿಳಿಸಿದ ವಿವಿಧ ಪ್ರಾಕಾರದ ಚಿಂತನೆಯಿಂದ ಆತ್ಮಜ್ಞಾನ ರೂಪಿ ಫಲವು ಸಿಗುವುದಿಲ್ಲ. ಇನ್ನೊಬ್ಬರಿಂದ ಕೇಳಿ ತಿಳಿಯದೆ, ತಾನೇ ತಾನಾಗಿ ತರ್ಕ, ವಿತರ್ಕ, ಕುತರ್ಕ ಯುಕ್ತವಾದ ವಿಚಾರಗಳನ್ನು ಮಾಡುವುದರಿಂದ ಈ ಆತ್ಮ ತತ್ವವನ್ನು ತಿಳಿಯಲು ಸಾಧ್ಯವಿಲ್ಲ." ಆದುದರಿಂದ ಶ್ರವಣವು ಅವಶ್ಯಕವಾಗಿದೆ. ಆದರೆ ಕೇಳುವುದು ಯಾರಿಂದ? ಆತ್ಮ ತತ್ವವನ್ನು ಯಥಾರ್ಥ ರೂಪದಲ್ಲಿ ತಿಳಿದುಕೊಂಡಿರುವ ಮಹಾಪುರುಷರಿಂದ ಶ್ರವಣ ಮಾಡಬೇಕು. ಆಗ ಮಾತ್ರವೆ, ತರ್ಕದಿಂದ ಅತೀತವಾಗಿರುವ ಈ ಗಹನವಾದ ವಿಷಯದ ಅರಿವಾಗುತ್ತದೆ.

ಮನುಷ್ಯನ ಆಯುಷ್ಯ ಅಲ್ಪವಾಗಿದೆ. ಆದುದರಿಂದ ಆತ್ಮ ತತ್ವವನ್ನು ಅರಿಯಲು ಆಲಸ್ಯವನ್ನು ಹೊಂದಿರಬಾರದು. ಶರೀರವು ಕ್ಷಯಿಸುತ್ತಾ ಹೋಗುತ್ತದೆ, ಆದರೆ ಮನುಷ್ಯ ಜನ್ಮದ ಪ್ರಯೋಜನವಾಗುವುದಿಲ್ಲ. ಈ ವಿಷಯದಲ್ಲಿ ಭತೃಹರಿ ವೈರಾಗ್ಯ ಶತಕದಲ್ಲಿ ಹೇಳುವುದೇನೆಂದರೆ :

ಆಯುರ್ವರ್ಷ ಶತಂ ನೃಣಾಂ ಪರಮಿತಂ ರಾತ್ರೋತ್ತದರ್ಧಗತಂ
ತಸ್ಯಾರ್ಧಸ್ಯ ಪರಸ್ಯ ಚಾದ್ಧರ್ಮಪರಂ ಬಾಲತ್ವವೃದ್ಧಾತ್ವಯೋಃ।
ಶೇಷಂ ವ್ಯಾಧಿ ವಿಯೋಗ ದುಃಖ ಸಹಿತಂ ಸೇವಾರ್ಧಿಭಿರ್ನೀಯತೇ
ಜೀವೆ ವಾರಿತರಂಗ್ಚಂಚಲತ್ತದೆ ಸೌಖ್ಯಂ ಕೃತಃ ಪ್ರಾಣಿನಾಮ್॥

ಅರ್ಥಾತ್ : "ಮನುಷ್ಯನ ಪೂರ್ಣ ಆಯುಷ್ಯ ಒಂದು ನೂರು ವರ್ಷದ್ದಾಗಿದೆ. ಅದರಲ್ಲಿ ಅರ್ಧ ಆಯುಷ್ಯ ರಾತ್ರಿ ಮಲಗುವುದರಲ್ಲಿಯೇ ಕಳೆದು ಹೋಗುತ್ತದೆ. ಉಳಿದರ್ಧ ಐವತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ್ಷಗಳಲ್ಲಿ ಇಪ್ಪತ್ತೈದು ವರ್ಷಗಳು ಹುಡುಗಾಟ ಮತ್ತು ವೃದ್ಧಾಪ್ಯದಲ್ಲಿ ಕಳೆದು ಹೋಗುತ್ತದೆ. ಇನ್ನುಳಿದ ಇಪ್ಪತ್ತೈದು ವರ್ಷದಲ್ಲಿ ರೋಗ, ಪುತ್ರ, ಕಳತ್ರ ಮುಂತಾದವರ ವಿಯೋಗದಿಂದ ಉಂಟಾದ ದುಃಖಗಳಿಂದಲೂ ಮತ್ತು ಮಾಲೀಕರ, ಧಣಿಗಳ ಸೇವೆ ಇವೇ ಮುಂತಾದುಗಳಲ್ಲಿ ಕಳೆದು ಹೋಗುತ್ತದೆ. ಆದುದರಿಂದ, ನೀರಿನ ಅಲೆಯಂತೆ ಚಂಚಲವಾಗಿರುವ ಈ ಜೀವನದಲ್ಲಿ ಮನುಷ್ಯ ಪ್ರಾಣಿಗೆ ಸುಖ ಸಂತೋಷ ಹೇಗೆ ಸಿಗಬಲ್ಲದು?" ಆದ ಕಾರಣ ಶ್ರುತಿಗಳು ಮನುಷ್ಯನನ್ನು ಸಾವಧಾನಪಡಿಸುವುದೇನೆಂದರೆ,

ಉತ್ತಿಷ್ಠತ ಜಾಗೃತ ಪ್ರಾಪ್ಯ ವರಾಂತಿಬೋಧತ ।
ಕ್ಷುರಸ್ಯ ಧಾರಾನಿಶಿತಾ ದುರತ್ಯಯ ದುರ್ಗಪಥಸ್ತತ್ಕವಯೋವದ್ಧಂತಿ॥

- ಕಠೋಪನಿಷತ್ತು ೧-೩-೧೪

ಅನಾದಿ ಯಾದ ಅ ವಿದ್ಯೆಯಲ್ಲಿ ನುಲುಗಿರುವ ಜೀವರುಗಳೆ! ಏಳಿ, ಸಂಪೂರ್ಣ ಅನರ್ಥದ ಬೀಜ ರೂಪವಾದ ಅಜ್ಞಾನದ ನಿದ್ರೆಯಿಂದ ಎದ್ದೇಳಿ, ನಿಮಗೆ ಪರಮಾತ್ಮನ ದಯೆಯಿಂದ ಈ ದುರ್ಲಭವಾದ ಮನುಷ್ಯ ಶರೀರ ಲಭ್ಯವಾಗಿದೆ. ಇದನ್ನು ಪಡೆದು ಕೊಂಡ ಮೇಲೆ ಒಂದು ಕ್ಷಣವನ್ನೂ ಸಹ ಪ್ರಮಾದದಲ್ಲಿ ಹಾಳುಮಾಡಬೇಡಿ. ಶೀಘ್ರವೇ ಸಾವಧಾನವಾಗಿರಿ. ಶ್ರೇಷ್ಠರಾದ ಮಹಾಪುರುಷರಿಗೆ ಶರಣಾಗಿ ಅವರ ಉಪದೇಶದಿಂದ ತಮ್ಮ ಕಲ್ಯಾಣದ ಮಾರ್ಗವನ್ನು ಮತ್ತು ಪರಮಾತ್ಮನ ರಹಸ್ಯವನ್ನು ತಿಳಿದು ತಮ್ಮ ಜೀವನವನ್ನು ಕೃತಾರ್ಥವನ್ನಾಗಿ ಮಾಡಿಕೊಳ್ಳಿ. ಪರಮಾತ್ಮ ತತ್ವ ಬಹಳ ಗಹನವಾಗಿದೆ. ಅವನ ಸ್ವರೂಪದ ಜ್ಞಾನ ಮತ್ತು ಅವನ ಪ್ರಾಪ್ತಿಯ ಮಾರ್ಗವನ್ನು ಅರಿಯಲು ಶ್ರೇಷ್ಠ ಜನರ ಸಹಾಯ ಮತ್ತು ಪರಮಾತ್ಮನ ಕೃಪೆಯು ಅತ್ಯಂತ ಅವಶ್ಯಕವಾಗಿದೆ. ಇವುಗಳೆಲ್ಲದೆ ತಾನಾಗಿಯೆ ಜ್ಞಾನವಾಗುವುದು ಅಸಂಭವವಾಗಿದೆ.

ಕತ್ತಿಯ ಹರಿತವಾದ ಅಲುಗಿನ ಮೇಲೆ ನಡೆಯುವುದು ಅಸಾಧ್ಯವಾದ ಕೆಲಸ. ಇಂತಹ ಅಸಾಧ್ಯವಾದ ಕೆಲಸವನ್ನು ಸುಗಮವಾಗಿ ನೆರವೇರಿಸಲು ಸರಳವಾದ ಉಪಾಯವನ್ನು ಆ ಅನುಭವಿಗಳಾದ ಮಹಾಪುರುಷರೇ ತೋರಿಸಿಕೊಡಬಲ್ಲರು. ಏಕೆಂದರೆ ಅವರು ಸ್ವತಃ ಅಂತಹ ಕತ್ತಿಯ ಹರಿತವಾದ ಅಲುಗಿನ ಮೇಲೆ ನಡೆದು ಪಾರಾಗಿರುತ್ತಾರೆ.

ಪರಮಾತ್ಮ ತತ್ವವನ್ನು ತಿಳಿಯುವುದು ಬಹಳ ಗಹನವಾಗಿದೆ ಎಂಬ ಮಾತು ನಿಜ. ಆದರೆ ಅದನ್ನು ಅರಿಯದೇ ಮೋಕ್ಷವನ್ನು ಪಡೆಯಲಿಕ್ಕೆ ಬೇರೆ ಯಾವ ಉಪಾಯವೇ ಇಲ್ಲ. ಈ ಮಾತನ್ನು ಉಪನಿಷತ್ಕಾರರು ದೃಢಪಡಿಸುತ್ತಾರೆ.

ಯದಾ ಚರ್ಮವದಾಕಾಶಂ ವೇಷ್ಟವಿಶ್ಯಾಂತಿ ಮಾನವಾಃ ।
ತದಾ ದೇವಂವಿಜ್ಞಾಯ ದುಖಸ್ಯಾಂತೋ ಭವಿಷ್ಯತಿ ॥

- ಶ್ವೇತಾಶ್ವೇತರೋಪನಿಷತ್ತು ೬-೨೦

"ವ್ಯಾಪಕ, ಅಮೂರ್ತವಾದ ಆಕಾಶವನ್ನು ಪರಿಚ್ಛಿನ್ನ ಮತ್ತು ಮೂರ್ತ ಸ್ವರೂಪವಾದ ಚರ್ಮದ ರೀತಿ ಸುತ್ತಲಿಕ್ಕೆ ಹೇಗೆ ಅಸಂಭವವೋ, ಹಾಗೆಯೇ ಪರಮಾತ್ಮನನ್ನು ತಿಳಿಯದೇ ಯಾವ ಜೀವವೂ ಸಹ ಈ ದುಃಖ ಸಮುದ್ರದಿಂದ ಪಾರಾಗುವುದು ಅಸಂಭವ"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರು ಅವಿವೇಕಿಗಳಾಗಿದ್ದಾರೋ ಅವರು ಆ ಪರಮಾತ್ಮನ ಅನುಭವವನ್ನು ಪಡೆಯಲಾರರು, ಯಾಕೆಂದರೆ, ಅವರು ಅವನನ್ನು ಪಡೆಯಲು ಯಾವುದೇ ತರಹದ ಇಚ್ಛೆ, ಆಕಾಂಕ್ಷೆಗಳನ್ನು ತೋರಿಸುವುದಿಲ್ಲ. ಅವರ ಇಂದ್ರಿಯಗಳು ಬರ್ಹಿಮುಖವಾಗಿರುತ್ತವೆ. ಆದ ಕಾರಣ ಎಲ್ಲವನ್ನೂ ಹೊರಗಡೆಯೇ ಪಡೆಯಬಹುದು ಎಂಬ ಉದ್ದೇಶವನ್ನು ಹೊಂದಿರುತ್ತಾರೆ. ಆನಂದವನ್ನೂ ಸಹ ಹೊರಗಡೆಯೇ ಹುಡುಕುತ್ತಿರುತ್ತಾರೆ. ಆದರೆ ಒಳಗಡೆ ಒಂದು ಕ್ಷಣವಾದರೂ ಸಹ ನಮ್ಮ ಸಂಬಂಧ ಆನಂದದಿಂದ ದೂರವಾಗಿಲ್ಲ. ಇಂದ್ರಿಯಗಳ ಜೊತೆಗೆ ನಿಕಟವಾದ ಸಂಬಂಧವಿರುವುದರಿಂದ ಮತ್ತು ತಾದಾತ್ಮ್ಯತೆಯನ್ನು ಹೊಂದಿರುವುದರಿಂದ ಎಲ್ಲವನ್ನೂ ಹೊರಗಡೆಯೇ ಹುಡುಕುತ್ತಿರುತ್ತಾರೆ. ಅಷ್ಟೆ ಅಲ್ಲ, ಪರಮಾತ್ಮನನ್ನೂ ಸಹ ಹೊರಗಡೆಯೇ ಹುಡುಕುತ್ತಾರೆ.

ಕಣ್ಣುಗಳು ಹೊರಗಡೆ ನೋಡುತ್ತವೆ, ಕೈಗಳು ಹೊರಗಿನದನ್ನು ಮುಟ್ಟುತ್ತವೆ, ಕಿವಿಗಳು ಹೊರಗಿನ ಶಬ್ದವನ್ನು ಕೇಳುತ್ತವೆ. ಮೂಗು ಹೊರಗಿನ ಗಂಧವನ್ನು ಮೂಸುತ್ತದೆ, ಹೀಗಿರುವುದರಿಂದ ಸರ್ವ ಇಂದ್ರಿಯಗಳು ಹೊರಗಿನ ವ್ಯವಹಾರವನ್ನು ಮಾಡುತ್ತವೆ, ಇಂದ್ರಿಯಗಳು ಪ್ರಕೃತಿಯ ಹೊರಗಡೆ ಇದೆ, ಪರಮಾತ್ಮ ಒಳಗಡೆ ಇದ್ದಾನೆ. ಇಂದ್ರಿಯಗಳಿಲ್ಲದಿದ್ದರೆ ಪ್ರಕೃತಿಯೊಂದಿಗಿನ ಸಂಬಂಧ ಮುರಿದು ಬೀಳುತ್ತದೆ. ಇಂದ್ರಿಯಗಳಿಂದೊಡಗೂಡಿದರೆ ಪರಮಾತ್ಮನ ಸಂಬಂಧ ಮುರಿದು ಬೀಳುತ್ತದೆ. ಒಳಗಡೆ ಯಾವ ಇಂದ್ರಿಯಗಳ ಅವಶ್ಯಕತೆ ಇರುವುದಿಲ್ಲ ಎಂಬುದನ್ನು ಉಪನಿಷತ್ಕಾರರು ದೃಢಪಡಿಸಿದ್ದಾರೆ.-

"ನ ತತ್ರ ಚಕ್ಷುರ್‌ಗಚ್ಛತಿ ನ ವಾಗ್ಗ್‌ಚ್ಛತಿ ನೋ ಮನೊ ನ ವಿದ್ಮೊ ನ ವಿಜಾನಿಮೊ"

ಸಚ್ಚಿದಾನಂದ ಘನ ಸ್ವರೂಪ ಉಳ್ಳ ಪರಬ್ರಹ್ಮನನ್ನು ಇಂದ್ರಿಯಾದಿಗಳು ತಿಳಿಯಲು ಅಸಮರ್ಥವಾಗಿವೆ. ಕಾರಣ ಅಲೌಕಿಕ ದಿವ್ಯ ತತ್ವದಲ್ಲಿ ಅವುಗಳ ಪ್ರವೇಶ ಅಸಾಧ್ಯ. ಯಾವ ಇಂದ್ರಿಯಗಳಲ್ಲಿ ಚಲನವಲನ ಕ್ರಿಯೆ ಇದೆಯೋ ಅದು ಪರಬ್ರಹ್ಮನ ಪ್ರೇರಣೆಯಿಂದಲೆ ಉಂಟಾಗುತ್ತದೆ. ಹೀಗೆ ಇರುವುದರಿಂದ ಮನ ಇಂದ್ರಿಯಾದಿಗಳಿಗೆ ಪರಬ್ರಹ್ಮ ಗೋಚರನಾಗುವುದಿಲ್ಲ.

ಬ್ರಹ್ಮನು ಅವಿಷಯವಾಗಿರುವುದರಿಂದ, ಬ್ರಹ್ಮನು ಈ ರೀತಿ ಇದ್ದಾನೆ ಎಂಬುದನ್ನು ಅರಿಯಲು ಸಾಧ್ಯವಾಗುವುದಿಲ್ಲ. ಆದುದರಿಂದ ಬ್ರಹ್ಮ ತತ್ವದ ಉಪದೇಶದ ಯಾವುದೇ ರೀತಿ ರಿವಾಜನ್ನು ನಾವು ಯಾರಿಂದಲೂ ಅರಿತಿಲ್ಲ ಮತ್ತು ನಮ್ಮ ಸ್ವಂತ ಬುದ್ಧಿಯಿಂದ ವಿಚಾರವನ್ನು ಮಾಡಿ ತಿಳಿದುಕೊಂಡಿಲ್ಲ. ನಾವಾದರೋ, ಯಾವ ಮಹಾಪುರುಷರಿಂದ ಈ ಗೂಢ ತತ್ವದ ಉಪದೇಶವನ್ನು ಹೊಂದಿರುವೆವೋ, ಅವರಿಂದ ಕೇಳಿರುವುದೇನೆಂದರೆ ಈ ಪರಬ್ರಹ್ಮ ಪರಮೇಶ್ವರನು ಜಡ-ಚೇತನಗಳಿಂದ ಭಿನ್ನವಾಗಿದ್ದಾನೆಂಬುದನ್ನು ಮಾತ್ರ. ಇಂತಹ ಸ್ಥಿತಿಯಲ್ಲಿ ಅವನ ಸ್ವರೂಪ ತತ್ವವನ್ನು ವಾಣಿಯ ಮೂಲಕ ವ್ಯಕ್ತ ಪಡಿಸುವುದು ಕದಾಪಿ ಅಸಂಭವವಾಗಿದೆ.

ಪ್ರಪ್ರಥಮದಲ್ಲಿ ಮನುಷ್ಯನು ನಿಷ್ಕಾಮ ಭಾವದಿಂದ ಸ್ವಕರ್ಮದಲ್ಲಿ ಪ್ರವೃತ್ತನಾಗಿ ಚಿತ್ತ ಶುದ್ಧಿಯನ್ನು ಪಡೆಯಬೇಕು. ಚಿತ್ತ ಶುದ್ಧಿಯನ್ನು ಪಡೆಯುವ ಉಪಾಯವೆಂದರೆ, ಫಲಾಂಕ್ಷೆಯನ್ನು ಬಿಟ್ಟು ಕರ್ಮವನ್ನು ಮಾಡುವುದಾಗಿದೆ. ಎಲ್ಲಿಯವರೆಗೆ ಚಿತ್ತ ಶುದ್ಧಿಯಾಗುವುದಿಲ್ಲವೋ ಅಲ್ಲಿಯವರೆಗೆ ಜಿಜ್ಞಾಸೆ ಉಂಟಾಗುವುದಿಲ್ಲ. ಜಿಜ್ಞಾಸೆಯ ನಂತರ ವಿವೇಕದ ಉದಯವಾಗುತ್ತದೆ. ಸಂಸಾರದ ಎಲ್ಲಾ ವಸ್ತುಗಳು ಅನಿತ್ಯವಾಗಿವೆ ಮತ್ತು ಕೇವಲ ಆತ್ಮವು ಮಾತ್ರ ಅವುಗಳಿಂದ ಹೊರತಾಗಿದೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದರೆ ನಿತ್ಯವಾಗಿದೆ ಎಂಬ ಅನುಭವವು ಆಗುವುದರಿಂದ, ವಿವೇಕದಲ್ಲಿ ದೃಢತೆ ಉಂಟಾಗುತ್ತದೆ. ಆಗ, ದೃಢ ವಿವೇಕದಿಂದ ವೈರಾಗ್ಯ ಉತ್ಪನ್ನವಾಗುತ್ತದೆ. ಲೋಕ-ಪರಲೋಕದ ಯಾವುದೇ ರೀತಿಯ ಸುಖ ಮತ್ತು ಭೋಗದ ಬಗ್ಗೆ ಪೂರ್ಣ ವಿರಕ್ತಿಯನ್ನು ಹೊಂದದ ಹೊರತು ವೈರಾಗ್ಯವು ದೃಡವಾಗುವುದಿಲ್ಲ. ಅನಿತ್ಯ ವಸ್ತುಗಳ ವೈರಾಗ್ಯ ಮೋಕ್ಷದ ಪ್ರಥಮ ಸಾಧನವಾಗಿದೆ ಮತ್ತು ಇದರಿಂದ ಶಮ, ದಮ, ತಿತಿಕ್ಷಾ ಮತ್ತು ಕರ್ಮ ತ್ಯಾಗದ ಸಂಭವ ಉಂಟಾಗುತ್ತದೆ. ಇದರ ನಂತರ ಮೋಕ್ಷಕ್ಕೆ ಕಾರಣವಾದ ಜ್ಞಾನದ ಉದಯವಾಗುತ್ತದೆ. ವಿಶುದ್ಧವಾದ ಜ್ಞಾನದ ಹೊರತು ಮೋಕ್ಷವನ್ನು ಯಾವುದೇ ರೀತಿಯಿಂದ ಪಡೆಯಲಾಗುವುದಿಲ್ಲ "ಜ್ಞಾನಾತ್ ಕೈವಲ್ಯಂ ಆಪ್ನೋತಿ ಇತಿಚ ಪುರಾಣ ಸ್ಮೃತೇಃ". ಶ್ರುತಿ, ಪುರಾಣ ಮತ್ತು ಸ್ಮೃತಿಗಳಲ್ಲಿಯೂ ಸಹ ಇದನ್ನೇ ಹೇಳಿದ್ದಾರೆ, ಜ್ಞಾನದಿಂದ ಮಾತ್ರವೇ ಕೈವಲ್ಯದ ಪ್ರಾಪ್ತಿ ಉಂಟಾಗುತ್ತದೆ.

ಯಾವ ಸಾಧನೆಗಳ ಫಲ ಅನಿತ್ಯವಾಗಿದೆಯೋ, ಅವು ಮೋಕ್ಷಕ್ಕೆ ಕಾರಣಗಳಾಗುವುದಿಲ್ಲ. ಜೀವಾತ್ಮ-ಪರಮಾತ್ಮಗಳ ಅಭಿನ್ನತೆಯ ಜ್ಞಾನಕ್ಕೆ ಮೋಕ್ಷವೆಂದು ಹೆಸರು. ಜೀವಾತ್ಮ-ಪರಮಾತ್ಮಗಳಲ್ಲಿ ಯಾವ ಭೇದವು ಕಂಡು ಬರುತ್ತದೆಯೋ ಅದಕ್ಕೆ ಪ್ರಕೃತಿ ಕಾರಣವಾಗಿದೆ. ಈ ಭ್ರಾಂತಿಯ ನಿವೃತ್ತಿ ಜ್ಞಾನದ ಮೂಲಕವೇ ಆಗುತ್ತದೆ. ದ್ವೈತವೆಂದು ಏನು ಭಾಸವಾಗುತ್ತಿದೆಯೋ ಅದಕ್ಕೆ ಕಾರಣ, ಮಾಯಾ. *"ದ್ವಿತಿಯಾ ದ್ವಯಂ ಭಯಂ ಭವತಿ"* ದ್ವೈತ ಭಾವದಲ್ಲಿ ಭಯವೇ ಭಯ ಅಡಗಿದೆ.

ಮೊದಲಿಗೆ, ಪ್ರಥಮ ಶರೀರಿಯಾದ ಪ್ರಜಾಪತಿಯು ಭಯ ಭೀತನಾಗಿದ್ದ. ಆದುದರಿಂದಲೇ ಈಗಲೂ ಸಹ ಒಬ್ಬಂಟಿಗನಾದ ಮನುಷ್ಯ ಹೆದರುತ್ತಾನೆ. ನಂತರ ಪ್ರಜಾಪತಿಯು ವಿಚಾರ ಮಾಡಿದನೇನೆಂದರೆ, "ನನ್ನನ್ನು ಬಿಟ್ಟು ಬೇರೆ ಯಾರೂ ಇಲ್ಲದಿದ್ದ ಮೇಲೆ ನಾನು ಯಾರಿಗೆ ಹೆದರುತ್ತಿದ್ದೇನೆ?". ಇಷ್ಟು ವಿಚಾರ ಮಾಡಿದ ಕೂಡಲೇ ಅವನ ಭಯವು ಹೊರಟು ಹೋಯಿತು. ಯಾಕೆಂದರೆ ಭಯಕ್ಕೆ ಯಾವ ಕಾರಣವೂ ಕಾಣುತ್ತಿರಲಿಲ್ಲ. ಭಯವು ಯಾವಾಗಲೂ ಬೇರೆಯವರಿಂದ ಉಂಟಾಗುತ್ತದೆ. ಅಭೇದ ದರ್ಶಿಗೆ ಎಂದಿಗೂ ಭಯವಾಗುವುದಿಲ್ಲ.

ಆತ್ಮಾ ಹ್ಯೇಷಾಂ ಸ ಭವತ್ಯಥ ಯ್ಯೋನ್ಯಾಂ
ದೇವತಾಮುಪಾಸ್ತ್ವೇ ನ್ಯೋ ಸಾವನ್ಯೋ್ ಹಮಸ್ಮಿತಿ ನ ಸ
ವೇದ ಯಥಾ ಪಶುರೇವಂಸ ದೇವಾನಾಮ್।

- ಬೃಹದಾರಣ್ಯಕೋಪನಿಷತ್ತು ೧-೪-೧೦

ಅರ್ಥಾತ್ : "ಈ ಆರಾಧ್ಯ ದೇವ ಭಿನ್ನವಾಗಿದೆ ಮತ್ತು ನಾನು ಅದಕ್ಕಿಂತಲೂ ಭಿನ್ನನಾಗಿದ್ದೇನೆ." ಎಂದು ಯಾರು ತನ್ನಿಂದ ಭಿನ್ನವಾದ ದೇವರ ಉಪಾಸನೆಯನ್ನು ಮಾಡುತ್ತಾನೋ ಆ ಅಜ್ಞಾನಿಯು ಪರಮಾರ್ಥ ತತ್ವವನ್ನು ತಿಳಿಯುವುದಿಲ್ಲ. ಹೇಗೆ ಜಗತ್ತಿನಲ್ಲಿ ಭಾರವನ್ನು ಹೊರುವ ಪಶುಗಳಿರುತ್ತಾವೆಯೋ ಹಾಗೆಯೆ ಈ ಭೇದವಾದಿಯು ದೇವತೆಗಳ ಪಶು ಆಗಿರುತ್ತಾನೆ.

ಇದರ ಜೊತೆಯಲ್ಲಿ ಈ ಮಾತನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ, ಬ್ರಹ್ಮನ ಸಾಕ್ಷಾತ್ಕಾರವು ಅದ್ವೈತ ಸಿದ್ಧಾಂತಕ್ಕನುಸಾರವಾಗಿಯೆ ಆಗಬಲ್ಲದು. ಒಂದು ಪಕ್ಷ, ಆತ್ಮ ಮತ್ತು ಬ್ರಹ್ಮನಲ್ಲಿ ಸ್ವಲ್ಪವಾದರೂ ಭೇದವನ್ನು ತಿಳಿದರೆ ನಿಶ್ಚಿತವಾಗಿಯೂ ಭಯ ಉತ್ಪತ್ತಿಯಾಗುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಯದುದರಮಂತರಂ ಕುರುತ್ಸೇ ತಸ್ಯಥಭಯಂ ಭವತಿ"

ಶ್ರುತಿಯು ಘಂಟಾಘೋಷವಾಗಿ ಹೇಳುತ್ತಿರುವುದೇನೆಂದರೆ, ಆತ್ಮನನ್ನು ಪರಮಾತ್ಮನಿಂದ ಭಿನ್ನನೆಂದು ತಿಳಿದರೆ ಮತ್ತು ಅದನ್ನು ಪ್ರತ್ಯೇಕಿಸುವ ಪ್ರಯಾಸವನ್ನು ಮಾಡಿದರೂ ಸಹ ಅದು ಆಕಾಶದಲ್ಲಿ ಪುಷ್ಪವನ್ನು ಅರಳಿಸುವ ದುಸ್ಸಾಹಸವನ್ನು ಮಾಡಿದಂತಾಗುವುದು.

ಪರಮೇಶ್ವರನ ಸಾಕ್ಷಾತ್ಕಾರವಾಗದ ಹೊರತು ಸಂಸಾರದ ಭಯ ನಷ್ಟವಾಗುವುದಿಲ್ಲ, ಆದ ಕಾರಣ ಶ್ರುತಿಯ ವಿಚಾರವನ್ನು ಮಾಡಬೇಕು. ಅವಿದ್ಯ ನಷ್ಟವಾದ ಮೇಲೆ ಸ್ವಯಂ ಪ್ರಕಾಶಿತನಾದ ಅದ್ವೈತ ಬ್ರಹ್ಮನು ಬ್ರಹ್ಮಾಕಾರ ವೃತ್ತಿಯಲ್ಲಿ ಪ್ರಕಾಶಿತನಾಗುತ್ತಾನೆ. ಆ ಹೊತ್ತಿಗೆ ವೃತ್ತಿಯೂ ಸಹ ಆವರಣವನ್ನು ನಷ್ಟಪಡಿಸಿ, ಅದರ ಜೊತೆಯಲ್ಲಿಯೇ ವೃತ್ತಿಯೂ ನಾಶ ಹೊಂದುತ್ತದೆ. ಯಾವಾಗ ಆವರಣ ದೂರವಾಗುತ್ತದೊ ಆಗ ನಿರ್ಭಯನಾಗಿ ಸರ್ವತ್ರ ಪರಮಾತ್ಮನನ್ನೆ ಕಾಣುತ್ತಾನೆ. ವಾಸ್ತವದಲ್ಲಿ ಎಲ್ಲ ವಿಶ್ವವೂ ಪರಮೇಶ್ವರನ ಸ್ವರೂಪವಾಗಿದೆ. ಆದರೆ ಈ ರಹಸ್ಯವನ್ನು ಪಾಮರರಾದ ಜನರು ತಿಳಿಯುವುದಿಲ್ಲ. ಸಂಸಾರದ ವಿವಿಧ ರೂಪಗಳನ್ನು ನೋಡಿ, ನೋಡಿ ಸುಖ-ದುಃಖಗಳನ್ನು ಅನುಭವಿಸುತ್ತಾರೆ.

ಉದಾಹರಣೆಗೆ ಹೇಳುವುದಾದರೆ , ಒಬ್ಬ ವೇಷಧಾರಿ ಇದ್ದ, ಅವನು ಒಬ್ಬ ದೊಡ್ಡ ಪೋಲೀಸ್ ಆಫಿಸರ್‌ನಂತೆ ವೇಷವನ್ನು ಧರಿಸಿಕೊಂಡು ಬಂದ. ಒಬ್ಬ ಅಂಗಡಿಯವನ ಸಾಮಾನುಗಳು ರಸ್ತೆಯ ಮೇಲೆ ಬಿದ್ದು ರಹದಾರಿಗೆ ಅಡ್ಡಿಯನ್ನುಂಟು ಮಾಡುತ್ತಿತ್ತು. ಈ ವೇಷಧಾರಿಯು ಅಲ್ಲಿಗೆ ಹೋಗಿ ಅಂಗಡಿಯವನಿಗೆ ಹೆದರಿಸಲು ಪ್ರಾರಂಭಿಸಿದ. "ನೀನು ರಹದಾರಿಗೆ ಅಡ್ಡಿಯನ್ನುಂಟು ಮಾಡುತ್ತಿದ್ದಿಯೆ ಆದ್ದರಿಂದ ನಿನ್ನ ಮೇಲೆ ಮೊಕದ್ದಮೆ ಹೂಡುತ್ತೇನೆ ಎಂದು ಗದರಿಸತೊಡಗಿದ". ಆಗ ಅಂಗಡಿಯವ ಹೆದರಿ ನಡಗಲು ಪ್ರಾರಂಭಿಸಿದ. ಆಗ ವೇಷಧಾರಿಯು ನಿನಗೆ ಮೊಕದ್ದಮೆ ಬೇಡವಾದರೆ ನನಗೆ ಐದುನೂರು ರೂಪಾಯಿಗಳನ್ನು ಕೊಡು ಎಂದು ಹೇಳಿದನು. ಅದಕ್ಕೆ ಅಂಗಡಿಯವನು ಹೆದರಿಕೊಂಡು ನಾನು ಇನ್ನೂರು ರೂಪಾಯಿಗಳನ್ನು ಮಾತ್ರ ಕೊಡುತ್ತೇನೆ ದಯವಿಟ್ಟು ನನ್ನನ್ನು ಬಿಟ್ಟು ಬಿಡಿ ಎಂದು ಅಂಗಲಾಚಿದನು. ಆಗ ವೇಷದಿಂದ ಕೆಲಸ ಸಫಲವಾಯಿತು. ವೇಷಧಾರಿಯು ತನ್ನ ಯಥಾರ್ಥ ಪರಿಚಯವನ್ನು ಮಾಡಿಕೊಟ್ಟು ಆ ಅಂಗಡಿಯನಿಂದ ಇನ್ನೂರು ರೂಪಾಯಿಯನ್ನು ಕೇಳಿದ. ಅಂಗಡಿಯವನಿಗೆ, ವೇಷಧಾರಿಯ ಯಥಾರ್ಥ ಪರಿಚಯವು ದೊರೆತ ಮೇಲೆ, ಬಹಳ ಧೈರ್ಯ ಬಂದಿತು. ಅವನ ಸಂಪೂರ್ಣ ಬುದ್ಧಿಯು ಒಂದೇ ಸಾರಿಗೆ ಕ್ಷಣದಲ್ಲಿಯೇ ನಗುವಿನಲ್ಲಿ ರೂಪಾಂತರ ಹೊಂದಿತು. ವೇಷಧಾರಿಯು ಇನ್ನೂ ಸಹ ಪೋಲೀಸ್ ಆಫೀಸರ್‌ನ ವೇಷದಲ್ಲಿಯೇ ಇದ್ದಾನೆ, ಆ ರೂಪ ಅಂಗಡಿಯವನಿಗೆ ಕಾಣುತ್ತಿದೆ. ಆದರೆ ರಹಸ್ಯ ತಿಳಿದ ಮೇಲೆ ಆವನ ಭಾವನೆಯಲ್ಲಿ ಅಂತರವನ್ನು ತಂದಿತು.

ಇದೇ ರೀತಿ ಈ ಸಂಸಾರವೂ ಸಹ ಕ್ಷಣ-ಪ್ರತಿಕ್ಷಣ ಬದಲಿಸುತ್ತಿರುತ್ತದೆ. ಏಕೆಂದರೆ ಪರಮೇಶ್ವರನು ಇದನ್ನು ಯೋಗ ಮಾಯೆಯಿಂದ ರಚಿಸಿದ್ದಾನೆ. ಆದುದರಿಂದ ಜನರು ಸಂಸಾರದಲ್ಲಿ ವ್ಯಾಕುಲರಾಗುತ್ತಾರೆ. ಮಾಯೆಗೆ ಹೆದರುತ್ತಾರೆ. ಅದರ ರಹಸ್ಯವನ್ನು ತಿಳಿಯದೇ ಇರುವುದೇ ಅದಕ್ಕೆ ಕಾರಣವಾಗಿರುತ್ತದೆ. ಒಂದು ಪಕ್ಷ ನಾವು ಪ್ರತ್ಯಕ್ಷವಾಗಿ ಭಗವಂತನನ್ನು ಪರಿಚಯಿಸಿಕೊಂಡರೆ, (ಭಗವಂತನ ರಹಸ್ಯವನ್ನು ತಿಳಿದು ಕೊಂಡರೆ) ಯಾವ ಭಯ ಅಥವಾ ವ್ಯಾಕುಲತೆ ಇರುವುದಿಲ್ಲ. ಹೇಗೆ ವೇಷಾಧಾರಿಯ ಯಥಾರ್ಥ ಪರಿಚಯವಾದ ಕೂಡಲೇ ಅಂಗಡಿಯವನು ನಿರ್ಭಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾದನೋ ಹಾಗೆಯೇ ಸಂಸಾರದಲ್ಲಿ ಯಾವುದು ಸ್ಥಾವರ-ಜಂಗಮವಾಗಿದೆಯೋ ಅದೆಲ್ಲವೂ ಪರಮಾತ್ಮನಿಂದ ವ್ಯಾಪಿಸಲ್ಪಟ್ಟಿದೆ ಎಂದು ಅರಿತರೆ ಜೀವಾತ್ಮನು ನಿರ್ಭಯನಾಗುತ್ತಾನೆ.

"ಶಿವಾತ್ಮಕಮಿದಂ ಸರ್ವಂ ಶಿವಾ ದನ್ಯನ್ನ ವಿದ್ಯತೆ"

. ಇಂತಹ ಯಥಾರ್ಥ ಜ್ಞಾನವನ್ನು ಹೊಂದಿದ ಮೇಲೆ ಯಥಾವತ್ತಾಗಿ ಸಂಸಾರದಲ್ಲಿದ್ದರೂ ಸಹ, ಈಗ ಅದರ ರಹಸ್ಯ ತಿಳಿದಿರುವುದರಿಂದ ಅವನು ಶೋಕ ರಹಿತನಾಗುತ್ತಾನೆ. ಈ ಪರಮ ರಹಸ್ಯಮಯವಾದ ಜ್ಞಾನದ ಪರಂಪರೆ ಕಲ್ಪ ಕಲ್ಪಾಂತರದಿಂದ ಬಂದಿದೆ. ಆದರೆ ಯಾರ ಅಂತಃಕರಣ ವಿಷಯ-ವಾಸನೆಗಳಿಂದ ತುಂಬಿ ಅಶಾಂತಿಯಿಂದೊಡಗೂಡಿದ ಮನವನ್ನು ಹೊಂದಿದ್ದಾರರೆಯೋ ಅವರಿಗೆ ಈ ರಹಸ್ಯದ ಉಪದೇಶವನ್ನು ಮಾಡಬಾರದು. ಅಂದರೆ, ಯಾರು ಸರ್ವ ವಿಷಯ-ವಾಸನೆಗಳಿಂದ ರಹಿತನಾಗಿ ಸರ್ವಥಾ ಶಾಂತ ಚಿತ್ತನಾಗಿರುತ್ತಾನೆಯೋ ಮತ್ತು ಶಾಸ್ತ್ರಗಳಲ್ಲಿ ಹೇಳಿದಂತೆ, ಯಾರು ಸದ್ ಸದ್ವಿವೇಕ, ವೈರಾಗ್ಯ, ಶಮ-ದಮಾದಿ ಷಟ್ ಸಂಪತ್ತಿ ಯುಕ್ತ ಮತ್ತು ಮುಮುಕ್ಷುವಾಗಿರುತ್ತಾನೋ, ಅಂತಹವನು ಬ್ರಹ್ಮ ಜಿಜ್ಞಾಸೆಯ ಯೋಗ್ಯತೆಯನ್ನು ಪಡೆಯುತ್ತಾನೆ.

"ಕಶ್ಚಿದ್ಧೀರಃ ಪ್ರತ್ಯಗಾತ್ಮಾನ್‌ಮೈಕ್ಷ
ದಾವೃತ್‌ಚಕ್ಷುರಮೃತತ್ವಮಿಚ್ಛನ್"

- ಕಠೋಪನಿಷತ್ತು ೨-೧-೧

"ಯಾವನಾದರೊಬ್ಬ ಭಾಗ್ಯಶಾಲಿ ಬುದ್ಧಿಮಾನ್ ಮನುಷ್ಯನು ಮಾತ್ರ ಅಮರ ಪದವಿಯನ್ನು ಪಡೆಯುವ ಇಚ್ಛೆಯನ್ನು ಇಟ್ಟುಕೊಂಡು ಕಣ್ಣು ಮತ್ತು ಇಂದ್ರಿಯಗಳ ಹೊರಗಿನ ವಿಷಯಗಳನ್ನು ತ್ಯಜಿಸಿ, ಅವುಗಳನ್ನು ಅಂತರಂಗದ ಕಡೆಗೆ ಹೊರಳಿಸಿ ಅಂತರಾತ್ಮವನ್ನು ನೋಡುತ್ತಾನೆ". ಅನ್ಯರು ಎಲ್ಲಾ ವಿಷಯಗಳ ಸೇವನೆಯನ್ನು ಮಾಡುತ್ತಾ ಒಂದು ದಿನ ಸತ್ತು ಹೋಗುತ್ತಾರೆ.

ಕುರಂಗ ಮಾತಂಗ ಪತಂಗ ಬೃಂಗಾ ಮಿನಾ
ಹತಾಃ ಪಂಚಭಾರೇವ ಪಂಚ।
ಏಕಃ ಪ್ರಮಾದೀ ಸ ಕಥಂ ಹನ್ಯತೆ
ಯಃ ಸೇವತೇ ಪಂಚಾಭಿರೇವ ಪಂಚ॥

ಅರ್ಥಾತ್ : "ಜಿಂಕೆ, ಆನೆ, ಪತಂಗ, ಭೃಂಗ ಮತ್ತು ಮೀನು - ಈ ಐದು ಶಬ್ದಾದಿ ಪಂಚ ವಿಷಯಗಳಲ್ಲಿ ಕೇವಲ ಒಂದೊಂದಕ್ಕೆ ಆಸೆ ಪಟ್ಟು ಹತವಾಗುತ್ತವೆ, ಆದರೆ ಮನುಷ್ಯನು ಒಬ್ಬನೇ ಐದೂ ಇಂದ್ರಿಯಗಳಿಂದ ಐದೂ ವಿಷಯಗಳ ಸೇವನೆಯನ್ನು ಮಾಡುತ್ತಾನೆ. ಅಂದ ಮೇಲೆ ಅವನು ಅಧಃಪತನ ಹೊಂದದೆ ಇರಬಲ್ಲನೆ?"

ವೈರಾಗ್ಯ ಪೂರ್ವಕವಾಗಿ ವಿಷಯಗಳಿಂದ ಮನಸ್ಸು-ಇಂದ್ರಿಯಗಳನ್ನು ದೂರ ಸರಿಸಿ ಪರಮಾತ್ಮನಲ್ಲಿ ತೊಡಗಿಸುವವರು ಬಹಳ ಕಡಿಮೆ ಹೇಗೆಂದರೆ: - ಒಬ್ಬ ಚಕ್ರವರ್ತಿ ರಾಜನಿದ್ದನು. ಒಂದು ಸಾರಿ ಅವನು ಈ ತರಹ ಘೋಷಣೆಯನ್ನು ಮಾಡಿದನು. "ನಾನು ಈ ಉದ್ಯಾನವನದಲ್ಲಿ ವಾಸಿಸುತ್ತೇನೆ. ನಾಳೆಯಿಂದ ಈ ಉದ್ಯಾನವನ ಎಲ್ಲರಿಗೋಸ್ಕರ ತೆರೆಯಲ್ಪಟ್ಟಿರುತ್ತದೆ. ನನ್ನ ಹತ್ತಿರ ಯಾವ ಮನುಷ್ಯಾದರೂ ಬಂದು ನನ್ನನ್ನು ಮುಟ್ಟಬಹುದು. ಯಾರಿಗೆ ಯಾವ ವಸ್ತುವನ್ನು ಬೇಕಾದರೂ ತೆಗೆದು ಕೊಂಡು ಹೋಗಬಹುದು. ಯಾರಿಗೂ ಯಾವ ಬಗೆಯ ಅಡಚಣೆಯಿರುವುದಿಲ್ಲ. ಪ್ರತಿಯೊಬ್ಬ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನುಷ್ಯನಿಗೂ - ಉದ್ಯಾನವನದಲ್ಲಿ ತಿರುಗಾಡಲು ಕೇವಲ ಎರಡು ಗಂಟೆಗಳ ಅವಧಿ ಮಾತ್ರವಿರುತ್ತದೆ." ಈ ಘೋಷಣೆಯನ್ನು ರಾಜ್ಯದಲ್ಲಿ ಸರ್ವತ್ರ ಪ್ರಚಾರ ಮಾಡಿದ್ದಾಯಿತು. ರಾಜನು ತನ್ನ ಸುತ್ತಮುತ್ತಲು ಸಂಸಾರಿಕ ಸಾಮಗ್ರಿಗಳ ರಾಶಿಯನ್ನೇ ಹಾಕಿ ಕೊಂಡಿದ್ದನು. ಮಾರನೆಯ ದಿನ ಬೆಳಿಗ್ಗೆ ಜನಗಳು ಪ್ರಾತಃಕಾಲದಲ್ಲಿಯೇ ಪ್ರವೇಶಿಸಲು ಆರಂಭಿಸಿದರು. ನೋಡು ನೋಡುತ್ತಿದಂತೆಯೇ ಜನ ಜಂಗುಳಿ ಹೆಚ್ಚಾಗುತ್ತಾ ಹೋಯಿತು. ಅಲ್ಲಿಟ್ಟು ಸಾಮಾನುಗಳ ಮೇಲೆ ಮುಗಿದು ಬಿದ್ದರು. ಅಲ್ಲಿಟ್ಟಿದ್ದ ಬಂಗಾರ, ಬೆಳ್ಳಿ, ರತ್ನ, ವಜ್ರ, ವೈಡೂರ್ಯಗಳ ಗಂಟನ್ನು ಕಟ್ಟಲು ಶುರುಮಾಡಿದರು. ಇನ್ನೂ ಕೆಲವರು ಪುಷ್ಪಚ್ಛಾದಿತ ಶಯ್ಯೆಗಳ ಮೇಲೆ ಮಲಗಿ ಸ್ತ್ರೀಯರನ್ನು ರಮಿಸಹತ್ತಿದರು. ಕೆಲವರ ನಾನಾ ಪ್ರಕಾರದ ಆಟ, ತಮಾಷೆಗಳಲ್ಲಿ ತಲ್ಲೀನರಾದರು. ಇನ್ನೂ ಕೆಲವರು ಎಂದೂ ನೋಡದೆ ಇದ್ದ ಕೆಲವು ಅದ್ಭುತ ವಸ್ತುಗಳನ್ನು ನೋಡುವಲ್ಲಿ ಮೈ ಮರೆತರು. ಈ ರೀತಿಯಾಗಿ ವೈಭವ ಆರಾಮದ ವಸ್ತುಗಳನ್ನು ಭೋಗಿಸುತ್ತಾ ತಲ್ಲೀನರಾಗಿದ್ದು ರಾಜನನ್ನು ಮುಟ್ಟುವುದನ್ನೇ ಮರೆತು ಬಿಟ್ಟರು. ಆದರೆ ಆದರಲ್ಲಿ ಒಬ್ಬ ವ್ಯಕ್ತಿ, ಯಾವನ ಇಂದ್ರಿಯಗಳು ವಶದಲ್ಲಿದ್ದವೋ ಅಂತಹ ಬುದ್ಧಿವಂತನು ಬೋಗದ ಮತ್ತು ವೈಭವದ, ಆರಾಮದ ವಸ್ತುಗಳನ್ನು ತ್ಯಜಿಸಿ ಮಹರಾಜನ ಹತ್ತಿರ ಬಂದು ಅವನನ್ನು ಮುಟ್ಟಿದ. ಆಗ ರಾಜನು "ಕೇಳು ನಿನಗೇನು ಬೇಕು ಎಂದನು?" "ನೀವೇ ನನಗೆ ಬೇಕು" ಎಂದು ಆ ವ್ಯಕ್ತಿ ಉತ್ತರಿಸಿದ. "ತಾವು ನನ್ನ ಜೊತೆಯಲ್ಲಿ ಬಂದರೆ ಈ ಸಂಪತ್ತೆಲ್ಲವೂ ನನ್ನ ಜೊತೆಯಲ್ಲಿ ಬರುವವು." ಆಗ ರಾಜನಿಗೆ ಆಶ್ಚರ್ಯವಾಯಿತು. ಇಷ್ಟು ಜನರಲ್ಲಿ ನಾನು ಬೇಕು ಎಂದು ಕೇಳುವ ಒಬ್ಬನೇ ಇದ್ದಾನಲ್ಲ ಮತ್ತು ಉಳಿದೆಲ್ಲ ಜನರೂ ವಿಷಯಾಸಕ್ತಿಯ ಕಾರಣದಿಂದ ಭೋಗಲೋಲುಪರಾಗಿದ್ದಾರೆ.

ಇದರಲ್ಲಿ ತಿಳಿದುಕೊಳ್ಳ ಬೇಕಾದುದೇನೆಂದರೆ, ಚಕ್ರವರ್ತಿರಾಜನು ಇಲ್ಲಿ ಪರಮೇಶ್ವರನಾಗಿದ್ದಾನೆ ಮತ್ತು ಉದ್ಯಾನವನವೇ ಈ ಸಂಸಾರವಾಗಿದೆ. ಶ್ರುತಿ, ಸ್ಮೃತಿ ಶಾಸ್ತ್ರಗಳೆಲ್ಲವೂ ರಾಜನ ಘೋಷಣೆಯಿದ್ದಂತೆ. ಉದ್ಯಾನವನದಲ್ಲಿ ನಿಗದಿಪಡಿಸಿದ ಎರಡು ಗಂಟೆಯ ಕಾಲವೆಂದರೆ, ಅದು ಮನುಷ್ಯನ ಆಯಸ್ಸು. ಹೇಗೆ ರಾಜನನ್ನು ಮುಟ್ಟುವುದು ಅಥವಾ ದರ್ಶನ ಮಾಡುವುದಕ್ಕೆ ಯಾರಿಗೂ ತೊಂದರೆಯಿರಲಿಲ್ಲವೋ ಹಾಗೆಯೆ ಮನುಷ್ಯ ಮಾತ್ರರಿಗೆ ಪರಮಾತ್ಮ - ಪ್ರಾಪ್ತಿಗೆ ಸ್ವತಂತ್ರವಿದೆ ಎಂಬುದೇ ಶಾಸ್ತ್ರಗಳ ಘೋಷಣೆ. ಆದರೆ ಇಂದ್ರಿಯಗಳಿಗೆ ವಶೀಭೂತನಾಗಿ ಮನುಷ್ಯನು ನಾಶಿವಂತ, ಕ್ಷಣ ಭಂಗುರವಾದ ಆಶ್ಚರ್ಯಮಯವಾದ ಪದಾರ್ಥಗಳನ್ನು ನೋಡಿ ಅವುಗಳನ್ನು ಭೋಗಿಸುತ್ತಾ ತನ್ನ ಅಮೂಲ್ಯವಾದ ಸಮಯವನ್ನು ಹಾಳು ಮಾಡಿಕೊಳ್ಳುತ್ತಾನೆ. ಒಬ್ಬ ವ್ಯಕ್ತಿ ಮಾತ್ರ ರಾಜನ ಹತ್ತಿರ ಹೋಗಬಲ್ಲವನಾದ ಅವನು ಮನ-ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ವಿರಕ್ತನಾಗಿ ಅವನೇ ಪರಮ ಸಾಕ್ಷಾತ್ಕಾರ ರೂಪ ಸಿದ್ಧಿಯನ್ನು ಪಡೆಯಲು ಯೋಗ್ಯನಾದ ಶ್ರೇಷ್ಠ ಕೋಟಿಯ ಸಾಧಕನಾಗಿದ್ದಾನೆ.

ಈ ಸಂಸಾರದ ಯಾವುದೇ ವಸ್ತು ತೃಣಮಾತ್ರವೂ ಸಹ ಯಾರ ಜೊತೆಯಲ್ಲೂ ಹೋಗಿಲ್ಲ, ಹೋಗಲಿಕ್ಕೆ ಸಾಧ್ಯವಿಲ್ಲ, ಮುಂದೆ ಎಂದಿಗೂ ಹೋಗಲಾರದು. ಈ ಸಂಸಾರವನ್ನು, ಶ್ವೇತಾ ಶ್ವೇತ ರೋಪ ನಿಷತ್ತಿನಲ್ಲಿ ನದಿಯ ರೂಪದಲ್ಲಿ ವರ್ಣನೆ ಮಾಡಿದ್ದಾರೆ. ಈ ನದಿಯ ಪ್ರವಾಹ ಬಹಳ ಭಯಂಕರವಾಗಿದೆ. ಈ ಸಂಸಾರದ ರೀತಿಯೂ ಸಹ ಬಹಳ ಭಯಂಕರ ಮತ್ತು ಕಪಟದಿಂದ ತುಂಬಿದೆ. ಇದರಿಂದ ಹೊರಬರಲು ಸಾಧ್ಯವಿಲ್ಲ. ಆದ್ದರಿಂದಲೇ ಈ ಸಂಸಾರ ರೂಪ ನದಿಯನ್ನು ವಕ್ರವಾಗಿದೆ ಎಂದು ಹೇಳಿದ್ದಾರೆ ಮತ್ತು ಮನವನ್ನೆ ಸಂಸಾರ ರೂಪ ನದಿಯ ಮೂಲವೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರೆದಿದ್ದಾರೆ. ಮನದಿಂದಲೇ ಕಲ್ಪನೆಯಾಗಿದೆ. ಮನಸ್ಸಿನ ನಾಶವಾದ ಮೇಲೆ ಸಂಸಾರದ ಅಸ್ತಿತ್ವ ಈಗಿರುವ ರೂಪದಲ್ಲಿ ಇರುವುದಿಲ್ಲ. ಎಲ್ಲಿಯವರೆಗೆ ಮನಸ್ಸಿದೆಯೋ ಅಲ್ಲಿಯವರೆಗೆ ಈ ಸಂಸಾರದ ಚಕ್ರವಿದೆ. ಶಬ್ದ, ಸ್ಪರ್ಶ, ರೂಪ,ರಸ, ಗಂಧ ಈ ಐದು ವಿಷಯಗಳೇ ಈ ಸಂಸಾರ ರೂಪ ನದಿಯ ಆವರ್ತಗಳಾಗಿವೆ ಅರ್ಥಾತ್ ಸುಳಿಗಳಾಗಿವೆ. ಜೀವನು ಇವುಗಳಲ್ಲಿ ಬಂಧಿತನಾಗಿ ಜನ್ಮ-ಮೃತ್ಯುವಿನ ಚಕ್ರದಲ್ಲಿ ಬೀಳುತ್ತಾನೆ. ಈ ಸಂಸಾರವು ಅತ್ಯಂತ ಗಮನ ಶೀಲವಾಗಿರುವುದಲ್ಲದೆ ಕ್ಷಣ ಕ್ಷಣಕ್ಕೂ ಪರಿವರ್ತನ ಶೀಲವಾಗಿದೆ.

"ಸಾತತ್ಯಗಮನಂ ಸಂಸಾರಃ ಸತತಸ್ಯ ಭಾವಃ ಸಾತತ್ಯಮ್"

"ಸಮ್ಯಕ್ ಸರತೀ ಇತಿ ಸಂಸಾರಃ" ಸಂಸಾರವು ಒಂದು ದೊಡ್ಡ ಸಂತೆಯಿದ್ದಂತೆ ಇದರಲ್ಲಿ ಇಂದ್ರಿಯಗಳೆಂಬ ವಿಷಯ ರೂಪಿ ಕಳ್ಳರಿದ್ದಾರೆ ಮತ್ತು ಮಾಯಾ ರೂಪಿಯಾದ ವೈಶ್ಯೆಯೂ ಸಹ ಇದ್ದಾಳೆ. ಈ ಕಳ್ಳರು ಮತ್ತು ವೈಶ್ಯೆಯು ಜೀವನವನ್ನು ಮೋಸಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಇಂತಹ ವ್ಯವಸ್ಥೆಯಲ್ಲಿ, ದೃಡತಾಪೂರ್ವಕವಾಗಿ ಪರಮ ತತ್ವದ ಜ್ಞಾನವನ್ನು ಹೊಂದಿದರೇ ಸರಿ, ಇಲ್ಲವೆಂದರೆ ಈ ಸಂಸಾರದ ಸಂತೆಯಲ್ಲಿ ವಿಷಯ-ವಾಸನಾ ಮತ್ತು ಮಾಯೆಯ ಮೂಲಕ ಮೋಸ ಹೋಗದೆ ಉಳಿಯಲು ಸಾಧ್ಯವಿಲ್ಲ. ಈ ಸಂಸಾರದಲ್ಲಿ "ಜೀವ" ನ ಕಣ್ಣುಗಳಿಗೆ ಮಾಯಾ ಮತ್ತು ಮೋಹಗಳ ಅಂಧಕಾರ ಆವರಿಸಿಕೊಂಡಿದೆ. ವ್ಯಕ್ತಿಯು ಈ ಮಾಯಾ ಮೋಹಗಳ ಅಂಧಕಾರದಲ್ಲಿ ಸಾವಧಾನತೆಯನ್ನು ಕಳೆದುಕೊಂಡು ಅಜ್ಞಾನದಲ್ಲಿ ಮಲಗಿಯೇ ಇರುತ್ತಾನೆ. ಮಾಯೆಯು ಎಷ್ಟು ಆಕರ್ಷಕವಾಗಿದೆಯೆಂದರೆ ದೊಡ್ಡ-ದೊಡ್ಡ ಜ್ಞಾನಿಗಳು ಮತ್ತು ಚತುರ ವ್ಯಕ್ತಿಗಳೂ ಸಹ ಇದರಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಯಾವಾಗ ಮಾಯೆಯು ತನ್ನ ಮದನ ಬಾಣಗಳನ್ನು ಎಳೆದೆಳೆದು ಬಿಡುತ್ತಾಳೋ ಆಗ ವ್ಯಕ್ತಿಯ ಮೇಲೆ ಆ ಬಾಣಗಳ ಪ್ರಭಾವ ಬಿದ್ದೇ ಬೀಳುತ್ತದೆ. ಜನರು ಆಗ ಆ ಮಾಯಾಜಾಲದಲ್ಲಿ ಸಿಕ್ಕಿಕೊಳ್ಳದೆ ಬೇರೆ ಮಾರ್ಗವೇ ಇರುವುದಿಲ್ಲ. ಸಂಸಾರವನ್ನು ನದಿಯ ರೂಪದಲ್ಲಿ ಮತ್ತು ಸಂತೆಯ ರೂಪದಲ್ಲಿ ನೋಡಿದ್ದಾಯಿತು. ಈಗ ವೃಕ್ಷರೂಪದಲ್ಲಿ ಸಂಸಾರದ ವರ್ಣನೆ.

ಸಂಸಾರವೃಕ್ಷಮಘಬೀಜಮನಂತಕರ್ಮ
ಶಾಖಾಶತಂ ಕರಣಪತ್ರಮನಂಗಪುಷ್ಪಮ್।
ಆರೂಹ್ಯ ದುಃಖಫಲಿತಂ ಪತತೋ ದಯಾಲೋ
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್॥

ಅರ್ಥಾತ್ : ಶ್ರೀ ಶಂಕರ ಭಗವತ್ಪಾದರು ದೇವರಲ್ಲಿ ಪ್ರಾರ್ಥಿಸುವುದೇನೆಂದರೆ "ಪಾಪವು ಯಾವುದರ ಬೀಜವಾಗಿದೆಯೋ, ಅನಂತ ಕರ್ಮಗಳು ಅದರ ನೂರಾರು ಶಾಖೆಗಳಾಗಿವೆಯೋ, ಇಂದ್ರಿಯಗಳು ಎಲೆಗಳಾಗಿವೆಯೋ, ಕಾಮದೇವನು ಪುಷ್ಪನಾಗಿರುವನೋ ಮತ್ತು ದುಃಖವೇ ಅದರ ಫಲವಾಗಿದೆಯೋ, ಅಂತಹ ಸಂಸಾರ ರೂಪ ವೃಕ್ಷವನ್ನೇರಿ ನಾನು ಕೆಳಗೆ ಬೀಳುತ್ತಿದ್ದೇನೆ, ಇಂತಹ ನನಗೆ, ಹೇ ಲಕ್ಷ್ಮೀನೃಸಿಂಹ! ತಮ್ಮ ಕರಕಮಲಗಳ ಆಶ್ರಯವನ್ನು ನೀಡು!"

ಭಗವಂತನ ಕೃಪೆಯಿಲ್ಲದೆ ಈ ವೃಕ್ಷದಿಂದ ಕೆಳಗಿಳಿಯಲು ಸಾಧ್ಯವಿಲ್ಲ. ಏಕೆಂದರೆ ಸರ್ವಶಕ್ತಿಮಾನನಾದ ಪರಮೇಶ್ವರನ ಮಾಯೆಯಿಂದ ಉತ್ಪನ್ನವಾದ ಈ ಸಂಸಾರ ವೃಕ್ಷವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ಪತ್ತಿ-ವಿನಾಶಶೀಲ ಮತ್ತು ಕ್ಷಣಿಕವಾಗಿದೆ. ಆದುದರಿಂದ ಇದರ ಹೊಳಪಿಗೆ ಮೆರಗಿಗೆ ಬೆರಗಾಗದೆ ಇದನ್ನು ಉತ್ಪತ್ತಿಮಾಡಿದ ಮಾಯಾಪತಿಗೆ ಶರಣಾಗಬೇಕು.

ಈ ಸಂಸಾರ ವೃಕ್ಷದಿಂದ ಉತ್ಪನ್ನವಾದ ಅಹಂತಾ, ಮಮತಾ ಮತ್ತು ವಾಸನಾಮಯ ರೂಪಗಳು ಅಜ್ಞಾನ ಮೂಲಗಳಾಗಿವೆ. ಅವು ಅನಾದಿಕಾಲದಿಂದಲೂ ಪುಷ್ಟವಾಗಿರುವುದರಿಂದ, ಅತ್ಯಂತ ದೃಢವಾಗಿ ನಮ್ಮಲ್ಲಿ ಬೇರನ್ನು ಬಿಟ್ಟಿವೆ. ಎಲ್ಲಿಯವರೆಗೆ ಆ ಬೇರುಗಳನ್ನು ಕತ್ತರಿಸುವುದಿಲ್ಲವೊ ಅಲ್ಲಿಯವರೆಗೆ ಈ ಸಂಸಾರದ ನಾಶವಾಗುವುದಿಲ್ಲ. ಆ ಬೇರುಗಳನ್ನು ನಾಶಪಡಿಸುವುದು ಬಹಳ ಕಠಿಣವಾದ ಕೆಲಸ.

ಇದರ ಉಪಾಯವನ್ನು ಗೀತೆಯಲ್ಲಿ ಭಗವಂತನು ಹೇಳಿರುವುದೇನೆಂದರೆ-

ನ ರೂಪಮಸ್ಯೇಹ ತಥೋಪಲಭ್ಯತೆ
ನಾಂತೋ ನ ಚಾದಿರ್ನ ಚ ಸಂಪ್ರತಿಷ್ಠಾ ।
ಅಶ್ವತ್ಥಮೇನಂ ಸುವಿರೂಢಮೂಲ
ಮಸಂಗಶಸ್ತ್ರೇಣ ದೃಢೇನ ಛಿತ್ತ್ವಾ ॥

- ಗೀತಾ ೧೫-೩

ಅರ್ಥಾತ್ : ಈ ವೃಕ್ಷದ ಸ್ವರೂಪವು ಹೇಗೆ ವರ್ಣಿಸಲ್ಪಟ್ಟಿದೆಯೋ ಹಾಗೆ ನೋಡಲು ಸಿಗುವುದಿಲ್ಲ. ಯಾಕೆಂದರೆ, ಇದು ಸ್ವಪ್ನದ ವಸ್ತುವಿನಂತೆ, ಮರೀಚಿಕೆಯಲ್ಲಿ ಕಾಣುವ ನೀರಿನಂತೆ ಮತ್ತು ಮಾಯಾಜಾಲದಿಂದ ನಿರ್ಮಿತಿಗೊಂಡು ಗಂಧರ್ವನಗರದಂತೆ ನೋಡುತ್ತಾ - ನೋಡುತ್ತಲೇ ನಷ್ಟವನ್ನು ಹೊಂದುತ್ತದೆ. ಈ ಕಾರಣದಿಂದಲೇ ಇದರ ಅಂತ್ಯ ಅರ್ಥಾತ್ ಅಂತಿಮಾವಸ್ಥೆ ಅಥವಾ ಸಮಾಪ್ತಿ ಇರುವುದಿಲ್ಲ. ಹಾಗೆಯೇ ಇದಕ್ಕೆ ಆದಿಯೂ ಇಲ್ಲ. ಅಂದರೆ, ಇದು ಎಲ್ಲಿಂದ ಆರಂಭಗೊಂಡು ಈ ಸಂಸಾರ ನಡೆದುಕೊಂಡು ಬಂದಿದೆ ಎಂಬುದನ್ನು ಯಾರಿಂದಲೂ ತಿಳಿಯಲು ಸಾಧ್ಯವಿಲ್ಲ. ಇದರ ಆದಿ ಅಂತ್ಯದ ಮಧ್ಯದ ಅವಸ್ಥೆಯೂ ಸಹ ಯಾರಿಗೂ ಉಪಲಬ್ಧವಾಗುವುದಿಲ್ಲ.

ಇದರ ಬೇರುಗಳು ಅತ್ಯಂತ ದೃಢವಾಗಿ ಹೋಗಿವೆ. ಬಹಳ ದುಷ್ಟ ಪುಷ್ಟವಾಗಿ ಬೆಳೆದುಕೊಂಡಿವೆ. ಇಂತಹ ಸಂಸಾರ ರೂಪಿ ಅಶ್ವತ್ಥ ಮರವನ್ನು ಅಸಂಗವೆಂಬ ಶಸ್ತ್ರದಿಂದ ಕಡಿದು ಹಾಕಬೇಕು. ಅಂದರೆ ಪುತ್ರೇಷಣಾ, ವಿತ್ತೇಷಣಾ ಮತ್ತು ಲೋಕೇಷಣಾಗಳಿಂದ ನಿವೃತ್ತನಾಗುವುದೇ ಅಸಂಗ. ಇಂತಹ ಅಸಂಗ ಶಸ್ತ್ರವನ್ನು ಧಾರಣೆ ಮಾಡಿ ಪರಮಾತ್ಮನ ಸಮ್ಮುಖದಲ್ಲಿ ಆ ಅಶ್ವತ್ಥಮರವನ್ನು ಕಡಿದು ಹಾಕುವ ದೃಢನಿಶ್ಚಯವನ್ನು ಮಾಡಬೇಕು ಮತ್ತು ಪದೇ ಪದೇ ವಿವೇಕಾಭ್ಯಾಸ ರೂಪಿ ಕಲ್ಲಿನ ಮೇಲೆ ಅಸಂಗ ಶಸ್ತ್ರವನ್ನು ಹರಿತಗೊಳಿಸುತ್ತಿರಬೇಕು.

ಈ ಸಂಸಾರ ವೃಕ್ಷವನ್ನು ಬೇರು ಸಹಿತವಾಗಿ ಕಿತ್ತೊಗೆದು ತದನಂತರ ಆ ಪರಮಪದ ರೂಪನಾದ ಪರಮೇಶ್ವರನನ್ನು ಹುಡುಕಬೇಕು. ಅಂದರೆ ಅವನನ್ನು ಅರಿಯಬೇಕು. ಇಂತಹ ಪದವನ್ನು ತಲುಪಿದ ಮನುಷ್ಯರು ಮತ್ತೆ ಸಂಸಾರಕ್ಕೆ ಹಿಂತಿರುಗುವುದಿಲ್ಲ. ಪುನರ್ಜನ್ಮವನ್ನು ಪಡೆಯುವುದಿಲ್ಲ. ಆದ್ದರಿಂದ ಪರಬ್ರಹ್ಮನನ್ನು ಅರಿಯಬೇಕು ಮತ್ತು ಅವನನ್ನು ಅರಿಯಲು ನಿರಂತರವಾದ ಸ್ಮರಣೆಯ ಅವಶ್ಯಕತೆ ಇದೆ. ಆದರೆ ಈ ಜೀವಾತ್ಮನು ಆ ಪರಬ್ರಹ್ಮ ಪರಮಾತ್ಮನಿಂದ ಸ್ವಲ್ಪವಾದರೂ ಅಂತರವನ್ನು ಹೊಂದಿದರೆ ಅವನಿಗೆ ಪೂರ್ಣ ಸ್ಥಿತಿಯು ಪ್ರಾಪ್ತಿಯಾಗಲಾರದು. ಆಗ ಜೀವಾತ್ಮನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಯಕ್ಕೆ ಕಾರಣನಾಗುತ್ತಾನೆ. ಅಂದರೆ ಅವನಿಗೆ ಪುನರ್ಜನ್ಮವನ್ನು ಹೊಂದುವುದು ಅನಿವಾರ್ಯವಾಗುತ್ತದೆ. ಜೀವಾತ್ಮನು ಭಯದ ಸ್ಥಿತಿಯನ್ನು ಹೊಂದಿದನೆಂದರೆ ಅವನು ಪರಮಾತ್ಮನನ್ನು ಮರೆತನು ಎಂದಾಗುತ್ತದೆ. ಆ ಸಮಯದಲ್ಲಿ ಒಂದು ಪಕ್ಷ ಅವನ ಮೃತ್ಯುವಾದರೆ, ಅವನ ಅಂತಿಮ ವಾಸನೆಗಳಿಗೆ ತಕ್ಕಂತೆ ಜನ್ಮ ಉಂಟಾಗುವುದು ನಿಶ್ಚಯವಾಗಿದೆ. ಭಗವಂತನು ಗೀತೆಯಲ್ಲಿ ಹೇಳಿರುವುದೇನೆಂದರೆ, 'ಯಾವ-ಯಾವ ಭಾವನೆಗಳನ್ನು ಸ್ಮರಿಸುತ್ತಾ ಮನುಷ್ಯನು ಅಂತ್ಯಕಾಲದಲ್ಲಿ ಶರೀರವನ್ನು ಬಿಡುತ್ತಾನೋ, ಅದಕ್ಕೆ ಅನುಗುಣವಾಗಿ ಅವನು ಜನ್ಮವನ್ನು ಪಡೆಯಬೇಕಾಗುತ್ತದೆ'. ಮೃತ್ಯುವು ಪ್ರಾರಬ್ಧಕ್ಕೆ ಅನುಗುಣವಾಗಿ ಯಾವುದೇ ಕ್ಷಣದಲ್ಲಿಯೂ ಬರಬಹುದು.

ಉದಾಹರಣೆಗೆ : ಒಬ್ಬ ರಾಜನ ಸ್ವಪ್ನದಲ್ಲಿ ಮೃತ್ಯುದೇವತೆಯು ಕಾಣಿಸಿಕೊಂಡು ಹೀಗೆಂದಿತು 'ನಾಳೆ ಸಾಯಂಕಾಲ ಐದು ಗಂಟೆಗೆ ಸರಿಯಾಗಿ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ' ಎಂದಿತು ಮತ್ತು ತಕ್ಷಣವೇ ಅದೃಶ್ಯವಾಯಿತು. ಆಗ ರಾಜನು ಭಯಭೀತನಾಗಿ ನಿದ್ರೆಯಿಂದ ಎಚ್ಚೆತ್ತು ಇಂತಹ ಅಶುಭ ಸೂಚಕವಾದ ಸ್ವಪ್ನದ ಸಂಕೇತವನ್ನು ತಿಳಿಯಲು ಮಾರನೆಯ ದಿನ ಜ್ಯೋತಿಷಿಗಳನ್ನು ಆಸ್ಥಾನಕ್ಕೆ ಬರಮಾಡಿದ. ಬಹಳ ಚರ್ಚೆ, ವಾದ, ವಿವಾದಗಳ ನಂತರ ರಾಜನು ತನ್ನ ರಾಜ್ಯವನ್ನು ಬಿಟ್ಟು ದೂರ ಹೋಗಬೇಕೆಂದು ನಿರ್ಣಯವಾಯಿತು. ಅದರಂತೆ ರಾಜನು ಕುದುರೆಯ ಮೇಲೆ ಸವಾರನಾಗಿ ತನ್ನ ರಾಜ್ಯದ ಸೀಮೆಯಿಂದ ಬಹಳ ದೂರದವರೆಗೆ ಹೋದನು. ಆಗ ಸಾಯಂಕಾಲವಾಗಿತ್ತು. ಐದು ಗಂಟೆಗೆ ಕೇವಲ ಐದು-ಹತ್ತು ನಿಮಿಷಗಳ ಕಾಲಾವಕಾಶವಿತ್ತು. ಕುದುರೆ ಬಹಳ ದಣಿದಿತ್ತು. ಇದನ್ನು ನೋಡಿ ರಾಜನು ಒಂದು ಮರದ ಕೆಳಗೆ ಕುದುರೆಗೆ ವಿಶ್ರಾಂತಿಯನ್ನು ಕೊಡಲು ಕೆಳಕ್ಕಿಳಿದ, ಮರದ ನೆರಳಲ್ಲಿ ಕುಳಿತುಕೊಂಡ. ಆಗ ರಾಜನಿಗೆ ಬಹಳ ಧೈರ್ಯ ಬಂದಿತು. ನನ್ನ ರಾಜ್ಯವನ್ನು ಬಿಟ್ಟು ಬಹಳವೇ ದೂರ ಬಂದಿದ್ದೇನೆ. ಇನ್ನು ಇಲ್ಲಿಗೆ ಮೃತ್ಯು ಬರಲು ಸಾಧ್ಯವಿಲ್ಲ ಎಂಬ ವಿಚಾರ ಮಾಡುತ್ತಾ ಬಹಳ ಸಂತೋಷಿತನಾದ. ಈ ವಿಚಾರದಲ್ಲಿದ್ದಾಗ ಸರಿಯಾಗಿ ಐದು ಗಂಟೆಯಾಯಿತು. ಹಿಂದಿನಿಂದ ಮೃತ್ಯುವು ರಾಜನ ಹೆಗಲ ಮೇಲೆ ತನ್ನ ಕೈಯನ್ನಿಟ್ಟಿತು. ರಾಜನು ಭಯಭೀತನಾದನು ಮತ್ತು ಅವನು ಹೇಳಿದುದೇನೆಂದರೆ 'ನೀನು ನಿನ್ನೆ ಸ್ವಪ್ನದಲ್ಲಿ ಬಂದಿದ್ದೆ. ಆದರೆ ಇವತ್ತು ನೀನು ಇಲ್ಲಿಗೆ ಹೇಗೆ ಬಂದೆ. ನನ್ನ ಮರಣ ಆ ಜಾಗದಲ್ಲಿತ್ತು ಇಲ್ಲಿಗೆ ಏಕೆ ಬಂದೆ' ಎಂದನು. ಅದಕ್ಕೆ ಮೃತ್ಯುವು 'ನಿನ್ನ ಸಾವು ಇಲ್ಲಿಯೇ ಇತ್ತು. ನಿನ್ನ ಕುದುರೆ ಸರಿಯಾದ ಸಮಯಕ್ಕೆ ಇಲ್ಲಿಗೆ ಬಂದು ನಿಂತಿತು ಆದುದರಿಂದ ನಿನ್ನ ಕುದುರೆಗೆ ನಾನು ಋಣಿಯಾಗಿದ್ದೇನೆ' ಎಂದಿತು. ಮೃತ್ಯುವು ಎಂದಿಗೂ ಬಿಡುವುದಿಲ್ಲ. ಪ್ರಾರಬ್ಧ ಸಮಾಪ್ತಿಯಾಯಿತೆಂದರೆ ಕರೆದುಕೊಂಡು ಹೋಗುತ್ತೆ.

'ನಹಿ ಪ್ರತೀಕ್ಷತೇ ಮೃತ್ಯು ಕೃತಂ ವಾ ನವಾಕೃತಂ'

ಅರ್ಥ : ಮೃತ್ಯು ಪ್ರತೀಕ್ಷೆ ಮಾಡುವುದಿಲ್ಲ, ನಾವು ಏನನ್ನು ಮಾಡುತ್ತಾ ಇದ್ದೆವೊ ಅಥವಾ ಇಲ್ಲವೊ ಎಂಬ ವಿಚಾರವನ್ನು ಮಾಡುವುದಿಲ್ಲ. ಎಲ್ಲಿಯವರೆಗೆ ಪರಮಾತ್ಮನಲ್ಲಿ ಪೂರ್ಣಸ್ಥಿತಿಯನ್ನು ಹೊಂದುವುದಿಲ್ಲವೊ ಅಥವಾ ಭಗವಾನನ ಸ್ಮರಣೆ ನಿರಂತರವಾಗಿ ಆಗುವುದಿಲ್ಲವೋ ಅಲ್ಲಿಯವರೆಗೆ ಪುನರ್ಜನ್ಮದ ಭಯ, ಜನ್ಮ-ಮೃತ್ಯುವಿನ ಭಯ ಎಲ್ಲರ ತಲೆಯ ಮೇಲೆಯೂ ತೂಗಾಡುತ್ತಿರುವ ಕತ್ತಿ ಇದ್ದಂತೆ. ತಮಗೆ ತಾವೇ ಶಾಸ್ತ್ರಜ್ಞರೆಂದು ತಿಳಿದುಕೊಂಡವರೂ ಮತ್ತು ನಾವು ವೇದವಿದ್ಯಾ ವಿಶಾರದರೆಂದೂ, ಜ್ಞಾನಿ ಪಂಡಿತರೆಂದೂ ತಿಳಿದಿದ್ದರೂ ಸಹ, ಎಲ್ಲಿಯವರೆಗೆ ಪೂರ್ಣ ಸ್ಥಿತಿಯಾಗುವುದಿಲ್ಲವೋ ಅಲ್ಲಿಯ ತನಕ ಎಲ್ಲರಿಗೂ ಮೃತ್ಯು ಭಯ ತಪ್ಪಿದ್ದಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದುದರಿಂದ ಆತ್ಮತತ್ವವನ್ನು ತಿಳಿಯುವುದು ಅತ್ಯಂತ ಅವಶ್ಯವಾಗಿದೆ. ಈ ಪ್ರಧಾನವಾದ ಲಕ್ಷ್ಯವನ್ನು ತಿಳಿದುಕೊಂಡು ಮುಕ್ತನಾಗಬೇಕು. ಆದರೆ ಮನುಷ್ಯನು ಲಕ್ಷ್ಯವನ್ನು ಮರೆತು ವಿಷಯ ಭೋಗದಲ್ಲಿಯೇ ತನ್ನ ಜೀವನವನ್ನು ವ್ಯಯಿಸುತ್ತಾನೆ. ಇಂತಹ 'ಮೂರ್ಖ' ನಿಗೆ 'ಕೃಪಣ' ನೆಂದು ಕರೆಯುತ್ತಾರೆ. 'ಕೃಪಣ' ನೆಂಬ ಶಬ್ದವನ್ನು ಬೇರೆ ಬೇರೆ ಅರ್ಥಗಳಲ್ಲಿ ಹೇಳಲ್ಪಟ್ಟಿದೆ.

ಒಬ್ಬನ ಹತ್ತಿರ ಬಹಳಷ್ಟು ಧನವಿದೆ. ಆದರೆ ಅವನಿಗೆ ಧನದಲ್ಲಿ ಎಷ್ಟೊಂದು ಆಸಕ್ತಿಯಿದೆಯೆಂದರೆ, ದಾನ ಮತ್ತು ನ್ಯಾಯ ಸಂಗತವಾದ ಭೋಗಗಳಿಗೂ ಸಹ, ಯಾವ ಪ್ರಸಂಗದಲ್ಲೂ ಸಹ ಒಂದು ಕಾಸನ್ನು ಸಹ ಖರ್ಚು ಮಾಡಲು ತಯಾರಿರುವುದಿಲ್ಲ. ಇಂತಹ ಜಿಪುಣನಿಗೆ 'ಕೃಪಣ' ನೆಂದು ಕರೆಯುತ್ತಾರೆ.

ಮನುಷ್ಯ ಜೀವನದಲ್ಲಿ, ಶಾಸ್ತ್ರಸಮ್ಮತವಾದ ಮತ್ತು ಸಾಧು ಜನರಿಂದ ಅನುಮೋದಿತವಾದಂತಹ 'ಪರಮತತ್ವ' ವೇ ಅದರ ಲಕ್ಷ್ಯವಾಗಿದೆ. ಆದರೆ ವಿಕ್ಷಿಪ್ತವಾದ ಮನಸ್ಸು ಭೋಗಾಸಕ್ತನಾಗಿ, ನೂರಾರು ವಿಷಯಗಳಲ್ಲಿ ಆಸಕ್ತನಾಗಿರುತ್ತಾ ಆ 'ಆತ್ಮತತ್ವ' ವನ್ನು ಮರೆತು ತನ್ನ ಅಮೂಲ್ಯವಾದ ಜೀವನವನ್ನು ವ್ಯರ್ಥಗೊಳಿಸುತ್ತಾನೆ. ಇಂತಹ ವಿವೇಕಹೀನ ಅಜ್ಞಾನಿಯನ್ನು 'ಕೃಪಣ' ನೆಂದು ಕರೆಯುತ್ತಾರೆ. ಶ್ರುತಿ ಹೇಳುವುದೇನೆಂದರೆ -

'ಯೋ ವಾ ಏತದಕ್ಷರಂ ಗಾರ್ಗ್ಯವಿದಿತ್ವಾ ಸ್ಮಾಲ್ಲೋಕಾತ್ಪ್ರೈತಿ ಸ ಕೃಪಣಃ'

- ಬೃಹದಾರಣ್ಯಕೋಪನಿಷತ್ತು ೩-೮-೧೦

'ಹೇ! ಗಾರ್ಗೇ! ಈ ಅವಿನಾಶಿ ಪರಮಾತ್ಮನನ್ನು ತಿಳಿಯದೆಯೇ ಯಾರು ಈ ಲೋಕದಿಂದ ಮರಣವನ್ನು ಹೊಂದುತ್ತಾರೋ ಅವರು ಕೃಪಣರು. ಅರ್ಥಾತ್ ಅವರು ಮರಣ ಹೊಂದಿ ಪುನಃ ಸಂಸಾರ ಬಂಧನಕ್ಕೆ ಪ್ರಾಪ್ತರಾಗುತ್ತಾರೆ. ಅವರು ದೇವತಾದಿ ಲೋಕಕ್ಕೆ ಹೋದರೂ ಸಹ, ಹಣವನ್ನು ಕೊಟ್ಟು ಖರೀದಿಸಿದ ದಾಸರಂತೆ (ಗುಲಾಮರಂತೆ) ವರ್ತಿಸುತ್ತಾರೆ. ಆದರೆ ಈ ಅವಿನಾಶಿ ಪರಮತತ್ವವನ್ನು ತಿಳಿದು ಈ ಲೋಕದಿಂದ ಮರಣ ಹೊಂದುವವರು ಈ ಸಂಸಾರ ಬಂಧನದಿಂದ ಮುಕ್ತರಾಗುತ್ತಾರೆ'.

ಜ್ಞಾನದ ಪ್ರಭಾವದಿಂದ ಜನ್ಮ-ಮರಣಾದಿ ಅನೇಕ ದುಃಖಗಳು ಆತ್ಯಂತಿಕ ನಿವೃತ್ತಿಯನ್ನು ಹೊಂದುತ್ತವೆ. ಸಂಪೂರ್ಣ ಭೇದ-ಭಾವನೆಗಳು ಆಮೂಲಾಗ್ರವಾಗಿ ದಗ್ಧವಾಗುತ್ತವೆ. ದುಃಖಗಳಿಗೆ, ಭೇದ-ಭಾವವೇ ಮೂಲಕಾರಣವಾಗಿದೆ. ಶ್ರೀಮದ್ ಭಾಗವತದಲ್ಲಿ ದೃಷ್ಟಾಂತ ರೂಪದಲ್ಲಿ ಈ ವಿಷಯವನ್ನು ವಿಶದ ಪಡಿಸಿದ್ದಾರೆ. ಅದರ ಸಂಕ್ಷಿಪ್ತ ರೂಪ ಈ ರೀತಿಯಾಗಿದೆ.

ಯಾವಾಗ ಸುರ ಮತ್ತು ಅಸುರರು ಸೇರಿ ಸಮುದ್ರ ಮಂಥನವನ್ನು ಮಾಡುತ್ತಿದ್ದರೊ, ಆಗ ಮಂಥನದ ಮೂಲಕ ಹದಿನಾಲ್ಕು ರತ್ನಗಳು ಪ್ರಾಪ್ತವಾದವು. ಆ ರತ್ನಗಳಲ್ಲಿ ಒಂದು 'ಹಾಲಾಹಲ' ವೆಂಬ ವಿಷವೂ ಪ್ರಾಪ್ತವಾಗಿತ್ತು. ವಿಷದ ದಾಹವನ್ನು ಯಾರಿಗೂ ತಡೆಯಲೂ ಸಾಧ್ಯವಾಗುತ್ತಿರಲಿಲ್ಲ. ಉಳಿದ ಎಲ್ಲಾ ರತ್ನಗಳಿಗೂ ಗ್ರಾಹಕರು ಸಿಕ್ಕಿದ್ದರು, ಆದರೆ ಈ ಹಾಲಾಹಲಕ್ಕೆ ಯಾರೂ ಗ್ರಾಹಕರಿಲ್ಲ. ಇದರ ಭಯದಿಂದ ಸಂಪೂರ್ಣ ಸಂಸಾರ ತತ್ತರಿಸುತ್ತಿತ್ತು. ಆಗ ಇದನ್ನು ತಡೆಯಲು ಜ್ಞಾನ-ವೈರಾಗ್ಯಮೂರ್ತಿಯಾದ ಭಗವಾನ್ ಶಂಕರನು ಬಂದು ಅದನ್ನು ಸ್ವೀಕರಿಸಿದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಸಾರವೇ ಸಮುದ್ರವಾಗಿದೆ. ನಮ್ಮ ಜೀವನದ ಮಂಥನವೇ ಸಮುದ್ರಮಂಥನವಾಗಿದೆ. ಸಂಸಾರ ಸಮುದ್ರದ ಮಂಥನವನ್ನು ಮಾಡಿ ಜ್ಞಾನ ರೂಪಿ ಅಮೃತವನ್ನು ಪಾನ ಮಾಡಿದವನೇ ಅಮರನಾಗುತ್ತಾನೆ. ಮನಸ್ಸನ್ನು ಮಂದರಪರ್ವತದಂತೆ ಸ್ಥಿರ ಮಾಡಿರಿ. ಅರ್ಥಾತ್ ಮನವೇ ಮಂದರ ಪರ್ವತ ಮತ್ತು ಪ್ರೇಮವೆಂಬ ಹಗ್ಗವೇ ವಾಸುಕಿಯೆಂಬ ಸರ್ಪವಾಗಿದೆ. ಹದಿನಾರನೆಯ ವರ್ಷಕ್ಕೆ ಮನೋಮಂಥನ ಪ್ರಾರಂಭವಾಗುತ್ತದೆ. ಯಾವಾಗ ಮಂದರ ಪರ್ವತ ಸಮುದ್ರದಲ್ಲಿ ಮುಳುಗಲಾರಂಭಿಸುತ್ತದೋ ಆಗ ಭಗವಂತನು ಕೂರ್ಮನ ತಾರವನ್ನು ತಾಳಿ ತನ್ನ ಬೆನ್ನಿನ ಮೇಲೆ ಅದರ ಧಾರಣೆಯನ್ನು ಮಾಡಿದ. ನಿರಾಧಾರವಾದ ಮನಸ್ಸು ಸಂಸಾರಸಾಗರದಲ್ಲಿ ಮುಳುಗಿ ಹೋಗುತ್ತದೆ. ಮನರೂಪಿ ಮಂದರಪರ್ವತ ಆಧಾರವಿಲ್ಲದೆ ಸ್ಥಿರವಾಗಿರಲಾರದು. ಅದಕ್ಕೆ ಭಗವತ್ ಸ್ವರೂಪದ ಆಧಾರದ ಅವಶ್ಯಕತೆಯಿದೆ. ಅದಕ್ಕೆ ಭಗವಂತನ ಆಧಾರ ಸಿಕ್ಕರೆ, ಅದು ಸಂಸಾರ ಸಮುದ್ರದಲ್ಲಿ ಎಂದಿಗೂ ಮುಳುಗುವುದಿಲ್ಲ. ಸಮುದ್ರದಲ್ಲಿ ಮೊದಲು ವಿಷ ಹೊರಬಿದ್ದಿತ್ತು ನಂತರ ಅಮೃತ. ಮನಸ್ಸನ್ನು ಸ್ಥಿರ ಮಾಡಿ ಭಗವಂತನಲ್ಲಿ ತೊಡಗಿಸಿದರೆ, ಅದು ಮೊದಲು ವಿಷವನ್ನೇ ಕೊಡುತ್ತದೆ. ಆದರೆ ಅದನ್ನು ಸಹಿಸಿಕೊಂಡರೆ ಅಮೃತವನ್ನು ಕೊಡುತ್ತದೆ. ಮಹಾಪುರುಷರು ವಿವಿಧ ಕಷ್ಟರೂಪಿ ವಿಷವನ್ನು ಕುಡಿದಿದ್ದರು. ದುಃಖಗಳನ್ನು ಸಹಿಸಿಕೊಂಡಿದ್ದರು. ಅಂತ್ಯದಲ್ಲಿ ಅವರಿಗೆ ಜ್ಞಾನಾಮೃತವು ದೊರಕಿತು. ಜೀವನಮಂಥನದ ಪ್ರಾರಂಭದಲ್ಲಿ ವಿಷವೇ ದೊರೆಯುತ್ತದೆ. ಮಂಥನವು ಯೌವನದಿಂದಲೇ ಪ್ರಾರಂಭಗೊಳ್ಳುತ್ತದೆ. ಮೊದಲು ವಿಷಯಗಳು ದೊರಕುತ್ತವೆ. ವಿಷಯಗಳು ವಿಷದಂತೆಯೇ ಇರುತ್ತವೆ. ಸಂಸಾರದಲ್ಲಿ ವಿಷವೂ ಇದೆ ಮತ್ತು ಅಮೃತವೂ ಕೂಡ. ಯಾರು ವಿಷವನ್ನು ಅರಗಿಸಿಕೊಳ್ಳುತ್ತಾರೋ ಅವರಿಗೆ ಅಮೃತವು ದೊರಕುತ್ತದೆ. ಹದಿನಾರನೆಯ ವರ್ಷದಿಂದ ಜೀವನದಲ್ಲಿ ಮಂಥನವು ಪ್ರಾರಂಭವಾಗುತ್ತದೆ. ಮನಸ್ಸಿನಲ್ಲಿ ವಾಸನೆಯ ವಿಷವು ಉತ್ಪತ್ತಿಯಾಗುತ್ತದೆ. ಆ ಸಮಯದಲ್ಲಿ ಮನವೆಂಬ ಮಂದರ ಪರ್ವತವನ್ನು ಸ್ಥಿರವಾಗಿರಿಸಿಕೊಂಡರೆ, ಆ ಮನೋಮಂಥನದಿಂದ ಸಂಸಾರದಲ್ಲಿ ಜ್ಞಾನರೂಪಿಯಾದ ಅಮೃತಪ್ರಾಪ್ತಿಯಾಗುತ್ತದೆ. ಆಗ ಮನುಷ್ಯನು ಅಮರನಾಗುತ್ತಾನೆ.

ಪರೋಪಕಾರಿ ಸಜ್ಜನರು ಪ್ರಜೆಗಳ ದುಃಖವನ್ನು ದೂರ ಮಾಡಲಿಕ್ಕೆ ಸ್ವಯಂ ದುಃಖವನ್ನು ಸಹಿಸಿಕೊಳ್ಳುತ್ತಾರೆ. ಅವರು ಹೇಳುವುದೇನೆಂದರೆ 'ಎಲ್ಲರಿಗೋಸ್ಕರವಾಗಿ ನಾನು ದುಃಖವನ್ನು ಸಹಿಸಿಕೊಳ್ಳುತ್ತೇನೆ. ಆದರೆ ನನಗೋಸ್ಕರವಾಗಿ ಅನ್ಯರಿಗೆ ದುಃಖವನ್ನು ಎಂದಿಗೂ ಕೊಡಲಾರೆ. ಸಾಧು ಸಜ್ಜನರು ಅನ್ಯರ ದುಃಖವನ್ನು ನೋಡಿ ದುಃಖಿತರಾಗುತ್ತಾರೆ. ಆದರೆ ಅದು ದುಃಖವಲ್ಲ. ಅದು ಎಲ್ಲರ ಹೃದಯದಲ್ಲಿ ವಿರಾಜಮಾನನಾಗಿರುವ ಪರಮಾತ್ಮನ ಆರಾಧನೆಯಾಗಿರುತ್ತದೆ'.

ಸಮುದ್ರಮಂಥನವನ್ನು ಮಾಡುತ್ತಾ ಮಾಡುತ್ತಾ ಗೋಮಾತೆ ಅರ್ಥಾತ್ ಕಾಮಧೇನು ಪ್ರಾಪ್ತವಾಯಿತು. ಕಾಮಧೇನುವಿನ ದಾನವನ್ನು ಋಷಿಮುನಿಗಳಿಗೆ ನೀಡಲಾಯಿತು. ಕಾಮಧೇನುವು ಸಂತೋಷದ ಪ್ರತೀಕ. ಯಾರ ಅಂಗಳದಲ್ಲಿ ಸಂತೋಷ ರೂಪಿ ಹಸು ಆಡುತ್ತಿದೆಯೋ ಅವರು ಬ್ರಹ್ಮನಿಷ್ಠರಾಗಿರುತ್ತಾರೆ. ಅಸಂತೋಷಿ ಮನುಷ್ಯನು ಪಾಪಾಚರಣೆಯನ್ನು ಮಾಡುತ್ತಾನೆ.

ಮಂಥನವು ಇನ್ನೂ ಮುಂದುವರೆದಾಗ 'ಉಚ್ಚೈಃಶ್ರವಾ' ಎಂಬ ಹೆಸರಿನ ಕುದುರೆ ಪ್ರಾಪ್ತಿಯಾಯಿತು. ಇದನ್ನು ಕಂಡ ಕೂಡಲೆ ಅಸುರರ ಮನಸ್ಸಿನಲ್ಲಿ ಆಸೆಯು ಅಂಕುರಿಸಿತು. ಅದನ್ನು ಅವರಿಗೆ ಕೊಡಲಾಯಿತು. 'ಶ್ರವ' ಶಬ್ದದ ಅರ್ಥ 'ಕೀರ್ತಿ' ಎಂಬುದಾಗಿದೆ. ಉಚ್ಚೈಃಶ್ರವಾ ಕೀರ್ತಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತೀಕವಾಗಿದೆ. ಮನಸ್ಸನ್ನು ಯಾರು ಪರ್ವತದಂತೆ ಸ್ಥಿರವಾಗಿಸಿಕೊಳ್ಳುತ್ತಾರೋ ಅವರಿಗೆ ಜಗತ್ತಿನಲ್ಲಿ ಕೀರ್ತಿ ಮತ್ತು ಲಕ್ಷ್ಮಿ ದೊರೆಯುತ್ತದೆ. ಯಾರ ಮನಸ್ಸು ಕೀರ್ತಿಯಲ್ಲಿ ಸಿಲುಕಿಗೊಳ್ಳುತ್ತದೊ ಅವರಿಗೆ ಅಮೃತವು ದೊರೆಯುವುದಿಲ್ಲ. ಸಾಧನದ ಆರಂಭದಲ್ಲಿ ಕೀರ್ತಿಯು ದೊರೆಯುತ್ತದೆ. ಒಂದು ಪಕ್ಷ ಮನಸ್ಸು ಇದರಲ್ಲಿಯೇ ಸಿಲುಕಿಕೊಂಡಿತೆಂದರೆ ಭಗವಂತನ ಪ್ರಾಪ್ತಿಯಾಗುವುದಿಲ್ಲ. ಯಾರ ಮನಸ್ಸು 'ಉಚ್ಚೈಃಶ್ರವಾ' ಅರ್ಥಾತ್ ಕೀರ್ತಿಯ ಮೋಹದಲ್ಲಿ ಸಿಲುಕಿಕೊಂಡಿದೆಯೋ ಅವರಿಗೆ ಅಮೃತವು ದೊರಕುವುದಿಲ್ಲ. ಅಸುರರು 'ಉಚ್ಚೈಃಶ್ರವ' ವನ್ನು ತೆಗೆದುಕೊಂಡಿದ್ದರು ಆದ ಕಾರಣ ಅವರಿಗೆ ಅಮೃತವು ಸಿಗಲಿಲ್ಲ. ಸಮುದ್ರ ಮಂಥನದಿಂದ ಯಾವಾಗ 'ಐರಾವತ' ವೆಂಬ ಆನೆ ಹೊರಬಂದಿತೋ ಆಗ ಅಸುರರು ಕುದುರೆಯನ್ನು ಆರಿಸಿಕೊಂಡದ್ದಕ್ಕಾಗಿ ಪಶ್ಚಾತ್ತಾಪ ಪಡಹತ್ತಿದರು. ಆನೆಯು ಸೂಕ್ಷ್ಮದೃಷ್ಟಿಯ ಪ್ರತೀಕವಾಗಿದೆ. ಆನೆಯ ಕಣ್ಣುಗಳು ಬಹಳ ಸಣ್ಣಗಿರುತ್ತವೆ. ದೇವತೆಗಳಿಗೆ ಆ ಆನೆಯನ್ನು ಕೊಡಲಾಯಿತು. ಸ್ಥೂಲ ದೃಷ್ಟಿಯು ದೇಹದೃಷ್ಟಿಯಾಗಿರುತ್ತದೆ. ಸೂಕ್ಷ್ಮದೃಷ್ಟಿಯು ಆತ್ಮದೃಷ್ಟಿಯಾಗಿರುತ್ತದೆ. ಸೂಕ್ಷ್ಮದೃಷ್ಟಿಯವರಿಗೆ ಅಮೃತವು ದೊರೆಯುತ್ತದೆ.

ಸುರರು ಅಸುರರಿಗೆ ಹೇಳಿದುದೇನೆಂದರೆ 'ಇದಾದ ಮೇಲೆ ಮುಂದೆ ಮಂಥನದಲ್ಲಿ ಏನು ಹೊರಬರುತ್ತದೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ' ಎಂದರು. ಪಾರಿಜಾತ ಮತ್ತು ಅಪ್ಸರೆಯನ್ನು ಸುರರಿಗೆ ಕೊಡಲಾಯಿತು.

ಇದಾದ ನಂತರ ಮಂಥನದಲ್ಲಿ ಲಕ್ಷ್ಮಿ ಪ್ರಕಟಳಾದಳು. ಇವಳು ಸಾಕ್ಷಾತ್ ಜಗದಂಬೆ. ಮಹಾಮಾಯೆಯಾಗಿದ್ದಳು. ಅಸುರರು ಯೋಚಿಸುದುದೇನೆಂದರೆ, ಇವಳು ನಮಗೆ ಸಿಕ್ಕರೆ ಬಹಳ ಸಂತೋಷವಾಗಬಹುದು. ಆದರೆ ಕೇಳಿಕೊಳ್ಳುವವರಿಗೆ ಮತ್ತು ಇಚ್ಛಿಪಟ್ಟವರಿಗೆ ಲಕ್ಷ್ಮಿ ಎಂದಿಗೂ ಸಿಗುವುದಿಲ್ಲ. ಲಕ್ಷ್ಮಿಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಲಾಯಿತು. ಲಕ್ಷ್ಮಿಯು ಯೋಚಿಸಹತ್ತಿದಳು. ಯಾರ ಕೊರಳಲ್ಲಿ ವರಮಾಲೆಯನ್ನು ಹಾಕಲಿ. ಸರ್ವಗುಣ ಸಂಪನ್ನ ವ್ಯಕ್ತಿಯ ಶೋಧನೆಯಲ್ಲಿ ತೊಡಗಿದಳು. ಅಲ್ಲಿ ಋಷಿ, ಮುನಿ, ದೇವ, ದಾನವರೆಲ್ಲರೂ ಕುಳಿತಿದ್ದರು. ಆದರೆ ಲಕ್ಷ್ಮಿಯು ಈ ಎಲ್ಲರಲ್ಲಿ ಭಗವಾನ್ ನಾರಾಯಣನೇ ಉತ್ತಮನಾಗಿದ್ದಾನೆ ಎಂಬುದನ್ನು ಗ್ರಹಿಸಿ ಅವಳು ಅವನ ಕೊರಳಲ್ಲಿ ವರಮಾಲೆಯನ್ನು ಹಾಕಿದಳು. ಆಗ ದೈತ್ಯರು ವಿಚಾರ ಮಾಡಹತ್ತಿದರು. ಒಂದೇ ಸಾರಿ ಒಂದು ಕುದುರೆಯನ್ನು ಆರಿಸಿಕೊಂಡೆವು ಈಗ ಎಲ್ಲವೂ ದೇವತೆಗಳ ಪಾಲಾಗುತ್ತಿದೆಯಲ್ಲಾ ಎಂದು ವ್ಯಥೆಪಟ್ಟರು. ಈಗ ಏನು ಹೊರಬರುತ್ತದೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಈ ಬಾರಿ 'ಮದಿರೆ' ಯು ಹೊರಬಂದಿತು. ದೈತ್ಯರಿಗೆ ಮದಿರೆಯು ದೊರಕಿತು.

ಸಮುದ್ರಮಂಥನ ಮತ್ತೆ ಮುಂದೆ ನಡೆಯಿತು. ಆಗ ಭಗವಾನ್ ಧನ್ವಂತರಿಯು ಅಮೃತ-ಕುಂಭವನ್ನು ಎತ್ತಿಕೊಂಡು ಪ್ರಕಟವಾದನು. ದೈತ್ಯರು ಆ ಕುಂಭವನ್ನು ಅವನಿಂದ ಕಸಿದುಕೊಂಡರು. ದೇವತೆಗಳು ದುಃಖಿತರಾಗಿ ಭಗವಂತನಲ್ಲಿ ಶರಣು ಹೋದರು. ಆಗ ಭಗವಂತನು ಹೇಳಿದುದೇನೆಂದರೆ - 'ಈಗ ಶಕ್ತಿಯಿಂದಲ್ಲ ಯುಕ್ತಿಯಿಂದ ಕೆಲಸವನ್ನು ಮಾಡಬೇಕು'. ಯಾವ ದೈತ್ಯನ ಕೈಯಲ್ಲಿ ಮೊದಲು ಅಮೃತಕುಂಭವು ಸಿಕ್ಕಿತ್ತೋ ಅವನು ನಾನು ಮೊದಲು ಕುಡಿಯುತ್ತೇನೆಂದ. ಅದಕ್ಕೆ ಅವನಿಗಿಂತ ಹಿರಿಯವನಾದವ ನಾನು ಮೊದಲು ಕುಡಿಯುತ್ತೇನೆಂದ. ಅದಕ್ಕೆ ಉಳಿದೆಲ್ಲರು ನಾನು ಮೊದಲು ನಾನು ಮೊದಲು ಎಂದು ಆ ಅಮೃತ ಕುಂಭಕ್ಕೆ ಮುತ್ತಿಗೆ ಹಾಕಿ ತಮ್ಮ ತಮ್ಮಲ್ಲೇ ಜಗಳವನ್ನಾಡ ಹತ್ತಿದರು. ಆ ಜಗಳದಿಂದಾಗಿ ಅವರಿಗೆ ಅಮೃತವು ದೊರಕಲಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರ ಮನೆಯಲ್ಲಿ ಈ ದೈತ್ಯರಂತೆ ಗೃಹಕ್ಲೇಶವಿರುತ್ತದೋ ಆ ಮನೆಯಲ್ಲಿ ಯಾರಿಗೂ ಸಹ ಜ್ಞಾನಾಮೃತ ಸಿಗುವುದಿಲ್ಲ.

ಜಗಳವಾಡುತ್ತಿರುವ ದೈತ್ಯರ ಸಮೂಹದ ಮಧ್ಯೆದಲ್ಲಿ ಭಗವಂತನು ಮೋಹಿನಿಯ ರೂಪವನ್ನು ಧರಿಸಿ ಪ್ರಕಟವಾದನು. ಮೋಹಿನಿಯ ಸೌಂದರ್ಯವನ್ನು ನೋಡಿ ದೈತ್ಯರು ಹುಚ್ಚರಂತಾದರು. 'ಆಹಾ! ಎಂತಹ ಸೌಂದರ್ಯ, ಎಂತಹ ಲಾವಣ್ಯ' ಎಂದು ಕೊಂಡಾಡತೊಡಗಿದರು.

ಮೋಹಿನಿಯು ಮೋಹದ ಸ್ವರೂಪವಾಗಿದೆ. ಯಾರು ಮೋಹಿನಿಯಲ್ಲಿ ಆಸಕ್ತರಾಗುತ್ತಾರೊ ಅವರಿಗೆ ಅಮೃತವು ಸಿಗುವುದಿಲ್ಲ. ಸಂಸಾರದ ಪ್ರತ್ಯೇಕ ವಸ್ತುವಿನಲ್ಲಿ ಮಾಯೆ ಅಡಗಿದೆ. ಸೌಂದರ್ಯವೆಂಬುದು ಕೇವಲ ಕಲ್ಪನೆಯಾಗಿದೆ. ಒಬ್ಬನಿಗೆ ಒಂದು ವಸ್ತು ಸುಂದರವಾಗಿ ಕಾಣುತ್ತದೆ. ಆದರೆ ಅದೇ ವಸ್ತು ಇನ್ನೊಬ್ಬನಿಗೆ ಸುಂದರವಾಗಿ ಕಾಣದೇ ಇರಬಹುದು. ಸೌಂದರ್ಯ ನೋಡುವ ಕಣ್ಣುಗಳಲ್ಲಿರುತ್ತದೆ. ಅರ್ಥಾತ್ ಅವನ ಮನದಲ್ಲಿರುತ್ತದೆ. ಯಾರಿಗೆ ಮೋಹಿನಿಯ ಮೋಹ ಅಂಟಿಕೊಳ್ಳುತ್ತದೋ ಅಂತಹವರಿಗೆ ಜ್ಞಾನರೂಪಿ ಅಮೃತ ದೊರಕುವುದಿಲ್ಲ.

ಕಾಮಾತುರರಾದ ದೈತ್ಯರು ಮೋಹಿನಿಯನ್ನು ಸುತ್ತುವರೆದು ಪ್ರಶ್ನೆಯನ್ನು ಕೇಳತೊಡಗಿದರು. 'ದೇವಿ, ನೀನು ಎಲ್ಲಿಂದ ಬಂದೆ? ನಿನ್ನ ಊರು ಯಾವುದು? ನಿನಗೆ ವಿವಾಹವಾಗಿದೆಯೆ?' ಮೋಹಿನಿಯ ಮಾಯೆಯಲ್ಲಿ ದೈತ್ಯರು ತಮ್ಮ ಬುದ್ಧಿ, ಜ್ಞಾನ, ಎಲ್ಲವನ್ನೂ ಕಳೆದುಕೊಂಡರು.

ಆಗ ಭಗವಂತನು, ಈ ದೈತ್ಯರಿಗೆ ಅಮೃತವನ್ನು ಕೊಡದೆ ಇರುವುದರಲ್ಲಿಯೆ ಕಲ್ಯಾಣವಿದೆ ಎಂದು ದೃಢಪಡಿಸಿಕೊಂಡನು. ಒಂದು ಪಕ್ಷ ಇವರಿಗೆ ಸಿಕ್ಕಿತೆಂದರೆ ಅವರು ಅಮರತ್ವವನ್ನು ಪಡೆದುಕೊಂಡು ಅಭಿಮಾನಿಗಳಾಗಿ ಹೆಚ್ಚಾಗಿ ಪಾಪವನ್ನು ಮಾಡುವರು.

ಮೋಹಿನಿಯು ನಗುತ್ತಾ ಹೇಳಿದಳು 'ನಾನಾದರೋ ನಿಮ್ಮ ಕಲ್ಯಾಣಕ್ಕಾಗಿಯೇ ಬಂದಿದ್ದೇನೆ. ನನಗೆ ಯಾವುದೇ ಒಂದು ಎನ್ನುವ ಮನೆಯಿಲ್ಲ. ನನಗೆ ಬಹಳಷ್ಟು ಮನೆಗಳಿವೆ. ಯಾವ ಪುರುಷನು ನನ್ನನ್ನು ಪ್ರೀತಿಸುತ್ತಾನೋ ನಾನು ಅವನ ಮನೆಯಲ್ಲಿರುತ್ತೇನೆ.' ದೈತ್ಯರು ಮೂರ್ಖರಿದ್ದರು. ಮೋಹಿನಿಯ ವಚನಗಳ ಗೂಢಾರ್ಥವನ್ನು ತಿಳಿಯದೇ ಹೋದರು. ಯಾವ ದೈತ್ಯನ ಕೈಯಲ್ಲಿ ಅಮೃತಕುಂಭವಿತ್ತೋ ಅವನು ಮೋಹಿನಿಯನ್ನುದ್ದೇಶಿಸಿ ಆಸೆ ಬುರುಕ ಕಣ್ಣುಗಳಿಂದ ನೋಡುತ್ತಾ ಹೇಳಿದ 'ನಾನು ಈ ಕುಂಭವನ್ನು ನಿನಗೆ ಉಡುಗೊರೆಯಾಗಿ ಕೊಡುತ್ತೇನೆ' ಎಂದ. ಕುಂಭದ ಆಸೆಯನ್ನು ತೋರಿಸಿದರೆ ಮೋಹಿನಿಯು ತನ್ನ ಮನೆಗೆ ಬಂದಾಳು ಎಂಬ ವಿಚಾರ ಮಾಡಿ ಆ ಮಾತನ್ನಾಡಿದ ಮತ್ತು ದೈತ್ಯನು ಆ ಕುಂಭವನ್ನು ಮೋಹಿನಿಯ ಕೈಯಲ್ಲಿ ಕೊಟ್ಟು ಹೀಗೆಂದರು 'ದೇವಿಯು ಹಂಚುತ್ತಾಳೆ ಮತ್ತು ನಾವೆಲ್ಲಾ ಶಾಂತಿಯಿಂದ ಕುಡಿಯೋಣ. ಜಗಳಮಾಡುವುದು ಬೇಡ'. ಮೋಹಿನಿ ದೇವಿಯು ದೇವ ಮತ್ತು ದಾನವರ ಎರಡು ಪಂಕ್ತಿಗಳನ್ನಾಗಿ ಮಾಡಿ ಎಲ್ಲರನ್ನೂ ಕುಳ್ಳಿರಿಸಿ ಮೊದಲು ದಾನವರ ಪಂಕ್ತಿಯ ಕಡೆಗೆ ಹೋಗಿ ಹೀಗೆಂದಳು 'ನಾನು ನಿಮ್ಮ ಕಲ್ಯಾಣವನ್ನು ಮಾಡಬೇಕೆಂದಿದ್ದೇನೆ. ಈ ಕುಂಭದಲ್ಲಿ ಮೇಲಿರುವ ಅಮೃತವು ನೀರಿನಂತಿದೆ. ಅದನ್ನು ದೇವರುಗಳಿಗೆ ಕುಡಿಸುತ್ತೇನೆ ಮತ್ತು ತಳದಲ್ಲಿ ಗಟ್ಟಿಯಾಗಿ ಉಳಿದುಕೊಂಡಿರುವ ಅಮೃತವನ್ನು ನಿಮಗೆ ಕೊಡುತ್ತೇನೆ ಸರಿ ತಾನೆ?' ಎಂದು ಹೇಳಿದಳು. ಅದಕ್ಕೆ ಆ ಮೋಹಾಂಧ ದೈತ್ಯರು ಹೇಳಿದರು. 'ಸರಿ ಸರಿ ತಳಗಿರುವ ಒಳ್ಳೆಯ ಅಮೃತವನ್ನೇ ಕುಡಿಯುತ್ತೇವೆ. ನಿನ್ನ ಕೈಯಿಂದ ಒಂದು ಹನಿಯೂ ಸಿಕ್ಕರೂ ಸಹ ನಮಗೆ ತೃಪ್ತಿ'.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರು ಮೋಹಾಂಧರಾಗಿ ಬುದ್ಧಿಯನ್ನು ಕಳೆದುಕೊಂಡಿದ್ದರು. ಒಂದೇ ಘಟದಲ್ಲಿ ಅಮೃತವೂ ಎರಡು ಪ್ರಕಾರವಾಗಿ ಹೇಗಿರಲು ಸಾಧ್ಯ. ದೈತ್ಯರು ಹೇಳಿದರು 'ದೇವಿ! ನಿನಗೆ ಏನು ಯೋಗ್ಯವೆಂದು ಅನಿಸುತ್ತದೆಯೋ ಹಾಗೆಯೇ ಮಾಡು' ಎಂದರು.

ಆಗ ಮೋಹಿನಿದೇವಿಯು ದೇವತೆಗಳಿಗೆ ಅಮೃತವನ್ನು ಹಂಚಲು ಪ್ರಾರಂಭಿಸಿದಳು. ಸ್ವಲ್ಪ ಹೊತ್ತಿನ ನಂತರ ದೈತ್ಯರು ಶಂಕಿತರಾಗಿ ಯೋಚನೆ ಮಾಡಹತ್ತಿದರು. ಇದರಲ್ಲಿ ಏನೋ ಮೋಸವಿದ್ದಂತೆ ಕಾಣುತ್ತದೆ. ಯಾಕೋ ಅನುಮಾನವಾಗುತ್ತಿದೆ ಎಂದುಕೊಳ್ಳಹತ್ತಿದರು. ಆಗ ದೈತ್ಯನಾದ 'ರಾಹು' ವು ಯೋಚನೆ ಮಾಡಿದ್ದೇನೆಂದರೆ, ಇದರಲ್ಲಿ ಏನೋ ಕಪಟವಿದೆ. ಹೀಗೆಯೇ ನೋಡುತ್ತಾ ಕುಳಿತರೆ ನಾನು ಅಮೃತದಿಂದ ವಂಚಿತನಾಗಬಹುದು ಮತ್ತು ಆ ನಾರಿಯ ಮಾತನ್ನು ನಂಬಿ ಬಹಳ ದೊಡ್ಡ ತಪ್ಪು ಮಾಡಿದೆವು ಎಂದು ಯೋಚಿಸುತ್ತಾ ದೇವತೆಗಳ ಪಂಕ್ತಿಯಲ್ಲಿ ಬಂದು ಕುಳಿತುಕೊಂಡ. ರಾಹುವು ದೇವತೆಗಳ ಪಂಕ್ತಿಯಲ್ಲಿ ಸೂರ್ಯ ಮತ್ತು ಚಂದ್ರರ ಮಧ್ಯೆಯಲ್ಲಿ ಕುಳಿತುಕೊಂಡ. ಮೋಹಿನಿ ದೇವಿಗೆ ಇವನು ದೈತ್ಯನೆಂದು ತಿಳಿಯಿತು ಆದರೆ ಪಂಕ್ತಿಭೇದವನ್ನು ಮಾಡಬಾರದು ಎಂಬ ಉದ್ದೇಶದಿಂದ 'ರಾಹು' ಗೆ ಅಮೃತವನ್ನು ಹಂಚಿದಳು.

ಯಾವಾಗ ಇಂದ್ರಾದಿ ದೇವತೆಗಳಿಗೆ ಅಮೃತವು ಹಂಚಲ್ಪಡುತ್ತಿತ್ತೋ ಆಗ ರಾಹುವು ಅಲ್ಲಿಗೆ ಹೋಗಲಿಲ್ಲ. ಆದರೆ ಯಾವಾಗ ಸೂರ್ಯ ಮತ್ತು ಚಂದ್ರರಿಗೆ ಹಂಚಲ್ಪಡುತ್ತಿತ್ತೋ ಆಗ ಅವರ ಮಧ್ಯದಲ್ಲಿ ಹೋಗಿ ಕುಳಿತುಕೊಂಡ. ಈ ಘಟನೆಗೆ ವಿಶಿಷ್ಟವಾದ ಅರ್ಥವಿದೆ. ಅದೇನೆಂದರೆ - ಮನಸ್ಸಿನ ಸ್ವಾಮಿ ಚಂದ್ರನಾಗಿದ್ದಾನೆ. ಚಂದ್ರನು ಮನದ ಸ್ವರೂಪ. ಬುದ್ಧಿಯ ಸ್ವಾಮಿಯು ಸೂರ್ಯನು. ಸೂರ್ಯನು ಬುದ್ಧಿಯ ಸ್ವರೂಪ. ಕೈಗಳಿಂದ ಮತ್ತು ನಾಲಗೆಯಿಂದ ಯಾವಾಗ ಮನುಷ್ಯ ಭಕ್ತಿಯನ್ನು ಮಾಡುತ್ತಾನೋ, ಆಗ ವಿಷಯ ರೂಪಿ ರಾಹುವು ಯಾವ ಅಡಚಣೆಯನ್ನು ಉಂಟು ಮಾಡುವುದಿಲ್ಲ. ಆದರೆ ಯಾವಾಗ ಮನುಷ್ಯನು ಮನದಿಂದ ಮತ್ತು ಬುದ್ಧಿಯಿಂದ ಭಗವಂತನ ಧ್ಯಾನವನ್ನು ಮಾಡುತ್ತಾನೋ ಆಗ ವಿಷಯ ರೂಪಿ ರಾಹುವು ಅಡಚಣೆಯನ್ನುಂಟು ಮಾಡಲು ಪ್ರಾರಂಭಿಸುತ್ತಾನೆ. ಮನಸ್ಸು-ಬುದ್ಧಿಗಳಿಗೆ ಯಾವಾಗ ಭಕ್ತಿ ರೂಪಿ ಅಮೃತವು ಸಿಗಲಾರಂಭವಾಗುತ್ತದೊ, ಆಗ ರಾಹುವಿಗೆ ಅದನ್ನು ಸಹಿಸಲು ಆಗುವುದಿಲ್ಲ. ಆದ್ದರಿಂದ ಅವನು ವಿಘ್ನಗಳನ್ನು ಉಂಟುಮಾಡುತ್ತಾನೆ. ಈ ವಿಷಯ ರೂಪಿ ರಾಹುವನ್ನು ಜ್ಞಾನವೆಂಬ ಚಕ್ರದಿಂದ ನಾಶಗೊಳಿಸಬೇಕು.

ಯಾವಾಗ ರಾಹುವು ಅಮೃತವನ್ನು ಪಡೆದುಕೊಂಡು ಇನ್ನೇನು ಅದನ್ನು ಬಾಯಿಯಲ್ಲಿ ಹಾಕಿಕೊಳ್ಳುತ್ತಿದ್ದಂತೆಯೆ, ಭಗವಂತನು ತನ್ನ ಸುದರ್ಶನ ಚಕ್ರದಿಂದ ಅವನ ಶಿರಸ್ಸನ್ನು ಹಾರಿಸಿದನು. ವಿಘ್ನವನ್ನು ತಂದೊಡ್ಡುತ್ತಿದ್ದ ವಿಷಯ ರೂಪಿ ರಾಹುವನ್ನು ಜ್ಞಾನಚಕ್ರದಿಂದ ನಾಶಗೊಳಿಸಿದನು. ಜ್ಞಾನವೇ ಇಲ್ಲವೆಂದ ಮೇಲೆ ವಿಷಯಾಸಕ್ತನಾಗಿ ಮನುಷ್ಯನು ಪಾಪಾತ್ಮನಾಗುತ್ತಾನೆ. ಹೇಗೆ ಮೊದಲಿಗೆ, ಜ್ಞಾನ-ವೈರಾಗ್ಯಮೂರ್ತಿಯಾದ ಶಂಕರನು ಹಾಲಾಹಲ ವಿಷವನ್ನು (ದುಃಖವನ್ನು) ಅರಗಿಸಿಕೊಂಡನೋ ಹಾಗೆ ಜ್ಞಾನಪ್ರಭಾವದಿಂದ ಎಲ್ಲಾ ಭೇದ-ಭಾವಗಳು ಸಂಪೂರ್ಣವಾಗಿ ದಗ್ಧವಾಗುತ್ತವೆ. ಯಾಕೆಂದರೆ, ಎಲ್ಲಾ ದುಃಖಗಳ ಮೂಲದಲ್ಲಿ ಏಕಮಾತ್ರವಾದ ಭೇದ-ಭಾವನೆಯ ರಾಜ್ಯವಿರುತ್ತದೆ.

ಶ್ರುತಿ ಹೇಳುವುದೇನೆಂದರೆ -

'ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಯಾವ ಕಾಲಕ್ಕೆ ಜ್ಞಾನಿಪುರುಷನಿಗೆ ಎಲ್ಲಾ ಭೂತಗಳು ಆತ್ಮವೆಂದು ಕಾಣಿಸುತ್ತದೋ ಅರ್ಥಾತ್ ಆತ್ಮಭಾವನೆಗೆ ಪ್ರಾಪ್ತನಾಗುತ್ತಾನೋ ಆಗ ಆ ಆತ್ಮನಲ್ಲಿ ಯಾವ ತರಹದ ಶೋಕ ಅಥವಾ ಯಾವ ತರಹದ ಮೋಹವಿರಬಲ್ಲದು?"

ಶೋಕ ಮತ್ತು ಮೋಹವು, ಕಾಮ ಮತ್ತು ಕರ್ಮಗಳ ಬೀಜವನ್ನು ಅರಿಯದಿದ್ದವರೆಗೆ ಸಂಭವಿಸುತ್ತದೆ. ಆಕಾಶ ಸದೃಶವಾದಂತಹ ವಿಶುದ್ಧ ಆತ್ಮದ ಏಕತ್ವವನ್ನು ಕಾಣುವವನಿಗೆ ಎಲ್ಲಿಯ ಶೋಕ ಮತ್ತು ಎಲ್ಲಿಯ ಮೋಹ? ಆತ್ಮನ ವಿಶುದ್ಧ ಸ್ವರೂಪವನ್ನು ಅರಿಯುವ ಜ್ಞಾನಿಗೆ ಸಂಪೂರ್ಣ ಜಗತ್ತು ಈಶ್ವರಮಯವಾಗುತ್ತದೆ. ಈ ಸಂಪೂರ್ಣ ಜಗತ್ತು ಪರಮಾತ್ಮನ ಶರೀರವಾಗಿದೆ ಎಂಬ ಅರ್ಥದ ಪ್ರತಿಪಾದನೆಯನ್ನು 'ಯಸ್ಯಾತ್ಮಾ ಶರೀರಂ' 'ಯಸ್ಯಕ್ಷರಃ ಶರೀರಂ', 'ಜಗತ್ ಸರ್ವಂ ಶರೀರಂತೆ', 'ತತ್ಸರ್ವಂವ್ಯೈ ಹರೆಸ್ತನುಃ' ಇತ್ಯಾದಿ ಶ್ರೋತ-ಸ್ಮಾರ್ಥ ವ್ಯಾಕಗಳು ಹೇಳಿವೆ ಮತ್ತು ಪರಮಾತ್ಮ ಜಗತ್ತಿನ ಆತ್ಮವಾಗಿದ್ದಾನೆ ಎಂಬುವ ಪ್ರತಿಪಾದನೆಯನ್ನು 'ಐತದಾತ್ಮೀಮಿದಂ ಸರ್ವಂ' ಇತ್ಯಾದಿ, ಶ್ರುತಿಗಳು ಸ್ಪಷ್ಟಪಡಿಸಿವೆ.

ಈ ಪ್ರಕಾರವಾಗಿ ಸಂಪೂರ್ಣ ಜಗತ್ತು ಪರಮಾತ್ಮನ ಐಶ್ವರ್ಯವಾಗಿದೆ. ಸಂಪೂರ್ಣ ಜಗತ್ತನ್ನು ಪರಮಾತ್ಮನ ಐಶ್ವರ್ಯರೂಪವೆಂದು ತಿಳಿಯುವುದರಿಂದ ಜ್ಞಾನಿಗೆ ಶೋಕ, ಮೋಹ ಉಂಟಾಗುವುದಿಲ್ಲ. ಸಂಪೂರ್ಣ ಜಗತ್ತನ್ನು ಪರಮಾತ್ಮನ ಐಶ್ವರ್ಯವೆಂದು ತಿಳಿದವನಾದ ಆತ್ಮಜ್ಞ ಜನಕನು ಹೇಳಿರುವುದೇನೆಂದರೆ,

ಅನಂತಂ ಬತಮೆ ವಿತ್ತಂ ಯಸ್ಯಮೆ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನಮೆ ಕಿಂಚಿತ್ ಪ್ರದಹ್ಯತೆ॥

ಅರ್ಥಾತ್ : 'ನನ್ನ ಸಂಪತ್ತು ಅನಂತವಾಗಿದೆ. ಏಕೆಂದರೆ ನನ್ನದು ಎಂಬ ಯಾವ ವಸ್ತುವೂ ಇಲ್ಲ, ಈ ಎಲ್ಲಾ ವಸ್ತುಗಳಿಗೆ ವಾಸ್ತವಿಕವಾಗಿ ಪರಮಾತ್ಮನೇ ಸ್ವಾಮಿಯಾಗಿದ್ದಾನೆ. ಅಷ್ಟಲ್ಲದೆ, ಸಂಪೂರ್ಣ ಮಿಥಿಲಾ ನಗರಿ ಸುಡುತ್ತಿದ್ದರೂ ಕೂಡಾ ನನ್ನದೇನೂ ಸುಡುವುದಿಲ್ಲ'.

ಜ್ಞಾನಾಮೃತದಿಂದ ತೃಪ್ತನಾದ ಜ್ಞಾನಿಗೆ ಅನ್ಯ ಯಾವುದೇ ಸಂಸಾರಿಕ ಭೋಗ್ಯ ವಸ್ತುಗಳ ಪ್ರಯೋಜನವೇನು? ಅರ್ಥಾತ್ ಯಾವ ಪ್ರಯೋಜನವೂ ಇರುವುದಿಲ್ಲ.

'ಜ್ಞಾನಾಮೃತೇನ ತೃಪ್ತಸ್ಯ ಕಿಮನ್ಯೈರ್ಭೋಜ್ಯ ವಸ್ತುಭಿಃ'

ಹೀಗೆಂದು ಅನೇಕ ಗ್ರಂಥಗಳಲ್ಲಿ ಹೇಳಿದ್ದಾರೆ, ಅದೇನೆಂದರೆ ಜ್ಞಾನದಿಂದಲೇ ತೃಪ್ತಿಯು ದೊರೆಯುತ್ತದೆ. ಅನ್ಯಭೋಗ ಸಾಮಗ್ರಿಗಳು ಜ್ಞಾನಿಗೆ ತುಚ್ಛವಾಗಿರುತ್ತವೆ. ಇಂತಹ ನಿತ್ಯತೃಪ್ತನಿಗೆ ಮುಕ್ತಿಯೇ ಪರಮತೃಪ್ತಿಯಾಗಿದೆ. ಈ ವಿಷಯದಲ್ಲಿ ಸಿದ್ಧಾಂತ ಶಿಖಾಮಣಿಯಲ್ಲಿ ಬಹಳ ಸುಂದರವಾಗಿ ವರ್ಣಿಸಿದ್ದಾರೆ.

'ಮುಕ್ತಿರೇವ ಪರಾ ತೃಪ್ತಿಃ'

ಜ್ಞಾನಿಗೆ ಮುಕ್ತಿಯೇ ಪರಮತೃಪ್ತಿದಾಯಕವಾಗಿರುತ್ತದೆ. ಆದ್ದರಿಂದಲೇ ಅನ್ಯ ಯಾವುದೇ ಭೋಗ್ಯಸಾಧನಗಳ ಪ್ರಯೋಜನವಿರುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತಹ ಜ್ಞಾನಿಪುರುಷರು ತೃಪ್ತರಾದ ಮೇಲೆ ಅವರ ಬುದ್ಧಿಯು ಪರಮಾತ್ಮನ ಸ್ವರೂಪದಲ್ಲಿ ಸ್ಥಿರವಾಗುತ್ತದೆ. ಆಗ ದೊಡ್ಡ ದೊಡ್ಡ ಭೋಗ ಮತ್ತು ಐಶ್ವರ್ಯವು ರಸಹೀನ ಅರ್ಥಾತ್ ತುಚ್ಛವಾಗಿ ಕಾಣುತ್ತವೆ. ಅವರು ಅವುಗಳ ಪ್ರಾಪ್ತಿಯ ಇಚ್ಛೆಯನ್ನು ಮಾಡುವುದಿಲ್ಲ ಮತ್ತು ಅವು ಪ್ರಾಪ್ತವಾಗಲಿ ಅಥವಾ ನಷ್ಟವಾಗಲಿ ಅವುಗಳ ಬಗ್ಗೆ ಅವರಿಗೆ ಯಾವ ಪರಿವೆಯೇ ಇರುವುದಿಲ್ಲ. ತಮ್ಮ ಸ್ಥಿತಿಯಿಂದ ಸ್ವಲ್ಪವೂ ವಿಚಲಿತರಾಗುವುದಿಲ್ಲ. ಅದೇ ರೀತಿಯಾಗಿ ಮಹಾನ್ ದುಃಖದ ಪ್ರಾಪ್ತಿಯಾದರೂ ಅವಿಚಲಿತರಾಗಿರುತ್ತಾರೆ. ಅತ್ಯಂತ ದುಸ್ಸಾಹ್ಯವಾದ ಶೀತ-ಉಷ್ಣ, ಮಳೆ-ಸಿಡಿಲುಗಳಿಂದುಂಟಾಗುವ ಶಾರೀರಿಕ ಪಿಡೆ, ಅತಿ ಉತ್ಕಟವಾದ ರೋಗದಿಂದುಂಟಾಗುವ ವ್ಯಥೆ. ಅತ್ಯಂತ ಪ್ರೀತಿಪಾತ್ರವಾದ ವಸ್ತುಗಳ ಅಚಾನಕವಾಗಿ ಉಂಟಾಗುವ ವಿಯೋಗ ಮತ್ತು ಸಂಸಾರದಲ್ಲುಂಟಾಗುವ ಮಹಾನ್ ಅಪಮಾನ, ತಿರಸ್ಕಾರ, ನಿಂದೆ ಮುಂತಾದ ಯಾವುದೇ ಮಹಾನ್ ದುಃಖವನ್ನುಂಟು ಮಾಡುವ ಕಾರಣಗಳು, ಈ ಎಲ್ಲವೂ ಒಟ್ಟಿಗೆ ಸೇರಿ ಒಂದೇ ಸಾರಿಗೆ ಅವರ ಮುಂದೆ ಉಪಸ್ಥಿತರಾದರೂ ಸಹ ಜ್ಞಾನಿಗಳು ಅವರ ಸ್ಥಿತಿಯಿಂದ ಸ್ವಲ್ಪವಾದರೂ ಸಹ ವಿಚಲಿತರಾಗುವುದಿಲ್ಲ. ಇದರ ಕಾರಣವೇನೆಂದರೆ, ಪರಮಾತ್ಮನ ಸಾಕ್ಷಾತ್ಕಾರವಾದ ಮೇಲೆ ವಾಸ್ತುವಿಕವಾಗಿ ಜ್ಞಾನಿಯ ಮತ್ತು ಅವನ ಶರೀರದ ಸಂಬಂಧ ಕಡಿದು ಹೋಗಿರುತ್ತದೆ. ಆ ಶರೀರವು ಕೇವಲ ಲೋಕದೃಷ್ಟಿಯಿಂದ ಅಜ್ಞಾನಿಯದೆಂದು ತಿಳಿಯಲ್ಪಡುತ್ತದೆ. ಪ್ರಾರಬ್ಧಕ್ಕನುಸಾರವಾಗಿ ಅವನ ಶರೀರ, ಇಂದ್ರಿಯ ಮತ್ತು ಮನದೊಂದಿಗೆ ಸಂಸಾರಿಕ ವಸ್ತುಗಳ ಸಂಯೋಗ-ವಿಯೋಗಗಳಾಗುತ್ತಿರುತ್ತವೆ. ಶೀತ-ಉಷ್ಣ, ಮಾನ-ಅಪಮಾನ, ಸ್ತುತಿ-ನಿಂದೆ ಇತ್ಯಾದಿ ಅನುಕೂಲ-ಪ್ರತಿಕೂಲ ಭೋಗ ಪದಾರ್ಥಗಳ ಪ್ರಾಪ್ತಿ ಮತ್ತು ವಿನಾಶಗಳು ಆಗುತ್ತಿರುತ್ತವೆ. ಆದರೆ ಸುಖ-ದುಃಖಗಳ ಭೋಕ್ತಾ ಇಲ್ಲದೇ ಇರೋಣವಾಗಿ ಅವನ ಅಂತಃಕರಣದಲ್ಲಿ ಯಾವಾಗಲೂ ಯಾವುದೇ ಅವಸ್ಥೆಯಲ್ಲಿಯೂ ಸಹ ಯಾವುದೇ ನಿಮಿತ್ತದಿಂದ ಯಾವುದೇ ಪ್ರಕಾರವಾದ ಪರಿಣಾಮವು ಅವನ ಪರಮಾತ್ಮನೊಂದಿಗಿನ ನಿತ್ಯ ಅಚಲಸ್ಥಿತಿಯಲ್ಲಿ ಕಿಂಚಿತ್ ಮಾತ್ರವೂ ವಿಕಾರವನ್ನುಂಟು ಮಾಡುವುದಿಲ್ಲ. ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

ಸಮಸ್ತ ನದಿಗಳ ನೀರು ಸ್ವಾಭಾವಿಕವಾಗಿಯೇ ಸಮುದ್ರ ಕಡೆಗೆ ಹರಿಯುತ್ತದೆ. ಅವುಗಳ ಪ್ರವಾಹವನ್ನು ಹಠಪೂರ್ವಕವಾಗಿ ತಡೆಯಲಾಗುವುದಿಲ್ಲ. ಅದೇ ರೀತಿಯಾಗಿ ಸಮಸ್ತ ಪ್ರಾಣಿಗಳು ತಮ್ಮ-ತಮ್ಮ ಪ್ರಕೃತಿಗೆ ಅಧೀನರಾಗಿ ಪ್ರಕೃತಿಯ ಪ್ರವಾಹದಲ್ಲಿ ಇದ್ದುಕೊಂಡು ಪ್ರಕೃತಿಯ ಕಡೆಗೆ ಹೋಗುತ್ತವೆ. ಜ್ಞಾನಿಯೂ ಸಹ ತನ್ನ ಪ್ರಕೃತಿಗೆ ಅನುಗುಣವಾಗಿ ವ್ಯವಹರಿಸುತ್ತಾನೆ. ಆದರೆ, ಅಜ್ಞಾನಿ ಮನುಷ್ಯನು ಪ್ರಕೃತಿಯ ಅಧೀನನಾಗಿರುತ್ತಾನೆ, ಅವನು ಹೇಗೆ ಪ್ರಕೃತಿಯ ಪ್ರವಾಹವನ್ನು ಹಠಪೂರ್ವಕವಾಗಿ ನಿಲ್ಲಿಸಬಲ್ಲ?

ವಸ್ತುತಃ ಜ್ಞಾನಿಗೆ ಪೂರ್ವಾರ್ಜಿತ ಕರ್ಮಗಳ ಸಂಸ್ಕಾರದ ಯಾವ ಪ್ರಕಾರದಿಂದಲೂ ಸಂಬಂಧವಿರುವುದಿಲ್ಲ. ಆದರೆ ಅವನ ಅಂತಃಕರಣದಲ್ಲಿ ಪೂರ್ವಾರ್ಜಿತ ಪ್ರಾರಬ್ಧದ ಸಂಸ್ಕಾರಗಳಿರುತ್ತವೆ ಮತ್ತು ಅವನು ಅದಕ್ಕನುಗುಣವಾಗಿ ಅವನ ಬುದ್ಧಿ, ಮನ ಮತ್ತು ಇಂದ್ರಿಯಗಳ ಮುಖಾಂತರ ಪ್ರಾರಬ್ಧ ಭೋಗ ಮತ್ತು ಲೋಕ ಸಂಗ್ರಹಕ್ಕೋಸ್ಕರ ಕರ್ತ ಎಂಬ ಭಾವನೆಯಿಲ್ಲದೆ ಕ್ರಿಯೆಗಳನ್ನು ಮಾಡುತ್ತಿರುತ್ತಾನೆ. ಆ ಕ್ರಿಯೆಗಳು ಲೋಕದೃಷ್ಟಿಯಿಂದ ಜ್ಞಾನಿಯ ಮೇಲೆ ಅಧ್ಯಾರೋಪವಾಗುತ್ತದೆ ಮತ್ತು ಜ್ಞಾನಿಯೂ ಸಹ ತನ್ನ ಪ್ರಕೃತಿಗೆ ತಕ್ಕಂತೆ ವ್ಯವಹರಿಸುತ್ತಾನೆ ಎಂಬು ತಿಳುವಳಿಕೆ ಜನರಲ್ಲಿ ಉಂಟಾಗುತ್ತದೆ. ಜ್ಞಾನಿಯ ವ್ಯವಹಾರವು ಕರ್ತೃತ್ವ ಭಾವವಿಲ್ಲದೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಡೆಯುವುದರಿಂದ ರಾಗ-ದ್ವೇಷ ಮತ್ತು ಅಹಂತಾ-ಮಮತಾಗಳು ಸರ್ವಥಾ ಶೂನ್ಯವಾಗಿರುತ್ತವೆ. ಅರ್ಥಾತ್ ಅವರ ವ್ಯವಹಾರವು ಕೇವಲ ಚೇಷ್ಟೆ ಮಾತ್ರವಾಗಿರುತ್ತದೆ ಅಥವಾ ಹೊರನೋಟಕ್ಕೆ ವ್ಯವಹಾರದಂತೆ ಕಾಣಿಸಿಕೊಳ್ಳುತ್ತದೆ. ಹೇಗೆ ಸರ್ಪದ ವಿಷದ ಹಲ್ಲನ್ನು ಕಿತ್ತ ಮೇಲೆ ಅದರ ಕಡಿಯುವಿಕೆ ಕೇವಲ ಚೇಷ್ಟೆಯಾಗಿ ಕಾಣುತ್ತದೊ ಹಾಗೆ.

ಜ್ಞಾನಿಯ ಅಂತಃಕರಣದಲ್ಲಿ ರಾಗ-ದ್ವೇಷ ಮತ್ತು ಹರ್ಷ-ಶೋಕ ಇತ್ಯಾದಿ ವಿಕಾರಗಳಿರುವುದಿಲ್ಲ. ಯಾಕೆಂದರೆ ಜ್ಞಾನಿಯ ಸಂಬಂಧ ಅಂತಃಕರಣದೊಂದಿಗೆ ಇರುವುದಿಲ್ಲ. ಅವನ ಅಂತಃಕರಣ ಅತ್ಯಂತ ಪವಿತ್ರವಾಗಿರುತ್ತದೆ. ನಿರಂತರವಾಗಿ ಪರಮಾತ್ಮನ ಚಿಂತನೆಯನ್ನು ಮಾಡುತ್ತಾ ಮಾಡುತ್ತಾ ಅಂತಃಕರಣದಲ್ಲಿನ ಮಲ, ವಿಕ್ಷೇಪ ಮತ್ತು ಆವರಣವೆಂಬ ಈ ಮೂರು ದೋಷಗಳ ಸರ್ವಥಾ ಅಭಾವವುಂಟಾಗಿರುತ್ತದೆ. ಈ ಕಾರಣದಿಂದ ಅಂತಃಕರಣದಲ್ಲಿ ಅವಿದ್ಯಾ ಮೂಲವಾದ ಅಹಂತಾ-ಮಮತಾ, ರಾಗ-ದ್ವೇಷ, ಹರ್ಷ-ಶೋಕ, ದಂಭ-ಕಪಟ, ಕಾಮ-ಕ್ರೋಧ, ಲೋಭ-ಮೋಹ ಮುಂತಾದ ವಿಕಾರಗಳಿರುವುದಿಲ್ಲ. ಆದ ಕಾರಣ ಜ್ಞಾನಿ ಪುರುಷನ ಅತ್ಯಂತ ನಿರ್ಮಲ ಮತ್ತು ಪವಿತ್ರ ಅಂತಃಕರಣದಲ್ಲಿ ಸಮತಾ, ಸಂತೋಷ, ದಯಾ, ಕ್ಷಮಾ, ನಿಃಸ್ಪೃಹತಾ, ಶಾಂತಿ ಮುಂತಾದ ಸದ್ಗುಣಗಳು ಸ್ವಾಭಾವಿಕವಾಗಿ ಸ್ಫುರಣಗೊಳ್ಳುತ್ತವೆ, ಮತ್ತು ಲೋಕ ಸಂಗ್ರಹಕ್ಕೋಸ್ಕರ ಅವರ ಮನಸ್ಸು, ಇಂದ್ರಿಯ ಮತ್ತು ಶರೀರದಿಂದ ಶಾಸ್ತ್ರ ವಿಹಿತವಾದ ಕರ್ಮಗಳು ನಡೆಯುತ್ತಿರುತ್ತವೆ. ದುರ್ಗುಣ ಮತ್ತು ದುರಾಚಾರಗಳು ಅವರಲ್ಲಿ ಲವಲೇಶವೂ ಇರುವುದಿಲ್ಲ. ಆದರೆ ಇತಿಹಾಸ ಮತ್ತು ಪುರಾಣಗಳ ಕಥೆಯಲ್ಲಿ, ಇಂತಹ ಬಹಳವಾದ ಪ್ರಸಂಗಗಳು ಬಂದಿವೆ. ಯಾವುದರಲ್ಲಿ ಜ್ಞಾನಿಗಳು ಮತ್ತು ಸಿದ್ಧಪುರುಷರ ಅಂತಃಕರಣದಲ್ಲಿ ಕಾಮ-ಕ್ರೋಧಾದಿ ದುರ್ಗುಣಗಳ ಪ್ರಾದುರ್ಭಾವ ಮತ್ತು ಅವರ ಇಂದ್ರಿಯಗಳ ಮೂಲಕ ಇಂದ್ರಿಯಗಳ ಇಚ್ಛೆಯಂತೆ ಕ್ರಿಯೆಯನ್ನು ನಡೆಸಿದ್ದು ಸಿದ್ಧವಾಗಿದೆ. ಈ ವಿಷಯದಲ್ಲಿ ತಿಳಿದುಕೊಳ್ಳಬೇಕಿರುವುದೇನೆಂದರೆ - ಉದಾಹರಣೆಗಿಂತ ವಿಧಿ-ವಾಕ್ಯ ಬಲವಾಗಿರುತ್ತದೆ ಮತ್ತು ವಿಧಿ-ವಾಕ್ಯಗಿಂತಲೂ ನಿಷೇಧ ಪರ ವಾಕ್ಯ ಅಧಿಕ ಬಲಶಾಲಿಯಾಗಿರುತ್ತದೆ. ಇದನ್ನು ಅನ್ಯತ್ರ ಶಾಸ್ತ್ರಗಳಲ್ಲಿಯೂ ಸಹ ಹೇಳಿರುವುದೇನೆಂದರೆ -

'ವಿಧೇರ್ನಿಬೇಧೋ ಬಲೀಯಾನ್ ವಿಧಿರುದಾಹರಣಾಚ್ಚ'

ಇದೂ ಅಲ್ಲದೆ ಇತಿಹಾಸ-ಪುರಾಣದ ಕಥೆಗಳಲ್ಲಿ ಯಾವ ಉದಾಹರಣೆಗಳು ಸಿಗುತ್ತವೆಯೋ ಅವುಗಳ ರಹಸ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಬಹಳ ಕಠಿಣವಾದ ಕೆಲಸ. ಆದುದರಿಂದ, ಒಂದು ಮಾತನ್ನು ಒಪ್ಪಿಕೊಳ್ಳುವುದು ಸರಿಯೆಂದು ಕಾಣುತ್ತದೆ. ಅದೇನೆಂದರೆ, ಒಂದು ಪಕ್ಷ ಯಾರೋಬ್ಬರ ಅಂತಃಕರಣದಲ್ಲಿ ನಿಜವಾಗಲೂ ಕಾಮ-ಕ್ರೋಧಾದಿಗಳ ಪ್ರಾದುರ್ಭಾವವಾಗಿದ್ದು ಮತ್ತು ಅದರಂತೆ ಕ್ರಿಯೆಗಳಾಗಿದ್ದರೆ ಅವರು ಖಂಡಿತ ಜ್ಞಾನಿ (ಮಹಾತ್ಮ) ಗಳಲ್ಲ. ಏಕೆಂದರೆ ಶಾಸ್ತ್ರಗಳಲ್ಲಿ ಎಲ್ಲಿಯೂ ಜ್ಞಾನಿಗಳಲ್ಲಿ ಕಾಮ-ಕ್ರೋದಾದಿ ಅವಗುಣಗಳಿರುತ್ತವೆ ಎಂಬ ವಿಧಿವಾಕ್ಯಗಳಿಲ್ಲ. ಅಂತಹವರ ನಿಷೇಧವನ್ನು ಮಾಡಿರುವುದು ಕೆಲವೊಂದು ಕಡೆ ಕಂಡು ಬರುತ್ತದೆ.

ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಮ್ ।
ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್ ॥

- ಗೀತಾ ೫-೨೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನಿಪುರುಷರ ಅಂತಃಕರಣವು ಸರ್ವಥಾ ಪರಿಶುದ್ಧವಾಗಿರುತ್ತದೆ. ಆದ್ದರಿಂದಲೇ ಅವರಲ್ಲಿ ಕಾಮ-ಕ್ರೋಧಾದಿ ವಿಕಾರಗಳು ಲೇಶ ಮಾತ್ರವೂ ಇರಲು ಸಾಧ್ಯವಿಲ್ಲ. ಆದರೆ ವ್ಯವಹಾರ ಕಾಲದಲ್ಲಿ ಅವಶ್ಯಕತೆಗನುಸಾರವಾಗಿ ಅವನ ಮನಸ್ಸು ಮತ್ತು ಇಂದ್ರಿಯಗಳ ಮೂಲಕ ಒಂದು ಪಕ್ಷ ಶಾಸ್ತ್ರಾನುಕೂಲಕ್ಕಾಗಿ ಕಾಮ-ಕ್ರೋಧಗಳು ಪ್ರಕಟಣೆಗೊಂಡರೆ ಅದನ್ನು ನಾಟಕದಲ್ಲಿ ಪಾತ್ರವನ್ನು ಮಾಡಿದಂತೆ, ಕೇವಲ ಲೋಕಸಂಗ್ರಹಕ್ಕೋಸ್ಕರ ಮಾಡಿದ ಲೀಲೆಯೆಂದು ತಿಳಿಯಬೇಕು.

ಬಾಹ್ಯ ವಿಷಯಗಳ ಜೊತೆಗೆ 'ಜೀವ' ನ ಸಂಬಂಧ ಅನಾದಿಕಾಲದಿಂದ ನಡೆದು ಬಂದಿದೆ ಮತ್ತು ಆದರ ಅಂತಃಕರಣದಲ್ಲಿ ವಿಷಯಗಳ ಅಸಂಖ್ಯ ಚಿತ್ರಗಳು ತುಂಬಿಕೊಂಡಿವೆ. ವಿಷಯಗಳಲ್ಲಿ ಸುಖಬುದ್ಧಿ ಮತ್ತು ರಮಣೀಯ ಬುದ್ಧಿ ಇರುವುದರಿಂದ ಮನುಷ್ಯನು ಅನವರತವಾಗಿ ವಿಷಯ ಚಿಂತನೆಯನ್ನು ಮಾಡುತ್ತಿರುತ್ತಾನೆ ಮತ್ತು ಪೂರ್ವ ಸಂಚಿತ ಸಂಸ್ಕಾರ ವಶದಿಂದ ಅವನ ಮನಸ್ಸಿನಲ್ಲಿ ಆಸಕ್ತಿ ಮತ್ತು ಕಾಮನೆಯ ಬೆಂಕಿ ಉರಿಯುತ್ತಲೇ ಇರುತ್ತದೆ. ಯಾವುದೇ ಸಮಯದಲ್ಲಿ ಅವನ ಮನಸ್ಸು ಶಾಂತವಾಗಿರಲಾರದು. ಅವನು ವಿಷಯಗಳನ್ನು ತ್ಯಾಗ ಮಾಡಿ ಏಕಾಂತವಾಸದಲ್ಲಿ ಧ್ಯಾನಕ್ಕೆ ಕುಳಿತರೂ ಸಹ ವಿಷಯಗಳ ಸಂಸ್ಕಾರಗಳು ಅವನ ಬೆನ್ನು ಬಿಡುವುದಿಲ್ಲ. ಇದಕ್ಕೆ ಪ್ರಧಾನ ಕಾರಣವೆಂದರೆ ನಿರಂತರವಾಗಿ ಆಗುವ ವಿಷಯ-ಚಿಂತನೆ. ಎಲ್ಲಿಯವರೆಗೆ ಈ ವಿಷಯ ಚಿಂತನೆ ನಿಲ್ಲುವುದಿಲ್ಲವೋ ಅಲ್ಲಿಯವರೆಗೆ ವಿಷಯಗಳಲ್ಲಿ ಸುಖಬುದ್ಧಿ ಉಂಟಾಗುತ್ತಿರುತ್ತದೆ. ಆದುದರಿಂದ ವಿವೇಕ ಮತ್ತು ವೈರಾಗ್ಯದ ಬಲದಿಂದ, ಸಂಪೂರ್ಣ ಬಾಹ್ಯ ವಿಷಯಗಳು ಕ್ಷಣ ಭಂಗುರ, ಅನಿತ್ಯ, ದುಃಖಮಯ ಮತ್ತು ದುಃಖದ ಕಾರಣಗಳೆಂದು ತಿಳಿದು ಅವುಗಳ ಸಂಸ್ಕಾರ ರೂಪವಾದ ಸಮಸ್ತ ಚಿತ್ರಗಳನ್ನು ಅಂತಃಕರಣದಿಂದ ತೆಗೆದು ಹಾಕಬೇಕು. ಅವುಗಳ ಸ್ಮೃತಿಯನ್ನು ಸರ್ವಥಾ ನಷ್ಟ ಮಾಡಬೇಕು. ಆಗ ಚಿತ್ತವು ಸುಸ್ಥಿರವಾಗುವುದು.

ಯಾರು ಇಂದ್ರಿಯ, ಮನಸ್ಸು ಮತ್ತು ಬುದ್ಧಿಯನ್ನು ತನ್ನ ವಶದಲ್ಲಿಟ್ಟುಕೊಂಡಿರುವನೋ ಮತ್ತು ಇಚ್ಛೆ, ಭಯ, ಕ್ರೋಧ ರಹಿತನಾಗಿದ್ದಾನೆಯೋ ಅರ್ಥಾತ್ ಯಾರ ಭಯ, ಇಚ್ಛೆ ಮತ್ತು ಕ್ರೋಧಗಳು ನಶಿಸಿ ಹೋಗಿವೆಯೇ ಅವನು ಸದಾ ಮುಕ್ತನಾಗಿರುತ್ತಾನೆ. ಬ್ರಹ್ಮತತ್ವವನ್ನು ಅರಿತ ಮೇಲೆ ವಿದ್ವಾನರಿಗೆ ಮೊದಲಿನಂತೆ ಸಂಸಾರದಲ್ಲಿ ಆಸ್ಥೆ ಇರುವುದಿಲ್ಲ ಮತ್ತು ಒಂದು ಪಕ್ಷ ಪುನಃ ಸಂಸಾರದಲ್ಲಿ ಆಸ್ಥೆಯು ಉಳಿದುಕೊಂಡಿದ್ದರೆ ಅವನನ್ನು ಸಂಸಾರಿಯೆಂದೇ ಪರಿಗಣಿಸಬೇಕು ಅವನಿಗೆ ಬ್ರಹ್ಮತತ್ವದ ಜ್ಞಾನವಾಗಿರುವುದಿಲ್ಲ.

ಯಾರ ಸಂಸಾರ-ವಾಸನೆಗಳು ಶಾಂತವಾಗಿವೆಯೋ, ಅವನು ಕಲಾವಂತನಾಗಿದ್ದರೂ ಕಲಾಹೀನನಾಗಿರುತ್ತಾನೆ. ಅರ್ಥಾತ್ ವ್ಯವಹಾರದ ದೃಷ್ಟಿಯಲ್ಲಿ ಮೇಲ್ನೋಟಕ್ಕೆ ವಿಕಾರವುಳ್ಳವನಾಗಿ ಕಾಣುತ್ತಿದ್ದರೂ ಸಹ ಅವನು ನಿರಂತರವಾಗಿ ತನ್ನ ನಿರ್ವಿಕಾರ ಸ್ವರೂಪದಲ್ಲಿ ಸ್ಥಿತನಾಗಿರುತ್ತಾನೆ ಮತ್ತು ಚಿತ್ತ ಯುಕ್ತನಾಗಿರುವುದರಿಂದ ನಿಶ್ಚಿಂತನಾಗಿರುತ್ತಾನೆ. 'ವೃತ್ತಿಗಳು ಲೀನವಾಗಿದ್ದರೂ ಸಹ ಜಾಗೃತನಾಗಿರುತ್ತಾನೆ'. ಇದರ ಅಭಿಪ್ರಾಯವೇನೆಂದರೆ, ಅವನ ಚಿತ್ತವು ಸಂಪೂರ್ಣ ದೃಶ್ಯ ಪದಾರ್ಥಗಳನ್ನು ನಿರ್ಲಕ್ಷಿಸಿ ನಿರಂತರವಾಗಿ ಬ್ರಹ್ಮನಲ್ಲಿ ಲೀನವಾಗಿರುತ್ತದೆ. ಆದರೂ ಸಹ ಅವನು ನಿದ್ರಿಸುತ್ತಿರುವ ಮನುಷ್ಯನಂತೆ ಸಂಜ್ಞಾಶೂನ್ಯನಾಗಿರುವುದಿಲ್ಲ. ಎಲ್ಲಾ ವ್ಯವಹಾರವನ್ನು ಯಥಾವತ್ತಾಗಿ ಮಾಡುತ್ತಿರುತ್ತಾನೆ. ಆದರೆ ವ್ಯವಹಾರವನ್ನು ಮಾಡುತ್ತಿರುವಾಗ ಅದನ್ನು ಸ್ವಪ್ನ ಎಂದು ತಿಳಿದುಕೊಂಡಿರುವುದರಿಂದ ಅವನಿಗೆ ಅನ್ಯ ಮನುಷ್ಯರಂತೆ ದೃಶ್ಯ ಪದಾರ್ಥಗಳಲ್ಲಿ ಆಸಕ್ತಿಯಿರುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದುದರಿಂದ ವಾಸ್ತವದಲ್ಲಿ ಅವನು ಜಾಗ್ರತಿಯ ಧರ್ಮಗಳಿಂದ ರಹಿತನಾಗಿರುತ್ತಾನೆ ಹಾಗೂ ಯಾರ ಬೋಧವು ಸರ್ವಥಾ ವಾಸನಾರಹಿತವಾಗಿರುತ್ತದೋ ಅಂತಹವನಿಗೆ ಜೀವನ್ಮುಕ್ತನೆಂದು ಕರೆಯುತ್ತಾರೆ.

ಬ್ರಹ್ಮಾನಂದ ರಸಸ್ವಾದದಲ್ಲಿ ಚಿತ್ತದ ಆಸಕ್ತಿ ಇರುವುದರಿಂದ ಅವನಿಗೆ ಹೊರಗಿನ ಮತ್ತು ಒಳಗಿನ ವಸ್ತುಗಳ ಪರಿವೆಯೇ ಇರುವುದಿಲ್ಲ. ದೇಹ, ಇಂದ್ರಿಗಳಲ್ಲಿ ಮತ್ತು ಕರ್ತವ್ಯದಲ್ಲಿ ಮಮತೆ ಮತ್ತು ಅಹಂಕಾರಗಳ ರಹಿತನಾಗಿ ಉದಾಸೀನಪೂರ್ವಕವಾಗಿ ವ್ಯವಹರಿಸುತ್ತಾನೆ. ಶ್ರುತಿ ಪ್ರಮಾಣದಂತೆ ತನ್ನ ಆತ್ಮದ ಬ್ರಹ್ಮತ್ವವನ್ನು ತಿಳಿದಿರುತ್ತಾನೆ ಹಾಗೂ ಸಂಸಾರ ಬಂಧನ ರಹಿತನಾಗಿರುತ್ತಾನೆ. ದೇಹ ಮತ್ತು ಇಂದ್ರಿಯಗಳಲ್ಲಿ ಅಹಂಭಾವ ಹಾಗೂ ಅನ್ಯವಸ್ತುಗಳಲ್ಲಿ ಇದಂ (ಇದು) ಭಾವ ಅಂಕುರಿಸುವುದಿಲ್ಲ. ಸಾಧುಜನರಿಂದ ತನ್ನ ಶರೀರದ ಸತ್ಕಾರ ನಡೆದಾಗಲೂ ಮತ್ತು ದುಷ್ಟ ಜನರಿಂದ ಪೀಡಿತನಾದಾಗಲೂ ಸಹ ಚಿತ್ತದ ಸಮಭಾವ ಇರುತ್ತದೆ.

ಯಾವ ವಸ್ತುವು ಎಲ್ಲಿ (ಯಾವ ಆಧಾರ ಮೇಲೆ) ಭ್ರಮೆಯಿಂದ ಕಲ್ಪಿತವಾಗಲ್ಪಡುತ್ತದೋ ಅದರ ಆಧಾರದ ಯಥಾವತ್ತಾದ ಜ್ಞಾನವಾಗುವುದರಿಂದ ಆ ಕಲ್ಪಿತ ವಸ್ತು ಆಧಾರದ ತದ್ರೂಪವೆಂಬುದು ನಿಶ್ಚಿತವಾಗುತ್ತದೆ. ಆಧಾರವನ್ನು ಹೊರತುಪಡಿಸಿ ಅದರ ಸತ್ತಾ (ಇರುವಿಕೆ) ಸಿದ್ಧವಾಗುವುದಿಲ್ಲ. ಯಾವ ರೀತಿ ಭ್ರಾಂತಿ ನಷ್ಟವಾದ ಕೂಡಲೆ ಹಗ್ಗದಲ್ಲಿ ಭ್ರಾಂತಿಯಿಂದ ಪ್ರತೀತವಾದ ಸರ್ಪವು ಹಗ್ಗದ ರೂಪವನ್ನು ಹೊಂದುತ್ತದೋ, ಹಾಗೆಯೇ ಅಜ್ಞಾನದ ನಷ್ಟವಾದ ಮೇಲೆ ಜ್ಞಾನಿ ಸಂಪೂರ್ಣ ವಿಶ್ವವನ್ನು ಆತ್ಮಸ್ವರೂಪವೆಂದೇ ತಿಳಿಯುತ್ತಾನೆ. ಹೇಗೆ ತರಂಗ-ನೊರೆ-ಗುಳ್ಳೆಗಳು ಇತ್ಯಾದಿ ಸ್ವರೂಪಗಳಲ್ಲಿ ನೀರೇ ಇದೆಯೋ, ಹಾಗೆಯೇ ದೇಹದಿಂದ ಹಿಡಿದು ಅಹಂಕಾರದವರೆಗೆ ಸಂಪೂರ್ಣ ವಿಶ್ವವು ಅಖಂಡ ಶುದ್ಧ ಚೈತನ್ಯ ಆತ್ಮನೇ ಆಗಿದೆ.

ಗೀತೆಯಲ್ಲಿ ಹೇಳಿರುವುದೇನೆಂದರೆ -

ವಿದ್ಯಾವಿನಯ ಸಂಪನ್ನೆ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥

ಗೀತಾ - ೫-೧೮

'ವಿದ್ಯಾವಿನಯ ಸಂಪನ್ನ ಬ್ರಾಹ್ಮಣನಲ್ಲಿ ಹಾಗೂ ಹಸು, ಆನೆ, ನಾಯಿ ಮತ್ತು ಚಾಂಡಾಲನಲ್ಲಿಯೂ ಸಮದರ್ಶನದ ಭಾವ'. ತತ್ವಜ್ಞಾನಿ ಸಿದ್ಧಪುರುಷರ ವಿಷಮ ಭಾವ ಸರ್ವಥಾ ನಷ್ಟವನ್ನು ಹೊಂದಿರುತ್ತದೆ. ಅವರ ದೃಷ್ಟಿಯಲ್ಲಿ ಒಬ್ಬನೇ ಸಚ್ಚಿದಾನಂದಘನ ಪರಬ್ರಹ್ಮ ಇರುತ್ತದೆ. ಪರಮಾತ್ಮನ ಹೊರತುಪಡಿಸಿ ಬೇರೆ ಯಾವುದೇ ಸತ್ತಾ (ಇರುವಿಕೆ) ಇರುವುದಿಲ್ಲ. ಆದ್ದರಿಂದ, ಅವರು ಸರ್ವತ್ರವೂ ಸಮಭಾವವನ್ನು ಹೊಂದಿರುತ್ತಾರೆ. ಈ ಮಾತನ್ನು ತಿಳಿಯಪಡಿಸಲೋಸುಗ ಭಗವಂತನು, ಮನುಷ್ಯರಲ್ಲಿ ಉತ್ತಮೋತ್ತಮನಾದ ಶ್ರೇಷ್ಠ ಬ್ರಾಹ್ಮಣ, ನೀಚರಲ್ಲಿ ನೀಚನಾದ ಚಾಂಡಾಲ ಮತ್ತು ಪಶುಗಳಲ್ಲಿ ಉತ್ತಮವಾದ ಹಸು, ಮಧ್ಯಮವಾದ ಆನೆ ಮತ್ತು ನೀಚವಾದ ನಾಯಿಯ ಉದಾಹರಣೆಯನ್ನು ಕೊಟ್ಟು ಅವುಗಳ ಸಮತ್ವವನ್ನು ದಿಗ್ದರ್ಶಿಸಿದ್ದಾನೆ. ಈ ಐದು ಪ್ರಾಣಿಗಳ ಜೊತೆಯಲ್ಲಿ ವ್ಯವಹರಿಸುವಾಗ ವಿಷಮತೆಯನ್ನು ಎಲ್ಲರೂ ಮಾಡುತ್ತಾರೆ ಮತ್ತು ಅದು ಅನಿವಾರ್ಯವೂ ಕೂಡ. ಹಸುವಿನ ಹಾಲನ್ನು ಎಲ್ಲರೂ ಕುಡಿಯುತ್ತಾರೆ. ಆದರೆ ನಾಯಿಯ ಹಾಲನ್ನು ಯಾರು ಕುಡಿಯುವುದಿಲ್ಲ. ಹಾಗೆಯೇ ಆನೆಯ ಮೇಲೆ ಸವಾರಿಯನ್ನು ಮಾಡಬಹುದು. ಆದರೆ

SRI JAGADGURU VISHWARADHYA
JNANA SIMHASAN JNANAMANDIR
LIBRARY
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಯಿಯ ಮೇಲೆ ಯಾರು ಸವಾರಿಯನ್ನು ಮಾಡಲಾರರು. ಯಾವ ವಸ್ತು ಶರೀರ ನಿರ್ವಹಣೆಗೋಸ್ಕರ ಪ್ರಾಣಿಗಳಿಗೆ ಅವಶ್ಯಕತೆಯಿದೆಯೋ, ಅದು ಮನುಷ್ಯನಿಗೆ ಅವಶ್ಯವಿರುವುದಿಲ್ಲ. ಶ್ರೇಷ್ಠ ಜ್ಞಾನಿ ಮಹಾತ್ಮರ ಪೂಜನ-ಸತ್ಕಾರಾದಿಗಳನ್ನು ಮಾಡುವ ಬಗ್ಗೆ ಶಾಸ್ತ್ರಗಳಲ್ಲಿ ಹೇಳಿದೆ. ಆದರೆ ಚಾಂಡಾಲನಿಗೆ ಇದು ಲಭ್ಯವಲ್ಲ. ಈ ಎಲ್ಲವುಗಳ ಉದಾಹರಣೆಯನ್ನು ಕೊಟ್ಟು ಭಗವಂತನು ಒಂದು ಮಾತನ್ನು ತಿಳಿಸುತ್ತಿರುವುದೇನೆಂದರೆ ಯಾವುದರಲ್ಲಿ ವ್ಯವಹಾರಿಕ ವಿಷಮತೆ ಅನಿವಾರ್ಯವಾಗಿದೆಯೋ ಅದರಲ್ಲಿಯೂ ಸಹ ಜ್ಞಾನಿಯು ಸಮಭಾವದಿಂದಿರುತ್ತಾನೆ.

ಹೇಗೆಂದರೆ, ವಿದ್ಯಾವಿನಯಸಾದ ಬ್ರಾಹ್ಮಣ ಸತ್ವಗುಣವೆಂತಲೂ, ಹಸು ಮತ್ತು ಆನೆ ರಜೋಗುಣವೆಂತಲೂ, ನಾಯಿ ಮತ್ತು ಚಾಂಡಾಲ ತಮೋಗುಣವೆಂತಲೂ, ಈ ಜಗತ್ತಿನೊಳಗಿನ ಐದು ಪ್ರಾಣಿಗಳನ್ನು ಮಾತ್ರ ಭಗವಂತನು ಆರಿಸಿಕೊಂಡಿದ್ದಾನೆ. ಇದರಂತೆ ಸತ್ವಗುಣ, ರಜೋಗುಣ ಮತ್ತು ತಮೋಗುಣಕ್ಕೆ ಸೇರಿದ ಸಮಸ್ತ ಜೀವರಾಶಿ ಎಂದರ್ಥ. ಈ ಜೀವರಾಶಿಗಳಲ್ಲಿ ಜ್ಞಾನಿಯಾದವನು ಸಮತ್ವವನ್ನು ಹೊಂದಿರುತ್ತಾನೆ. ಈ ಜಗತ್ತೆಂದರೆ ಪ್ರಕೃತಿಯೆಂದರ್ಥ. ಸಾಂಖ್ಯಶಾಸ್ತ್ರ ಹೇಳುವುದೇನೆಂದರೆ, ಈ ಜಗತ್ತು 'ತ್ರಿಗುಣಾತ್ಮಕ ಸಾಮ್ಯ' ಅವಸ್ಥೆಯಿಂದ ಕೂಡಿದೆ. ಹೀಗಿರೋಣದಿಂದ ಸಮಸ್ತ ಜಗತ್ತನ್ನು ಸಮದೃಷ್ಟಿಯಿಂದ ನೋಡಬೇಕೆಂಬ ಅರ್ಥ. ವಿಶ್ವಪ್ರೇಮವನ್ನು ಈ ಶ್ಲೋಕ ಬೋಧಿಸುತ್ತದೆ.

ಉದಾಹರಣೆಗೆ : ನಾಮದೇವನು ಜ್ಞಾನಪ್ರಾಪ್ತಿಯನ್ನು ಹೊಂದಿ ಮನೆಗೆ ಹಿಂತಿರುಗುವಾಗ, ಅವನು ಒಂದು ವೃಕ್ಷದ ಕೆಳಗೆ ಕುಳಿತು ಭೋಜನಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದ. ಆಗ ಒಂದು ನಾಯಿಯು ರೊಟ್ಟಿಯನ್ನು ಕಚ್ಚಿಕೊಂಡು ಓಡಿಹೋಗಹತ್ತಿತು. ಆಗ ನಾಮದೇವನು ಆ ನಾಯಿಯಲ್ಲಿಯೂ ಸಹ ಭಗವಂತನ ದರ್ಶನವನ್ನು ಪಡೆದ. ರೊಟ್ಟಿ ಒಣಗಿತ್ತು, ಆದ್ದರಿಂದ ಅವನು ತುಪ್ಪವನ್ನು ಕೈಯ್ಯಲ್ಲಿ ಹಿಡಿದುಕೊಂಡು ಕೂಗುತ್ತಾ ಅದರ ಹಿಂದೆ ಓಡಹತ್ತಿದ. 'ನಿಲ್ಲು, ನಿಲ್ಲು, ರೊಟ್ಟಿ ಒಣಗಿದೆ. ಅದನ್ನು ತಿನ್ನುವಾಗ ನಿನ್ನ ಗಂಟಲಿಗೆ ತೊಂದರೆಯಾಗಬಹುದು. ತುಪ್ಪವನ್ನು ಹಚ್ಚಿ ಕೊಡುತ್ತೇನೆ' ಎನ್ನುತ್ತಿದ್ದ.

ವೇದದಲ್ಲಿ ಹೇಳಿರುವುದೇನೆಂದರೆ ಪರಮಾತ್ಮನು ಸರ್ವತ್ರವೂ ಇದ್ದಾನೆ. ವಿಶ್ವತೋಮುಖಿಯಾಗಿದ್ದಾನೆ. ಯಾರು ಎಲ್ಲರಲ್ಲಿಯೂ ಆತ್ಮತತ್ವವನ್ನು ಕಾಣುತ್ತಾರೋ ಅವರೇ ಜ್ಞಾನಿಗಳಾಗಿರುತ್ತಾರೆ. ಅವರು ನಿರಂತರವಾಗಿ ಬ್ರಹ್ಮಾಕಾರ ವೃತ್ತಿಯಲ್ಲಿ ಸ್ಥಿತರಾಗಿರುವುದರಿಂದ ಅವರ ಬುದ್ಧಿಯು ಬಾಹ್ಯ ವಿಷಯಗಳನ್ನು ತೊರೆದಿರುತ್ತದೆ ಮತ್ತು ನಿದ್ರಾವಸ್ಥೆಯಲ್ಲಿರುವ ಮನುಷ್ಯನಂತೆ ಅಥವಾ ಸಣ್ಣಮಕ್ಕಳಂತೆ ಇನ್ನೊಬ್ಬರು ನಿವೇದಿಸಿದ ಭೋಗ್ಯ ಪದಾರ್ಥಗಳ ಸೇವನೆಯನ್ನು ಮಾಡುತ್ತಾರೆ. ಒಂದು ಪಕ್ಷ ಯಾವಾಗಲಾದರೂ ವಿಷಯಗಳಲ್ಲಿ ಬುದ್ಧಿಯು ಪ್ರವಿಷ್ಟವಾದರೆ ಈ ಸಂಸಾರವನ್ನು ಸ್ವಪ್ನ ಪ್ರಪಂಚಕ್ಕೆ ಸಮನೆಂದು ತಿಳಿಯುತ್ತಾರೆ. ಅವರಿಗೆ ಬೇರೆ ಯಾವ ಪದಾರ್ಥಗಳಲ್ಲಿ ಅಪೇಕ್ಷೆಯಿರುವುದಿಲ್ಲ. ಜ್ಞಾನಿಯು ಭೋಜನಾದಿ ವಿಷಯಗಳಲ್ಲಿ ಪ್ರವೃತ್ತಿಯನ್ನು ಹೊಂದುತ್ತಿದ್ದರೆ ಅದು ಕೇವಲ ಪ್ರಾರಬ್ಧದಿಂದಲೇ ಹೊರತು ಇಚ್ಛಾಪೂರ್ತಿಗೆಂದಲ್ಲ. ಜ್ಞಾನಿಯು ಭೋಜನಾದಿ ವ್ಯವಹಾರಗಳಲ್ಲಿ ಖೇದದಿಂದ ಭಾಗವಹಿಸುತ್ತಾರೆ. ಯಾಕೆಂದರೆ ಭೋಜನಾದಿಗಳಲ್ಲಿ ಪ್ರವೃತ್ತಿಯನ್ನು ಹೊಂದುವುದೆಂದರೆ ಅದು ಸಮಾಧಿ ಸುಖದ ವಿರೋಧಿಯಾಗಿದೆ. ಆದುದರಿಂದ ಭೋಜನಾದಿ ಶರೀರ ನಿರ್ವಹಣೆಯ ಕರ್ಮಗಳ ಪ್ರವೃತ್ತಿಯು ಖೇದ ರೂಪದಿಂದ ಪ್ರತೀತಿಗೊಳ್ಳುತ್ತವೆ. ಅವುಗಳಲ್ಲಿ

SRI JAGADGURU VISHWARADHYA JNANA SIMHASAN JNANAMANDIR LIBRARY

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾವುದೇ ಅಧಿಕವಾದ ಪ್ರವೃತ್ತಿ ಅವರುಗಳಿಗೆ ಇರುವುದಿಲ್ಲ. ಸಂಯಮಿಯಾದ ಜ್ಞಾನಿಯು ದೇಶ, ಕಾಲ, ವಸ್ತುಗಳಲ್ಲಿ ಪರಿಪೂರ್ಣವಾದ ನಿತ್ಯನಿರ್ಮಲ ಬ್ರಹ್ಮಾನಂದವನ್ನು ಪಡೆದ ಮೇಲೆ ಅವನಿಗೆ ಬೇರೆ ಯಾವುದೇ ತರಹದ ಅಪೇಕ್ಷೆ ಇರುವುದಿಲ್ಲ. ಏಕೆಂದರೆ ಅವನ ದೃಷ್ಟಿಯಲ್ಲಿ ಬ್ರಹ್ಮನನ್ನು ಬಿಟ್ಟರೆ ಬೇರೆ ಏನೂ ಕಾಣುತ್ತಿರುವುದಿಲ್ಲ.

ಜ್ಞಾನಿ ಪುರುಷರ ವ್ಯವಹಾರಗಳು ನಾನಾ ಪ್ರಕಾರದವುಗಳಾಗಿರುತ್ತವೆ. ಆದುದರಿಂದ ಜ್ಞಾನಿಗೆ ಪ್ರವೃತ್ತಿ ಅಥವಾ ನಿವೃತ್ತಿಗಳ ನಿಯಮಗಳ ಬಂಧನವಿಲ್ಲ. ಹೇಗೆಂದರೆ, ಯಾಜ್ಞವಲ್ಕ್ಯ, ಜನಕ, ಶುಕ, ವಾಮದೇವ, ವಶಿಷ್ಠಾದಿಗಳು ಜ್ಞಾನಿಗಳಾಗಿದ್ದರು. ಆದರೆ ಇವರ ವ್ಯವಹಾರಗಳು ಭಿನ್ನಭಿನ್ನವಾದ ಪ್ರಕಾರಗಳಿಂದ ಕೂಡಿಕೊಂಡು ವಿಲಕ್ಷಣವಾಗಿದ್ದವು. ಅವರೆಲ್ಲರಿಗೂ ಜ್ಞಾನ ಸಮಾನವಾಗಿತ್ತು.

ಕೃಷ್ಣೋ ಭೋಗಿ ಶುಕಸ್ತ್ಯಾಗಿ ರಾಜಾನೌ ಜನಕರಾಘವೌ ।
ವಶಿಷ್ಠಃ ಕರ್ಮಕರ್ತ್ತಾ ಚ ತೇ ಏತೇ ಜ್ಞಾನಿನಃ ಸಮಾಃ ॥

'ಕೃಷ್ಣಭೋಗದಲ್ಲಿ, ಶುಕತ್ಯಾಗದಲ್ಲಿ, ಜನಕ ರಾಜನಾಗಿದ್ದ ಹಾಗೂ ವಶಿಷ್ಠ ಮಹರ್ಷಿಗಳು ಕರ್ಮಕರ್ತರಾಗಿದ್ದರು. ಈ ರೀತಿಯಿಂದ ಇವರು ಪ್ರಾರಬ್ಧ ಭೇದದಿಂದ ವ್ಯವಹಾರವು ವಿಲಕ್ಷಣವಾಗಿದೆ ಆದರೂ ಅವರ ಜ್ಞಾನದಲ್ಲಿ ಸಮಾನವಾಗಿದ್ದರು'.

ಜ್ಞಾನಿಯ ಪ್ರಾರಬ್ಧ ಕರ್ಮ ಬಹಳಷ್ಟು ಪ್ರಬಲವಾಗಿರುತ್ತದೆ. ಅದರ ಕ್ಷಯವು ಭೋಗಿಸುವುದರಿಂದಲೇ ಮಾತ್ರ ಸಾಧ್ಯ. ಪ್ರಾರಬ್ಧ ಕರ್ಮದ ಹೊರತು ಇರತಕ್ಕಂತಹ ಕ್ರಿಯಮಾಣ ಸಂಚಿತ ಕರ್ಮಗಳನ್ನು ತತ್ವಜ್ಞಾನರೂಪ ಅಗ್ನಿಯಿಂದ ಕ್ಷಯವಾಗುತ್ತದೆ. ಆದರೆ ಯಾರು ಬ್ರಹ್ಮ ಮತ್ತು ಆತ್ಮದ ಏಕತೆಯನ್ನು ತಿಳಿದು ಯಾವಾಗಲೂ ಅದೇ ಭಾವದಲ್ಲಿ ಸ್ಥಿತರಾಗಿರುತ್ತಾರೋ, ಅವರ ದೃಷ್ಟಿಯಲ್ಲಿ ಪ್ರಾರಬ್ಧ, ಸಂಚಿತ ಮತ್ತು ಕ್ರಿಯಮಾಣವೆಂಬ ಮೂರು ಪ್ರಕಾರದ ಕರ್ಮಗಳಿರುವುದಿಲ್ಲ. ಅವರು ಸಾಕ್ಷಾತ್ ನಿರ್ಗುಣ ಬ್ರಹ್ಮರಾಗಿರುತ್ತಾರೆ. ಆ ಜ್ಞಾನಿಗಳು ಉಪಾದಿಗಳ ಸಂಬಂಧವನ್ನು ಬಿಟ್ಟು ಕೇವಲ ಬ್ರಹ್ಮಾತ್ಮ ಭಾವದಿಂದ ತನ್ನ ಸ್ವರೂಪದಲ್ಲಿ ಸ್ಥಿತರಾಗಿರುತ್ತಾರೆ. ಅವರ ಪ್ರಾರಬ್ಧ ಕರ್ಮದ ಸ್ಥಿತಿಯೆಂದರೆ, ಸ್ವಪ್ನದಲ್ಲಿ ಕಂಡ ಪದಾರ್ಥಗಳಿಗೆ ಎಚ್ಚರಗೊಂಡ ಮನುಷ್ಯನ ಜೊತೆಯಲ್ಲಿ ಸಂಬಂಧವನ್ನು ಏರ್ಪಡಿಸಿಕೊಂಡಂತೆ ಅನುಚಿತವಾಗುತ್ತದೆ. ಅವನು ಕೇವಲ ಜಾಗ್ರತ ಭಾವದಿಂದಲೇ ಇರುತ್ತಾನೆ. ಅವನಿಗೆ ಮಿಥ್ಯವಸ್ತುಗಳನ್ನು ಸಿದ್ಧ ಮಾಡಿ ತೋರಿಸುವ ಇಚ್ಛೆ ಉಂಟಾಗುವುದಿಲ್ಲ. ಸಂಸಾರಿಕ ಪದಾರ್ಥಗಳ ಸಂಗ್ರಹವನ್ನು ಮಾಡುವ ಇಚ್ಛೆಯಿರುವುದಿಲ್ಲ. ಆದರೂ ಒಂದು ಪಕ್ಷ, ಮಿಥ್ಯಾ ಪದಾರ್ಥಗಳಲ್ಲಿ ಪ್ರವೃತ್ತಿಯು ಉಂಟಾದರೆ, ನಿಶ್ಚಯವಾಗಿ ಅವನು ಇನ್ನೂ ವಾಸ್ತವ ಪ್ರಪಂಚದಲ್ಲಿಯೇ ಇದ್ದಾನೆ ಮತ್ತು ಅವನ ನಿದ್ರೆಯೂ ಹರಿದಿಲ್ಲ ಎಂದು ತಿಳಿಯಬೇಕು. ಈ ರೀತಿಯಾಗಿ ಸದಾ ಬ್ರಹ್ಮಭಾವದಲ್ಲಿರುವ ಪುರುಷನು ಬ್ರಹ್ಮರೂಪದಲ್ಲಿಯೇ ಸ್ಥಿತನಾಗಿರುತ್ತಾನೆ. ಅವನು ಬ್ರಹ್ಮನನ್ನು ಬಿಟ್ಟು ಬೇರೆ ಏನನ್ನೂ ನೋಡುವುದಿಲ್ಲ. ಹೇಗೆ ಸ್ವಪ್ನದಲ್ಲಿ ಕಂಡ ಪದಾರ್ಥಗಳ ನೆನಪು ಬರುತ್ತಿರುತ್ತದೋ ಹಾಗೆಯೇ ಜ್ಞಾನಿಯ ಭೋಜನ ಮಾಡುವುದು ಅಥವಾ ಬಿಡುವುದು ಮುಂತಾದ ಕ್ರಿಯೆಗಳು ಸ್ವಭಾವ ವಶವಾಗಿ ತನಗೆ ತಾನೆ ಆಗುತ್ತಿರುತ್ತವೆ. ದೇಹವು ಕರ್ಮಗಳಿಂದ ಮಾಡಲ್ಪಟ್ಟಿದೆ. ಆದ ಕಾರಣ ಪ್ರಾರಬ್ಧವೂ ದೇಹದ್ದೆಂದೇ ಭಾವಿಸಬೇಕು. ಅನಾದಿ ಆತ್ಮದ ಪ್ರಾರಬ್ಧವೆಂದು ತಿಳಿಯುವುದು ಸರಿಯಲ್ಲ. ಯಾಕೆಂದರೆ ಆತ್ಮ ಕರ್ಮದಿಂದ ತಯಾರಾಗಿರುವುದಿಲ್ಲ. ಆತ್ಮವು ಅಜನ್ಮ, ನಿತ್ಯ ಮತ್ತು ಅನಾದಿಯಾಗಿದೆ. ಹೀಗೆಂದು ಯಥಾರ್ಥ ಕಥನವನ್ನು ಮಾಡುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರುತಿಯು ಹೇಳುತ್ತದೆ. ಆದುದರಿಂದ ಆ ಆತ್ಮಸ್ವರೂಪದಲ್ಲಿಯೇ ಸದಾ ಸ್ಥಿತನಾಗಿರುವ ಜ್ಞಾನಿಗೆ ಪ್ರಾರಬ್ಧ ಕರ್ಮ ಉಳಿದುಕೊಂಡಿದೆ ಎಂಬ ಕಲ್ಪನೆಯನ್ನು ಹೇಗೆ ಮಾಡಲು ಸಾಧ್ಯ? ಪ್ರಾರಬ್ಧ ಸಿದ್ಧವಾಗುವುದು ಎಲ್ಲಿಯವರೆಗೆ ; ದೇಹವೇ ಆತ್ಮವೆಂಬ ಭಾವನೆ ಇರುವವರೆಗೆ ಮಾತ್ರ. ಆಗ ಪ್ರಾರಬ್ಧವು ಇದ್ದೇ ಇರುತ್ತದೆ. ಪ್ರಾರಬ್ಧ ಕರ್ಮಗಳ ಫಲರೂಪವಾಗಿ ಪ್ರಾಪ್ತವಾಗುವ ಸುಖದುಃಖಗಳ ಭೋಗಾಯತನ ಶರೀರವಾಗಿದೆ. ಆ ಶರೀರದ ಪ್ರಕಾಶಕ 'ನಾನು' ಅಭೋಕ್ತಾ ಪರಬ್ರಹ್ಮನಾಗಿದ್ದೇನೆ ಎಂಬ ಅನುಭವವನ್ನು ನಿಶ್ಚಯರೂಪದಿಂದ ಅರಿಯುವವ ಯಾವ ಜೀವನ್ಮುಕ್ತನಿದ್ದಾನೋ ಅವನು ಶರೀರದಲ್ಲಿದ್ದರೂ ಸಹ ಮುಕ್ತನಾಗಿರುತ್ತಾನೆ. ಅವನಿಗೆ ಯಾವುದೇ ಭೋಗದ ಕಿಂಚಿತ್ ಮಾತ್ರವಾದರೂ ಅವಶ್ಯಕತೆಯಿರುವುದಿಲ್ಲ. ಸಮಸ್ತ ಭೋಗಗಳು ಪ್ರಾರಬ್ಧಾನುಸಾರವಾಗಿ ತಾವಾಗಿಯೇ ಬಂದು ವಿಲೀನವಾಗುತ್ತವೆ ಮತ್ತು ಅವನು ಸ್ವತಃ ಯಾವುದೇ ಭೋಗದ ಕಾಮನೆಯನ್ನಿಟ್ಟು ಕೊಳ್ಳುವುದಿಲ್ಲ. ಯಾಕೆಂದರೆ ಸಿದ್ಧಾಂತ ಶಿಖಾಮಣಿಯಲ್ಲಿ ಈ ರೀತಿ ಹೇಳಿದೆ.

ಆತ್ಮಾನಂದೇನ ತೃಪ್ತಸ್ಯ ಕಾ ಸ್ಪೃಹಾ ವಿಷಯೇ ಸುಖೇ ।
ಗಂಗಾಜಲೇನ ತೃಪ್ತಸ್ಯ ಕೂಪತೋಯೆ ಕುತೋ ರತಿಃ ॥

- ಶ್ರೀ ಸಿದ್ಧಾಂತ ಶಿಖಾಮಣಿ

ಅರ್ಥಾತ್ : 'ಪವಿತ್ರ ಗಂಗಾಜಲದಿಂದ ತೃಪ್ತನಾದ ವ್ಯಕ್ತಿಗೆ ಬಾವಿಯ ನೀರಿನ ಇಚ್ಛೆ ಹೇಗೆ ಆಗಲು ಸಾಧ್ಯ? ಅರ್ಥಾತ್ ಇಚ್ಛೆಯಾಗುವುದಿಲ್ಲ. ಹಾಗೆಯೇ ಆತ್ಮಾನಂದದಿಂದ ತೃಪ್ತನಾದ ಜ್ಞಾನಿಗೆ ವಿಷಯ ಸುಖದ ಅಪೇಕ್ಷೆ ಇರುವುದಿಲ್ಲ'.

ಜ್ಞಾನಿ ಸಂಸಾರದಲ್ಲಿದ್ದರೂ ಸಹ ಸಂಸಾರದಿಂದ 'ಪುಷ್ಕರ ಪಲಾಶವತ್' (ಕಮಲಪತ್ರದಂತೆ) ಸರ್ವಥಾ ನಿರ್ಲೇಪನಾಗಿರುತ್ತಾನೆ. ಅರ್ಥಾತ್ ಶರೀರದಲ್ಲಿದ್ದರೂ ಸಹ ವಾಸ್ತವಿಕವಾಗಿ ಸ್ಥೂಲ, ಸೂಕ್ಷ್ಮ ಮತ್ತು ಕಾರಣವೆಂಬ ಈ ಮೂರು ಪ್ರಕಾರದ ದೇಹ ದ್ರಷ್ಟನಾಗಿರುತ್ತಾನೆ ಮತ್ತು ಅನುಕೂಲ ಪ್ರತಿಕೂಲ ಘಟನೆಗಳು ಪ್ರಾಪ್ತವಾದರೂ ಸಹ ಹರ್ಷ-ಶೋಕಗಳ ವಿಕಾರದಿಂದ ಸರ್ವಥಾ ಶೂನ್ಯನಾಗಿರುತ್ತಾನೆ.

ಕೆಲವು ಜನರ, ತಿಳುವಳಿಕೆ ಮತ್ತು ಘಟನೆಗಳನ್ನು ಆಕಲನ ಮಾಡುವ ಶಕ್ತಿ, ನೋಡುವ ದೃಷ್ಟಿ ಬೇರೆ-ಬೇರೆಯಾಗಿರುತ್ತವೆ. ಇಂತಹ ಕೆಲವು ಜನರು ಭಾವಿಸುವುದೇನೆಂದರೆ, ಒಬ್ಬ ವ್ಯಕ್ತಿ ಜೀವನ್ಮುಕ್ತನಾಗಿದ್ದರೂ ಸಹ ಅವನ ಅಂತಃಕರಣದಲ್ಲಿ ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರ, ಅಹಂಕಾರ, ರಾಗ-ದ್ವೇಷವೆಂಬ ವಿಕಾರಗಳಿರುತ್ತವೆ ಮತ್ತು ಅವುಗಳ ಪ್ರಭಾವದಿಂದ ಜ್ಞಾನಿಯು ಸುಳ್ಳು, ಕಪಟತನ, ಕಳ್ಳತನ, ವ್ಯಭಿಚಾರಾದಿ ನಿಷಿದ್ಧ ಕರ್ಮಗಳನ್ನು ಮಾಡುತ್ತಾನೆ ಎಂಬುದಾಗಿರುತ್ತದೆ.

ಆದರೆ ಈ ರೀತಿಯಾಗಿ ತಿಳಿಯುವುದು ಸರಿಯಲ್ಲ. ಏಕೆಂದರೆ ಜ್ಞಾನಿಯು ವಿಧಿ-ನಿಷೇಧದಿಂದ ಬಹಳ ಮೇಲಿರುತ್ತಾನೆ. ಅವನಿಗೆ ಯಾವ ಕರ್ತವ್ಯ-ಕರ್ಮಗಳು ಉಳಿದಿರುವುದಿಲ್ಲ. ಅವನಿಂದ ಯಾವ ನಿಷಿದ್ಧ ಕರ್ಮಗಳು ಉಂಟಾಗುವ ಪ್ರಶ್ನೆಯೇ ಬರುವುದಿಲ್ಲ. ನಿಷಿದ್ಧ ಆಚರಣೆಗಳು ಆಗುವುದಾದರೂ ಹೇಗೆ? ಶಾಸ್ತ್ರ ಮತ್ತು ಯುಕ್ತಿಗಳಲ್ಲಿ ಸಿದ್ಧಪಡಿಸಿರುವುದೇನೆಂದರೆ ಜ್ಞಾನಿಯ ಅಂತಃಕರಣದಲ್ಲಿ ಕಾಮ-ಕ್ರೋಧಾದಿಗಳು ಇರಲಿಕ್ಕೆ ಸಾಧ್ಯವಿಲ್ಲ ಮತ್ತು ನಿಷಿದ್ಧ ಕರ್ಮಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಂಟಾಗುವುದು ಕಾಮದಿಂದ, ಕಾಮದ ಮೂಲ ಆಸಕ್ತಿ, ಆಸಕ್ತಿಯ ಕಾರಣ ಅಜ್ಞಾನವಾಗಿದೆ. ಹೀಗಿರುವಾಗ ಒಂದು ಪಕ್ಷ ಜ್ಞಾನಿಯ ಅಂತರಂಗದಲ್ಲಿ ಆಸಕ್ತಿ ಇದೆ ಎಂದು ಭಾವಿಸಿದರೆ, ಜ್ಞಾನಿ ಮತ್ತು ಅಜ್ಞಾನಿಯಲ್ಲಿ ಯಾವ ಅಂತರ ಉಳಿಯಿತು? ಅರ್ಥಾತ್ ಯಾವ ಅಂತರವೂ ಇಲ್ಲ. ಜ್ಞಾನಿಗಳ ಮಾತೇ ಬೇರೆಯದಾಗಿರುತ್ತದೆ. ಕಾಮ-ಕ್ರೋಧಗಳನ್ನು ಸಾಧಾರಣ ಸಾಧಕನಿಗೂ ತ್ಯಾಗ ಮಾಡಬೇಕಾಗುತ್ತದೆ. ಗೀತೆಯಲ್ಲಿ ಹೇಳಿರುವುದೇನೆಂದರೆ ಕಾಮ, ಕ್ರೋಧ ಮತ್ತು ಲೋಭ. ಈ ಮೂರು ವಿಕಾರಗಳು ಆತ್ಮವನ್ನು ನಾಶ ಮಾಡುವಂತಹ ಅರ್ಥಾತ್ ಅದನ್ನು ಅಧೋಗತಿಗೆ ತೆಗೆದುಕೊಂಡು ಹೋಗುವ ಮೂರು ಪ್ರಕಾರದ ನರಕದ ದ್ವಾರಗಳಾಗಿವೆ. ಆದ್ದರಿಂದ ಈ ಮೂರು ವಿಕಾರಗಳನ್ನು ತ್ಯಜಿಸಬೇಕು. ಹೇ, ಅರ್ಜುನ! ಈ ಮೂರು ನರಕದ ದ್ವಾರಗಳಿಂದ ಮುಕ್ತನಾದ, ಅರ್ಥಾತ್ ಕಾಮ, ಕ್ರೋಧ ಮತ್ತು ಲೋಭಾದಿ ವಿಕಾರಗಳಿಂದ ತಪ್ಪಿಸಿಕೊಂಡ ಪುರುಷನು ತನ್ನ ಕಲ್ಯಾಣದ ಆಚರಣೆಯನ್ನು ಮಾಡುತ್ತಾನೆ. ಇದರಿಂದ ಅವನು ಪರಮಗತಿಯನ್ನು ಹೊಂದುತ್ತಾನೆ.

ಜ್ಞಾನಿ ಪುರುಷರಿಗೂ ಸಹ ಹೇಳಿರುವುದೇನೆಂದರೆ - 'ಕಾಮ ಕ್ರೋಧ ವಿಮುಕ್ತಾ ನಾಮ್' 'ಕಾಮ-ಕ್ರೋಧ ರಹಿತ' ವಿಶೇಷಣದ ಪ್ರಯೋಗವಾಗಿದೆ. ಇಷ್ಟಲ್ಲದೆ, ಜ್ಞಾನಿ ಪುರುಷರ 'ರಾಗ' ವೂ ಸಹ ನಾಶ ಹೊಂದುತ್ತದೆ, ಆದ್ದರಿಂದ ಜ್ಞಾನಿಯ ಅಂತರಂಗದಲ್ಲಿ ಕಾಮಕ್ರೋಧ ಮುಂತಾದ ಯಾವುದೇ ವಿಕಾರಗಳಿರುವುದಿಲ್ಲವಾದ್ದರಿಂದ ಅವರಿಂದ ನಿಷಿದ್ಧ ಕರ್ಮಗಳು ಉಂಟಾಗುವುದಿಲ್ಲವೆಂದು ತಿಳಿಯಬೇಕು.

ಜ್ಞಾನಿಯ ಅಂತಃಕರಣದಲ್ಲಿ 'ನಾನು ಕರ್ತ' ಎಂಬ ಭಾವನೆಯಿರುವುದಿಲ್ಲ. ಅವನ ಬುದ್ಧಿ ಸಂಸಾರಿಕ ಪದಾರ್ಥಗಳಲ್ಲಿ ಮತ್ತು ಕರ್ಮಗಳಲ್ಲಿ ಅಂಟಿಕೊಂಡಿರುವುದಿಲ್ಲ. ಇಂತಹ ಜ್ಞಾನಿಗಳು ಎಲ್ಲ ಕರ್ಮಗಳನ್ನು ಮಾಡುತ್ತಿದ್ದರೂ ಸಹ ಪಾಪದಿಂದ ಬಂಧಿತರಾಗುವುದಿಲ್ಲ.

ಹೇಗೆ, ಅಗ್ನಿ, ವಾಯು ಮತ್ತು ನೀರು. ಇವುಗಳಿಂದ ಪ್ರಾರಬ್ಧ ವಶದಿಂದ ಯಾವುದಾದರೂ ಪ್ರಾಣಿ ಮಾತ್ರಕ್ಕೆ ಹಿಂಸೆಯಾಗುತ್ತಿದ್ದಂತೆ ಕಂಡುಬಂದರೂ ಅದು ವಾಸ್ತವವಾಗಿ ಹಿಂಸೆಯಾಗುವುದಿಲ್ಲವೋ, ಹಾಗೆಯೇ ಜ್ಞಾನಿಯಲ್ಲಿ ಸ್ವಾರ್ಥರಹಿತ ಕ್ರಿಯೆಗಳು ಇರೋಣದಿಂದ ಆ ಪುರುಷನ ಶರೀರ ಮತ್ತು ಇಂದ್ರಿಯಗಳ ಮೂಲಕ ಒಂದು ಪಕ್ಷ ಯಾವುದೇ ಪ್ರಾಣಿ ಮಾತ್ರಕ್ಕೆ ಹಿಂಸೆಯಾದಂತೆ ಕಂಡು ಬಂದರೂ ಸಹ ಅದು ವಾಸ್ತವದಲ್ಲಿ ಹಿಂಸೆಯಾಗುವುದಿಲ್ಲ. ಏಕೆಂದರೆ, ಆಸಕ್ತಿ, ಸ್ವಾರ್ಥ ಮತ್ತು ಅಹಂಕಾರಗಳಿಲ್ಲದಿರುವುದರಿಂದ ಯಾವ ಪ್ರಾಣಿಯ ಹಿಂಸೆಯಾಗುವುದಿಲ್ಲ ಹಾಗೂ ಕರ್ತತ್ವಾಭಿಮಾನವಿಲ್ಲದೆ ಮಾಡಿದ ಕರ್ಮವು ವಾಸ್ತವದಲ್ಲಿ ಅಕರ್ಮವಾಗಿರುತ್ತದೆ. ಆದುದರಿಂದ ಆ ಜ್ಞಾನಿಯು 'ಪಾಪ' ದಿಂದ ಬಂಧಿತನಾಗುವುದಿಲ್ಲ.

ವ್ಯವಹಾರ ದೃಷ್ಟಿಯಿಂದ, ಸಾಮಾನ್ಯ ಜನರ ದೃಷ್ಟಿಯಿಂದ ನೋಡಿದಾಗ, ಜ್ಞಾನಿಗಳು ಕರ್ಮವನ್ನು ಮಾಡುತ್ತಿರುವಂತೆ, ಜೀವನವನ್ನು ನಡೆಸುತ್ತಿರುವಂತೆ ಕಾಣುತ್ತಿರುತ್ತಾರೆ, ಆದರೆ ವಾಸ್ತವದಲ್ಲಿ ಅವರಿಗೆ ಆ ಕರ್ಮದ ಯಾವ ಸಂಬಂಧವೂ ಇರುವುದಿಲ್ಲ. ಸಂಬಂಧವಿಲ್ಲದೆ ಯಾವುದೇ ಕರ್ಮ ನಡೆಯಲು ಹೇಗೆ ಸಾಧ್ಯ? ವೆಂದು ಯಾರಾದರೂ ಪ್ರಶ್ನಿಸಬಹುದು.

ವಾಸ್ತವದಲ್ಲಿ ಜ್ಞಾನಿಗಳು ಯಾವುದೇ ಕರ್ಮದ ಕರ್ತರಲ್ಲ. ಪೂರ್ವಕೃತ ಶುಭಾಶುಭ ಕರ್ಮಗಳಿಂದ ತಯಾರಾದ ಪ್ರಾರಬ್ಧದ ಅಲ್ಪಕರ್ಮವು ಶೇಷವಾಗಿ ಉಳಿದಿರುತ್ತದೆ. ಅದರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೋಗಕ್ಕೋಸ್ಕರ ಆದರದೇ ವೇಗದಿಂದ, ಕುಂಬಾರನು ಇಲ್ಲದಿದ್ದರೂ ಕುಂಬಾರನ ಚಕ್ರ ಹೇಗೆ ತಿರುಗುತ್ತಿರುತ್ತದೆಯೊ ಹಾಗೆ, ಕರ್ತನ ಅಭಾವದಿಂದಲೂ ಸಹ ಪರಮೇಶ್ವರನ ಸತ್ತೆಯ ಸ್ಫೂರ್ತಿಯಿಂದ ಪೂರ್ವ ಸ್ವಭಾವಕ್ಕನುಗುಣವಾಗಿ ಕರ್ಮವು ಆಗುತ್ತಲೇ ಇರುತ್ತದೆ, ಆದರೆ ಅವರು ಕರ್ತೃತ್ವ-ಅಭಿಮಾನ ಶೂನ್ಯರಾದುದರಿಂದ ಕರ್ಮದ ಯಾವುದೇ ಪುಣ್ಯ-ಪಾಪದ ಉತ್ಪಾದಕರಾಗುವುದಿಲ್ಲವಾದ್ದರಿಂದ ವಾಸ್ತವದಲ್ಲಿ ಅದನ್ನು ಕರ್ಮವೆಂದು ತಿಳಿಯುವುದಿಲ್ಲ.

ಜ್ಞಾನಿಗಳ ಭಾವ ಶುದ್ಧ ಮತ್ತು ಪವಿತ್ರವಾಗಿರುತ್ತದೆ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವುದೇನೆಂದರೆ -

ನ ದೇವತ್ವಂ ನ ಮಾನುಷ್ಯಂ ನ ತಿರ್ಯಕತ್ವಂ ನ ಚಾನ್ಯಥಾ ।
ಸರ್ವಾಕಾರತ್ವಮಾಖ್ಯಾತಂ ಜೀವನ್ಮುಕ್ತಸ್ಯ ಯೋಗಿನಃ ॥

"ಪುಣ್ಯಾದಿಗಳಿಂದ ಪ್ರಾಪ್ತವಾದ ದೇವಭಾವ, ಪುಣ್ಯಪಾಪಗಳ ಮಿಶ್ರಣದಿಂದ ಪ್ರಾಪ್ತವಾಗುವ ಮನುಷ್ಯಭಾವ, ಕೇವಲ ಪಾಪಕರ್ಮಗಳಿಂದ ಪ್ರಾಪ್ತವಾಗುವ ತಿರ್ಯಕ್ ಭಾವ ಅಥವಾ ಪ್ರಕೃತಿ ಗರ್ಭದಲ್ಲಿರುವ ಜಡಭಾವ, ಇವುಗಳಲ್ಲಿ ಯಾವುದೇ ಭಾವವು ಜ್ಞಾನಿಯಲ್ಲಿರುವುದಿಲ್ಲ". ಅವನು ಅವುಗಳಿಗೆ ಹೊರತಾಗಿ ಸ್ವತಃ ತಾನೇ ಸರ್ವಮಯವಾಗಿರುವುದರಿಂದ ಅವನಲ್ಲಿ ಭೇದ-ಭಾವಗಳಿರುವುದಿಲ್ಲ.

ಒಬ್ಬ ಜ್ಞಾನಿ ಮಹಾತ್ಮನಲ್ಲಿ, ಬಡಕುಟುಂಬದ ಒಬ್ಬ ತರುಣ ಅಧ್ಯಾತ್ಮ ವಿಷಯದ ಜಿಜ್ಞಾಸೆಯನ್ನು ಮಾಡಲು ಹೋಗುತ್ತಿದ್ದ. ಅವನು ಪ್ರತಿದಿನ ಶ್ರದ್ಧಾ-ಭಕ್ತಿಯಿಂದ ಜ್ಞಾನಿ ಪುರುಷನ ಉಪದೇಶವನ್ನು ಕೇಳಿಕೊಂಡು ಬರುತ್ತಿದ್ದ. ಆದರೆ ಮಧ್ಯದಲ್ಲಿ ಕೆಲವು ದಿವಸಗಳು ಅವನು ಜ್ಞಾನಿ ಮಹಾತ್ಮನ ಹತ್ತಿರ ಉಪದೇಶವನ್ನು ಕೇಳಲು ಬರಲಿಲ್ಲ. ಯಾಕೆಂದರೆ, ತಾಯಿತಂದೆಗೆ ಅವನೊಬ್ಬನೆ ಮಗನಾಗಿದ್ದನು. ಅವನಿಗೆ ಮದುವೆಯನ್ನು ಮಾಡಿದರು. ಆ ತರುಣನು, ಕೆಲದಿನಗಳ ನಂತರ ಜ್ಞಾನಿ ಮಹಾತ್ಮನ ಹತ್ತಿರ ಹೋದನು. ಆಗ ಜ್ಞಾನಿ ಮಹಾತ್ಮನು ಸ್ವಾಭಾವಿಕವಾಗಿ ಈ ಮಧ್ಯದಲ್ಲಿ ಉಪದೇಶವನ್ನು ಕೇಳಲು ಬರದೆ ಇದ್ದಕ್ಕೆ ಕಾರಣವನ್ನು ಕೇಳಿದನು. ಅದಕ್ಕೆ ಆ ತರುಣನು ಹೇಳಿದ 'ಮಹರಾಜ್, ನಾನು ನನ್ನ ತಂದೆತಾಯಿಗಳಿಗೆ ಒಬ್ಬನೇ ಮಗನು. ನಾನು ಮನೆಯಲ್ಲಿ ಸಂಸಾರದ ಕಡೆಗೆ ಲಕ್ಷವನ್ನು ಕೊಡದೆ ನಿಮ್ಮ ಉಪದೇಶವನ್ನು ಕೇಳುತ್ತಾ ಹೋದರೆ, ನಾನು ಎಲ್ಲಿ ಸಂನ್ಯಾಸಿಯಾಗಿ ಬಿಡುತ್ತೇನೊ ಎಂಬ ಹೆದರಿಕೆ ಅವರನ್ನು ಕಾಡುತ್ತಿತ್ತು, ಆದ್ದರಿಂದ ಇಲ್ಲಿಗೆ ಬರಲಿಕ್ಕೆ ನನಗೆ ಅಡ್ಡಿಯನ್ನುಂಟು ಮಾಡಿದ್ದರು ಮತ್ತು ನನ್ನ ಹೆಂಡತಿಯಂತೂ ನನಗೋಸ್ಕರ ತನ್ನ ಪ್ರಾಣವನ್ನೇ ಕೊಡುತ್ತಾಳೆ' ಎಂದನು. ಮುಂದುವರೆದು ಹೇಳಿದುದೇನೆಂದರೆ ತಾವುಗಳು ಸಂಸಾರಿಗಳ ಸಂಬಂಧವನ್ನು ಮಿಥ್ಯಾ ಎಂದು ಹೇಳುತ್ತೀರಿ, ಆದರೆ, ತಮಗೆ ಅದರ ಬಗ್ಗೆ ಯಾವ ಅನುಭವವಂತೂ ಇಲ್ಲ ಎಂದನು. ಅದಕ್ಕೆ ಜ್ಞಾನಿಮಹಾತ್ಮನು ಹೇಳಿದುದೇನೆಂದರೆ 'ಒಂದು ಪಕ್ಷ, ನೀನು ಹೇಳಿದುದು ನಿಜವಾಗಿದ್ದರೆ. ನಾವು ಯಾಕೆ ಅವರ ಪ್ರೇಮದ ಪರೀಕ್ಷೆ ಮಾಡಬಾರದು?' ಎಂದನು. ಆಗಲಿ ಎಂದು ಆ ತರುಣನು ಒಪ್ಪಿಕೊಂಡ. ಆಗ ಜ್ಞಾನಿಯು ಹೇಳಿದ 'ನಾನು ನಿನಗೆ ಒಂದು ವನಸ್ಪತಿ ಔಷಧಿಯನ್ನು ಕೊಡುತ್ತೇನೆ ಅದನ್ನು ಸೇವಿಸು. ನಿನ್ನ ಶರೀರದ ಶಾಖವು ಹೆಚ್ಚಾಗುತ್ತದೆ. ನಾನು ಉಪಚಾರ ಮಾಡಲಿಕ್ಕೆ ಬರುತ್ತೇನೆ. ಆಗ ಅಲ್ಲಿ ಏನು ನಡೆಯುತ್ತದೆಯೋ ಅದನ್ನು ನೋಡು' ಎಂದನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ತರುಣನು ಜ್ಞಾನಿ ಮಹಾತ್ಮನ ಆದೇಶದ ಪಾಲನೆಯನ್ನು ಮಾಡಿದ. ಮನೆಗೆ ಹೋದ ಮೇಲೆ ಮಹಾತ್ಮನು ಕೊಟ್ಟ ವನಸ್ಪತಿಯನ್ನು ಸೇವಿಸಿದನು. ಅವನ ಶರೀರವು ಇದ್ದಕ್ಕಿದ್ದಂತೆ ಬಿಸಿಯಾಗ ಹತ್ತಿತು. ಆಗ ಅವನ ತಂದೆ-ತಾಯಿ, ಹೆಂಡತಿ ಎಲ್ಲರೂ ಗಾಬರಿಯಾದರು ಮತ್ತು ತಕ್ಷಣವೇ ವೈದ್ಯರನ್ನು ಬರಹೇಳಿದರು. ಆದರೆ ವೈದ್ಯರ ಉಪಚಾರದಿಂದ ಶರೀರದ ಬಿಸಿಯು ಇಳಿಯಲಿಲ್ಲ. ತರುಣನ ಪತ್ನಿಯು ಗಾಬರಿಗೊಂಡು ನಡುಗುತ್ತಿದ್ದಳು ಮತ್ತು ಅಳಲು ಶುರುಮಾಡಿದಳು. ಅಷ್ಟರಲ್ಲಿ ಮಹಾತ್ಮನು ಅಲ್ಲಿಗೆ ಬಂದನು. ಎಲ್ಲರೂ ಅವರಿಗೆ ತರುಣನ ಉಪಚಾರವನ್ನು ಮಾಡಲು ಪ್ರಾರ್ಥಿಸಿದರು. ಜ್ಞಾನಿ ಮಹಾತ್ಮನು ಚಿಕಿತ್ಸೆಯನ್ನು ಮಾಡುತ್ತಾ ಹೇಳಿದನು. 'ಯಾರೋ ಇವನಿಗೆ ಮಂತ್ರ ಶಕ್ತಿಯಿಂದ ಕರಣಿಯನ್ನು (ಮಾಟ) ಮಾಡಿದ್ದಾರೆ. ನಾನು ಇದಕ್ಕೆ ಉಪಾಯವನ್ನು ಮಾಡಬಲ್ಲೆ' ಎಂದು ಒಂದು ಪಾತ್ರೆಯಲ್ಲಿ ನೀರನ್ನು ತರಿಸಿಕೊಂಡರು. ತರುಣನ ತಲೆಯಿಂದ ಕಾಲಿನವರೆಗೆ ನಿವಾಳಿಯನ್ನು ತೆಗೆದು, 'ನಾನು ನನ್ನ ಮಂತ್ರಶಕ್ತಿಯಿಂದ ಆ ಕರಣಿಯನ್ನು ತೆಗೆದು ಈ ನೀರಿನಲ್ಲಿ ಬಿಟ್ಟಿದ್ದೇನೆ. ಈಗ ಈ ತರುಣನನ್ನು ಉಳಿಸಿಕೊಳ್ಳಬೇಕೆಂದರೆ ಈ ನೀರನ್ನು ಯಾರಾದರೂ ಕುಡಿಯಬೇಕು' ಎಂದನು. ಆಗ ಎಲ್ಲರೂ ಒಂದೇ ಬಾರಿಗೆ ಕೇಳಿದರು 'ಮಹರಾಜ್, ಈ ನೀರನ್ನು ಕುಡಿಯುವವರ ಗತಿ ಏನಾಗಬಹುದು?' ಆಗ ಜ್ಞಾನಿ ಮಹಾತ್ಮನೆಂದನು. 'ಬಹುಶಃ ಅವರ ಸಾಯಲೂಬಹುದು ಆದರೆ ಈ ತರುಣ ಬದುಕುತ್ತಾನೆ' ಎಂದನು.

ಆ ತರುಣನ ತಾಯಿ ಹೇಳಿದಳು 'ನಾನು ನನ್ನ ಮಗನ ಪ್ರಾಣವನ್ನು ಉಳಿಸಲು ಈ ನೀರನ್ನು ಕುಡಿಯಲು ಸಿದ್ಧಳಿದ್ದೇನೆ, ಆದರೆ ನನ್ನ ಮೃತ್ಯುವಿನಂತರ, ನನ್ನ ವೃದ್ಧ ಪತಿಯನ್ನು ನೋಡಿಕೊಳ್ಳಲು ಯಾರಿದ್ದಾರೆ. ಅವರ ಸೇವೆಯನ್ನು ಯಾರು ಮಾಡುತ್ತಾರೆ?' ಅನಂತರ ತಂದೆಯು ಹೇಳಿದ 'ನಾನು ಈ ನೀರನ್ನು ಕುಡಿಯಬಹುದು. ಆದರೆ ನನ್ನ ಮೃತ್ಯುವಿನ ನಂತರ ಈ ನನ್ನ ವೃದ್ಧ ಪತ್ನಿಯನ್ನು ನೋಡಿಕೊಳ್ಳುವವರಾರು?' ಅವಳ ಗತಿ ಏನಾಗಬಹುದು? ಅವಳು ನನ್ನನ್ನು ಬಿಟ್ಟು ಹೇಗೆ ಜೀವಿಸಬಲ್ಲಳು? ಎಂದನು.

ಆ ಮೇಲೆ ಆ ತರುಣನ ಪತ್ನಿಗೆ ಅನುರೋಧಿಸಿದಾಗ, ಅವಳು ಹೇಳಿದುದೇನೆಂದರೆ 'ನನ್ನ ವೃದ್ಧ ಅತ್ತೆಯಂತೂ ಸಂಸಾರದ ಎಲ್ಲಾ ಸುಖವನ್ನು ಭೋಗಿಸಿದ್ದಾಳೆ. ನಾನು ಇನ್ನು ತರುಣಿ. ನಾನು ಇನ್ನೂ ಸಂಸಾರದ ಸುಖವನ್ನು ಸರಿಯಾಗಿ ಅನುಭವಿಸಿಲ್ಲ. ನಾನೇಕೆ ಸಾಯಲಿ? ಈ ರೀತಿಯಾಗಿ ಆ ತರುಣನ ಸಂಬಂಧಿಕರು ನೀರನ್ನು ಕುಡಿಯಲು ನಿರಾಕರಿಸಿದರು. ಅಷ್ಟಲ್ಲದೆ, ಎಲ್ಲರೂ ಸೇರಿ ಆ ಜ್ಞಾನಿ ಮಹಾತ್ಮನಿಗೆ ಹೇಳ ಹತ್ತಿದರು' ಮಹರಾಜ್, ತಾವೇ ಆ ನೀರನ್ನು ಯಾಕೆ ಕುಡಿಯಬಾರದು? ನೀವು ಸತ್ತರೆ ನಿಮಗೋಸ್ಕರವಾಗಿ ಅಳುವವರು ಯಾರೂ ಇಲ್ಲ. ನೀವು ಜ್ಞಾನಿಗಳು ಆದ್ದರಿಂದ ನೀವು ಕುಡಿಯಲು ಅಡ್ಡಿಯಿಲ್ಲ ಎಂದರು. ಜ್ಞಾನಿ ಮಹಾತ್ಮನು ಆ ನೀರನ್ನು ಕುಡಿದನು. ಆ ತರುಣನಿಗೆ ತನ್ನ ಸಂಬಂಧಿಕರ ವ್ಯವಹಾರ ಮತ್ತು ಪ್ರೇಮದ ಅನುಭವ ಯಥಾರ್ಥವಾಗಿ ತಿಳಿದು ಹೋಗಿತ್ತು. ಅವನು ಎದ್ದು ಜ್ಞಾನಿ ಮಹಾತ್ಮನ ಜೊತೆಯಲ್ಲಿಯೇ ಮನೆಯನ್ನು ಬಿಟ್ಟು ಹೊರಟನು. ತರುಣನು ಹೇಳಿದುದೇನೆಂದರೆ 'ಮಹಾರಾಜ್ ನಾನು ಈ ಸಂಸಾರದ ಅಸಾರತೆಯನ್ನು ನೋಡಿದೆ, ಯಾರೂ ಯಾರಿಗೂ ಸಂಬಂಧವಿಲ್ಲ ಎಲ್ಲಾ ಸಂಬಂಧಗಳೂ ಸ್ವಾರ್ಥ ಪರವಾಗಿವೆ'. ಆಗ ಜ್ಞಾನಿ ಮಹಾತ್ಮನು ಹೇಳಿದುದೇನೆಂದರೆ -

ಧನ್ಯೋಸಿ ಕೃತ ಕೃತ್ಯೋಸಿ ಪಾವಿತಂ ತೆ ಕುಲಂ ತ್ವಯಾ ।
ಯದ್ವಿದ್ಯಾಬಂಧಮುಕ್ತ್ಯಾ ಬಹ್ಮೀಭಾವ ತು ಮಿಚ್ಛಸಿ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ನೀನು ಧನ್ಯನಾದೆ, ಕೃತಕೃತ್ಯನಾದೆ. ನಿನ್ನ ಕುಲ ನಿನ್ನಿಂದ ಪವಿತ್ರವಾಯಿತು. ಯಾಕೆಂದರೆ, ನೀನು ಅವಿದ್ಯಾರೂಪಿ ಬಂಧನದಿಂದ ಬಿಡುಗಡೆ ಹೊಂದಿ ಬ್ರಹ್ಮಭಾವಕ್ಕೆ ಪ್ರಾಪ್ತನಾಗಬಯಸುತ್ತೀಯಾ. ಯಾರು ಬ್ರಹ್ಮಭಾವಕ್ಕೆ ಪ್ರಾಪ್ತರಾಗುತ್ತಾರೋ ಅವನು ಬ್ರಹ್ಮಜ್ಞಾನಿಯಾಗುತ್ತಾನೆ".

'ಬ್ರಹ್ಮವಿದಾಪ್ನೋತಿ ಪರಮ್'
"ಬ್ರಹ್ಮಜ್ಞಾನಿಯಾದ ಮಹಾತ್ಮನು ಪರಬ್ರಹ್ಮನಿಗೆ ಪ್ರಾಪ್ತನಾಗುತ್ತಾನೆ"

'ಬ್ರಹ್ಮವೇದ ಬ್ರಹ್ಮೈವಭವತಿ'
'ಪರಮಾತ್ಮಾನಂ ಜಾನಾತಿ ಸಃ ಪರಮಾತ್ಮಾವವಭವತಿ'

ಬ್ರಹ್ಮನನ್ನು ತಿಳಿದು ಬ್ರಹ್ಮನೇ ಆಗುತ್ತಾನೆ

'ತರತಿ ಶೋಕಾಮಾತ್ಮವಿತ್'

ಆತ್ಮಜ್ಞಾನಿಯು ಶೋಕದಿಂದ ಪಾರಾಗುತ್ತಾನೆ.

'ತರತಿ ಅವಿದ್ಯಾಂ'

ಇತ್ಯಾದಿ ಶ್ರುತಿ ಪ್ರಮಾಣಗಳಿವೆ. ಈ ಶ್ರುತಿಗಳಿಂದ ಬ್ರಹ್ಮನ ಪ್ರಾಪ್ತಿಯಿಂದ ಶೋಕ ನಿವೃತ್ತಿ ಸಿದ್ಧವಾಗುತ್ತದೆ. ಆನಂದ ಸ್ವರೂಪ ಬ್ರಹ್ಮನ ಪ್ರಾಪ್ತಿ ಮತ್ತು ದುಃಖದ ಆತ್ಯಂತಿಕವಾದ ನಿವೃತ್ತಿಯನ್ನು ಮೋಕ್ಷವೆಂದು ಕರೆಯುತ್ತಾರೆ. ಒಂದು ಪಕ್ಷ ತತ್ವಜ್ಞಾನವಾಗುವುದಕ್ಕಿಂತ ಮುಂಚೆಯೇ ತಮ್ಮ ಅಭೀಷ್ಟವಾದ 'ಮೋಕ್ಷ' ಎಲ್ಲರಿಗೂ ಪ್ರಾಪ್ತವಾಗಿದೆಯಾದರೆ, ಮೋಕ್ಷದ ಉದ್ದೇಶದಿಂದ ವೇದಾಂತಶ್ರವಣಗಳಲ್ಲಿ ಏಕೆ ಪ್ರವೃತ್ತರಾಗಬೇಕು? ಮೋಕ್ಷವಂತೂ ಶ್ರವಣಕ್ಕಿಂತ ಮೊದಲೇ ಸಿದ್ಧವಾಗಿದೆಯಲ್ಲ? ಎನ್ನುವ ತರ್ಕ ಇಲ್ಲಿ ಹುಟ್ಟಬಹುದು.

ಈ ತರ್ಕದ ಖಂಡನೆಯೆಂದರೆ, 'ಮೋಕ್ಷ' ವನ್ನು ನಾವು 'ಅನಾದಿ' ಯಲ್ಲ ಎಂದು ಭಾವಿಸಿಲ್ಲ. 'ಅನಾದಿ' ಯೆಂದೇ ಭಾವಿಸಿದ್ದೇವೆ. ವೇದಾಂತ ಶ್ರವಣದ ಪೂರ್ವದಲ್ಲಿಯೂ ಆತ್ಮವು ಬ್ರಹ್ಮ ಸ್ವರೂಪವಾಗಿರುವುದರಿಂದ ನಿತ್ಯಮುಕ್ತವಾಗಿದೆ. ಹೀಗಿದ್ದರೂ ಸಹ ಅನಾದಿಕಾಲದಿಂದಲೂ ಅವಿದ್ಯಾ ಕಾರಣದಿಂದ ನಿತ್ಯಪ್ರಾಪ್ತ ಮೋಕ್ಷದಲ್ಲಿ ಅಪ್ರಾಪ್ತಿಯ ಭ್ರಮೆ ಉಂಟಾಗಿದೆ.

ಇಂತಹ ಭ್ರಮೆಯ ನಿವೃತ್ತಿಗೋಸ್ಕರ ಅದರ ನಿವೃತ್ತಿಯ ಸಾಧನವಾದ ವೇದಾಂತ ಶ್ರವಣಾದಿಯಲ್ಲಿ ಪ್ರವೃತ್ತಿಯ ಅವಶ್ಯಕತೆಯಿದೆ. ಹಾಗೆಯೇ ಸಚ್ಚಿದಾನಂದ ಬ್ರಹ್ಮಸ್ವರೂಪ ಆತ್ಮನಲ್ಲಿ ಅನರ್ಥ ಸಂಸಾರದುಃಖ ಯಾವಾಗಲೂ ನಿವೃತ್ತವಾಗಿದೆ, ಆದರೂ ಸಹ ಭ್ರಮೆಯಿಂದ ದುಃಖವಿದ್ದಂತೆ ಕಾಣುತ್ತದೆ. ಆದ್ದರಿಂದ ಭ್ರಮೆಸಿದ್ಧ ದುಃಖ ನಿವೃತ್ತಿಗೋಸ್ಕರ ವೇದಾಂತ ಶ್ರವಣಾದಿಗಳಲ್ಲಿ ಮುಮುಕ್ಷುವಿನ ಪ್ರವೃತ್ತಿ ಉಂಟಾಗುತ್ತದೆ. ಸರ್ವಸಾಧಾರಣ ಜನರಲ್ಲಿ ಈ ಭ್ರಮೆಯನ್ನು ಕಾಣಬಹುದು. ಕೈಯಲ್ಲಿ ಬಂಗಾರದ ಬಳೆಗಳಿದ್ದೂ ಸಹ, ಕದಾಚಿತ್ ಭ್ರಮೆಯಿಂದ ಬಂಗಾರದ ಬಳೆಗಳು ಕಳೆದು ಹೋಗಿವೆ ಎನ್ನಿಸುತ್ತದೆ. ಬಳೆಗಳು ನಿನ್ನ ಕೈಯಲ್ಲೆ ಇವೆ ಎಂದು ಆಪ್ತ ಪುರುಷನ ಉಪದೇಶದಿಂದ ನಿತ್ಯಪ್ರಾಪ್ತವಾದ ಬಳೆಗಳ ಪ್ರಾಪ್ತಿಯಾಗುತ್ತದೆ. ಭ್ರಮೆ ನಿವೃತ್ತಿಯಾದ ನಂತರ, ಬಳೆಗಳು ಪ್ರಾಪ್ತಿಯಿಂದ ಉಂಟಾದ ಆನಂದವೂ ಸಹ ಅನುಭವಕ್ಕೆ ಬರುತ್ತದೆ. ಹೇಗೆ ಕಾಲಿನಲ್ಲಿ ಸುತ್ತಿಕೊಂಡಿರುವ ಹಗ್ಗದಲ್ಲಿ ಸರ್ಪಭ್ರಮೆ ಉಂಟಾದ ಮೇಲೆ, ಇದು ಸರ್ಪವಲ್ಲವೆಂಬ ಆಪ್ತರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಕ್ಯದಿಂದ ನಿತ್ಯ ನಿವೃತ್ತವಾದ ಸರ್ಪದ ಮತ್ತು ಸರ್ಪಭ್ರಮೆಯಿಂದ ಉಂಟಾದ ಭಯ ಕಂಪನಗಳ ನಿವೃತ್ತಿಯಾಗುವುದನ್ನು ಕಾಣಬಹುದು. ಹಾಗೆಯೇ ನಿತ್ಯಪ್ರಾಪ್ತ ಬ್ರಹ್ಮಸ್ವರೂಪದ ಆನಂದ, ತತ್ವಜ್ಞಾನದಿಂದ ಭ್ರಮೆ ನಿವೃತ್ತಿಯ ಮೂಲಕ, ಪ್ರಾಪ್ತಿಯಾದಂತೆ, ನಿತ್ಯ ನಿವೃತ್ತ ಸಂಸಾರದ ಅನರ್ಥದ ನಿವೃತ್ತಿಯೂ ಸಹ ಔಪಚಾರಿಕವಾಗಿದೆ.

ಇನ್ನೂ ಶೃತಿ ಸ್ಮೃತಿಗಳ ಆಧಾರದ ಮೇಲೆ ತತ್ವಜ್ಞಾನಿ ಮತ್ತು ಮುಕ್ತಿಯ ಬಗ್ಗೆ ಸ್ಪಷ್ಟತೆ :

ತತ್ವಜ್ಞಾನವಾದ ಮೇಲೂ ಪ್ರಾರಬ್ಧ ಕರ್ಮದ ಉಳಿವಿಕೆಯ ಬಗ್ಗೆ ಶೃತಿ ಸ್ಮೃತಿ ಸಿದ್ಧವಾಗಿದೆ, ಶ್ರುತಿಯು ಸ್ಪಷ್ಟಪಡಿಸುವುದೇನೆಂದರೆ, ಸರ್ವಶ್ರೇಷ್ಠ ಬ್ರಹ್ಮತತ್ವದ ಅಪರೋಕ್ಷ ಜ್ಞಾನವಾದ ಮೇಲೆ ಆ ತತ್ವಜ್ಞಾನಿಯ ಪ್ರಾರಬ್ಧ ಕರ್ಮವನ್ನು ಬಿಟ್ಟು ಉಳಿದ ಕರ್ಮಗಳ ನಾಶವಾಗುತ್ತದೆ. ಗೀತೆಯಲ್ಲಿ ಹೇಳಿರುವುದೇನೆಂದರೆ

'ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ'

- ಗೀತಾ ೪-೩೭

'ಸಂಪೂರ್ಣ ಕರ್ಮಗಳನ್ನು ಜ್ಞಾನಾಗ್ನಿಯು ಭಸ್ಮ ಮಾಡುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತದೆ. ಹೀಗಿದ್ದರೂ ಪುನಃ, ಪ್ರಾರಬ್ಧ ಕರ್ಮವು ಉಳಿಯುತ್ತದೆ ಮತ್ತು ತತ್ವಜ್ಞಾನದಿಂದ ಕೇವಲ ಸಂಚಿತ ಕರ್ಮವು ಮಾತ್ರ ನಾಶವಾಗುತ್ತದೆ ಎಂದು ವಿಭಾಗಪಡಿಸುವುದು ಅಸಂಗತವಾಗಿದೆ ಎಂದು ಹೇಳುವುದು ಸರಿಯಲ್ಲ. ಒಂದು ಪಕ್ಷ ತತ್ವಜ್ಞಾನದ ನಂತರ ತಕ್ಷಣವೇ ಮೃತ್ಯುವು ಒದಗಿ ಬರುತ್ತದೆಯಾದರೆ, ಆಗ ತತ್ವಜ್ಞಾನವನ್ನು ಒಂದು ದೊಡ್ಡ ರೋಗವೆಂದು ತಿಳಿಯಬೇಕಾಗುವುದು ಮತ್ತು ಯಾವ ತತ್ವಜ್ಞಾನಿಯೂ ಈ ಸಂಸಾರದಲ್ಲಿ ಉಳಿಯುವುದೇ ಇಲ್ಲ. ಯಾಕೆಂದರೆ ಯಾರಿಗೆ ತತ್ವಜ್ಞಾನವಾಯಿತೋ ಅವನು ತಕ್ಷಣವೇ ಮೃತ್ಯುವಿಗೆ ಪ್ರಾಪ್ತನಾಗುತ್ತಾನೆ'. ಆದ್ದರಿಂದ 'ಸಮಿತ್ಪಾಣಿಃ ಶ್ರೋತ್ರೀಯಂ ಬ್ರಹ್ಮನಿಷ್ಠಂ' 'ಉಪದೇಕ್ಷಂತಿ ತೆ ಜ್ಞಾನಂ ಜ್ಞಾನಿ ನಸ್ತತ್ವದರ್ಶಿನಃ' ಇತ್ಯಾದಿ ವಾಕ್ಯಗಳಿಂದ ಬ್ರಹ್ಮಜ್ಞಾನಿಯ ಹತ್ತಿರ ಬ್ರಹ್ಮಜ್ಞಾನವನ್ನು ಪಡೆಯಲು ಜಿಜ್ಞಾಸುಗಳಿಗೆ ಹೋಗುವ ಪ್ರೇರಣೆಯನ್ನು ಕೊಡುವುದು ವ್ಯರ್ಥವೇ ಆಗುತ್ತದೆ. 'ವಿಮಕ್ತಶ್ಚ ವಿಮುಚ್ಯತೆ' ಈ ಶ್ರುತಿಯಲ್ಲಂತು ಮೊದಲು ವಿಮುಕ್ತ ಪದದಿಂದಲೇ ಜೀವನ್ಮುಕ್ತ ಪುರುಷರ ಕಥನವನ್ನು ಮಾಡಿದೆ. 'ಅವಶ್ಯಮೇವ ಭೋಕ್ತವ್ಯಯಂ ಕೃತಂ ಕರ್ಮ ಶುಭಾಶುಭಮ್' 'ನಾಭುಕ್ತಂ ಕ್ಷೀಯತೇ ಕರ್ಮ' ಇತ್ಯಾದಿ ವಾಕ್ಯಗಳ ಪ್ರಕಾರ ಪ್ರಾರಬ್ಧ ಕರ್ಮವು ಭೋಗಿಸದೆ ಹೊರತು ಕ್ಷೀಣಿಸುವುದಿಲ್ಲ ಎಂದು ಹೇಳಲ್ಪಟ್ಟಿದೆ. ಜ್ಞಾನದಿಂದ ಸಂಚಿತ, ಕ್ರಿಯ ಮಾಣ ಕರ್ಮದ ನಾಶವಾಗುತ್ತದೆ. ಏಕೆಂದರೆ ಅವು ಇನ್ನೂ ಫಲವನ್ನು ಕೊಡಲು ಪ್ರಾರಂಭಿಸಿರುವುದಿಲ್ಲ. ಪ್ರಾರಬ್ಧ ಕರ್ಮದ ಕ್ಷಯದ ನಂತರ ವಿದೇಹ ಕೈವಲ್ಯದ ಪ್ರಾಪ್ತಿಯಾಗುತ್ತದೆ, ಪ್ರಾರಬ್ಧ ಕರ್ಮದ ಕ್ಷಯದವರೆಗೆ ತತ್ವಜ್ಞಾನಿಯನ್ನು ಜೀವನ್ಮುಕ್ತನೆಂದು ಕರೆಯುತ್ತಾರೆ.

ಮೇಲಿನ ಲೋಕಕ್ಕೆ ಹೋಗುವುದು ಅಥವಾ ಬೇರೆ ಯಾವುದಾದರೂ ಶರೀರದಲ್ಲಿ ಜನ್ಮವೆತ್ತುವುದು ಕೇವಲ ಅಜ್ಞಾನಿಗಳಿಗೋಸ್ಕರ ಹೇಳಲ್ಪಟ್ಟಿದೆ. ನಿರ್ಗುಣ ಬ್ರಹ್ಮನ ಸಾಕ್ಷಾತ್ಕಾರವನ್ನು ಪಡೆದುಕೊಂಡ ಮೇಲೆ ತತ್ವವೆತ್ತನಿಗೆ ಬೇರೆ ಯಾವುದೇ ಲೋಕಕ್ಕೆ ಅಥವಾ ಶರೀರದಲ್ಲಿ ಹೋಗುವ ಸಂಭವವಿರುವುದಿಲ್ಲ ಮತ್ತು ತತ್ವಜ್ಞಾನದ ನಂತರದ ಕ್ಷಣದಲ್ಲಿಯೇ ವಿದೇಹ ಕೈವಲ್ಯವನ್ನು ಹೊಂದುತ್ತಾನೆ. ಆದರೆ ಪ್ರಾರಬ್ಧ ಕರ್ಮದ ವೇಗ ಶಾಂತವಾಗುವ ತನಕ ಅವನಿಗೂ ಸಹ ಸುಖ ದುಃಖದ ಅನುಭವವನ್ನು ಹೊಂದಬೇಕಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ನಿರ್ಗುಣಬ್ರಹ್ಮಸಾಕ್ಷಾತ್ಕಾರವತಸ್ತು ನ ಲೋಕಾಂತರ ಗಮನಮ್'
'ನ ತಸ್ಯ ಪ್ರಾಣಾಃ ಉತ್ಕ್ರಾಮಂತಿ'

ನಿರ್ಗುಣ ಸಾಕ್ಷಾತ್ಕಾರವನ್ನು ಪಡೆದ ವ್ಯಕ್ತಿಗೆ ಯಾವುದೇ ಲೋಕಕ್ಕೆ ಹೋಗುವ ಆವಶ್ಯಕತೆಯಿರುವುದಿಲ್ಲ, ಏಕೆಂದರೆ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಿರುವುದೇನೆಂದರೆ "ಆ ತತ್ವಜ್ಞಾನಿಯ ಲಿಂಗದೇಹ ರೂಪವಾದ ಪ್ರಾಣದ ಉತ್ಕ್ರಮಣ ಶರೀರಾಂತರಕ್ಕೋಸ್ಕರ ಆಗುವುದಿಲ್ಲ". ಇಲ್ಲಿಯೇ ಸುಖದುಃಖದ ಫಲಗಳನ್ನು ಅನುಭವಿಸಿ ಪ್ರಾರಬ್ಧ ಕರ್ಮ ಕ್ಷಯಿಸಿದ ಮೇಲೆ ಅವನು ಮುಕ್ತನಾಗುತ್ತಾನೆ.

ಯಾವ ಸಗುಣ ಉಪಾಸಕನು ಅರ್ಚಿರಾದಿ ಮಾರ್ಗಗಳಿಂದ ಬ್ರಹ್ಮಲೋಕಕ್ಕೆ ಹೋಗುತ್ತಾನೋ, ಅವನಿಗೆ ಬ್ರಹ್ಮಲೋಕದಲ್ಲಿಯೇ ಶ್ರವಣಾದಿಗಳ ಮುಖಾಂತರ ತತ್ವಸಾಕ್ಷಾತ್ಕಾರವಾಗುತ್ತದೆ ಮತ್ತು ಅವನು ಬ್ರಹ್ಮನ ಜೊತೆಯಲ್ಲಿಯೇ ಮುಕ್ತನಾಗಿ ಹೋಗುತ್ತಾನೆ.

ಕರ್ಮವನ್ನು ಮಾಡುವವರಿಗೆ ಧೂಮಾದಿ ಮಾರ್ಗದಿಂದ ಪಿತೃಲೋಕದ ಪ್ರಾಪ್ತಿಯಾಗುತ್ತದೆ ಮತ್ತು ಅಲ್ಲಿಯ ಕರ್ಮಫಲಗಳು ಭೋಗದ ಮೂಲಕ ನಷ್ಟವಾದ ಮೇಲೆ ಪೂರ್ವಕೃತ ಪುಣ್ಯ-ಪಾಪದ ಅನುಸಾರವಾಗಿ ಬ್ರಹ್ಮಾದಿಯಿಂದ ಹಿಡಿದು ಸ್ಥಾವರದವರೆಗಿನ ಯೋನಿಯಲ್ಲಿ ಪುನರ್ಜನ್ಮದ ಪ್ರಾಪ್ತಿಯಾಗುತ್ತದೆ.

ಛಾಂದೋಗ್ಯಶ್ರುತಿ ಹೇಳುವುದೇನೆಂದರೆ - 'ರಮಣೀಯ ಚರಣಾ ರಮಣೀಯಾಂ ಯೋನಿ ಮಾಪದ್ಯಂತೆ ಕಪೂಯ ಚರಣಾಃ ಕಪೂಯಾಂ ಯೋನಿಯಾಪದ್ಯಂತೆ'

ರಮಣೀಯ ಆಚರಣೆಯನ್ನು ಹೊಂದಿದವರು ರಮಣೀಯ ಲೋಕವನ್ನು ಹೊಂದುತ್ತಾರೆ ಮತ್ತು ಪಾಪದ ಆಚರಣೆಯನ್ನು ಹೊಂದಿದವರು ಪಾಪ ಯೋನಿಯನ್ನು ಹೊಂದುತ್ತಾರೆ. ನಿಷಿದ್ಧ ಕರ್ಮವನ್ನು ಮಾಡುವವರು ರೌರವಾದಿ ನರಕದಲ್ಲಿ ಪಾಪಕ್ಕೆ ಅನುಗುಣವಾದ ತೀವ್ರ ದುಃಖದ ಅನುಭವವನ್ನು ಪಡೆದು 'ಶೂಕರ ಕೂಕರಾದಿ ತಿರ್ಯಕ್' ಹಾಗೂ ಸ್ಥಾವರ ಮುಂತಾದ ಯೋನಿಗಳಲ್ಲಿ ಜನ್ಮವನ್ನು ಪಡೆಯುತ್ತಾರೆ.

'ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಂ
ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ'

- ಗೀತಾ ೮-೨೪

ಈ ಭಗವದ್ ವಾಕ್ಯಾನುಸಾರವಾಗಿ ಅರ್ಚಿರಾದಿ ಅಭಿಮಾನಿ ದೇವತೆಗಳ ಮುಖಾಂತರ ಬ್ರಹ್ಮಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ವೇದಾಂತದ ಶ್ರವಣದಿಂದ ಬ್ರಹ್ಮತತ್ವದ ಸಾಕ್ಷಾತ್ಕಾರವಾದ ಮೇಲೆ ಕಲ್ಪದ ಅಂತ್ಯದಲ್ಲಿ ಬ್ರಹ್ಮನ ಜೊತೆಯಲ್ಲಿ ಅವರೂ ಸಹ ಮೋಕ್ಷವನ್ನು ಹೊಂದುತ್ತಾರೆ.

ಕೇವಲ ಶಾಸ್ತ್ರ ವಿಹಿತವಾದ ಕರ್ಮವನ್ನು ಮಾಡುವ ಜನರನ್ನು ಅವರ ಫಲವನ್ನು ಭೋಗಿಸಲು 'ಧೂಮೋ ರಾತ್ರಿ ಸ್ಥಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ' ಧೂಮಾದಿ ಅಭಿಮಾನಿ ದೇವತೆಗಳ ಮುಖಾಂತರ ಪಿತೃಲೋಕ (ಸ್ವರ್ಗ) ಕ್ಕೆ ಕರೆತರುತ್ತಾರೆ. ಅಲ್ಲಿ ನಿಯತ ಕರ್ಮ ಫಲಗಳ ಉಪಭೋಗವಾದ ಮೇಲೆ ಅವಶಿಷ್ಟ ಪೂರ್ವಕೃತ ಪಾಪಪುಣ್ಯಕ್ಕನುಸಾರವಾಗಿ ಬ್ರಾಹ್ಮಣಾದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರೀರದಲ್ಲಿ ಅವರ ಜನ್ಮವಾಗುತ್ತದೆ. ಆದರೆ ಉತ್ತರಾಯಣ ಮತ್ತು ದಕ್ಷಿಣಾಯನ ಮಾರ್ಗದ ಶಾಸ್ತ್ರ ವಿಹಿತ ಕರ್ಮವನ್ನು ಮಾಡುವುವರಿಗೆ ಮಾತ್ರ ಇದು ಸೀಮಿತವಾಗಿದೆ. ಭೀಷ್ಮಾದಿ ಜ್ಞಾನಿಗಳು ಉತ್ತರಾಯಣದ ಹೊರತು ಪ್ರಾಣವನ್ನು ತ್ಯಾಗ ಮಾಡಲಿಲ್ಲ. ಏಕೆಂದರೆ ಭೀಷ್ಮಾದಿಕರು ಅಧಿಕಾರಿ ಪುರುಷರಾಗಿದ್ದರೂ ಸಹ ಉಪಾಸಕರ ಉಪದೇಶಕ್ಕೋಸ್ಕರವಾಗಿ ಅವರು ಕಾಲ ವಿಶೇಷದ ಪ್ರತೀಕ್ಷೆಯನ್ನು ಮಾಡಿದರು. ಹೇಗೆಂದರೆ, ಹತ್ತು ದಿನಗಳ ಕಾಲ ಮಹಾಯುದ್ಧವನ್ನು ಮಾಡಿದ ಮೇಲೆ ಭೀಷ್ಮನು ಮೃತ್ಯುವಿನ ಬಗ್ಗೆ ಯೋಚಿಸುತ್ತಿದ್ದನು. ಆಗ ಆಕಾಶದಲ್ಲಿ ಸ್ಥಿತರಾಗಿದ್ದ ಋಷಿಗಳು ಮತ್ತು ವಸುಗಳು ಭೀಷ್ಮನಿಗೆ ಹೇಳಿದರು- 'ಹೇ ತಾತ್! ನೀನು ಏನನ್ನು ಯೋಚನೆ ಮಾಡುತ್ತಿದ್ದೀಯೋ ಅದೇ ನಮಗೂ ಇಷ್ಟವಾಗಿದೆ' ಎಂದರು. ಇದಾದ ನಂತರ ಶಿಖಂಡಿಯ ಎದುರಿನಲ್ಲಿ ಬಾಣವನ್ನು ಚಲಾಯಿಸಲಿಲ್ಲವಾದದ್ದರಿಂದ ಬಾಲಬ್ರಹ್ಮಚಾರಿ ಭೀಷ್ಮನು ಅರ್ಜುನನ ಬಾಣಗಳಿಂದ ಬಂಧಿಸಲ್ಪಟ್ಟು ಶರಶಯ್ಯದ ಮೇಲೆ ಬಿದ್ದನು. ಬೀಳುವಾಗ ಭೀಷ್ಮನು ಸೂರ್ಯನನ್ನು ದಕ್ಷಿಣಾಯನದಲ್ಲಿ ಕಂಡನು. ಆದುದರಿಂದ, ಅವನು ಪ್ರಾಣತ್ಯಾಗವನ್ನು ಮಾಡಲಿಲ್ಲ. ಗಂಗಾಮಾತೆಯು ಮಹರ್ಷಿಗಳನ್ನು ಹಂಸರೂಪದಲ್ಲಿ ಅವನ ಹತ್ತಿರ ಕಳುಹಿಸಿದಳು. ಭೀಷ್ಮನು ಹೇಳಿದನು 'ನಾನು ಉತ್ತರಾಯಣದಲ್ಲಿ ಸೂರ್ಯನು ಬರುವ ತನಕ ಜೀವಿತನಾಗಿರುತ್ತೇನೆ ಮತ್ತು ಉಪಯುಕ್ತ ಸಮಯದಲ್ಲಿಯೇ ಪ್ರಾಣವನ್ನು ತ್ಯಜಿಸುವೆನು' ಎಂದನು. ಭೀಷ್ಮನ ಶರೀರದಲ್ಲಿ ಎರಡು ಅಂಗುಲದಷ್ಟು ಜಾಗವು ಖಾಲಿಯಿರಲಿಲ್ಲ. ಎಲ್ಲಾ ಕಡೆಯಿಂದಲೂ ಅರ್ಜುನನ ಬಾಣಗಳು ಅವನನ್ನು ಬೇಧಿಸಿದ್ದವು. ಕೇವಲ ಅವನ ಶಿರಸ್ಸು ಕೆಳಗಡೆ ತೂಗಾಡುತ್ತಿತ್ತು. ಅವನು ದಿಂಬನ್ನು ಕೇಳಿದನು. ಆಗ ದುರ್ಯೋಧನ ಮುಂತಾದವರು ಬಹಳ ಮೃದುವಾದ ದಿಂಬುಗಳನ್ನು ತಂದರು. ಭೀಷ್ಮನು ನಕ್ಕು ನುಡಿದನು, 'ವೀರರೇ! ಈ ದಿಂಬುಗಳು ವೀರರಿಗೆ ಯೋಗ್ಯವಾದವುಗಳಲ್ಲ' ಕೊನೆಯಲ್ಲಿ ಅರ್ಜುನನಿಗೆ ಹೇಳಿದ 'ಮಗು! ನನಗೆ ಯೋಗ್ಯವಾದ ದಿಂಬನ್ನು ಕೊಡು'. ಆಗ ಅರ್ಜುನನು ಮೂರು ಬಾಣಗಳನ್ನು ಭೀಷ್ಮನ ಮಸ್ತಕದ ಕೆಳಗಡೆ ಹೊಡೆದನು. ಅದರಿಂದ ಭೀಷ್ಮನ ಮಸ್ತಕವು ಮೇಲೆದ್ದಿತು. ಆ ಬಾಣಗಳು ತಲೆದಿಂಬಿನ ಕೆಲಸವನ್ನು ಮಾಡಿದವು.

ಏವಮೇವ ಮಹಾಬಾಹೋ ಧರ್ಮೇಷು ಪರಿತಿಷ್ಠತಾ ।
ಸ್ವಪ್ತವ್ಯಂ ಕ್ಷತ್ರಿಯೇಣಾಜೌ ಶರತಲ್ಪಗತೇನ ವೈ ॥

- ಮಹಾ ಭೀಷ್ಮ

ಅರ್ಥಾತ್ : 'ಹೇ! ಮಹಾಬಾಹೋ! ಕ್ಷತ್ರಧರ್ಮದಲ್ಲಿ ದೃಢತಾಪೂರ್ವಕವಾಗಿ ಸ್ಥಿತರಾಗಿರುವ ಕ್ಷತ್ರಿಯರು ರಣಾಂಗಣದಲ್ಲಿ ಪ್ರಾಣತ್ಯಾಗ ಮಾಡುವ ಸಮಯದಲ್ಲಿ ಶರ-ಶಯ್ಯೆಯ ಮೇಲೆ ಇದೇ ತರಹ ಮಲಗಬೇಕು'.

ಪಿತಾಮಹ ಭೀಷ್ಮನು ಬಾಣದಿಂದ ಗಾಯ ಗೊಂಡವನಾಗಿ ಶರಶಯ್ಯೆಯ ಮೇಲೆ ಮಲಗಿದ್ದನು. ಇದನ್ನು ನೋಡಿ ಬಾಣವನ್ನು ತೆಗೆಯುವ ಕುಶಲ ಶಸ್ತ್ರ ವೈದ್ಯರನ್ನು ಕರೆತರಲಾಯಿತು. ಅದಕ್ಕೆ ಪಿತಾಮಹ ಭೀಷ್ಮನೆಂದನು 'ನನಗೆ ಕ್ಷತ್ರಿಯರ ಪರಮಗತಿ ಪ್ರಾಪ್ತಿಯಾಗಿದೆ, ಈಗ ಈ ಚಿಕಿತ್ಸೆಗಳ ಅವಶ್ಯಕತೆ ಏನಿದೆ?'

ಗಾಯಗಳ ಕಾರಣದಿಂದ ಭೀಷ್ಮನಿಗೆ ಬಹಳ ಪೀಡೆ ಉಂಟಾಗುತ್ತಿತ್ತು. ಅವನು ತಣ್ಣೀರನ್ನು ಕೇಳಿದನು. ಜನರು ಕೊಡಗಳಲ್ಲಿ ತಣ್ಣೀರನ್ನು ತಂದರು. ಭೀಷ್ಮನು ಹೇಳಿದ "ನಾನು ಶರ-ಶಯ್ಯೆಯಲ್ಲಿ ಮಲಗಿದ್ದೇನೆ ಮತ್ತು ಉತ್ತರಾಯಣಕ್ಕೋಸ್ಕರ ಕಾಯುತ್ತಿದ್ದೇನೆ. ನೀವು ನನಗೋಸ್ಕರ ಇದನ್ನೇನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಂದ್ದಿದ್ದೀರಿ?" ಕೊನೆಯಲ್ಲಿ ಅರ್ಜುನನ್ನು ಕರೆದು "ಮಗುವೇ! ನನ್ನ ಬಾಯಿ ಒಣಗುತ್ತಿದೆ. ನೀನು ಸಮರ್ಥನಾಗಿದ್ದಿಯೇ, ನನಗೆ ನೀರು ಬೇಕು" ಎಂದನು. ತಕ್ಷಣವೇ ಅರ್ಜುನನು ರಥದ ಮೇಲೆ ಆರೂಢನಾಗಿ ಗಾಂಡೀವಕ್ಕೆ ಪ್ರತ್ಯಂಚವನ್ನು ಕಟ್ಟಿದ ಮತ್ತು ಭೀಷ್ಮನ ಎಡಪಕ್ಕದಲ್ಲಿ ಭೂಮಿಯಲ್ಲಿ ಪರ್ಜನ್ಯಾಸ್ತ್ರವನ್ನು ಬಿಟ್ಟ. ಅದೇ ಕ್ಷಣದಲ್ಲಿ ಅಲ್ಲಿಂದ ಅಮೃತಕ್ಕೆ ಸಮನಾದ ಜಲಧಾರೆ ಚಿಮ್ಮಿತು ಮತ್ತು ಭೀಷ್ಮನ ಬಾಯಲ್ಲಿ ಬೀಳಹತ್ತಿತು! ಪಿತಾಮಹನು ಆ ಜಲವನ್ನು ಕುಡಿದು ತೃಪ್ತನಾದನು.

ಐವತ್ತೆಂಟು ದಿನಗಳು ಶರ-ಶಯ್ಯೆಯ ಮೇಲಿದ್ದು, ಸೂರ್ಯನು ಉತ್ತರಾಯಣಕ್ಕೆ ಬಂದ ಮೇಲೆ ಭೀಷ್ಮನು ಪ್ರಾಣ ತ್ಯಾಗದ ನಿಶ್ಚಯವನ್ನು ಮಾಡಿದ ಮತ್ತು ಅವನು ಭಗವಾನ್ ಶ್ರೀ ಕೃಷ್ಣನಿಗೆ ಹೇಳಿದುದೇನೆಂದರೆ "ಹೇ! ಪುರುಷೋತ್ತಮ! ಈಗ ನನಗೆ ಹೋಗಲಿಕ್ಕೆ ಅನುಮತಿಯನ್ನು ಕೊಡು. ನಾನು ಆ ಮಂದಬುದ್ಧಿಯಾದ ದುರ್ಯೋಧನನಿಗೆ ಬಹಳ ತಿಳುವಳಿಕೆ ಹೇಳಿದೆ -"

"ಯತಃ ಕೃಷ್ಣಾಸ್ತತೋ ಧರ್ಮಃ ಯತೋ ಧರ್ಮಸ್ತತೋ ಜಯಃ !"

"ಎಲ್ಲಿ ಶ್ರೀ ಕೃಷ್ಣನಿದ್ದಾನೋ ಅಲ್ಲಿ ಧರ್ಮವಿದೆ ಮತ್ತು ಎಲ್ಲಿ ಧರ್ಮವಿದೆಯೋ ಅಲ್ಲಿ ವಿಜಯವಿದೆ" ಆದರೆ ಆ ಮೂರ್ಖನು ನನ್ನ ಮಾತನ್ನು ಕೇಳಲಿಲ್ಲ. ನಾನು ನಿನ್ನನ್ನು ಅರಿತಿದ್ದೇನೆ. ನೀನೇ ಪುರಾಣ ಪುರುಷನಾಗಿದ್ದೀಯ. ನೀನು ನಾರಾಯಣನ ಅವತಾರವಾಗಿದ್ದೀಯ. ನೀನು ನನಗೆ ಆಜ್ಞೆಯನ್ನು ಕೊಡು ಅಂದರೆ ಮಾತ್ರ ನಾನು ಶರೀರವನ್ನು ತ್ಯಾಗ ಮಾಡುತ್ತೇನೆ. ನಿನ್ನ ಆಜ್ಞೆಯಿಂದ ಶರೀರ ತ್ಯಾಗವನ್ನು ಮಾಡಿ ನಾನು ಪರಮಗತಿಯನ್ನು ಹೊಂದುತ್ತೇನೆ" ಎಂದನು.

ಭಗವಂತನು ಆಜ್ಞೆಯನ್ನು ಕೊಟ್ಟನು, ಆಗ ಭೀಷ್ಮನು ಯೋಗದ ಮೂಲಕ ವಾಯುವನ್ನು ತಡೆಹಿಡಿದು ಕ್ರಮಶಃ ಪ್ರಾಣವನ್ನು ಮೇಲೆ ಕೊಂಡೊಯ್ಯಲು ಪ್ರಾರಂಭಿಸಿದನು. ಪ್ರಾಣವಾಯುವು ಯಾವ ಅಂಗವನ್ನು ಬಿಟ್ಟು ಮೇಲಕ್ಕೆ ಏರುತ್ತಿತ್ತೊ, ಆ ಅಂಗದ ಬಾಣ ಅದೇ ಕ್ಷಣದಲ್ಲಿ ಬಿದ್ದು ಹೋಗುತ್ತಿತ್ತು ಮತ್ತು ಗಾಯವು ತತ್‌ಕ್ಷಣವೇ ವಾಸಿಯಾಗುತ್ತಿತ್ತು. ಕೆಲಕ್ಷಣದಲ್ಲಿ ಪಿತಾಮಹನ ಶರೀರದಿಂದ ಎಲ್ಲ ಬಾಣಗಳೂ ಹೊರಬಂದವು. ಶರೀರದ ಮೇಲೆ ಒಂದು ಗಾಯವೂ ಸಹ ಉಳಿಯಲಿಲ್ಲ ಮತ್ತು ಪ್ರಾಣವು ಬ್ರಹ್ಮರಂಧ್ರವನ್ನು ಭೇದಿಸಿ ಮೇಲೆ ಹೊರಟು ಹೋಯಿತು. ಜನರು ನೋಡುತ್ತಿದ್ದರು. ಬ್ರಹ್ಮರಂಧ್ರದಿಂದ ಹೊರಟ ತೇಜವು ನೋಡುತ್ತಾ ನೋಡುತ್ತಾ, ಆಕಾಶದಲ್ಲಿ ವಿಲೀನವಾಯಿತು.

ವಶಿಷ್ಠ, ಭೀಷ್ಮಾದಿಕರು ಅಧಿಕಾರಿಗಳಾಗಿದ್ದರು. ಆದುದರಿಂದ ಅವರಿಗೆ ಅನೇಕ ಜನ್ಮಗಳಿರುತ್ತವೆ. ಅಧಿಕಾರಿ ಪುರುಷರಿಗೆ ಒಂದು ಕಲ್ಪದವರೆಗೆ ಪ್ರಾರಬ್ಧವಿರುತ್ತದೆ. ಕಲ್ಪದ ಅಂತ್ಯವಾಗದ ಹೊರತು ವಿದೇಹ ಮೋಕ್ಷವಾಗುವುದಿಲ್ಲ ಮತ್ತು ಕಲ್ಪದ ಒಳಗಡೆ ತಮ್ಮ ಇಚ್ಛಾಬಲದಿಂದ ನಾನಾ ಶರೀರಗಳನ್ನು ಹೊಂದುತ್ತಾರೆ. ಆದರೆ, ಆತ್ಮ ಸ್ವರೂಪ ವಿಷಯದಲ್ಲಿ ಅವರಿಗೆ ಜನ್ಮ ಮರಣದ ಭ್ರಾಂತಿ ಉಂಟಾಗುವುದಿಲ್ಲ.

ಯಾರಿಗೆ ಪರಬ್ರಹ್ಮ ಪರಮಾತ್ಮನ ಪ್ರಾಪ್ತಿ ಈ ಶರೀರದಲ್ಲಿಯೇ ಉಂಟಾಗುತ್ತದೊ, ಅವರ ಅಂತ್ಯಕಾಲದಲ್ಲಿ ಯಾವಾಗ ದೇಹ ಪಾತವಾಗುತ್ತದೋ ಆಗ ಹದಿನೈದು ಕಲೆಗಳು (ಶ್ರದ್ಧೆ, ಆಕಾಶಾದಿ ಪಂಚ ಮಹಾಭೂತ, ಇಂದ್ರಿಯ, ಮನಸ್ಸು, ಅನ್ನ, ವೀರ್ಯ, ತಪ, ಮಂತ್ರ, ಕರ್ಮ, ಲೋಕ, ನಾಮ. "ಪ್ರಶ್ನೋಪನಿಷತ್ತು") ಮತ್ತು ಮನಸಹಿತ ಎಲ್ಲಾ ಇಂದ್ರಿಯಗಳ ದೇವತಾ, ಈ ಎಲ್ಲವೂ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಮ್ಮ ತಮ್ಮ ಅಭಿಮಾನಿ ಸಮಷ್ಟಿ ದೇವತೆಗಳಲ್ಲಿ ಹೋಗಿ ಸ್ಥಿತವಾಗುತ್ತವೆ. ಅವುಗಳ ಜೊತೆಯಲ್ಲಿ ಆ ಜೀವನ್ಮುಕ್ತನ ಯಾವ ಸಂಬಂಧವೂ ಇರುವುದಿಲ್ಲ. ಅವನ ಸಮಸ್ತ ಕರ್ಮಗಳು ಮತ್ತು ವಿಜ್ಞಾನಮಯ ಜೀವಾತ್ಮ ಎಲ್ಲವೂ ಪರಮ ಅವಿನಾಶಿ ಪರಬ್ರಹ್ಮನಲ್ಲಿ ಲೀನವಾಗುತ್ತವೆ.

ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ
- ಸ್ತಂ ಗಚ್ಛಂತಿ ನಾಮರೂಪೇ ವಿಹಾಯ।
ತಥಾ ವಿದ್ವಾನ್ ನಾಮರೂಪಾದ್ ವಿಮುಕ್ತಃ
ಪರಾತ್ಪರಂ ಪುರುಷಮುಪೈತಿ ದಿವ್ಯಂ॥

- ಮುಂಡಕೋಪನಿಷತ್ತು ೩-೨-೮

ಅರ್ಥಾತ್ : "ಹೇಗೆ ಗಂಗಾ ಮುಂತಾದ ನದಿಗಳು ನಿರಂತರವಾಗಿ ಹರಿಯುತ್ತಾ ಸಮುದ್ರವನ್ನು ತಲುಪಿದ ಮೇಲೆ ತಮ್ಮ ನಾಮ ರೂಪಗಳನ್ನು ತ್ಯಾಗ ಮಾಡಿ ಅವಿಶೇಷ ಭಾವವನ್ನು ಹೊಂದುತ್ತವೆಯೋ, ಹಾಗೆಯೇ ಜ್ಞಾನಿ ಪುರುಷರು ನಾಮರೂಪದಿಂದ ಮುಕ್ತರಾಗಿ ಪರಾತ್ಪರ ದಿವ್ಯ ಪುರುಷ ಪರಮಾತ್ಮನಿಗೆ ಪ್ರಾಪ್ತರಾಗುತ್ತಾರೆ. - ಸರ್ವತೋಭಾವದಿಂದ ಅವನಲ್ಲಿಯೇ ವಿಲೀನರಾಗುತ್ತಾರೆ."

ಯಾವನು ಕ್ಷರವಸ್ತುಗಳ ಚಿಂತನೆಯನ್ನು ಮಾಡುತ್ತಾ ಅವುಗಳ ಇಚ್ಛೆಯನ್ನು ಪಡುತ್ತಾನೋ, ಅವನು ಅವುಗಳ ಕಾಮನೆಯ ಕಾರಣದಿಂದಾಗಿ, ಅವುಗಳ ಪ್ರಾಪ್ತಿಗೋಸ್ಕರ ಅಲ್ಲಿ ಇಲ್ಲಿ ಜನ್ಮವೆತ್ತುತ್ತಾನೆ. ಆದರೆ, ಪರಮಾರ್ಥ ತತ್ವದ ವಿಜ್ಞಾನದಿಂದ ಪೂರ್ಣವಾದ ಕಾಮ, ಕೃತಕೃತ್ಯ ಪುರುಷನ ಎಲ್ಲಾ ಕಾಮನೆಗಳು ಈ ಲೋಕದಲ್ಲಿಯೇ ಲೀನಗೊಳ್ಳುತ್ತವೆ. ಇಂತಹ ಆತ್ಮಜ್ಞಾನಿಗೆ ಬ್ರಹ್ಮಪ್ರಾಪ್ತಿ ಸುಲಭವಾಗಿದೆ. ಅವರು ಆತ್ಮ ತತ್ವವನ್ನು ಸಮ್ಯಕ್ ಪ್ರಕಾರದಿಂದ ತಿಳಿದುಕೊಂಡು ಆತ್ಮದರ್ಶಿ ಋಷಿಗಣ ಜ್ಞಾನದಿಂದ ತೃಪ್ತರಾಗಿ, ಕೃತಕೃತ್ಯರಾಗಿ, ವೀತರಾಗ ಮತ್ತು ಉಪರತ ಇಂದ್ರಿಯರಾಗುತ್ತಾರೆ. ಅಂತಹ ಧೀರ ಪುರುಷರು ಆ ಸರ್ವವ್ಯಾಪಕ ಬ್ರಹ್ಮನನ್ನು ಸರ್ವತ್ರವೂ ಪ್ರಾಪ್ತಿಯನ್ನು ಹೊಂದಿ ಪ್ರಾರಬ್ಧದ ಕ್ಷಯವಾದ ನಂತರ ಮೃತ್ಯುಕಾಲದಲ್ಲಿ ಸಮಾಹಿತ ಚಿತ್ತರಾಗಿ ಉಪಾಧಿಯಿಂದ ಅಪರಿಛಿನ್ನ ಸರ್ವರೂಪ ಬ್ರಹ್ಮನಲ್ಲಿಯೇ ಪ್ರವೇಶವನ್ನು ಹೊಂದುತ್ತಾರೆ. ಹೇಗೆ ಮಡಕೆ ಒಡೆದು ಹೋದಮೇಲೆ ಘಟಾಕಾಶ ಮಹಾಕಾಶದಲ್ಲಿ ಲೀನವಾಗುತ್ತದೋ ಹಾಗೆ. ಶ್ರುತಿಯಲ್ಲಿ ಹೇಳಿದಂತೆ ಬ್ರಹ್ಮಜ್ಞಾನಿಯು ಬ್ರಹ್ಮಸ್ವರೂಪವೇ ಆಗುತ್ತಾನೆ.

ಸಯೋಹ ವೈ ತತ್ಪರಂ ಬ್ರಹ್ಮವೇದ ಬ್ರಹ್ಮೈವ ಭವತಿ
ನಾಸ್ಯಾ ಬ್ರಹ್ಮವಿತ್ಕುಲೆ ಭವತಿ । ತರತಿ ಶೋಕಂ ತರತಿ
ಪಾಪ್ಮಾನಂ ಗುಹಾಗ್ರಂಥಿಭ್ಯೋ ವಿಮುಕ್ತೋಽಮೃತೋ ಭವತಿ॥

ಅರ್ಥಾತ್ : "ಮನುಷ್ಯರಲ್ಲಿ ಯಾರೊಬ್ಬನು ಪರಬ್ರಹ್ಮನನ್ನು ಅರಿಯುತ್ತಾನೋ ಅವನೇ ಬ್ರಹ್ಮನಾಗುತ್ತಾನೆ. ಆ ವಿದ್ವಾನನ ಕುಲದಲ್ಲಿನ ಯಾವುದೇ ಮನುಷ್ಯನು ಬ್ರಹ್ಮನನ್ನು ತಿಳಿಯದವನಾಗಿರುವುದಿಲ್ಲ. ಅರ್ಥಾತ್ ಅಬ್ರಹ್ಮವಿತ್ ಆಗಿರುವುದಿಲ್ಲ. ಅವನು ಇಷ್ಟವಿಯೋಗ ಜನಿತ ಸಂತಾಪವನ್ನು ಜೀವಿತದ ಅವಸ್ಥೆಯಲ್ಲಿಯೇ ಪಾರಾಗಿರುತ್ತಾನೆ. ಧರ್ಮಾಧರ್ಮರೂಪ ಪಾಪದಿಂದಲೂ ಸಹ ಪಾರಾಗಿರುತ್ತಾನೆ. ಹೃದಯದಲ್ಲಿ ಸ್ಥಿತವಾಗಿರುವ ಎಲ್ಲಾ ಪ್ರಕಾರದ ಸಂಶಯ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇಹಾಭಿಮಾನ, ವಿಷಯಾಸಕ್ತಿ, ಆತ್ಮ ಮತ್ತು ಅನಾತ್ಮಗಳ ಅಧ್ಯಾಸರೂಪಿ ಗ್ರಂಥಿಗಳಿಂದ ಬಿಡಿಸಿಕೊಂಡು ಅಮರನಾಗುತ್ತಾನೆ."

ಅಜ್ಞಾನಿ ಪುರುಷನು ಕೂಡ ಮರಣ ಕಾಲದಲ್ಲಿ ಸುಷುಪ್ತಿಯಂತೆ ಬ್ರಹ್ಮನಲ್ಲಿ ಲಯಭಾವ ಹೊಂದುತ್ತಾನೆ. ಆದರೆ, ಜ್ಞಾನದ ಅಭಾವದಿಂದಾಗಿ ಅವನ ಅವಿದ್ಯೆಯು ನಿವೃತ್ತವಾಗುವುದಿಲ್ಲ ಮತ್ತು ಕರ್ಮವಾಸನೆಗಳು ಸೂಕ್ಷ್ಮ ರೂಪದಲ್ಲಿ ಉಳಿದುಕೊಂಡಿರುತ್ತವೆ. ಆದುದರಿಂದ ಅಜ್ಞಾನಿ ಪುರುಷನು ಅವಿದ್ಯಾ ಕಾಮಕರ್ಮದ ಅಧೀನನಾಗಿ ಪುನಃ ಜನ್ಮ ಮರಣಕ್ಕೆ ಪ್ರಾಪ್ತನಾಗುತ್ತಾನೆ. ಜ್ಞಾನಿ ಪುರುಷನ ಅವಿದ್ಯೆಯು ಬ್ರಹ್ಮಜ್ಞಾನಿದಿಂದ ನಾಶವಾಗಿರುತ್ತದೆ. ಅವಿದ್ಯೆಯು ನಾಶವಾಗಿರುವುದರಿಂದ, ಅವಿದ್ಯೆಯ ಕಾರ್ಯವಾದ ವಾಸನೆ ಕರ್ಮಸಂಶಯ ವಿಪರ್ಯಾಯಾದಿ ಸರ್ವವೂ ನಾಶವಾಗಿರುತ್ತದೆ, ಹಾಗೂ ಜ್ಞಾನಿಯ ಪ್ರಾಣಾದಿಕಗಳು ಪರಲೋಕಕ್ಕೆ ಗಮನ ಮಾಡುವುದಿಲ್ಲ, ಆದರೆ ಬ್ರಹ್ಮನಲ್ಲಿ ಲಯ ಹೊಂದುತ್ತದೆ. ಅಜ್ಞಾನಿಯು ಮೊದಲು ಮೃತ್ಯುವಿನಿಂದ ಪೀಡಿತನಾಗುತ್ತಾನೆ ಮತ್ತು ನಂತರ ಎಂಬತ್ನಾಲ್ಕು ಲಕ್ಷ ಯೋನಿರೂಪ ಬಂಧನದ ಅನುಭವವನ್ನು ಪಡೆಯುತ್ತಾನೆ.

ಹೇಗೆಂದರೆ : ಒಬ್ಬ ಕಳ್ಳನಿದ್ದ. ಅವನ ಜೊತೆಯಲ್ಲಿ ಒಬ್ಬ ಸಾಧುವೂ ಇದ್ದ. ಇಬ್ಬರೂ ಜೊತೆಗೂಡಿ ಹೋಗುತ್ತಿದ್ದರು. ಅವರಿಬ್ಬರನ್ನು ರಾಜನ ಸಿಪಾಯಿಗಳು ಕಳ್ಳರೆಂದು ತಿಳಿದು ಬಲಾತ್ಕಾರದಿಂದ ಬಂಧಿಸಿದರು ಮತ್ತು ಕರೆದುಕೊಂಡು ಹೋಗಿ ರಾಜನ ಮುಂದೆ ನಿಲ್ಲಿಸಿದರು. "ಇವರಿಬ್ಬರೂ ಕಳ್ಳರಿದ್ದಾರೆ" ಎಂದು ಸಿಪಾಯಿಗಳು ರಾಜನಿಗೆ ಹೇಳಿದರು. ಇವರು ಧನದ ಕಳ್ಳತನ ಮಾಡಿದ್ದಾರೆ ಎಂದರು. ಕಳ್ಳನು ನಾನೇನೂ ಕಳ್ಳತನಮಾಡಿಲ್ಲವೆಂದನು. ಆಗ ರಾಜನು ಸಾಧು ಪುರುಷರಿಗೆ ಕೇಳಿದನು. ಅವನೂ ಸಹ ನಾನೇನೂ ಕಳ್ಳತನ ಮಾಡಿಲ್ಲವೆಂದರು. ಆಗ ರಾಜನ ಮಂತ್ರಿಯು ಒಂದು ಉಪಾಯವನ್ನು ಹುಡುಕಿದ, ಮತ್ತು ಮಹರಾಜನಿಗೆ ಹೇಳಿದ "ಇವರಲ್ಲಿ ಕಳ್ಳ ಯಾರು ಎಂದು ತಿಳಿಯುವ ಉಪಾಯ ನನ್ನಲ್ಲಿದೆ, ಉಪಾಯದಿಂದ ಕಳ್ಳ ಯಾರು ಎಂಬುದನ್ನು ಕಂಡುಹಿಡಿಯುತ್ತೇನೆ" ಎಂದನು. ರಾಜನ ಮಂತ್ರಿಯು ಆ ಇಬ್ಬರನ್ನು ಕುರಿತು "ನೀವು ಕಳ್ಳತನ ಮಾಡಿಯೇ ಇಲ್ಲವೆಂದ ಮೇಲೆ ಈ ಕೆಂಡದಂತಿರುವ ಕಬ್ಬಿಣದ ಸಲಾಕಿಯನ್ನು ಕೈಯಿಂದ ಸ್ಪರ್ಶಿಸಿ, ಆಗ ಗೊತ್ತಾಗುವುದು ನಿಮ್ಮಿಬ್ಬರಲ್ಲಿ ಯಾರೂ ಕಳ್ಳ ಎನ್ನುವುದು. ಯಾರೂ ಕಳ್ಳನಲ್ಲನೊ ಅವನ ಕೈಯ್ಯಿ ಸುಡುವುದಿಲ್ಲ" ಎಂದನು. ಮೊದಲು ಕಳ್ಳನು ತಾನು ಮಾಡಿದ ಕಳ್ಳತನವನ್ನು ಮುಚ್ಚಿಡಲು ಅಭಿಮಾನದಿಂದ ಮತ್ತು ಧೈರ್ಯದಿಂದ ಸುಳ್ಳು ಸುಳ್ಳು ಸಂಭಾಷಣೆಯನ್ನು ಮಾಡುತ್ತಾ ಕಾಯ್ದ ಕಬ್ಬಿಣದ ಸಲಾಕೆಯನ್ನು ಸ್ಪರ್ಶಿಸಿದ. ಆಗ ಆ ಕಳ್ಳನ ಕೈಯಿ ಸುಟ್ಟಿತು ಮತ್ತು ಅದರ ವೇದನೆಯಿಂದ ಜೋರಾಗಿ ಅಳಲು ಪ್ರಾರಂಭಿಸಿದ. ಆಗ ರಾಜನ ಸಿಪಾಯಿಗಳು ಇವನೇ ನಿಜವಾದ ಕಳ್ಳನೆಂದು ತಿಳಿದ ಮೇಲೆ ಅವನಿಗೆ ಅನೇಕ ಪ್ರಕಾರದ ದಂಡನೆಯನ್ನು ಕೊಟ್ಟರು. ಆ ಮೇಲೆ ಸಾಧು ಪುರುಷನು ಕಾಯ್ದ ಕಬ್ಬಿಣದ ಸಲಾಕಿಯನ್ನು ಸ್ಪರ್ಶಿಸಿದರೂ ಅವನ ಕೈಯಿ ಸುಡಲಿಲ್ಲ. ಆಗ ರಾಜ ಮತ್ತು ಮಂತ್ರಿ, ಸಿಪಾಯಿಗಳು ಸಾಧು ಪುರುಷನ ಕ್ಷಮೆಯನ್ನು ಕೇಳಿದರು ಮತ್ತು ಆ ಸಾಧು ಪುರುಷನಿಗೆ ಅನ್ನವಸ್ತ್ರವನ್ನು ಕೊಟ್ಟು ಸತ್ಕರಿಸಿದರು.

ಇದೇ ರೀತಿ ಅಜ್ಞಾನಿ ಪುರುಷನು ತನ್ನ ಶುದ್ಧವಾದ ರೂಪವನ್ನು ತಿಳಿಯದೇ ತಾನು ಬ್ರಹ್ಮನಲ್ಲವೆಂದು ಹೇಳುತ್ತಾನೆ. ನಾನು ಸುಖಿಯೂ ದುಃಖಿಯೂ ಜನ್ಮ ಮರಣವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಂದಿರುವವನು ಎಂದು ತಿಳಿಯುತ್ತಾನೆ. ಇದೆಯೇ ಕಳ್ಳತನದ ರೂಪವಾದ ಸ್ವಕರ್ಮವನ್ನು ಮುಚ್ಚಿಡುವುದಾಗಿದೆ. ಹೇಗೆ ಆ ಕಳ್ಳನಿಗೆ ಮೊದಲು ಕೈ ಸುಟ್ಟಿತೋ, ತದನಂತರ ರಾಜನ ಸಿಪಾಯಿಗಳು ಅವನಿಗೆ ದಂಡನೆಯನ್ನು ಮಾಡಿದರೋ ಹಾಗೆಯೇ ಅಜ್ಞಾನಿ ಮೊದಲು ದುಃಖರೂಪ ಮೃತ್ಯುವಿಗೆ ಪ್ರಾಪ್ತನಾಗುತ್ತಾನೆ ನಂತರ ಎಂಬತ್ತಾಲ್ಕು ಲಕ್ಷ ಯೋನಿ ರೂಪ ಬಂಧನಕ್ಕೆ ಪ್ರಾಪ್ತನಾಗಿ ದುಃಖವನ್ನು ಭೋಗಿಸುತ್ತಾನೆ. ಹೇಗೆ ಸಾಧು ಪುರುಷನಿಗೆ ಕಿಂಚಿತ್ತಾದರೂ ದುಃಖವಾಗಲಿಲ್ಲವೋ ಮತ್ತು ರಾಜ, ಮಂತ್ರಿ, ಸಿಪಾಯಿಗಳೆಲ್ಲರೂ ಸಾಧು ಮಹಾತ್ಮನ ಪೂಜೆಗೈದು, ಕ್ಷಮೆಯನ್ನು ಕೇಳಿಕೊಂಡು ಆದರಿಸಿದರೋ ಹಾಗೆಯೇ ಜ್ಞಾನಿ ಪುರುಷನು ತನ್ನ ಶುದ್ಧ ಸ್ವರೂಪದಲ್ಲಿ ನಿಶ್ಚಯನಾಗಿರುತ್ತಾನೆ, ಮತ್ತು ಸರ್ವವಿಕ್ಷೇಪಗಳಿಂದ ರಹಿತನಾಗಿರುವುದರಿಂದ ಬ್ರಹ್ಮ ಮುಂತಾದವರುಗಳಿಂದ ಪೂಜ್ಯನಾಗುತ್ತಾನೆ. ಆದರೆ ಅಜ್ಞಾನಿ ಪುರುಷನು ಮಾತ್ರ ತನ್ನ ಮೃತ್ಯುವಿಗೆ ಪ್ರಾಪ್ತನಾಗುತ್ತಾನೆ. ಜ್ಞಾನಿಯಾದರೋ ಶುದ್ಧ ಸಚ್ಚಿದಾನಂದ ಬ್ರಹ್ಮನನ್ನು ತನ್ನ ಸ್ವರೂಪವೆಂದು ತಿಳಿದು ಪುನಃ ಜನ್ಮ ಮೃತ್ಯುವಿಗೆ ಪ್ರಾಪ್ತನಾಗುವುದಿಲ್ಲ.

ಸತ್ಯಾಗ್ರಹಿ ಪುರುಷನು ಹೇಗೆ ಆ ಪರೀಕ್ಷೆಯಲ್ಲಿ ಸುಡಲಿಲ್ಲವೋ ಹಾಗೆಯೇ ತತ್ವಜ್ಞಾನಿಯು ಪ್ರಾರಬ್ಧ ಕ್ಷಯದ ನಂತರ ವಿದೇಹ ಕೈವಲ್ಯದ ಪ್ರಾಪ್ತಿಯನ್ನು ಹೊಂದುತ್ತಾನೆ ಮತ್ತು ಪುನಃ ಪುನಃಜನ್ಮವನ್ನು ಹೊಂದುವುದಿಲ್ಲ. ಆದರೆ ನಾಮರೂಪ ಅನೃತ (ಸುಳ್ಳು) ವಿಕಾರಗಳಲ್ಲಿ ಅಭಿನಿವೇಶವನ್ನು ಹೊಂದುವ ಅವಿದ್ವಾನ್‌ನು ಮೃತ್ಯುವನ್ನು ಹೊಂದಿ ಪುನಃರ್ಜನ್ಮವನ್ನು ಪಡೆಯುತ್ತಾನೆ. ಆದರೆ ಜ್ಞಾನಿಯ ಪ್ರತಿಯೊಂದು ಕರ್ಮಗಳು ಅಂದರೆ, ಕುಳಿತುಕೊಳ್ಳುವುದು, ಏಳುವುದು, ಊಟಮಾಡುವುದು, ಕುಡಿಯುವುದು, ಮಲಗುವುದು, ಎಚ್ಚರವಾಗುವುದು, ಯೋಚಿಸುವುದು, ಮನನ ಮಾಡುವುದು, ಸ್ವಪ್ನವನ್ನು ಕಾಣುವುದು, ಧ್ಯಾನವನ್ನು ಮಾಡುವುದು, ಮತ್ತು ಸಮಾಧಿಸ್ತನಾಗುವುದು, ಇವೆಲ್ಲವೂ ಒಟ್ಟು ಗೂಡಿಕೊಂಡು ಕರ್ಮದ ಅಂತರ್ಗತವಾಗಿರುತ್ತವೆ. ಆದುದರಿಂದ ಎಲ್ಲಿಯವರೆಗೆ ಶರೀರವಿರುತ್ತದೋ ಅಲ್ಲಿಯವರೆಗೆ ಪ್ರಕೃತಿಗನುಸಾರವಾಗಿ ಏನಾದರೊಂದು ಕರ್ಮವನ್ನು ಮಾಡುತ್ತಿರುತ್ತಾನೆ. ಆದರೆ ಮನಸ್ಸು, ಬುದ್ಧಿ ಮತ್ತು ಇಂದ್ರಿಯಾದಿಗಳ ಸಂಗತರೂಪವಾದ ಶರೀರ ಜನಗಳ ದೃಷ್ಟಿಯಲ್ಲಿ ವರ್ತಮಾನವಾಗಿರುತ್ತದೆ. ಅದರ ಮುಖಾಂತರ ಪ್ರಾರಬ್ಧನುಸಾರ ನಾಮಮಾತ್ರಕ್ಕೆ ಕರ್ಮಗಳು ಆಗುತ್ತಲೇ ಇರುತ್ತವೆ. ಆದರೆ ಕರ್ತಾತನದ ಅಭಾವವಿರುವ ಕಾರಣ ಆ ಕರ್ಮಗಳು ವಾಸ್ತವದಲ್ಲಿ ಕರ್ಮವೆನಿಸಿಕೊಳ್ಳುವದಿಲ್ಲ.

ಜ್ಞಾನಿ ಪ್ರಾರಬ್ಧಕ್ಕೆ ಅನುಸಾರವಾಗಿ ಜೀವಿಸುತ್ತಿರುತ್ತಾನೆ. ಇಂತಹವರೇ ಜ್ಞಾನಿ ಅರ್ಥಾತ್ ಜೀವನ್ಮುಕ್ತರೆಂದು ನಮಗೆ ಹೇಳಲಾಗುವುದಿಲ್ಲ. ಯಾಕೆಂದರೆ , ಪ್ರಾರಬ್ಧವು ಅನೇಕ ಪ್ರಕಾರದ್ದಾಗಿರುತ್ತದೆ. ಪ್ರಾರಬ್ಧ ಕರ್ಮಕ್ಕನುಸಾರವಾಗಿ ಭಿನ್ನ - ಭಿನ್ನ ಪ್ರಕಾರದ ಕ್ರೀಯೆಗಳಾಗುತ್ತವೆ. ಹಿಂದೆ ಹೇಳಿದಂತೆ ಕೃಷ್ಣ, ಶುಕ, ಜನಕ, ರಾಮ, ವಶಿಷ್ಠಾದಿಗಳ ಸ್ಥಿತಿಗತಿಗಳಲ್ಲಿ ಭಿನ್ನತೆಯಿತ್ತು. ಇದಕ್ಕೆ ಕಾರಣ ಪ್ರಾರಬ್ಧವೇ ಆಗಿದೆ. ಜ್ಞಾನವಂತೂ ಅಲ್ಲ. ಎಲ್ಲರ ಜ್ಞಾನದಲ್ಲೂ ಸಮಾನತೆ ಇದೆ. ಪ್ರಾರಬ್ಧದಲ್ಲಿ ಭಿನ್ನತೆಯಿದೆ. ಜ್ಞಾನಿಪುರುಷರಿಗೆ ಸಂಸಾರವು ಬಾಧಕವಾಗಿರುವುದಿಲ್ಲ. ಜ್ಞಾನಿಪುರುಷರು ಅನಿಚ್ಛೆಯಿಂದ ಪ್ರಾರಬ್ಧದ ಕಾರಣದಿಂದ ಜೀವಿಸುತ್ತಾರೆಯೇ ಹೊರತು ಸ್ವೇಚ್ಛೆಯಿಂದಲ್ಲ.

ಪೂರ್ವಜನ್ಮದಲ್ಲಿ ಯಾವುದರ ಉಪಭೋಗವನ್ನು ಮಾಡಲಾಗಿರುತ್ತದೆಯೋ ಆ ವಿಷಯಗಳು ವಾಸನಾರೂಪದಲ್ಲಿ ಈಗಲೂ ಚಿತ್ತದಲ್ಲಿ ವರ್ತಮಾನವಾಗಿರುತ್ತವೆ. ಈ ಸೂಕ್ಷ್ಮ ವಾಸನೆಗಳೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವ ಮತ್ತು ಶಿವನ ಏಕತ್ವದಲ್ಲಿ ಬಾಧೆಯುನ್ನುಂಟು ಮಾಡುತ್ತವೆ. ಮನುಷ್ಯನಿಗೆ ಅವಶ್ಯಕತೆಯಿರುವುದೇನೆಂದರೆ, ಅವನು ಸುಖ-ದುಃಖವನ್ನು ಭೋಗಿಸುತ್ತಾ ಪ್ರಾರಬ್ಧವನ್ನು ನಾಶಮಾಡುವುದು ಮತ್ತು ಹೊಸ ಪ್ರಾರಬ್ಧ ಕರ್ಮವನ್ನು ಸೃಷ್ಟಿಮಾಡದೇ ಇರುವುದು. ಮನುಷ್ಯನು ಈ ಜನ್ಮದಲ್ಲಿಯೇ ಮುಂದಿನ ಜನ್ಮದ ತಯಾರಿಯನ್ನು ಮಾಡುತ್ತಾನೆ. ಆದರೆ ಜ್ಞಾನಿ ಜನರು ಸಂಸರ್ಗ ದೋಷದಿಂದ ದೂರವಿರುತ್ತಾರೆ. ಜ್ಞಾನಿಗೆ, ಈ ಜಗತ್ತಿನಲ್ಲಿ ಏನು ಕಾಣುತ್ತಿದೆಯೋ, ಅದೆಲ್ಲವೂ ಮಿಥ್ಯಾ ಎಂಬುದು ಚೆನ್ನಾಗಿ ಮನದಟ್ಟಾಗಿರುತ್ತದೆ ಮತ್ತು ಆ ಅಭಿಪ್ರಾಯದಲ್ಲಿ ಅವನ ನಿಷ್ಠೆ ಬಹಳ ಬಲವತ್ತರವಾಗಿರುತ್ತದೆ. ಜಗತ್ತನ್ನು ಮಿಥ್ಯಾ ಎಂದು ತಿಳಿಯುವುದರಿಂದ ವೈರಾಗ್ಯವು ಉತ್ಪನ್ನವಾಗುತ್ತದೆ. ಸಂಸಾರವನ್ನು ಸತ್ಯ ಎಂದು ತಿಳಿಯುವುದರಿಂದ ಮೋಹವು ಉತ್ಪನ್ನವಾಗುತ್ತದೆ. ಜಗತ್ತಿನಲ್ಲಿ ಏನು ಕಾಣುತ್ತಿದೆಯೋ ಅದೆಲ್ಲವೂ ಮಿಥ್ಯವಾಗಿದೆ ಆದರೆ ಇವನ್ನೆಲ್ಲಾ ನೋಡುವ ಆತ್ಮವು ಸುಖರೂಪವಾಗಿದೆ.

ದೃಶ್ಯವು ವಿನಾಶಿ ಮತ್ತು ಫಲರೂಪವಾಗಿರುವುದರ ಕಾರಣ ಜ್ಞಾನಿಯು ತನ್ನ ದೃಷ್ಟಿಯನ್ನು ದೃಶ್ಯದಲ್ಲಿಡುವುದಿಲ್ಲ. ಜ್ಞಾನಿ ಜನರು ತನ್ನ ಮನಸ್ಸನ್ನು ದೃಶ್ಯ ವಸ್ತುಗಳಲ್ಲಿ ರಮಿಸಲು ಬಿಡುವುದಿಲ್ಲ. ಆದರೆ ಇವುಗಳೆಲ್ಲದರ ಸಾಕ್ಷಿಯಾದ ಪರಮಾತ್ಮನಲ್ಲಿ ದೃಷ್ಟಿಯನ್ನು ಸ್ಥಿರವಾಗಿಸುತ್ತಾರೆ.

ನಿದ್ರೆಯಲ್ಲಿ ಮನಸ್ಸು ನಿರ್ವಿಷಯವಾಗಿರುತ್ತದೆ, ಅದರಂತೆ ಜಾಗ್ರತಾವಸ್ಥೆಯಲ್ಲಿಯೂ ಇದ್ದರೆ ಅದನ್ನೇ ಮುಕ್ತಿಯೆಂದು ತಿಳಿಯಬೇಕು. ಎಲ್ಲಾ ವಿಷಯಗಳಿಂದ ದೂರನಾಗಿ ಮನಸ್ಸು ದ್ರಷ್ಟನಲ್ಲಿ ಒಂದಾಗುತ್ತದೆ. ಬ್ರಹ್ಮನಲ್ಲಿ ಲಯ ಹೊಂದಿದ ಮೇಲೆ ಮುಕ್ತಿ ಸಿಗುತ್ತದೆ. ಈ ಕಾರಣದಿಂದಲೇ ಜ್ಞಾನಿಯ ಮನಸ್ಸು ಬ್ರಹ್ಮನಲ್ಲಿ ಲಯವಾಗುತ್ತದೆ. ಸಂಸಾರ ಬಾಧೆಗಳಿಗೆ ಕಾರಣ ಮನಸ್ಸು, ಜ್ಞಾನಿಗಳ ಮನಸ್ಸು ಬ್ರಹ್ಮನಲ್ಲಿ ಲಯ ಹೊಂದಿರುವುದರಿಂದ ಅವರಿಗೆ ಸಂಸಾರದ ಬಾಧೆ ಇರುವುದಿಲ್ಲ. ಜ್ಞಾನಿ ಪುರುಷರು ಜಗತ್ ಮಿಥ್ಯವೆಂದು ತಿಳಿದು ಜಗತ್ತಿನ ವಸ್ತುಗಳನ್ನು ಪ್ರೀತಿಸುವುದಿಲ್ಲ. ಕೇವಲ ಪರಮಾತ್ಮನನ್ನು ಪ್ರೀತಿಸುತ್ತಾರೆ, ಮತ್ತು ವಿಕಾರವಾಸನೆಗಳನ್ನು ನಷ್ಟಪಡಿಸುತ್ತಾರೆ. ಅವರು ತಿಳಿಯುವುದೇನೆಂದರೆ ಈ ಶರೀರವು ಮಲ-ಮೂತ್ರಗಳಿಂದ ಕೂಡಿದೆ, ಆದ್ದರಿಂದ ಅವರು ದೇಹದ ಮೋಹವನ್ನು ಬಿಟ್ಟು ಪರಮಾತ್ಮನಲ್ಲಿ ಲೀನರಾಗುತ್ತಾರೆ.

ಜ್ಞಾನಿಯ ದೃಷ್ಟಿಯು ನಾರಿಯ ಕಡೆಗೆ ಹರಿದರೆ, ಅವರು ತಿಳಿಯುವುದೇನೆಂದರೆ, ಇದೊಂದು ಎಲುಬು- ಮಾಂಸದ ಗೊಂಬೆ ಮತ್ತು ಮಲ-ಮೂತ್ರದಿಂದ ಕೂಡಿದೆ. ಇದರ ಜೊತೆಯಲ್ಲಿ ಎಂತಹ ವ್ಯವಹಾರ? ಎಂದು ಯೋಚಿಸುತ್ತಾ ಆ ಜ್ಞಾನಿಯು ನಾರಿಯಿಂದ ತನ್ನ ದೃಷ್ಟಿಯನ್ನು ಸೆಳೆದುಕೊಳ್ಳುತ್ತಾನೆ.

ಜ್ಞಾನಿಯು ಮಾರ್ಗ ಸಾಧಾರಣ ಗೃಹಸ್ಥನಿಗೆ ಕಠಿಣಪ್ರದವಾಗಿದೆ. ಯಾವುದು ದೃಷ್ಟಿಗೋಚರವಾಗಿದೆಯೋ ಅದನ್ನು ಮಿಥ್ಯಾ ಎಂದು ತಿಳಿಯುವುದು ಬಹಳ ಕಠಿಣವಾದ ಕೆಲಸವಾಗಿದೆ. ನಾರಿಯು ಸುಂದರಳಾಗಿದ್ದಾಳೆ. ಆದರೆ ಜ್ಞಾನಿಯು ಅವಳನ್ನು ಮಲ-ಮೂತ್ರದಿಂದ ತುಂಬಿದ ಗೊಂಬೆಯೆಂದು ತಿಳಿಯುತ್ತಾನೆ. ವ್ಯವಹಾರವನ್ನು ಮಾಡಬೇಕು. ಹೇಗೆ ಮಾಡಬೇಕೆಂದರೆ ಅದು ಪುರ್ನಜನ್ಮಕ್ಕೆ ಬೀಜವಾಗಬಾರದು. ರಾಗ-ದ್ವೇಷ ರಹಿತವಾದ ವ್ಯವಹಾರವು ಮನುಷ್ಯನಿಗೆ ಮುಕ್ತಿಯನ್ನು ದೊರಕಿಸಕೊಡಬಲ್ಲದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ರಾಗ-ದ್ವೇಷಾದಿ ರಹಿತತ್ವೆ ಸತಿ ಸ್ವಸ್ವರೂಪಜ್ಞಾನತ್ವಂ ಜೀವನ್ಮುಕ್ತತ್ವಂ"

ಜೀವನ್ಮುಕ್ತ ಪುರುಷ ಶಾರೀರಿಕ ಅಭಿಮಾನದಿಂದ ರಹಿತನಾಗಿರುತ್ತಾನೆ. ಅವನು ವಾಸನೆಯನ್ನಿಡುವುದಿಲ್ಲ, ಆದುದರಿಂದ ಅವನಿಗೆ ಬೇರೆ ದೇಹ ಪ್ರಾಪ್ತಿಯಾಗುವುದಿಲ್ಲ.

ಚಿತ್ತದಲ್ಲಿರತಕ್ಕಂಥಹ ಪೂರ್ವಜನ್ಮದ ವಾಸನೆಯೇ ಪೂರ್ವಚಿತ್ತವಾಗಿದೆ. ಭೋಗಿಸಲ್ಪಟ್ಟ ವಿಷಯ ಸುಖದ ಸ್ಮರಣೆ ಮತ್ತು ಅವುಗಳ ಕಾರಣದಿಂದಾಗಿ ಮನಸ್ಸಿನಲ್ಲಿ ಮನೆಮಾಡಿಕೊಂಡಿರುವ ಸೂಕ್ಷ್ಮವಾಸನೆಗಳೇ ಪೂರ್ವಚಿತ್ತವಾಗಿದೆ. ಪೂರ್ವದ ವಾಸನೆಯು ತಕ್ಷಣವೇ ತೊರೆಯುವುದಿಲ್ಲ. ಇಂದ್ರಿಯಗಳು ದೊರೆಕಿರುವ ಸುಖವನ್ನು ಪದೇ ಪದೇ ಬೇಡುತ್ತವೆ. ಇಂತಹ ವಾಸನೆಗಳು ಜಾಗೃತವಾದಾಗ ಮನಸ್ಸಿಗೆ ತಿಳಿಯ ಹೇಳಬೇಕು. "ನೀನು ಇಲ್ಲಿಯವರೆಗೆ ಎಷ್ಟು ಸುಖೋಪಭೋಗಗಳನ್ನು ಪಡೆದಿರುವೆ, ಆದರೂ ತೃಪ್ತಿಯುಂಟಾಯಿತೇ?" ಎಲ್ಲಿಯವರೆಗೆ ವಿಷಯಗಳ ಆಕರ್ಷಣೆವಿದೆಯೋ ಅಲ್ಲಿಯವರೆಗೆ ವಿಷಯೇಚ್ಛೆ ನಷ್ಟವಾಗಲಾರದು. ವಿಷಯಗಳ ಬಗ್ಗೆ ಆಕರ್ಷಣೆ ಇಲ್ಲವೆಂದಾಗ ವಿಷಯೇಚ್ಛೆ ನಷ್ಟವಾಗುತ್ತದೆ. ಅಲ್ಲಿಯವರೆಗೆ ಈ ಜೀವನವು ಜ್ಞಾನದ ಮಾರ್ಗದಲ್ಲಿ ಮುಂದಕ್ಕೆ ಹೋಗಲಾರದು. ಪೂರ್ವಚಿತ್ತವು ಎಲ್ಲರನ್ನೂ ಪೀಡಿಸುತ್ತಿರುತ್ತದೆ. ಪೂರ್ವಚಿತ್ತ ಅರ್ಥಾತ್ ಪೂರ್ವದ ಸಂಸ್ಕಾರಗಳು ನಿವೃತ್ತಿಯಾದರೂ ಸಹ ಪೂರ್ವದ ವಾಸನೆಗಳ ಸ್ಮರಣೆಯಾಗುತ್ತಿರುವುದೇ "ಪೂರ್ವಚಿತ್ತಿ" ಯಾಗಿದೆ.

ತೆಂಗಿನಕಾಯಿಯಲ್ಲಿ, ಒಳಗಿನ ಬೆಳ್ಳಗಿನ ಕಾಯಿ ಮತ್ತು ಹೊರಗಿನ ಕಠಿಣವಾದ ಆವರಣ ಒಂದೇ ಆಗಿಲ್ಲದಿದ್ದರೂ, ಎಲ್ಲಿಯವರೆಗೆ ಒಳಗಡೆ ನೀರು ಇರುತ್ತದೋ ಅಲ್ಲಿಯವರೆಗೆ ಅವು ಒಂದನ್ನೊಂದನ್ನು ಬಿಡುವುದಿಲ್ಲ. ಇದೇ ರೀತಿ ಎಲ್ಲಿಯವರೆಗೆ ಮನುಷ್ಯನಿಗೆ ವಿಷಯದಲ್ಲಿ ರಸವಿದೆಯೋ, ವಿಷಯದಲ್ಲಿ ಆಸಕ್ತಿ ಇದೆಯೋ, ಅಲ್ಲಿಯವರೆಗೆ ಶರೀರ ಮತ್ತು ಆತ್ಮದ ಭಿನ್ನತೆಯ ಅನುಭವ ಉಂಟಾಗುವುದಿಲ್ಲ. ಶರೀರ ಆವರಣವಾಗಿದೆ, ಆತ್ಮ ಒಳಗಿನ ಬೆಳ್ಳಗಿನ ಕಾಯಿ, ವಿಷಯವೇ ಒಳಗಿನ ನೀರು, ಸಂಸಾರದ ಯಾವುದೇ ವಸ್ತುವಿನಲ್ಲಿ ಎಲ್ಲಿಯವರೆಗೆ ರಸವಿದೆಯೋ ಅಲ್ಲಿಯವರೆಗೆ ಶರೀರ ಮತ್ತು ಆತ್ಮದ ಭಿನ್ನತೆಯ ಅನುಭವವಾಗುವುದಿಲ್ಲ.

ಆತ್ಮವು ಜ್ಞಾನಮಯ, ಆದರೆ ಜ್ಞಾನವನ್ನು ಸತತವಾಗಿ ಅದೇ ರೂಪದಲ್ಲಿ ಉಳಿಸಿಕೊಳ್ಳಲು ಇಂದ್ರಿಯಗಳ ಮುಖಾಂತರ ಹೊರಗೆ ಹರಿಯುತ್ತಿರುವ ಬುದ್ದಿಶಕ್ತಿಯನ್ನು ತಡೆಗಟ್ಟಬೇಕು. ಜ್ಞಾನಿ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹೋಗಗೊಡವುದಿಲ್ಲ. ಆದರೆ ಅಜ್ಞಾನಿಗಳ ಜೀವನ ವಿಲಾಸಮಯವಾಗಿರುವುದರಿಂದ ಜ್ಞಾನವು ತನ್ನ ರೂಪದಲ್ಲಿ ಉಳಿಯುವುದಿಲ್ಲ. ಎಲ್ಲ ಜ್ಞಾನವೂ ಪುಸ್ತಕದಲ್ಲೇ ಉಳಿಯುತ್ತದೆ. ಮಸ್ತಕದಲ್ಲಿ ಹೋಗುವುದಿಲ್ಲ.

ಯಾರು ಗ್ರಂಥಗಳ ಹಿಂದೆ ಓಡುತ್ತಾರೋ ಅವರು ವಿದ್ವಾನರು. ಯಾರು ಭಕ್ತಿಪೂರ್ವಕವಾಗಿ ಭಗವಂತನ ಹಿಂದೆ ಓಡುತ್ತಾರೋ ಅವರು ಸಂತರು. ಶಾಸ್ತ್ರಗಳನ್ನು ಓದಿ ಯಾರು ಮಾತನಾಡುತ್ತಾರೋ ಅವರು ವಿದ್ವಾನರು. ಭಗವಂತನನ್ನು ಪ್ರಸನ್ನವಾಗಿಸಿಕೊಂಡು ಅವನಲ್ಲಿಯೇ ಹುಚ್ಚರಾಗಿ ಮಾತನಾಡುತ್ತಾರೋ ಅವರು ಸಂತರು.

ಗೀತೆಯಲ್ಲಿ ಭಗವಂತನು ಅರ್ಜುನನಿಗೆ ಹೇಳಿರುವುದೇನೆಂದರೆ - ಅರ್ಜುನಾ! ಜ್ಞಾನವು ನಿನ್ನಲ್ಲಿದೆ, ಹೃದಯದಲ್ಲಿ ಸಾತ್ವಿಕ ಭಾವವು ಜಾಗೃತ ಮಾಡಿ, ಮನಸ್ಸು ಶುದ್ಧಗೊಂಡರೆ ಹೃದಯದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನವು ತನ್ನಿಂದ ತಾನೆ ಪ್ರಕಟವಾಗುತ್ತದೆ. ಶರೀರದಲ್ಲಿ ಸತ್ವಗುಣದ ವೃದ್ಧಿಯಾದಲ್ಲಿ ತಾನಾಗಿಯೇ ಜ್ಞಾನದ ಝರಿಯು ಒಡೆದು ಜ್ಞಾನವು ಪ್ರಕಟವಾಗುತ್ತದೆ.

ಜ್ಞಾನೀ ಕರ್ಮ ನಿರೂಢ್ಯೋಪಿ ಲಿಪ್ಯತೆ ನ ಕ್ರಿಯಾ ಫಲೈಃ ।
ಘೃತಾದಿನಾ ಯಥಾಜಿಹ್ವಾ ಭೋಕ್ತ್ರಿ ಚಾಪಿ ನ ಲಿಪ್ಯತೆ ॥

- ಶ್ರೀ ಸಿದ್ಧಾಂತ ಶಿಖಾಮಣಿ

"ಜ್ಞಾನಿಯು ಕರ್ಮವನ್ನು ಮಾಡಿದರೂ ಸಹ ಕರ್ಮದ ಫಲಗಳಿಗೆ ಅಂಟಿಕೊಳ್ಳುವುದಿಲ್ಲ. ಹೇಗೆ ತುಪ್ಪ, ಎಣ್ಣೆ ಮುಂತಾದ ಎಲ್ಲಾ ಪದಾರ್ಥಗಳ ಸ್ವಾದವನ್ನು ನೋಡುವ ನಾಲಿಗೆ ಆ ಪದಾರ್ಥಗಳಿಗೆ ಅಂಟಿಕೊಳ್ಳುವುದಿಲ್ಲವೋ ಹಾಗೆಯೇ ಜ್ಞಾನಿ ಪುರುಷನು ಕರ್ಮವನ್ನು ಮಾಡುತ್ತಿದ್ದರೂ ಸಹ ಆ ಕರ್ಮಗಳ ಫಲವನ್ನು ಅವನಿಗೆ ಭೋಗಿಸಬೇಕಾಗುವುದಿಲ್ಲ."

ಜ್ಞಾನಿಯ ಶರೀರಾಕಾರ ಭೂತಗಳ ನಾಶವಾದ ಮೇಲೆ, ನಾನು ಇಂತಹ ಹೆಸರಿನವನು, ಇಂತಹವನ ಪುತ್ರನು, ಇದು ನನ್ನ ಕ್ಷೇತ್ರ, ಇದು ನನ್ನ ಧನ, ಇತ್ಯಾದಿ ಸರ್ವ ವಿಶೇಷ ಜ್ಞಾನವು ನಷ್ಟವನ್ನು ಹೊಂದುತ್ತವೆ. ಈ ಶರೀರದ ನಾಶವಾದ ಮೇಲೆ ಅವಿನಾಶಿಯಾದ ಆತ್ಮನು ನಾಶವನ್ನು ಹೊಂದುವುದಿಲ್ಲ. ಶರೀರವು ವಿನಾಶವನ್ನು ಹೊಂದುವುದರಿಂದ ಮನ ಮುಂತಾದವುಗಳಿಂದ ಆಗುವ ವಿಶೇಷ ಜ್ಞಾನದ ಅಭಾವ ಉಂಟಾಗುತ್ತದೆ. ವಿಜ್ಞಾನ ಘನ, ಸ್ವಪ್ರಕಾಶ, ನಿತ್ಯ ಆತ್ಮದ ನಾಶ ಎಂದಿಗೂ ಆಗುವುದಿಲ್ಲ.

ಅವಿದ್ಯಾವಸ್ಥೆಯಲ್ಲಿ ದ್ವೈತ ಪ್ರತೀತವಾಗುತ್ತದೆ. ಆಗ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮುಂತಾದ ವಿಷಯಗಳ ವಿಪರೀತ ಜ್ಞಾನ ಉಂಟಾಗುತ್ತದೆ. ಇದಕ್ಕೆ ವಿರುದ್ಧವಾಗಿ ಜ್ಞಾನಿಯ ದೃಷ್ಟಿಯಲ್ಲಿ ಯಾರು ಯಾರನ್ನು ರುಚಿಸಬಹುದು, ಯಾರು ಯಾರಿಗೆ ಹೇಳಬಹುದು, ಯಾರು ಯಾರಿಂದ ಕೇಳಬೇಕು. ಯಾರು ಯಾರರ ಮನನವನ್ನು ಮಾಡುವುದು, ಯಾರು ಯಾರನ್ನು ಸ್ಪರ್ಶಿಸುವುದು, ಮತ್ತು ಯಾರು ಯಾರನ್ನು ತಿಳಿಯುವುದು. ಪುರುಷನು ಯಾರಿಂದ ಈ ಎಲ್ಲವನ್ನೂ ತಿಳಿಯುತ್ತಾನೋ ಅಂಥಹವನನ್ನು ಯಾರ ಮುಖಾಂತರ ತಿಳಿಯುವುದು? ಆತ್ಮ ಅಗುಹ್ಯವಾಗಿದ್ದಾನೆ. ಅವನನ್ನು ಗ್ರಹಣ ಮಾಡಲು ಸಾಧ್ಯವಿಲ್ಲ. ಅವನ ವಿನಾಶವೆಂದಿಗೂ ಆಗುವುದಿಲ್ಲ. ಅವನು ಅಸಂಗನಾಗಿದ್ದಾನೆ.

ಆತ್ಮ ಕೆಳಗಿದೆ, ಮೇಲಿದೆ, ಹಿಂಭಾಗದಲ್ಲಿದೆ, ಮುಂದೆ, ಬಲಗಡೆ, ಎಡಗಡೆ ಹೆಚ್ಚೇನು ಹೇಳುವುದು, ಎಲ್ಲವೂ ಆತ್ಮಮಯವಾಗಿದೆ. ಅವನೇ ಈ ತರಹ ನೋಡುತ್ತಾ ಮನನವನ್ನು ಮಾಡುತ್ತಾ ಹಾಗೂ ಈ ಪ್ರಕಾರವಾಗಿ ವಿಶೇಷ ರೂಪದಿಂದ ಅರಿಯುತ್ತಾ ಆತ್ಮರಮಣ ರೂಪ ಅಭ್ಯಂತರ ಕ್ರೀಡೆ, ದೇಹ ಭಿನ್ನ ಪದಾರ್ಥಗಳೊಂದಿಗೆ ಹೊರಗಿನ ಆತ್ಮಕ್ರೀಡೆ, ಮಿತ್ರಾದಿಗಳೊಂದಿಗೆ ಆತ್ಮಾಮಿಥುನ ಮತ್ತು ಆತ್ಮಾನಂದವನ್ನು ಹೊಂದಿದವನಾಗಿರುತ್ತಾನೆ. ಸಂಪೂರ್ಣ ಲೋಕದಲ್ಲಿ ಅವನದೇ ಮಾತ್ರವೆ ಸ್ವೇಚ್ಛೆಯಾದ ಗತಿಯಿದೆ. ಆದರೆ ಯಾರು ಅವನನ್ನು ಈ ರೀತಿಯಿಂದ ತಿಳಿಯುವುದಿಲ್ಲವೊ ಅವರು ಅನ್ಯ ಶಾಸನಕ್ಕೆ ಒಳಗಾಗಿರುವುದರಿಂದ ನಶ್ವರ ಲೋಕವನ್ನು ಹೊಂದುತ್ತಾರೆ. ಅವರಿಗೆ ಸಂಪೂರ್ಣ ಲೋಕದಲ್ಲಿ ಸ್ವೇಚ್ಛಾಗತಿ ಇರುವುದಿಲ್ಲ.

ಬ್ರಹ್ಮಜ್ಞಾನದಿಂದ ಅಜ್ಞಾನದ ನಿವೃತ್ತಿಯಾದ ಮೇಲೆ ಜ್ಞಾನಿಯು ಬ್ರಹ್ಮನನ್ನು ನಿರಾವರಣ ಆತ್ಮರೂಪದಲ್ಲಿ ತಿಳಿಯುವುದರಿಂದ ಬ್ರಹ್ಮನ ಪ್ರಾಪ್ತಿಯನ್ನು ಹೊಂದುತ್ತಾನೆ. ಆದರೆ, ಅಜ್ಞಾನಿಯ ಆವರಣವು ನಿವೃತ್ತವಾಗಿಲ್ಲವಾದುದರಿಂದ ಅಜ್ಞಾನಿಗೆ ಬ್ರಹ್ಮಪ್ರಾಪ್ತಿಯಾಗುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಗೆಂದರೆ: ಇಬ್ಬರ ಪುರುಷರ ಮನೆಯಲ್ಲಿ ಬಂಗಾರ ರೂಪದ ನಿಧಿಯು ನೆಲದಲ್ಲಿ ಅಡಗಿತ್ತು. ಅವರಲ್ಲಿ ಒಬ್ಬ ಪುರುಷನಿಗೆ ದಯಾಳುವಾದ ಒಬ್ಬ ಸಾಧುವು ಹೇಳಿದುದೇನೆಂದರೆ, 'ನಿನ್ನ ಮನೆಯಲ್ಲಿ ಅನಂತವಾದ ಬಂಗಾರ ರೂಪದ ನಿಧಿಯು ಇದೆ, ನೀನೇಕೆ ಹೀಗೆ ದರಿದ್ರನಂತಿದ್ದೀಯಾ' ಎಂದನು. ಆಪ್ತ ಪುರುಷನಾದ, ದಯಾಳು ಸಾಧುವಿನ ಮಾತಿನಂತೆ ಆ ವ್ಯಕ್ತಿಯು ಮನೆಯಲ್ಲಿ ಶೋಧನೆ ನಡೆಸಿ ಆ ನಿಧಿಯನ್ನು ಪಡೆದುಕೊಂಡನು. ಆದರೆ ಇನ್ನೊಬ್ಬ ಪುರುಷನಿಗೆ ಆಪ್ತಪುರುಷನ ಭೇಟಿಯಾಗಲಿಲ್ಲ. ಅವನಿಗೆ ಆಪ್ತರ ವಚನ ಕೇಳಲು ಸಿಗಲಿಲ್ಲ. ಆದುದರಿಂದ ಆ ಪುರುಷನು ಸ್ವರ್ಣ ನಿಧಿಯಿಂದ ವಂಚಿತನಾದನು.

ಈ ರೀತಿಯಾಗಿ ಅಧಿಕಾರಿ ಪುರುಷರ ಶುಭಕರ್ಮಗಳಿಂದ ಬ್ರಹ್ಮನಿಷ್ಠ ಗುರುವಿನ ಪ್ರಾಪ್ತಿಯಾಗುತ್ತದೆ. ಆ ಗುರುವು ಹೇಳುವುದೇನೆಂದರೆ 'ಹೇ! ಮುಮುಕ್ಷುವೆ! ನೀನು ಶುದ್ಧ ಸಚ್ಚಿದಾನಂದ ನಿರ್ವಿಕಾರ ಪರಿಪೂರ್ಣ ರೂಪ ಬ್ರಹ್ಮನಾಗಿದ್ದೀಯಾ । ಇಂತಹ ತನ್ನ ಶುದ್ಧರೂಪವನ್ನು ತ್ಯಾಗ ಮಾಡಿ ನೀನು ಸುಖಿ-ದುಃಖಿ, ಹುಟ್ಟಿ ಸಾಯುವವನು ಎಂದು ಏಕೆ ತಿಳಿದಿರುವೆ'. ಇಂತಹ ವಾಕ್ಯಗಳ ಶ್ರವಣದಿಂದ ಆ ಶುದ್ಧ ಅಧಿಕಾರಿಯು ಬ್ರಹ್ಮನಿಗೆ ಪ್ರಾಪ್ತನಾಗುತ್ತಾನೆ ಮತ್ತು ಎರಡನೆಯ ಪುರುಷನಿಗೆ ನಿಷ್ಕಾಮ ಕರ್ಮದ ಅಭಾವದಿಂದ ಅಂತಃಕರಣಶುದ್ಧಿಯಾಗಲಿಲ್ಲ ಹಾಗೂ ಜ್ಞಾನಿಯಾದ ಗುರುವಿನ ಪ್ರಾಪ್ತಿಯಾಗಲಿಲ್ಲ. ಆದಕಾರಣ ಸಾಧನೆಯ ಅಭಾವದಿಂದ ಜ್ಞಾನ ಉಂಟಾಗುವುದಿಲ್ಲ ಹಾಗೂ ಆ ಪುರುಷನಿಗೆ ಬ್ರಹ್ಮನ ಪ್ರಾಪ್ತಿ ಉಂಟಾಗುವುದಿಲ್ಲ ಮತ್ತು ಸದಾಸರ್ವದಾ ದುಃಖವನ್ನು ಅನುಭವಿಸುತ್ತಿರುತ್ತಾನೆ.

ಬ್ರಹ್ಮಜ್ಞಾನಿಗೆ ದೇಹ ದೃಷ್ಟಿಯಿರುವುದಿಲ್ಲ. ಅವನ ವೃತ್ತಿಗಳು ಬ್ರಹ್ಮಾಕಾರವಾಗಿರುತ್ತವೆ. ಶುಕದೇವನು ಬ್ರಹ್ಮಜ್ಞಾನಿಯಾಗಿದ್ದ ಅವನಿಗೆ ದೇವ-ದೃಷ್ಟಿಯಿತ್ತು. ದೇಹ-ದೃಷ್ಟಿಯಿರಲಿಲ್ಲ. ಎಲ್ಲಿಯವರೆಗೆ ದೇಹ-ದೃಷ್ಟಿವಿದೆಯೋ ಅಲ್ಲಿಯವರೆಗೆ ದುಃಖವಿದೆ.

ಒಂದು ಸಾರಿ ಏನಾಯಿತೆಂದರೆ, ಒಂದು ಸರೋವರದಲ್ಲಿ ಅಪ್ಸರೆಯರು ಸ್ನಾನವನ್ನು ಮಾಡುತ್ತಿದ್ದರು. ಅಲ್ಲಿ ಹತ್ತಿರದಿಂದಲೇ ನಗ್ನ ಅವಸ್ಥೆಯಲ್ಲಿ ಶುಕದೇವರು ಹೋಗುತ್ತಿದ್ದರು. ಅಪ್ಸರೆಯರು ಮೊದಲಿನಂತೆಯೆ ಸ್ನಾನದಲ್ಲಿ ಮಗ್ನರಾಗಿದ್ದರು ಮತ್ತು ಯಾವುದೇ ತರಹದ ನಾಚಿಕೆಯ ಅನುಭವವನ್ನು ಹೊಂದಲಿಲ್ಲ. ವಸ್ತ್ರವನ್ನೂ ಸಹ ಧರಿಸಲಿಲ್ಲ. ಸ್ವಲ್ಪ ಹೊತ್ತಿನ ನಂತರ ವ್ಯಾಸರು ಅಲ್ಲಿಯೇ ಹತ್ತಿರದಿಂದ ನಡೆಯುತ್ತಿದ್ದರು. ಅವರು ಬಟ್ಟೆಯನ್ನು ಧರಿಸಿದ್ದರು. ಆದರೆ ವ್ಯಾಸರನ್ನು ನೋಡಿದ ಕೂಡಲೆ ಅಪ್ಸರೆಯವರು ತಕ್ಷಣವೆ ತಮ್ಮ ವಸ್ತ್ರವನ್ನು ಧರಿಸಿದರು. ವ್ಯಾಸರು ಈ ಘಟನೆಯನ್ನು ಕಂಡು ಬಹಳ ಆಶ್ಚರ್ಯಚಕಿತರಾದರು. ಹೀಗೇಕೆ ಮಾಡಿದಿರಿ ಎಂದು ಅಪ್ಸರೆಯರಿಗೆ ವ್ಯಾಸರು ಕೇಳಿದರು. ಅಪ್ಸರೆಯರು ಹೇಳಿದುದೇನೆಂದರೆ, ತಾವು ವಯೋವೃದ್ಧರು, ಪಿತಾಸಮಾನರು, ಆದರೂ ತಮ್ಮ ಮನಸ್ಸಿನಲ್ಲಿ, ಇವರು ಪುರುಷ, ಇವರು ಸ್ತ್ರೀ ಎನ್ನುವ ಭೇದವಿದೆ. ಆದರೆ, ಅದೇ ಶುಕದೇವನ ಮನಸ್ಸಿನಲ್ಲಿ ಇಂತಹ ಯಾವುದೇ ಭೇದವಿಲ್ಲ. ಶುಕದೇವರು ಕೇವಲ ಬ್ರಹ್ಮಜ್ಞಾನಿಯಲ್ಲದೆ ಬ್ರಹ್ಮದೃಷ್ಟಿಯನ್ನಿಟ್ಟುಕೊಂಡು ಸಂಚರಿಸುತ್ತಾರೆ. ಶುಕದೇವರಿಗೆ ಅಭೇದ ದೃಷ್ಟಿ ಸಿದ್ಧವಾಗಿದೆ. ಅವರಿಗೆ ಇವನು ಪುರುಷ, ಇವಳು ಸ್ತ್ರೀ ಎನ್ನುವ ವಿಚಾರವೇ ಅವರ ಮನಸ್ಸಿನಲ್ಲಿಲ್ಲ.

ಜ್ಞಾನ ಮತ್ತು ವೈರಾಗ್ಯಗಳು ಹುಟ್ಟಿದರೆ ಮಾತ್ರ ಜೀವನದ ಜೀವಭಾವ ಹೋಗುತ್ತದೆ. ಜ್ಞಾನ ಮಾರ್ಗದಲ್ಲಿ ಪ್ರಾಪ್ತಿಯ ಪ್ರಾಪ್ತಿಯಿದೆ. ಯಾವುದು ಪ್ರಾಪ್ತವಿದೆಯೊ ಅದರ ಅನುಭವವನ್ನು ಪಡೆಯಬೇಕಾಗಿದೆ. ಜ್ಞಾನಮಾರ್ಗದಲ್ಲಿ ಜ್ಞಾನದಿಂದ ಭೇದದ ನಿಷೇಧವಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರಿಗೆ ಅಪರೋಕ್ಷ ಜ್ಞಾನವಾಗುತ್ತದೋ ಅವರು ಜಗತ್ತಿನ ಸನ್ಮಾನ ಮಾಡುವುದಿಲ್ಲ. ಕನಸಿನಿಂದ ಎಚ್ಚತ್ತ ಮೇಲೆ ಆ ಕನಸು ಹೇಗೆ ಮಿಥ್ಯವೆಂದಿನಿಸುತ್ತದೆಯೋ, ಹಾಗೆಯೇ ಭಗವಂತನ ಸಾಕ್ಷಾತ್ಕಾರವಾದ ಮೇಲೆ ಈ ಜಗತ್ತು ಮಿಥ್ಯೆವೆಂದಿನಿಸುತ್ತದೆ. ದೃಶ್ಯ ಜಗತ್ತು ಅಸತ್ಯ ಮತ್ತು ಪರಮಾತ್ಮ ಸತ್ಯ. ಭೂತ, ವರ್ತಮಾನ ಮತ್ತು ಭವಿಷ್ಯದಲ್ಲಿ ಯಾರು ಒಂದೇ ಸ್ವರೂಪವನ್ನು ಧಾರಣ ಮಾಡುತ್ತಾನೋ ಅವನೇ ಸತ್ಯ ಮತ್ತು ಜಗತ್ತು ಅಸತ್ಯ. ಆದುದರಿಂದಲೇ ಜಗತ್ತಿನ ಪದಾರ್ಥಗಳು ದುಃಖದಾಯಿಯಾಗಿವೆ. ವ್ಯವಹಾರದಲ್ಲಿ ಜಗತ್ತು ಸತ್ಯದಂತೆ ಕಾಣುತ್ತದೆ ಆದರೆ ಪರಮಾರ್ಥದ ದೃಷ್ಟಿಯಿಂದ ನೋಡಿದರೆ ಜಗತ್ತು ಸತ್ಯವಲ್ಲ. ಈ ಕಾರಣದಿಂದಲೇ ಜ್ಞಾನಿ ಪುರುಷರು ಜಗತ್ತಿನ ಚಿಂತನೆಯನ್ನು ಮಾಡುವುದಿಲ್ಲ ಮತ್ತು ಜಗತ್ತು ಅನಿತ್ಯವೆಂದು ಪದೇ ಪದೇ ವಿಚಾರಮಾಡುತ್ತಾರೆ.

ಹೇಗೆ, ಕತ್ತಲಲ್ಲಿ ಹಗ್ಗವು ಸರ್ಪದಂತೆ ಭಾಸವಾಗುತ್ತದೆ ಆದರೆ ಪ್ರಕಾಶವಾದ ಕೂಡಲೆ ಸರ್ಪವು ಇಲ್ಲದಂತಾಗುತ್ತದೆ. ಜ್ಞಾನವಾಗುವುದರಿಂದಲೇ ಯಥಾರ್ಥ ಸ್ವರೂಪದ ಜ್ಞಾನ ಉಂಟಾಗುತ್ತದೆ. ಈ ಸರ್ಪ ರಜ್ಜು ನ್ಯಾಯದ ದೃಷ್ಟಿಯಿಂದಲೇ ಈ ಅಸತ್ಯ ಸಂಸಾರವನ್ನು ಅಜ್ಞಾನಿಯು ಸತ್ಯವೆಂದು ತಿಳಿಯುತ್ತಾನೆ. ಜಗತ್ತಿನ ಭಾಸ, ಈಶ್ವರನ ಬಗ್ಗೆ ಇರುವ ಅಜ್ಞಾನದ ಕಾರಣದಿಂದಲೇ ಆಗುತ್ತದೆ. ಈಶ್ವರನ ಜ್ಞಾನವಾಗದೇ ಇರುವುದರಿಂದಲೇ ಈ ಜಗತ್ತು ಸತ್ಯವೆಂದಿನಿಸುತ್ತದೆ. ಈ ದೃಶ್ಯ ಜಗತ್ತು ಭ್ರಾಮಕ ಮತ್ತು ಮಿಥ್ಯೆವೇ ಆಗಿದೆ, ಆದರೆ ಪರಮಾತ್ಮನ ಮೇಲೆ ಆಧಾರಿತವಾಗಿರುವುದರಿಂದ ಸತ್ಯದಂತೆ ಕಾಣುತ್ತದೆ. ಪರಮಾತ್ಮ ಸತ್ಯವಾಗಿದ್ದಾನೆ. ಆದ್ದರಿಂದಲೇ ಜಗತ್ತು ಅಸತ್ಯವಾಗಿದ್ದರೂ ಸಹ ಸತ್ಯದಂತೆ ಅನ್ನಿಸುತ್ತದೆ. ಯಾಕೆಂದರೆ ಜಗತ್ತಿನ ಅಧಿಷ್ಠಾನ, ಆಧಾರ ಪರಮಾತ್ಮನಾಗಿದ್ದಾನೆ ಮತ್ತು ಅವನು ಸತ್ಯವಾಗಿದ್ದಾನೆ ಆದುದರಿಂದ ಜಗತ್ತೂ ಸಹ ಸತ್ಯವೆನಿಸುತ್ತದೆ. ಒಂದು ಪಕ್ಷ ರಾಜನು ಕೃತಕ ಮುತ್ತುಗಳ ಹಾರವನ್ನು ಧರಿಸಿದ್ದರೂ ಸಹ, ಅವನ ಪ್ರತಿಷ್ಠೆಯ ಕಾರಣದಿಂದ ಜನತೆಯು ಆ ಹಾರವನ್ನು ನಿಜವಾದ ಮುತ್ತಿನಹಾರವೆಂದೇ ತಿಳಿಯುತ್ತಾರೆ. ಬಡವನ ನಿಜವಾದ ಮುತ್ತಿನಹಾರವನ್ನು, ಅವನ ಬಡತನದ ಕಾರಣದಿಂದಾಗಿ ಕೃತಕವೆಂದೇ ಭಾವಿಸಲ್ಪಡುವುದು. ಈ ರೀತಿಯಾಗಿ ಈ ಜಗತ್ತು ಕೃತಕ ಮುತ್ತಿನ ಹಾರವಾಗಿದೆ. ಅದನ್ನು ಪರಮಾತ್ಮನು ತನ್ನ ಕೊರಳಲ್ಲಿ ಧರಿಸಿದ್ದಾನೆ.

"ಯದ್ ದೃಷ್ಟಮ್ ತನ್ನ್‌ಷ್ಟಮ್"

ಯಾವುದು ಕಾಣುತ್ತದೋ ಅದು ಒಂದು ದಿವಸ ನಾಶವಾಗುತ್ತದೆ. ಯಾರಿಗೆ "ನಾನು ಸ್ವಯಂ ಬ್ರಹ್ಮನಾಗಿದ್ದೇನೆ" "ಅಹಂ ಬ್ರಹ್ಮಾಸ್ಮಿ" ಎಂಬ ಜ್ಞಾನ ಉಂಟಾಗುತ್ತದೋ, ಅವರಿಗೆ ಬ್ರಹ್ಮಸಾಕ್ಷಾತ್ಕಾರವಾಗಿದೆ ಎಂದು ಹೇಳುತ್ತಾರೆ. ನೋಡುವವನು ಬ್ರಹ್ಮನನ್ನು ನೋಡಿದಾಕ್ಷಣ ಬ್ರಹ್ಮಮಯನಾಗುತ್ತಾನೆ. ಆಗ ಅವನಿಗೆ ಬ್ರಹ್ಮನ ಅಪರೋಕ್ಷ ಸಾಕ್ಷಾತ್ಕಾರವಾಗುತ್ತದೆ. ಎಲ್ಲರಲ್ಲಿಯೂ ಬ್ರಹ್ಮನ ಅನುಭವವನ್ನು ಮಾಡುತ್ತಾ ಮಾಡುತ್ತಾ ಯಾರು ಅವನಲ್ಲಿಯೇ ಏಕರರೂಪನಾಗುತ್ತಾನೋ ಕೇವಲ ಅವನು ಮಾತ್ರ ಬ್ರಹ್ಮನ ಪರಿಪೂರ್ಣ ಸ್ವರೂಪವನ್ನು ತಿಳಿಯಬಲ್ಲನು. ಬ್ರಹ್ಮನು ಜಗತ್ತಿನಲ್ಲಿ ಯಾವುದೋ ಒಂದು ಸ್ಥಾನದಲ್ಲಿದ್ದಾನೆ ಎಂದು ತಿಳಿಯುವ ಯಾವ ಜ್ಞಾನಿವಿದೆಯೋ ಅದನ್ನು ಅಪೂರ್ಣವೆಂದು ಕರೆಯುತ್ತಾರೆ. ಬ್ರಹ್ಮನು ಸರ್ವವ್ಯಾಪಕನಾಗಿದ್ದಾನೆ. ಗೀತೆಯಲ್ಲಿ ಹೇಳಿರುವುದೇನೆಂದರೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಬಹಿರ್ಂತಶ್ಚ ಭೂತಾನಾಮಚರಂ ಚರಮೇವ ಚ।
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್॥"

- ಗೀತಾ ೧೩-೧೫

"ಅವನು ಚರಾಚರ ಎಲ್ಲಾ ಭೂತಗಳ ಹೊರಗೂ-ಒಳಗೂ ಪರಿಪೂರ್ಣನಾಗಿದ್ದಾನೆ ಮತ್ತು ಚರ-ಅಚರವೂ ಅವನೇ ಆಗಿದ್ದಾನೆ ಮತ್ತು ಅವನು ಸೂಕ್ಷ್ಮನಾಗಿರುವುದರಿಂದ ಅವಿಜ್ಞೇಯನಾಗಿದ್ದಾನೆ. ಹೇಗೆ ಸೂರ್ಯನ ಕಿರಣಗಳಲ್ಲಿರುವ ಜಲವು ಸೂಕ್ಷ್ಮವಾಗಿರುವುದರಿಂದ ಸಾಧಾರಣ ಮನುಷ್ಯರಿಗೆ ನೋಡಲು, ತಿಳಿಯಲು ಸಾಧ್ಯವಿಲ್ಲವೋ ಹಾಗೆಯೇ ಸರ್ವವ್ಯಾಪಿ ಪರಮಾತ್ಮನೂ ಸಹ ಸೂಕ್ಷ್ಮವಾಗಿರುವುದರಿಂದ ಸಾಧಾರಣ ಮನುಷ್ಯನ ಅರಿವಿಗೆ ಪ್ರಾಪ್ತನಾಗುವುದಿಲ್ಲ. ಅವನು ಅವಿಜ್ಞೇಯನಾಗಿದ್ದಾನೆ ಹಾಗೂ ಆ ಪರಮಾತ್ಮನು ಸರ್ವತ್ರವೂ ಪರಿಪೂರ್ಣನಾಗಿ ಮತ್ತು ಎಲ್ಲರ ಆತ್ಮನಾಗಿರುವುದರಿಂದ ಅತ್ಯಂತ ಸಮೀಪನಾಗಿದ್ದಾನೆ ಮತ್ತು ಅಜ್ಞಾನಿ ಪುರುಷರಿಗೆ ತಿಳಿಯಲು ಸಾಧ್ಯವಿಲ್ಲವಾದ್ದರಿಂದ ಬಹಳ ದೂರನಾಗಿದ್ದಾನೆ."

ಪರಮಾತ್ಮ ಕೇವಲ ಒಂದು ಮೂರ್ತಿಯಲ್ಲಿಯೋ ಅಥವಾ ಮಂದಿರದಲ್ಲಿಯೋ ಇರಲು ಸಾಧ್ಯವಿಲ್ಲ. ಜ್ಞಾನಿ ಪುರುಷರ ದೃಷ್ಟಿ ಎಲ್ಲಿ ಹರಿಯುತ್ತದೋ ಅಲ್ಲಿಯೇ ಭಗವಂತನ ರೂಪದ ಅನುಭವವನ್ನು ಪಡೆಯುತ್ತಾರೆ. ಯಾವ ಪರಮಾತ್ಮ ನನ್ನಲ್ಲಿದ್ದಾನೆಯೋ ಅವನೇ ಎಲ್ಲರಲ್ಲಿಯೂ ಇದ್ದಾನೆ ಎಂಬ ಭಾವನೆಯಿಂದ ಈ ಸರ್ವ ಜಗತ್ತು ಬ್ರಹ್ಮ ಸ್ವರೂಪವಾಗಿ ಯಾರಿಗೆ ಕಾಣಿಸುತ್ತದೆಯೋ ಅವನೇ ಜ್ಞಾನಿ. ಎಲ್ಲರಲ್ಲಿಯೂ ಪರಮಾತ್ಮನ ಅನುಭವವನ್ನು ಪಡೆಯುತ್ತಾ ಪಡೆಯುತ್ತಾ ಅವನಿಗೆ ತನ್ನ ಸ್ವರೂಪದಲ್ಲಿಯೂ ಪರಮಾತ್ಮನ ಅನುಭವವಾಗುತ್ತದೆ. ಪರಮಾತ್ಮನ ಪರೋಕ್ಷ ದರ್ಶನದಿಂದ ಯಾವ ವಿಶೇಷ ಲಾಭವೇನೂ ಆಗುವುದಿಲ್ಲ. ಆದರೆ, ಜೀವನಿಗೆ ಯಾವಾಗ ಪರಮಾತ್ಮನ ಅಪರೋಕ್ಷ ಜ್ಞಾನವಾಗುತ್ತದೋ ಆಗ ಕೃತಾರ್ಥತೆಯ ಭಾವ ಉಂಟಾಗುತ್ತದೆ. ಜ್ಞಾನಿ ಪುರುಷರಿಗಂತೂ ತಮ್ಮ ಸ್ವರೂಪದಲ್ಲಿಯೇ ಭಗವಂತನು ಕಾಣುತ್ತಿರುತ್ತಾನೆ. ಆದುದರಿಂದಲೇ ಎಲ್ಲರಿಗಿಂತಲೂ ಜ್ಞಾನಿಗಳನ್ನು ಶ್ರೇಷ್ಠರೆಂದು ಹೇಳಿದ್ದಾರೆ. ಇದು ಹೇಗೆ ಎಂಬುದಕ್ಕೆ ಜ್ಞಾನಿ ಶುಕದೇವನ ಕಥೆಯು ಪ್ರಸಿದ್ಧವಾಗಿದೆ.

ಒಂದು ಸಾರಿ ಜನಕ ಮಹಾರಾಜನ ಆಸ್ಥಾನದಲ್ಲಿ ಶುಕದೇವ ಮತ್ತು ನಾರದರು ಹೋಗಿದ್ದರು. ಶುಕದೇವರು ಬ್ರಹ್ಮಚಾರಿ ಮತ್ತು ಜ್ಞಾನಿಗಳು, ನಾರದರು ಸಹ ಬ್ರಹ್ಮಚಾರಿ ಮತ್ತು ಭಕ್ತಮಾರ್ಗದ ಆಚಾರ್ಯರು. ಇಬ್ಬರೂ ಸಹ ಮಹಾಪುರುಷರು. ಆದರೆ ಈ ಇಬ್ಬರಲ್ಲಿಯೂ ಯಾರು ಶ್ರೇಷ್ಠರು? ಎಂಬುದನ್ನು ಜನಕ ಮಹಾರಾಜರಿಗೆ ನಿರ್ಧರಿಸಲಾಗಲಿಲ್ಲ. ಪರೀಕ್ಷೆಯನ್ನು ಮಾಡದೆ ಹೇಗೆ ನಿರ್ಣಯಿಸಲು ಸಾಧ್ಯ? ಜನಕರಾಜನ ರಾಣಿಯಾದ 'ಸುನಯನಾ' ನಾನು ಈ ಇಬ್ಬರ ಪರೀಕ್ಷೆಯನ್ನು ಮಾಡುತ್ತೇನೆಂದು ನಿಶ್ಚಯಿಸಿದಳು. ರಾಣಿ ಸುನಯನಳು ಆ ಇಬ್ಬರನ್ನು ಮನೆಗೆ ಬರಮಾಡಿಕೊಂಡು ತೂಗುಯ್ಯಾಲೆಯಲ್ಲಿ ಕುಳ್ಳಿರಿಸಿದಳು. ಆ ನಂತರ ಸುನಯನಾ ರಾಣಿಯು ಶೃಂಗಾರವನ್ನು ಮಾಡಿಕೊಂಡು ಬಂದು ತೂಗುಯ್ಯಾಲೆಯಲ್ಲಿ ಆ ಇಬ್ಬರ ಮಧ್ಯದಲ್ಲಿ ಕುಳಿತುಕೊಂಡಳು. ಇದರಿಂದ ನಾರದರಿಗೆ ಸ್ವಲ್ಪ ಸಂಕೋಚ ಉಂಟಾಯಿತು. 'ನಾನಂತೂ ಬಾಲಬ್ರಹ್ಮಚಾರಿ, ನನ್ನಂತಹ ತಪಸ್ವಿಗೆ ಈ ಸ್ತ್ರೀಯಳ ಸ್ಪರ್ಶವಾಗಿ ನನ್ನ ಮನಸ್ಸಿನಲ್ಲಿ ಏನಾದರೂ ವಿಕಾರ ಉಂಟಾದರೆ?' ಎಂಬುವ ವಿಚಾರದಿಂದ ಅವರು ಪಕ್ಕಕ್ಕೆ ಸ್ವಲ್ಪ ದೂರ ಸರಿದರು. ಆದರೆ ಶುಕದೇವರಿಗೆ ಅಲ್ಲಿ ಯಾರಾದರೂ ಬಂದು ಕುಳಿತುಕೊಂಡರು ಎಂಬ ಭಾನವೇ ಇರಲಿಲ್ಲ. ಅವರಿಗಂತೂ ಸ್ತ್ರೀ-ಪುರುಷರ ಭಾನವೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇರುತ್ತಿರಲಿಲ್ಲ. ಅವರು ದೂರ ಸರಿಯಲಿಲ್ಲ. ರಾಣಿ ಸುನಯನಾಳು ನಿರ್ಣಯವನ್ನು ಕೊಟ್ಟಳು. ಇವರಿಬ್ಬರಲ್ಲಿ ಶುಕದೇವರೇ ಶ್ರೇಷ್ಠರು ಎಂದಳು. ಇವರಿಗಂತೂ ಸ್ತ್ರೀತ್ವ ಅಥವಾ ಪುರುಷತ್ವದ ಭಾವವೂ ಸಹ ಇಲ್ಲ ಎಂದಳು. ಸ್ತ್ರೀತ್ವ ಮತ್ತು ಪುರುಷತ್ವದ ಭಾವವು ಹೋಗದೇ ಇದ್ದರೆ ಪರಮಾತ್ಮನ ಪ್ರಾಪ್ತಿ ಉಂಟಾಗುವುದಿಲ್ಲ. ಶುಕದೇವರಿಗೆ ಸ್ತ್ರೀಯಲ್ಲಿ ಸ್ತ್ರೀತ್ವ ಕಾಣುವುದಿಲ್ಲ. ಅವರಿಗೆ ಎಲ್ಲರಲ್ಲಿಯೂ ಪರಮಾತ್ಮ ತತ್ವವೇ ಕಾಣುತ್ತಿದೆ. ಎಲ್ಲರಲ್ಲಿಯೂ ಬ್ರಹ್ಮನೇ ಕಾಣುತ್ತಾನೆ. ಎಲ್ಲಿಯವರೆಗೆ ಪುರುಷತ್ವ ಮತ್ತು ಸ್ತ್ರಿತ್ವದ ಸ್ಮರಣೆಯಿದೆಯೋ ಅಲ್ಲಿಯವರೆಗೆ 'ಕಾಮ'ವಿದೆ. ಯಾವಾಗ ಸ್ಮರಣೆ ಹೋಗುತ್ತದೋ ಆಗ 'ಕಾಮ' ಹೋಗುತ್ತದೆ. ಬ್ರಹ್ಮದೃಷ್ಟಿಯನ್ನಿಡುವುದು ಬಹಳ ಕಠಿಣವಾಗಿದೆ. ಶುಕದೇವರು ಕೇವಲ ಬ್ರಹ್ಮಜ್ಞಾನಿ ಮಾತ್ರವೇ ಆಗಿರಲಿಲ್ಲ ಅವರ ದೃಷ್ಟಿಯು ಬ್ರಹ್ಮ ದೃಷ್ಟಿಯಾಗಿತ್ತು.

ಅವರು ಪ್ರತಿಯೊಬ್ಬರಿಗೂ ಸಮಭಾವದಿಂದ (ಬ್ರಹ್ಮಭಾವ) ನೋಡುತ್ತಿದ್ದರು. ಹೇಗೆ ದೃಷ್ಟಿಯೋ ಹಾಗೆ ಸೃಷ್ಟಿಯು. ಯಾರ ದೃಷ್ಟಿಯು ಬ್ರಹ್ಮಮಯವಾಗಿದೆಯೋ ಅವರಿಗೆ ಜಗತ್ತಿನ ಭಾಸ ಉಂಟಾಗುವುದಿಲ್ಲ. ಶುಕದೇವರು ಕೇವಲ ಗುರುಗಳಾಗಿರಲಿಲ್ಲ, ಅವರು ಸದ್ಗುರುಗಳೂ ಸಹ ಆಗಿದ್ದರು. ಶುಕ ದೇವರಂತಹ ಗುರುಗಳು ಪ್ರಾಪ್ತರಾದರೆಂದರೆ, ಏಳು ದಿವಸಗಳೇಕೆ ಕೇವಲ ಏಳು ನಿಮಿಷದಲ್ಲಿ ಮುಕ್ತಿಯನ್ನು ದೊರಕಿಸಕೊಡಬಲ್ಲರು, ಆದರೆ ಶಿಷ್ಯನು ಮಾತ್ರ ಪರೀಕ್ಷಿತನಂತೆ ಅಧಿಕಾರಿಯಾಗಿರಬೇಕು. ಗುರು ಮತ್ತು ಶಿಷ್ಯ ಇಬ್ಬರೂ ಸಹ ಅಧಿಕಾರಿಗಳಾಗಿರಬೇಕು. ಬ್ರಹ್ಮಭಾವದಲ್ಲಿ ತಲ್ಲೀನರಾಗಿ ಶುಕದೇವರು ಪರೀಕ್ಷಿತನ ತಲೆ ಮೇಲೆ ವರದ ಹಸ್ತವನ್ನಿಟ್ಟ ತಕ್ಷಣವೇ ಅವರಿಗೆ ಬ್ರಹ್ಮನ ದರ್ಶನವಾಯಿತು. ಜ್ಞಾನಿ ಪುರುಷರು ಅನೇಕದಲ್ಲಿ ಏಕತ್ವವನ್ನು ಕಾಣುತ್ತಾರೆ. ಅನೇಕದಲ್ಲಿ ಏಕತ್ವವನ್ನು ಅನುಭವಿಸುವುದೇ ಜ್ಞಾನವಾಗಿದೆ. ಜಗತ್ತನ್ನು ಭೇದಭಾವದಿಂದಲ್ಲ ಅಭೇದ ಭಾವದಿಂದ ನೋಡಬೇಕು.

ಶಂಕರಾಚಾರ್ಯರು ಶತಶ್ಲೋಕಿಯಲ್ಲಿ ಹೇಳಿರುವುದೇನೆಂದರೆ, ಜನರು ಚರ್ಮದ ಮೀಮಾಂಸೆಯನ್ನೇ ಮಾಡುತ್ತಾರೆ. ಆದರೆ ಈ ದೇಹದ ಸೌಂದರ್ಯಕ್ಕೆ ಕಾರಣೀಭೂತನಾದ ಆ ಆತ್ಮನ ಮೀಮಾಂಸೆಯನ್ನು ಯಾರೂ ಮಾಡುವುದಿಲ್ಲ. ಜಗತ್ತು ಕೆಟ್ಟಿಲ್ಲ, ಮನುಷ್ಯನ ದೃಷ್ಟಿ, ಬುದ್ಧಿ ಮನಸ್ಸು ಕೆಟ್ಟು ಹೋಗಿದೆ. ದೃಷ್ಟಿ ಸುಧಾರಣೆಗೊಂಡರೆ ಸೃಷ್ಟಿಯೂ ಸಹ ಸುಧಾರಿಸುತ್ತದೆ.

ಒಂದು ಸಾರಿ ರಾಜಾ ಜನಕನ ರಾಜಸಭೆಯಲ್ಲಿ ಮುನಿ ಅಷ್ಟಾವಕ್ರರು ಬಂದರು. ಅವರ ದೇಹದ ಎಂಟು ಕಡೆಯ ಅಂಕುಡೊಂಕುಗಳನ್ನು ಕಂಡು ಜನರು ನಗತೊಡಗಿದರು. ಅಷ್ಟಾವಕ್ರರು ಜನಗಳ ನಗುವನ್ನು ಕಂಡು ಅವರು ನಗತೊಡಗಿದರು. ಅಷ್ಟಾವಕ್ರ ಮುನಿಯು ರಾಜಾ ಜನಕನಿಗೆ ಕೇಳಿದರು, "ಮಹರಾಜರೇ, ನೀವು ಯಾವ ವಿಷಯದ ಬಗ್ಗೆ ನಗುತ್ತಿರುವಿರಿ", ಆದಕ್ಕೆ ಜನಕರಾಜನು "ನಾವು ನಿಮ್ಮ ವಿಚಿತ್ರ ಅಂಗಗಳನ್ನು ನೋಡಿ ನಗುತ್ತಿದ್ದೇವೆ" ಎಂದರು. ಅದಕ್ಕೆ ಅಷ್ಟಾವಕ್ರರು ಉತ್ತರಿಸಿದರು "ನಿಮ್ಮ ಸಭೆಯಲ್ಲಿ ಎಲ್ಲರೂ ಜ್ಞಾನಿಗಳು ವಿರಾಜಿಸುತ್ತಿದ್ದಾರೆ ಎಂದು ತಿಳಿದಿದ್ದೆ, ಆದರೆ ಇಂದು ತಿಳಿಯಿತು, ಇವರೆಲ್ಲರೂ ಮೂರ್ಖ ಚಾಂಬಾರರು ಎಂದು. ನೀವೆಲ್ಲರೂ ನನ್ನ ದೇಹವನ್ನು ನೋಡುತ್ತಿದ್ದೀರಾ, ಇದಂತೂ ಮಣ್ಣಿನದು. ನನ್ನ ಆತ್ಮನನ್ನು ನೋಡಿ. ನೀವೆಲ್ಲರೂ ನನ್ನ ಆಕೃತಿಯನ್ನು ನೋಡಿ ನಗುತ್ತಿದ್ದೀರಿ. ಆದರೆ ಮನುಷ್ಯನ ಕೃತಿಯನ್ನು ನೋಡಬೇಕು ಆಕೃತಿಯನ್ನಲ್ಲ; ಆಕೃತಿಯಂತೂ ಪೂರ್ವಜನ್ಮದ ಪ್ರಾರಬ್ಧದಿಂದ ಪ್ರಾಪ್ತವಾಗುತ್ತದೆ. ನನ್ನ ಕೃತಿಯನ್ನು ನೋಡಿ" ಎಂದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮಾತ್ಮನು ಕೃತಿಯನ್ನು ನೋಡುತ್ತಾನೆ ಮತ್ತು ಮನುಷ್ಯನು ಆಕೃತಿಯನ್ನು, ಯಾರ ಬುದ್ಧಿಯಲ್ಲಿ ಭೇದವಿದೆಯೋ ಅವರ ಮನಸ್ಸಿನಲ್ಲಿ ಭೇದವಿರುತ್ತದೆ. ಭೇದವು ವಿಕಾರ ವಾಸನೆಗಳಿಗೆ ಜನ್ಮವನ್ನು ಕೊಡುತ್ತದೆ. ವಾಸನೆಯೇ ಯಾವಾಗಲೂ ಪುನರ್ಜನ್ಮಕ್ಕೆ ಕಾರಣವಾಗುತ್ತದೆ. ಯಾವಾಗ ಪುನರ್ಜನ್ಮವಿದೆಯೋ ಆಗ ಪುನಃ ಸುಖ-ದುಃಖಗಳನ್ನು ಭೋಗಿಸಬೇಕಾಗುತ್ತದೆ. ಆದರೆ ಮನುಷ್ಯ ಶರೀರವು ಕೇವಲ ಸುಖ-ದುಃಖಗಳನ್ನು ಭೋಗಿಸಲು ಮಾತ್ರವೇ ಇಲ್ಲ. ಸುಖವನ್ನು ಭೋಗಿಸಲು ಸ್ವರ್ಗಾದಿ ಸ್ಥಾನಗಳಿವೆ ಮತ್ತು ದುಃಖವನ್ನು ಭೋಗಿಸಲು ನರಕ ಮತ್ತು ಎಂಬತ್ನಾಲ್ಕು ಲಕ್ಷ ಯೋನಿಗಳ ಸ್ಥಾನಗಳಿವೆ. ಇದಕ್ಕೋಸ್ಕರವೇ ಈ ಭೋಗಯೋನಿಗಳಿವೆ. ಯಾರು ಮನುಷ್ಯನ ಜನ್ಮದಲ್ಲಿ ಸಾವಧಾನದಿಂದ ಇರುವುದಿಲ್ಲವೋ ಅವರು ಕೇವಲ ಜನ್ಮ-ಮರಣದ ಚಕ್ರದಲ್ಲಿಯೇ ಸಿಲುಕಿಕೊಳ್ಳಬೇಕಾಗುತ್ತದೆ. ವಾಸ್ತವಿಕವಾಗಿ ಮನುಷ್ಯ ಶರೀರವು ಸುಖ-ದುಃಖದಿಂದ ಮೇಲೇಳುವುದಕ್ಕೆ ಅರ್ಥಾತ್ ಮುಕ್ತಿಯ ಪ್ರಾಪ್ತಿಕ್ಕೋಸ್ಕರವಾಗಿದೆ. ಅಂದರೆ ಸರ್ವ ದುಃಖದ ನಿವೃತ್ತಿ ; ಪರಮಾನಂದ ಪ್ರಾಪ್ತಿ ಲಕ್ಷಣಾತ್ಮಕ ಮೋಕ್ಷ ಎಂಬ ಅರ್ಥ. ಧರ್ಮ, ಅರ್ಥ, ಕಾಮ, ಮೋಕ್ಷ ಇವು ನಾಲ್ಕು ಪುರುಷಾರ್ಥಗಳು. ಮನುಷ್ಯನು ಈ ನಾಲ್ಕೂ ಪುರುಷಾರ್ಥಗಳನ್ನು ಬಯಸುತ್ತಾನೆ. ಎಲ್ಲಾ ಪ್ರಾಣಿಗಳೂ ಸಹ ದುಃಖದಿಂದ ಬಿಡುಗಡೆ ಹೊಂದಿ ಮತ್ತು ಪರಮಸುಖವನ್ನು ಹೊಂದುವ ಬಯಕೆಯನ್ನು ಹೊಂದಿರುತ್ತವೆ. ಆದ ಕಾರಣದಿಂದಲೇ ಮೋಕ್ಷವೇ ವಸ್ತುತಃ ಪುರುಷಾರ್ಥವಾಗಿದೆ. ಧರ್ಮ, ಅರ್ಥ ಮತ್ತು ಕಾಮಗಳನ್ನೂ ಸಹ ಪುರುಷಾರ್ಥವೆಂದು ಹೇಳಿದ್ದಾರೆ. ಯಾಕೆಂದರೆ ಅರ್ಥ ಮತ್ತು ಕಾಮದಿಂದಲೂ ಸಹ ಕ್ಷಣಿಕವಾದ ವಿಷಯ ಸುಖವು ದೊರೆಯುತ್ತದೆ ಮತ್ತು ಧರ್ಮದಿಂದ ಕಾಮ, ಅರ್ಥಗಳು ದೊರೆಯುತ್ತವೆ. ಆದುದರಿಂದ ಅವುಗಳನ್ನೂ ಸಹ ಪುರುಷಾರ್ಥಗಳೆಂದು ಕರೆದಿದ್ದಾರೆ. ಧರ್ಮ, ಅರ್ಥ, ಕಾಮಗಳನ್ನು ಪುರುಷಾರ್ಥಗಳೆಂದು ಒಪ್ಪಿಕೊಂಡರೂ ಸಹ ಅವುಗಳಲ್ಲಿ ನಿತ್ಯತ್ವವಂತೂ ಇಲ್ಲ. ಯಾಕೆಂದರೆ ಲೌಕಿಕವಾದ ಅರ್ಥ (ಹಣ) ಮತ್ತು ಕಾಮಗಳ ನಷ್ಟವಾಗುತ್ತಿರುವುದನ್ನು ನಾವು ಕಣ್ಣಿಂದ ನೋಡುತ್ತಲೇ ಇರುತ್ತೇವೆ. ಇವತ್ತಿನ ಧನಾಢ್ಯ ನಾಳೆ ದರಿದ್ರನಾಗಿ ಮನೆಮನೆಯನ್ನು ತಿರುಗುತ್ತಿರುತ್ತಾನೆ ಹಾಗೂ ಇವತ್ತಿನ ಶೂರ-ವೀರ ನಾಳೆ ಹಾಸಿಗೆಯಿಂದೇಳಲೂ ಸಹ ಅಶಕ್ತನಾಗಬಲ್ಲನು. ಆದುದರಿಂದ ಇವುಗಳ ಅನಿತ್ಯತ್ವವಂತೂ ಪ್ರತ್ಯಕ್ಷ ಸಿದ್ಧವಾಗಿವೆ. ಪಾರಲೌಕಿಕ ಸ್ವರ್ಗಾದಿ ಭೋಗಗಳ ಅನಿತ್ಯತ್ವದ ಬಗ್ಗೆ ಅಂದಾಜು ಮಾಡಬಹುದು. ಯಾವುದು ಕ್ರಿಯಾ ಜನ್ಯವಾಗಿದೆಯೋ ಅದು ಎಂದೆಂದಿಗೂ ನಿತ್ಯವಾಗಿರುವುದಕ್ಕೆ ಸಾಧ್ಯವಿಲ್ಲ. ಸ್ವರ್ಗಾದಿಗಳೂ ಸಹ ಧರ್ಮಾಚರಣೆಯಿಂದ ಪ್ರಾಪ್ತವಾಗುತ್ತವೆ. ಅವೂ ಸಹ ಅನಿತ್ಯವಾಗಿವೆ. ಒಂದು ಪಕ್ಷ ಯಾಗಾದಿ ಕ್ರಿಯೆಗಳನ್ನು ಧರ್ಮವೆಂದು ತಿಳಿದರೆ ಅವುಗಳ ಅನಿತ್ಯತ್ವವನ್ನು ಕಾರ್ಯತ್ವ ರೂಪದ ಹೇತುವಿನಿಂದ ತಿಳಿಯಬಹುದಾಗಿದೆ. ಏಕೆಂದರೆ ಕೊನೆಯಲ್ಲಿ ಅವುಗಳೂ ಸಹ ಯಾಗಾದಿ ಕ್ರಿಯೆಗಳಿಂದ ಉತ್ಪನ್ನವಾಗಿರುತ್ತವೆ.

"ತದ್ಯಥೇಹ ಕರ್ಮಚಿತೋ ಲೋಕಃ ಕ್ಷೀಯತೆ"

- ಇತ್ಯಾದಿ, ಶ್ರುತಿಯಂತೂ ಕ್ರಿಯಾಜನ್ಯ ಅದೃಷ್ಟ ವಸ್ತುಗಳನ್ನೂ ಸಹ ಅನಿತ್ಯವೆಂದು ಹೇಳುತ್ತದೆ. ಧರ್ಮ, ಅರ್ಥ, ಕಾಮಗಳನ್ನು ಪುರುಷಾರ್ಥವೆಂದು ತಿಳಿದರೂ ಸಹ ಅವುಗಳ ಅನಿತ್ಯತ್ವ ಪ್ರತ್ಯಕ್ಷ ಶ್ರುತಿ ಮತ್ತು ಅನುಮಾನದಿಂದ ಸಿದ್ಧವಾಗುತ್ತದೆ. ಆದರೆ ಮೋಕ್ಷದಲ್ಲಿ ಯಾವ ಪುರುಷಾರ್ಥತ್ವವಿದೆಯೋ ಮತ್ತು ಅದೇ ಪುರುಷಾರ್ಥತ್ವ ಧರ್ಮ, ಅರ್ಥ, ಕಾಮಗಳಲ್ಲಿಯೂ ಇದೆ. ಇದನ್ನು ನೋಡಿದರೆ ಮೋಕ್ಷಕ್ಕೆ ಸಮಾನವಾಗಿಯೇ ಧರ್ಮ, ಅರ್ಥ, ಕಾಮಗಳಲ್ಲಿಯೂ ನಿತ್ಯತ್ವದ ಅನುಮಾನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಂಟಾಗುತ್ತದೆ. ಮೋಕ್ಷದ ನಿತ್ಯತ್ವವಂತೂ ಶ್ರುತಿ, ಅನುಭವ ಮತ್ತು ತರ್ಕದಿಂದ ಸಿದ್ಧವಾಗಿದೆ. ಶ್ರುತಿ ಹೇಳುವುದೇನೆಂದರೆ,

"ನ ಸ ಪುನರಾವರ್ತತೆ"

ತತ್ವಜ್ಞಾನಿಯು ಪ್ರಾರಬ್ಧ ಕ್ಷಯದ ನಂತರ ಎಂದು ವಿದೇಹ ಕೈವಲ್ಯಕ್ಕೆ ಪ್ರಾಪ್ತನಾಗುತ್ತಾನೋ, ಆಗ ಮತ್ತೆ ಅವನ ಪುನರ್ಜನ್ಮವಾಗುವುದಿಲ್ಲ.

"ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ"

ಅದೇ ಶ್ರುತಿಯ ಅನುಗಮನ ಗೀತಾ ಸ್ಮೃತಿಯೂ ಸಹ ಹೇಳುತ್ತಿರುವುದೇನೆಂದರೆ, ಯಾವುದು ಪ್ರಾಪ್ತಿಯಾದ ಮೇಲೆ ಮತ್ತೆ ಸಂಸಾರಕ್ಕೆ, ಮರುಳುವುದಕ್ಕಾಗುವುದಿಲ್ಲವೊ ಅದೇ ನನ್ನ ಪರಮಧಾಮವಾಗಿದೆ. ವಿದ್ವಾನರ ಅನುಭವಗಳೂ ಸಹ ಹೇಳುವುದೇನೆಂದರೆ, ತತ್ವಜ್ಞಾನಿಗಳಿಗೆ ಅಕ್ಷಯ ಶಾಂತಿ ಲಭಿಸುತ್ತದೆ. ಎಂಬುದಾಗಿದೆ, ಮೋಕ್ಷವು ಕ್ರಿಯಾಜನ್ಯವಾಗಿಲ್ಲದೆ ಇರುವುದರಿಂದ ಅದರ ಅನಿತ್ಯತೆಯ ಬಗ್ಗೆ ಶಂಕೆಯು ಯಾವುದೇ ಪ್ರಕಾರದಲ್ಲಿಯೂ ಉದ್ಭವಿಸುವುದಿಲ್ಲ.

ವೇದಾಂತ ಶಾಸ್ತ್ರದಲ್ಲಿ ಮೋಕ್ಷಕ್ಕೆ ಪ್ರಯೋಜನ ಸಾಂಕೇತದಿಂದ ಹೇಳಿದ್ದಾರೆ.

"ಆ ವಸ್ತುವನ್ನು ತಿಳಿದು ನನ್ನವನಾಗು", ಈ ರೀತಿಯಾಗಿ ಸ್ವಸಂಬಂಧಿ ರೂಪದಿಂದ ಇಷ್ಟವಾದುದಕ್ಕೆ ಪ್ರಯೋಜನವೆನ್ನುತ್ತಾರೆ. ಪ್ರತಿಯೊಂದು ವಸ್ತುವಿನ ಜ್ಞಾನವುಂಟಾಗುವುದು ಒಂದು ಮಾತು ಮತ್ತು ಅದರ ಸಂಬಂಧ ನಮ್ಮ ಜೊತೆಯಲ್ಲಿ ಏರ್ಪಡುವುದು ಇನ್ನೊಂದು ಮಾತು. ಶತ್ರುವಿನ ಸುಖ ನಮಗೆ ತಿಳಿದಿದೆ. ಆದರೆ ಸ್ವಸಂಬಂಧಿಯಾಗಿಲ್ಲದೇ ಇರುವುದರಿಂದ ಪ್ರಯೋಜನವಿಲ್ಲವೆಂದಾಯಿತು. ನಮ್ಮ ಸುಖ ತಿಳಿದಿದೆ ಮತ್ತು ಸ್ವಸಂಬಂಧಿ ರೂಪದಿಂದ ಇಷ್ಟವಾಗಿರುವುದರಿಂದ ಅದನ್ನು ಪ್ರಯೋಜನವೆಂದು ಹೇಳುತ್ತಾರೆ. ನಮ್ಮ ದುಃಖ ತಿಳಿದಿದೆ ಮತ್ತು ಸ್ವಸಂಬಂಧಿಯೂ ಆಗಿದೆ. ಆದರೆ ಅದನ್ನು ಪ್ರಯೋಜನವೆಂದು ಹೇಳಲಾಗುವುದಿಲ್ಲ. ಏಕೆಂದರೆ ಅದು ನಮಗೆ ಇಷ್ಟವಿಲ್ಲ. ಶತ್ರುವಿನ ಸುಖ ನಮಗೆ ತಿಳಿದಿದೆ ಮತ್ತು ಶತ್ರುವಿಗೆ ಅದು ಬಹಳ ಇಷ್ಟವೂ ಆಗಿದೆ. ಆದರೆ ಆತ್ಮಸಂಬಂಧಿ ರೂಪದಿಂದ ಅದು ಇಷ್ಟವಿಲ್ಲದೆ ಇರುವುದರಿಂದ ಅದು ನಮ್ಮ ಪ್ರಯೋಜನವಲ್ಲೆಂದು ಹೇಳಲಾಗುವುದು. ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕು ಪುರುಷಾರ್ಥಗಳು ಸ್ವಸಂಬಂಧಿಯಾಗಿ ಮತ್ತು ಸುಖತರುವಂತೆ ತೋರುವುದರಿಂದ ಹಾಗೂ ನಮಗೆ ಇಷ್ಟವಾಗುವುದರಿಂದ ಇವುಗಳನ್ನು ಪ್ರಯೋಜನವೆನ್ನುತ್ತಾರೆ.

ಪ್ರಾಣಿಗಳ ಎಲ್ಲಾ ಪ್ರಯತ್ನಗಳ ಹಿಂದೆ ಸುಖದ ಪ್ರಾಪ್ತಿ ಮತ್ತು ದುಃಖದ ನಿವೃತ್ತಿಯ ಆಕಾಂಕ್ಷೆ ಇದ್ದೇ ಇರುತ್ತದೆ. ಸಾಧನವು ಸುಖಕ್ಕೋಸ್ಕರವಾಗಿದೆ. ಆದರೆ ಸುಖ ಸಾಧನಕ್ಕೋಸ್ಕರವಲ್ಲ. ಹಾಗೆಯೇ ದುಃಖದ ನಿವೃತ್ತಿಗೋಸ್ಕರ ಸಾಧನವಿದೆ. ಸಾಧನಕ್ಕೋಸ್ಕರ ದುಃಖವಲ್ಲ.

ಅತ್ಯಂತ ದೊಡ್ಡ ಸುಖಕ್ಕೆ ನಿರತಿಶಯ ಸುಖವೆನ್ನುತ್ತಾರೆ ಮತ್ತು ಸಂಪೂರ್ಣ ದುಃಖಗಳ ಆತ್ಯಂತಿಕ ನಿವೃತ್ತಿಗೆ ನಿರತಿಶಯ ದುಃಖಾಭಾವವೆನ್ನುತ್ತಾರೆ. ಸ್ವಲ್ಪವೇ ಸುಖವಿದ್ದು ಮತ್ತು ಸೀಮಿತ ಕಾಲದವರೆಗೆ ಇದ್ದರೆ ಅದನ್ನು ಸಾತಿಶಯ ಸುಖವೆನ್ನುತ್ತಾರೆ. ವಿಷಯ ಸುಖವೂ ಸಹ ಸುಖರೂಪ ಆತ್ಮದ ಪ್ರತಿಬಿಂಬವಾಗಿದೆ. ಆದರೆ ವಿಷಯ ಸಂಗದಿಂದ ಉತ್ಪನ್ನವಾಗುವ ಅಂತಃಕರಣದ ವೃತ್ತಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂಲಕ ಆನಂದಲೇಶದ ಆರ್ವಿಭಾವವಾಗುವುದರಿಂದ ಅದು ಸ್ಥಿರವಾಗಿರುವುದಿಲ್ಲ. ಅನ್ಯ ವಸ್ತುಗಳ ಅಭಿಲಾಷೆ ಉಂಟಾಗುತ್ತಿದ್ದಂತಲೇ ಆ ಆನಂದ ಅಂಶದ ತಿರೋಧಾನವಾಗುತ್ತದೆ. ಜೊತೆಗೆ ಅದರಲ್ಲಿ ನ್ಯೂನಾಧಿಕ್ಯವು ಉಂಟಾಗುತ್ತದೆ. ವಿಷಯದ ತಾರತಮ್ಯ ಉಂಟಾಗುತ್ತದೆ. ಇಂತಹ ವ್ಯತ್ತಿಯಿಂದ ಆನಂದಲೇಶದ ಅವಿರ್ಭಾವದಲ್ಲೂ ಸಹ ತಾರತಮ್ಯ ಉಂಟಾಗಿರುತ್ತದೆ. ಇಂತಹ ಸಾತಿಶಯ ಸುಖವು ಪಶುಗಳಿಂದ ಹಿಡಿದು ಹಿರಣ್ಯಗರ್ಭ (ಕಾರ್ಯ-ಬ್ರಹ್ಮ) ದವರೆಗೂ ಆಗುತ್ತಿರುತ್ತದೆ. ಪಶುಗಳಿಗೂ ಸಹ ಅಭೀಷ್ಟ ವಸ್ತುಗಳ ಪ್ರಾಪ್ತಿಯ ದಶೆಯಲ್ಲಿ ಆನಂದಲೇಶದ ಅವಿರ್ಭಾವ ಉಂಟಾಗುತ್ತದೆ. ಈ ಸಾತಿಶಯ ಸುಖದ ಬಗ್ಗೆ ಬೃಹದಾರಣ್ಯಕ ಮತ್ತು ತೈತ್ತರೀಯ ಶ್ರುತಿಯಲ್ಲಿ ಹೇಳಲ್ಪಟ್ಟಿದೆ ಮತ್ತು ಈ ಆನಂದಸಮುದ್ರಬ್ರಹ್ಮದ ಆನಂದಲೇಶವೇ ವಿಷಯ ಸಂಸರ್ಗದಿಂದ ಹುಟ್ಟಿದ ಅಂತಃಕರಣದ ವೃತ್ತಿಯ ಮೂಲಕ ಅವೀರ್ಭೂತವಾಗುತ್ತದೆ. ಇದೆ ತೆರನಾಗಿ ಆದಿಭೌತಿಕ, ಆದಿದೈವಿಕ ಹಾಗೂ ಅಧ್ಯಾತ್ಮಿಕ ದುಃಖಗಳ ಆತ್ಯಂತಿಕವಾದ ನಿವೃತ್ತಿ ಪ್ರಾಣಿಮಾತ್ರಗಳಿಗೆ ಇಷ್ಟಪ್ರದವಾಗಿರುತ್ತದೆ. ಆದರೆ ಇಂತಹ ತ್ರಿವಿಧ ದುಃಖಗಳ ಆತ್ಯಂತಿಕ ನಿವೃತ್ತಿಯು ಮೋಕ್ಷದಲ್ಲಿ ಮಾತ್ರವೇ ಸಾಧ್ಯವಿದೆ. ಇಂತಹ ಮೋಕ್ಷ ವಿದ್ವದ್ನುಭವ ಸಿದ್ಧವಾಗಿದೆ. ಏಕೆಂದರೆ ಅವರುಗಳು ಬ್ರಹ್ಮಾತ್ಮೈಕ್ಯ ಭೋದೆಯ ನಂತರ ತಮ್ಮ ಸ್ವರೂಪದಲ್ಲಿ ದುಃಖದ ಅತ್ಯಂತಾಭಾವ ಹಾಗೂ ನಿರತಿಶಯ ಸುಖರೂಪತೆಯ ಸ್ಪಷ್ಟ ದರ್ಶನವನ್ನು ಮಾಡಿದ್ದಾರೆ. ಸಾತಿಶಯ ದುಃಖಾಭಾವ ಸಂಸಾರ ದಶೆಯಲ್ಲಿಯೂ ಉಂಟಾಗುತ್ತವೆ. ಆದುದರಿಂದಲೇ ಲೌಕಿಕ ದುಃಖಾಭಾವದ ಸಾಧನೆಯಲ್ಲಿ ಪ್ರಾಣಿಗಳ ಪ್ರವೃತ್ತಿಯು ಕಂಡುಬರುತ್ತದೆ. ಆದರೆ ಕಾರಣಸಹಿತ ದುಃಖದ ಆತ್ಯಂತಿಕ ನಿವೃತ್ತಿ ಮೋಕ್ಷ ದಶೆಯಲ್ಲಿಯೇ ಆಗುತ್ತದೆ. ಸಂಸಾರ ದಶೆಯಲ್ಲಿ ಆಗುವುದಿಲ್ಲ. ಅದು ಮೋಕ್ಷ ಜ್ಞಾನದಿಂದ ಸಾಧ್ಯವಾಗಿದೆ. ಕ್ರಿಯೆ ಮತ್ತು ಉಪಾಸನೆಗಳಿಂದ ಸಾಧ್ಯವಾಗುವುದಿಲ್ಲ, ಅನ್ಯಥಾ ಅದರಲ್ಲಿ ಅನಿತ್ಯತ್ವ ಉಂಟಾಗುತ್ತದೆ. ನಿರತಿಶಯ ದುಃಖಾಭಾವದ ಜೊತೆಯಲ್ಲಿ ನಿರತಿಶಯ ಸುಖದ ಪ್ರಾಪ್ತಿಯಾದರೆ, ಅದಕ್ಕೆ ಮೋಕ್ಷ ಎಂಬ ಸಂಜ್ಞೆಯನ್ನು ಶ್ರುತಿಯು ಕೊಟ್ಟಿದೆ.

ಸಂಸಾರದ ವಿದ್ಯೆ ಹೇಗಿದೆಯೆಂದರೆ, ಓದುತ್ತಾ ಹೋದರೆ ಅದು ಮರೆಯುತ್ತಾ ಹೋಗುತ್ತದೆ. ಮೃತ್ಯುವಿನ ನಂತರ ಇದು ಜೊತೆಗೆ ಬರಲಾರದು ಆದರೆ ಜ್ಞಾನ (ಆಧ್ಯಾತ್ಮ ವಿದ್ಯೆ) ವನ್ನು ಒಂದು ಸಾರಿ ಪಡೆದುಕೊಂಡರೆ, ಈ ಶರೀರ ಬಿಟ್ಟು ಹೋದರೂ ಸಹ ಆ ಜ್ಞಾನ ತನ್ನ ಕೆಲಸವನ್ನು ಮಾಡುತ್ತಲೇ ಇರುತ್ತದೆ. ಇಂತಹ ಅಮೂಲ್ಯವಾದ ಜೀವಮಾನವನ್ನು ಅಲ್ಲಿ ಇಲ್ಲಿ ಕೆಲಸಕ್ಕೆ ಬಾರದ ವಿಷಯಗಳಲ್ಲಿ ಕಳೆದುಕೊಂಡರೆ ನಾವು ನಮ್ಮ ಜೊತೆಯಲ್ಲಿ ನಿತಾಂತವಾದ ಶತ್ರುತ್ವ ಮಾಡುತ್ತಿದ್ದೇವೆಯಂತಾಗುತ್ತದೆ. ನಮಗನಿಸಬಹುದು, ನಾವು ನಮ್ಮ ಜೊತೆಯಲ್ಲಿ ಬಹಳ ಮಿತ್ರತ್ವದಿಂದಿದ್ದೇವೆ ಎಂದು. ಆದರೆ, ಎಲ್ಲಿಯವರೆಗೆ ಮೋಕ್ಷ ಮಾರ್ಗದ ವಿದ್ಯೆಯನ್ನು ಕಲಿಯುವುದಿಲ್ಲವೋ ಅಲ್ಲಿಯವರೆಗೆ ನಾವು ನಮ್ಮ ಶತ್ರುಗಳೇ ಆಗಿದ್ದೇವೆ.

ಈ ಮಾನವ ಜನ್ಮ ಎಲ್ಲಾ ಜನ್ಮಗಳ ಅಂತಿಮ ಜನ್ಮವಾಗಿರಲೂಬಹುದು ಅಥವಾ ಇದೇ ಮೊದಲಿನ ಜನ್ಮವಾದರೂ ಆಗಿರಬಹುದು.

ಎಲ್ಲಿಯವರೆಗೆ ಆತ್ಮಸಾಕ್ಷಾತ್ಕಾರವಾಗುವುದಿಲ್ಲವೋ ಅಲ್ಲಿಯವರೆಗೆ ಜನ್ಮಮರಣಗಳಿಂದ ಬಿಡುಗಡೆಯಾಗುವುದಿಲ್ಲ. "ಆತ್ಮಲಾಭಾತ್ ಪರಂ ಲಾಭಂ ನ ವಿದ್ಯತೆ". 'ಆತ್ಮಜ್ಞಾನಕ್ಕಿಂತ ಹೆಚ್ಚಿನದಾದ ಬೇರೆ ಯಾವ ಜ್ಞಾನವೂ ಇಲ್ಲ'. ಉಪನಿಷತ್ತಿನಲ್ಲಿ ಈ ವಿಷಯದ ಬಗ್ಗೆ ಒಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುಂದರವಾದ ಕಥೆಯಿದೆ. ಒಂದು ಸಾರಿ ದೇವರಾಜನಾದ ಇಂದ್ರನು ವಿಚಾರಮಗ್ನನಾದ. "ಜನರು ನಮ್ಮನ್ನು ದೇವತೆಗಳೆಂದು, ಇಂದ್ರದೇವನೆಂದು ಕರೆಯುತ್ತಾರೆ. ನಮ್ಮನ್ನು ಅತಿಶಯ ಶಕ್ತಿಶಾಲಿಗಳೆಂದು ತಿಳಿಯುತ್ತಾರೆ. ಆದರೆ ನಮ್ಮ ಹಿಂದೆ ಬೆನ್ನತ್ತಿರುವ ಅಸುರರು ನಮಗೆ ತೊಂದರೆಯನ್ನುಂಟು ಮಾಡುತ್ತಿರುತ್ತಾರೆ. ನಾವು ಅವರಿಗೆ ಏನನ್ನೂ ಮಾಡಲೂ ಸಾಧ್ಯವಿಲ್ಲ, ಸುಮ್ಮನೆ ಶಾಂತಿಯುತರಾಗಿರುತ್ತೇವೆ. ನಾವು ಆತ್ಮಜ್ಞಾನವನ್ನು ಹೊಂದಿ ಇಂತಹ ಎತ್ತರಕ್ಕೆ ತಲುಪೋಣ, ಅಂದರೆ ಅಲ್ಲಿ ಅಸುರರಿಗೆ ತಲುಪಲು ಸಾಧ್ಯವಾಗದೇ ಹೋಗಬೇಕು, ಎಂಬುದಾಗಿ ವಿಚಾರ ಮಾಡಿದನು. "ನಾವು ತಿಳಿದಿರುವುದಂತೆ, ಯಾರು ಆತ್ಮಜ್ಞಾನವನ್ನು ಹೊಂದಿರುವನೋ, ಅವನು ಒಂದೇ ಸಾರಿಗೆ ಬ್ರಹ್ಮ, ವಿಷ್ಣು, ಮಹೇಶರ ಭೋಗದ ಪದವನ್ನು ಭೋಗಿಸಬಹುದು. ಅವನಿಗೆ ಜನ್ಮ-ಮೃತ್ಯು, ಜರಾ-ವ್ಯಾಧಿಗಳ ಪ್ರಭಾವ ಉಂಟಾಗುವುದಿಲ್ಲ. ಅವನು ಅನಂತ ಬ್ರಹ್ಮಾಂಡದಲ್ಲಿ ವ್ಯಾಪಿಸಿಕೊಳ್ಳುತ್ತಾನೆ. ಆತ್ಮಜ್ಞಾನದ ಮುಂದೆ ಅಸುರರ ಪ್ರಭಾವವೂ ಇಲ್ಲ ಮತ್ತು ಯಾವ ಪದಗಳ ಪ್ರಭಾವವೂ ಇಲ್ಲ. ಇಂತಹ ಪರಮ ಆತ್ಮಧನವನ್ನು ನಾವು ಪಡೆಯೋಣ" ಎಂದು ವಿಚಾರ ಮಾಡಿದ.

ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥

- ಗೀತಾ ೬-೨೨

"ಯಾವ ಲಾಭದ ಪ್ರಾಪ್ತಿಯನ್ನು ಹೊಂದಿದ ಮೇಲೆ ಅದಕ್ಕಿಂತಲೂ ಹೆಚ್ಚಾದ ಬೇರೆ ಯಾವ ಲಾಭವು ಇಲ್ಲವೆಂದು ತಿಳಿಯಲಾಗಿದೆಯೋ ಮತ್ತು ಯಾವ ಅವಸ್ಥೆಯಲ್ಲಿ ಸ್ಥಿತನಾದ ಯೋಗಿಯನ್ನು ಬಹಳ ದೊಡ್ಡ ದುಃಖವೂ ಸಹ ವಿಚಲಿತಗೊಳಿಸುವುದಿಲ್ಲವೋ ಅಂತಹ ಆತ್ಮಲಾಭದಲ್ಲಿ ನಾವು ಸ್ಥಿರವಾಗೋಣ".

ದೇವತೆಗಳಲ್ಲಿ ಇಂತಹ ವಿಮರ್ಶೆ ನಡೆಯಿತು. ಅಸುರರ ಗುಪ್ತಚರರು ದೇವತೆಗಳ ಹಿಂದೆಯೇ ಸುಳಿದಾಡುತ್ತಿದ್ದರು. ಶತ್ರುಗಳು ಯಾವಾಗಲೂ ಎದುರಿನ ಪಕ್ಷದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿಯಲು ಸಕ್ರಿಯವಾಗಿರುತ್ತಾರೆ. ಅಸುರರಿಗೆ, ಎಲ್ಲಕ್ಕಿಂತಲೂ ದೊಡ್ಡದಾದುದು ಆತ್ಮಜ್ಞಾನವೆಂಬುದು ತಿಳಿಯಿತು ಮತ್ತು ಅದನ್ನು ಪಡೆಯಲು ದೇವತೆಗಳು ತಯಾರಿ ನಡೆಸುತ್ತಿದ್ದಾರೆ ಎಂಬುದು ಗೊತ್ತಾಯಿತು. ದೇವತೆಗಳನ್ನು ಪರಾಜಯಗೊಳಿಸಲಿಕ್ಕೆ ನಾವು ಬ್ರಹ್ಮದೇವನ ಹತ್ತಿರ ಹೋಗಿ ಮೊದಲು ಆತ್ಮಜ್ಞಾನವನ್ನು ಪಡೆಯೋಣ ಮತ್ತು ಅದೇ ಆತ್ಮಜ್ಞಾನದ ಬಲದಿಂದ ಅವರೆಲ್ಲರನ್ನೂ ಬಗ್ಗು ಬಡಿಯೋಣ ಎಂದು ಅಸುರರು ನಿರ್ಣಯಿಸಿದರು. ಅಸುರರ ರಾಜ ವಿರೋಚನ ಮತ್ತು ದೇವತೆಗಳ ರಾಜ ಇಂದ್ರ, ಇವರಿಬ್ಬರೂ ಹೋಗುತ್ತಿರುವಾಗ ಯೋಚಿಸುತ್ತಿದುದೇನೆಂದರೆ "ಮೊದಲು ನಾವು ಆತ್ಮಜ್ಞಾನವನ್ನು ಪಡೆಯೋಣ ಆಮೇಲೆ ನಮ್ಮ ಪ್ರಜೆಗಳನ್ನು ಆತ್ಮಜ್ಞಾನಿಗಳನ್ನಾಗಿ ಮಾಡೋಣ." ಅವರಿಬ್ಬರೂ ಬ್ರಹ್ಮದೇವನ ಹತ್ತಿರ ಬಂದರು. ಅಂತರ್ಯಾಮಿ ಬ್ರಹ್ಮದೇವನು ಅವರಿಬ್ಬರ ಆಗಮನದ ಕಾರಣವನ್ನು ತಿಳಿದಿದ್ದನು. ಆದರೂ ಸಹ ಅವರ ಕಡೆಗೆ ಲಕ್ಷವನ್ನು ಕೊಡಲಿಲ್ಲ. ಇಬ್ಬರೂ ಪ್ರಣಾಮವನ್ನು ಮಾಡಿ ಹೀಗೆಂದರು "ಬ್ರಹ್ಮನ್! ನಾವು ನಿಮಗೆ ಶಿಷ್ಯಭಾವದಿಂದ ಪ್ರಣಾಮವನ್ನು ಮಾಡುತ್ತಿದ್ದೇವೆ. ತಮಗೆ ಶರಣು ಬಂದಿದ್ದೇವೆ. ನಮ್ಮನ್ನು ಸ್ವೀಕರಿಸಿ". ಮೂವತ್ತೆರಡು ವರ್ಷಗಳವರೆಗೆ ಅವರು ಬ್ರಹ್ಮಚರ್ಯ ವ್ರತವನ್ನು ಧಾರಣೆ ಮಾಡಿ ಬ್ರಹ್ಮದೇವನ ಚರಣದಲ್ಲಿದ್ದರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಸೇವೆ, ಶುಶ್ರೂಷೆಯನ್ನು ಮಾಡಿದರು. ಬ್ರಹ್ಮದೇವನು ನೋಡಿದ. ಇವರಿಬ್ಬರೂ ಬ್ರಹ್ಮಚರ್ಯ ವ್ರತದ ಪಾಲನೆಯನ್ನು ಮಾಡಿದ್ದಾರೆ. ಇವರ ಬುದ್ಧಿ ಸೂಕ್ಷ್ಮವಾಗಿರಬಹುದು. ತೇಜಸ್ವಿಯಾಗಿರಬಹುದು. ಈಗ ಇವರಿಗೆ ಸ್ವಲ್ಪ ಉಪದೇಶವನ್ನು ಕೊಟ್ಟರೆ, ಇವರು ಜ್ಞಾನದ ಉಪಲಬ್ಧಿಯನ್ನು ಹೊಂದಬಹುದು ಎಂದು ವಿಚಾರ ಮಾಡಹತ್ತಿದ. ಯಾರ ಬುದ್ಧಿಯು ವಿಷಯಗಳಲ್ಲಿ ವಿಹರಿಸುತ್ತದೆಯೋ ಅವರಿಗೆ ಮತ್ತೆ ಮತ್ತೆ ಉಪದೇಶದ ಅವಶ್ಯಕತೆಯಿರುತ್ತದೆ. ಯಾರ ಬುದ್ಧಿಯು ಸೂಕ್ಷ್ಮವಾಗಿದೆಯೋ ಅವರಿಗೆ ಸ್ವಲ್ಪ ಉಪದೇಶವೂ ಪರ್ಯಾಪ್ತವಾಗುತ್ತದೆ. ಜ್ಞಾನವಾದ ಮೇಲೂ ಸಹಜ ಸ್ವಭಾವದಿಂದ ವೇದಾಂತವನ್ನು ಶ್ರವಣ ಮಾಡುತ್ತಿದ್ದರೆ ಏನೂ ತಪ್ಪಿಲ್ಲ. ಬ್ರಹ್ಮದೇವನು ಇಬ್ಬರನ್ನೂ ಕರೆದನು "ನೀವುಗಳು ಏತಕ್ಕೋಸ್ಕರ ಬಂದಿದ್ದೀರಿ" ಎಂದನು. "ಬ್ರಹ್ಮನ್! ನಾವು ಆತ್ಮಜ್ಞಾನವನ್ನು ಪಡೆಯಲಿಕ್ಕೆ ಬಂದಿದ್ದೇವೆ. ಅದಕ್ಕಿಂತಲೂ ದೊಡ್ಡದಾದ ಬೇರೆ ಯಾವ ವಸ್ತುವೂ ಇಲ್ಲ" ಎಂದರು.

ಬ್ರಹ್ಮದೇವನು ಯೋಚಿಸಿದನು, "ಈಗ ಇವರ ದೋಣಿಯು ಸಾಗಿ ದಡವನ್ನು ಸೇರುತ್ತಲಿದೆ". ಇವರು ಬ್ರಹ್ಮನ ಹೆಸರನ್ನೇ ಧಾರಣೆ ಮಾಡದಿದ್ದರೂ ಕೂಡ, ನಾನು "ಬ್ರಹ್ಮ" ನು ಯಾವುದರಿಂದ "ಬ್ರಹ್ಮದೇವ" ನಾಗಿದ್ದೇನೊ, ಆ ರೀತಿ ಇವರೂ ಸಹ ಬ್ರಹ್ಮಮಯವಾಗಲಿ ಎಂದು ವಿಚಾರ ಮಾಡಿದನು.

ಬ್ರಹ್ಮದೇವನು ಕೃಪೆ ಮಾಡಿ ಅವರಿಗೆ ಬ್ರಹ್ಮಜ್ಞಾನದ ಉಪದೇಶವನ್ನು ಕೊಡಲು ಪ್ರಾರಂಭಿಸಿದ.

"ಹೇ ಸುರನಾಯಕ ಮತ್ತು ಅಸುರನಾಯಕರೇ! ಕೇಳಿ! ಇದೇನು ಕಾಣುತ್ತಿದೆಯೋ ಅದೆಲ್ಲವೂ ಬ್ರಹ್ಮವಾಗಿದೆ. ಅದು ಶುದ್ಧವಾಗಿದೆ, ಶಾಂತವಾಗಿದೆ, ಆನಂದ ಘನವಾಗಿದೆ, ಅದೇ ಬ್ರಹ್ಮ, ಪರಮಾತ್ಮ, ಪ್ರಾಣಿ ಮಾತ್ರರ ಆಧಾರವಾಗಿದೆ. ಅದೇ ಬ್ರಹ್ಮ ಪರಮಾತ್ಮ ನನ್ನ, ವಿಷ್ಣುದೇವರ, ಮಹಾದೇವರ, ಕ್ರಿಮಿಕೀಟಗಳ, ಎಲ್ಲರ ಆಧಾರನಾಗಿದ್ದಾನೆ. ಅವನೇ ನಿಮ್ಮ ಕಣ್ಣುಗಳಿಂದ ನೋಡುತ್ತಿದ್ದಾನೆ. ಯಾರನ್ನು ಪಡೆಯದೇ ಜೀವನು ಅಭಾಗಿಯಾಗುತ್ತಾನೋ ಮತ್ತು ಯಾರನ್ನು ಪಡೆದ ಮೇಲೆ ಜೀವನು ಶಿವಸ್ವರೂಪಿಯಾಗುತ್ತಾನೋ ಅದೇ ಬ್ರಹ್ಮವಿದ್ಯೆಯ ಸಾರವಾಗಿದೆ. ಬೇರೆ ಯಾವ ಸಾರವೂ ಇಲ್ಲ. ನೀವು ಭಾಗ್ಯವಂತರಿದ್ದೀರಿ, ಏಕೆಂದರೆ ನೀವು ಬ್ರಹ್ಮವಿದ್ಯೆಗೋಸ್ಕರ ಬಂದಿದ್ದೀರಿ. ಬ್ರಹ್ಮವಿದ್ಯೆಯನ್ನು ಕೇಳಲೂ ಸಹ ಪಾತ್ರತೆ ಬೇಕಾಗುತ್ತದೆ. ಮೂವತ್ತೆರಡು ವರ್ಷ ಬ್ರಹ್ಮಚರ್ಯ ವ್ರತವನ್ನು ಮಾಡಿದ್ದೀರಿ. ನೀವು ಬ್ರಹ್ಮವಿದ್ಯೆಯ ಮೌಲ್ಯವನ್ನು ತಿಳಿದುಕೊಂಡಿದ್ದೀರಾ ಎಂದೆನಿಸುತ್ತದೆ. ಆದರೆ ಬುದ್ಧಿಯಲ್ಲಿ ಸ್ವಲ್ಪವಾದರೂ ಕಲ್ಮಷವಿದ್ದರೆ, ಬುದ್ಧಿಯಲ್ಲಿ ದ್ವೇಷ ಮತ್ತು ಶತ್ರುತ್ವ ಇದ್ದರೆ ಅದು ಬ್ರಹ್ಮವಿದ್ಯೆಯನ್ನು ಪಡೆಯಲಿಕ್ಕೆ ಅಡಚಣೆಯನ್ನುಂಟು ಮಾಡುತ್ತದೆ. ಇಲ್ಲಿಗೆ ಬರಬೇಕಾದರೆ ರಸ್ತೆಯಲ್ಲಿ ಇಬ್ಬರೂ ಪರಸ್ಪರ ಹೊಂದಿಕೊಂಡಿದ್ದೀರಿ. ಆದರೆ, ಒಬ್ಬ ಸುರ ಮತ್ತು ಇನ್ನೊಬ್ಬ ಅಸುರ ಎನ್ನುವ ಶತ್ರುತ್ವದ ಗ್ರಂಥಿ ನಿಮ್ಮ ಬುದ್ಧಿಯಲ್ಲಿದೆ. ಈ ಭೇದವು, ಬುದ್ಧಿಯ ಚಮತ್ಕಾರದಿಂದ ಹೊರಗೆ ಪ್ರಕಟವಾಗಲು ಬಿಡುವುದಿಲ್ಲ, ಆದುದರಿಂದ ಶತ್ರುತ್ವದ ಬೇಧವನ್ನು ವೃದ್ಧಿಯಾಗಲು ಬಿಡಬೇಡಿ. ದ್ವೇಷ ಒಳ್ಳೆಯದಲ್ಲ" ಎಂದನು.

ದ್ವೇಷದ ನಂಜು ನಮ್ಮ ಬುದ್ಧಿಯನ್ನು ಮಲಿನಗೊಳಿಸುತ್ತದೆ. ಯಾವ ಕಲಹಗಳು, ಜಗಳಗಳು, ತೊಂದರೆಗಳು ಉಂಟಾಗುತ್ತವೋ, ಅವು ದ್ವೇಷದ ಬೆಂಕಿಯ ಕಾರಣದಿಂದಲೇ ಉಂಟಾಗುತ್ತವೆ. ತೊಂದರೆ ಕೊಡುವವನು ಇನ್ನೊಬ್ಬನಿಗೆ ತೊಂದರೆಯನ್ನುಂಟು ಮಾಡುತ್ತಾನೆಂದಲ್ಲ, ಅದಕ್ಕಿಂತ ಮುಂಚೆ ತಾನೇ ತೊಂದರೆಗೆ ಈಡಾಗಬೇಕಾಗುತ್ತದೆ. ಅದು ಪತಿ-ಪತ್ನಿಯ ದ್ವೇಷವಿರಬಹುದು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಜ-ರಾಜರುಗಳ ದ್ವೇಷವಿರಬಹುದು, ಸಾಧಕ-ಸಾಧಕರುಗಳ ದ್ವೇಷವಿರಬಹುದು. ಸುರ-ಅಸುರರ ದ್ವೇಷವಿರಬಹುದು. ದ್ವೇಷ ಸಾತ್ವಿಕ ವ್ಯಕ್ತಿಗಳ ಮಧ್ಯೆದಲ್ಲಿಯೂ ಇರಬಹುದು. ರಾಜಸಿಕ-ತಾಮಸಿಕ ಪ್ರಕೃತಿಯ ವ್ಯಕ್ತಿಗಳ ಮಧ್ಯೆಯಲ್ಲಿಯೂ ಇರಬಹುದು. ಆದರಿಂದ ಯಾವ ಲಾಭವೂ ಇಲ್ಲ.

ಬ್ರಹ್ಮದೇವನು ಇಂದ್ರ ಮತ್ತು ವಿರೋಚನರಿಗೆ ಈ ರೀತಿಯಾಗಿ ಹೇಳಿದನು "ಒಂದು ಪಕ್ಷ, ನಿಮ್ಮಲ್ಲಿ ದ್ವೇಷವಿಲ್ಲದಿದ್ದಲ್ಲಿ, ನೀವು ನನ್ನ ಈ ಸ್ವಲ್ಪ ಉಪದೇಶದಿಂದಲೇ ಜ್ಞಾನವನ್ನು ತಿಳಿಯುತ್ತೀರಿ. ಕಣ್ಣಿನಿಂದ ಏನು ಕಾಣುತ್ತದೋ ಅದು ಪರಬ್ರಹ್ಮ".

ಬ್ರಹ್ಮದೇವನು ವಿಚಾರ ಮಾಡಿದ, "ಬ್ರಹ್ಮಭಾವವನ್ನಿಟ್ಟುಕೊಂಡು ನಾನು ಈ ವಚನವನ್ನು ಹೇಳಿದ್ದೇನೆ. ನನ್ನ ವಚನವನ್ನೇ ನೆನಪಿಸಿಕೊಳ್ಳುತ್ತಾರೆ, ಮನನವನ್ನು ಮಾಡುತ್ತಾರೆ. ಆದುದರಿಂದ ಇವರ ಬುದ್ಧಿ ಪ್ರಕಾಶಿತವಾಗುತ್ತದೆ". ಆದರೆ ವಿರೋಚನನು ವಿರೋಚನನೇ ಆಗಿದ್ದ, ಸ್ಥೂಲ ಬುದ್ಧಿಯವನಾಗಿದ್ದ. ಅವನು ಹೋಗಿ ನೀರಿನಲ್ಲಿ ನೋಡಿದ ಅದರಲ್ಲಿ ತನ್ನ ಪ್ರತಿಬಿಂಬವನ್ನು ಕಂಡ. ಬೇರೆಯವರ ಕಣ್ಣಲ್ಲಿ ನೋಡಿದರೂ ತನ್ನ ಪ್ರತಿಬಿಂಬವನ್ನೇ ಕಂಡ. "ಕಣ್ಣಿನಿಂದ ಏನು ಕಾಣುತ್ತದೆಯೋ ಅದೇ ಬ್ರಹ್ಮ" ಎಂಬ ಬ್ರಹ್ಮನ ವಾಕ್ಯ ನೆನಪಿನಲ್ಲಿತ್ತು. ಒಬ್ಬನ್ನೊಬ್ಬರ ಕಣ್ಣಲ್ಲಿ ನಾವೇ ಕಾಣಿಸುತ್ತೇವೆ ಆದ್ದರಿಂದ ನಾವೇ ಬ್ರಹ್ಮ ಎಂದು ನಿರ್ಧರಿಸಿದನು (ದೇಹವೇ ಬ್ರಹ್ಮ). ಅಂತಃಕರಣದಲ್ಲಿ ದ್ವೇಷದ ಬೆಂಕಿಯ ಕಾರಣದಿಂದ ಬುದ್ಧಿಯು ಕಲ್ಮಶಗೊಂಡಿತ್ತು. ಅವನು ದೇಹವನ್ನೇ ಬ್ರಹ್ಮನೆಂದು ತಿಳಿದುಕೊಂಡು ದಿಕ್ಕುತಪ್ಪಿದನು. ತನ್ನ ಪ್ರಜೆಗಳನ್ನೂ ಸಹ ದಿಕ್ಕು ತಪ್ಪಿಸಿದ. ಶರೀರವನ್ನೇ ಬ್ರಹ್ಮನೆಂದು ತಿಳಿದು, ತನ್ನ ರಾಜ್ಯದಲ್ಲಿ ಪ್ರಚಾರ ಮಾಡಿದನು. ಕುಡಿಯಿರಿ, ತಿನ್ನಿರಿ ಮತ್ತು ಮಜದಿಂದಿರಿ ಸತ್ತ ಮೇಲೆ ಯಾರು ಏನನ್ನು ಕಂಡಿದ್ದಾರೆ?

ಯಾವಜ್ಜೀವೇತ್ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್ ।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕೃತಃ ॥

ಅರ್ಥಾತ್ : ಎಲ್ಲಿಯವರೆಗೆ ಜೀವಿಸಿಕೊಂಡಿದ್ದೇವೆಯೋ ಅಲ್ಲಿಯವರೆಗೆ ಸುಖವಾಗಿ ಜೀವನವನ್ನು ಸಾಗಿಸುವುದು ಸಾಲ ಮಾಡಿಯಾದರೂ ತುಪ್ಪವನ್ನು ಉಂಡು ಶರೀರ ಸದೃಢವಾಗಿ ಚೆನ್ನಾಗಿ ಇಟ್ಟುಕೊಳ್ಳುವುದು. ಕಾರಣ, ಈ ಶರೀರ ಹೋದ ಮೇಲೆ ಪುನಃ ಪುನರ್ಜನ್ಮವನ್ನು ಯಾರು ಕಂಡಿದ್ದಾರೆ. ಅರ್ಥಾತ್, ಇರುವವರೆಗೆ ಸುಖವಾಗಿ ಇರುವುದೆಂಬ ಅರ್ಥ (ಚಾರ್ವಾಕ ಸಿದ್ಧಾಂತ). ಅಸುರರ ಈ ಸಿದ್ಧಾಂತವು ಇಂದಿಗೂ ಹಚ್ಚ ಹಸಿರಾಗಿ ಉಳಿದಿದೆ.

ದೇವತೆಗಳ ರಾಜ ಇಂದ್ರನು ಸಾತ್ವಿಕ ವೃತ್ತಿಯವನಾಗಿದ್ದ. ಅವನು ಯೋಚನೆ ಮಾಡಿದ. ಕಾಣುವುದೇನೋ ದೇಹವೆ, ಆದರೆ ದೇಹವೇ ಬ್ರಹ್ಮನಾಗಿರುವುದೆ? ಹೋಗಿ, ಬ್ರಹ್ಮನ ಹತ್ತಿರ ಪುನಃ ಕೇಳಿದ, ಬ್ರಹ್ಮದೇವನು ಸಂತೋಷಿತನಾದನು. ಇವನು ವಿಚಾರದ ಆಶ್ರಯವನ್ನು ಪಡೆದಿದ್ದಾನೆ ಎಂದು ತಿಳಿದು ಬ್ರಹ್ಮನು ಹೇಳಿದ, "ಈಗ ಈ ದೇಹಕ್ಕೆ ಸ್ನಾನವನ್ನು ಮಾಡಿಸಿ, ಸುಂದರವಾದ ವಸ್ತ್ರಾಲಂಕಾರವನ್ನು ಮಾಡಿ ಇಲ್ಲಿಗೆ ಬಾ" ಎಂದನು. ಇಂದ್ರನು ಅದೇ ತರಹ ಮಾಡಿಕೊಂಡು ಬ್ರಹ್ಮನಲ್ಲಿಗೆ ಹೋದನು. ಬ್ರಹ್ಮದೇವನು ಹೇಳಿದ "ಈಗ ತನ್ನ ಪ್ರತಿಬಿಂಬವನ್ನು ನೀರಿನಲ್ಲಿ ನೋಡು, ಏನು ಕಾಣಿಸುತ್ತಿದೆ?". "ಈಗ ನಾನು ಶುಚಿರ್ಭೂತನಾಗಿ, ಅಲಂಕರಿಸಲ್ಪಟ್ಟವನಾಗಿ ಕಾಣುತ್ತಿದ್ದೇನೆ, ಮೊದಲು ಅಲಂಕಾರವಿಲ್ಲದವನಾಗಿ ಕಾಣುತ್ತಿದ್ದೆ" ಎಂದನು. "ಅಲಂಕರಿಸಲ್ಪಟ್ಟವನನ್ನೂ ಮತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲಂಕಾರ ರಹಿತನನನ್ನೂ, ಈ ಇಬ್ಬರನ್ನೂ ಯಾರು ತಿಳಿಯುತ್ತಿದ್ದನೋ ಅವನೇ ಬ್ರಹ್ಮನು. ಏಕಾಂತದಲ್ಲಿ ಹೋಗಿ ಚಿಂತನೆಯನ್ನು ಮಾಡು" ಎಂದು ಬ್ರಹ್ಮನು ಹೇಳಿದನು. ಚಿಂತನೆ ಮತ್ತು ಶೋಧನೆಗಳಲ್ಲಿ ಕೆಲಕಾಲವನ್ನು ಕಳೆದ ಮೇಲೆ ಇಂದ್ರನು ಪುನಃ ಬ್ರಹ್ಮನ ಹತ್ತಿರ ಬಂದು ಹೀಗೆಂದನು, "ಈ ಇಬ್ಬರನ್ನೂ ನೋಡುವುದು ಮನಸ್ಸು". "ಮನಸ್ಸನ್ನೂ ಸಹ ನೋಡುವವನು ಬ್ರಹ್ಮ" ಎಂದು ಬ್ರಹ್ಮನು ಹೇಳಿದನು. ಯೋಚನೆಯನ್ನು ಮಾಡುತ್ತಾ ಮಾಡುತ್ತಾ, ಶೋಧನೆಯನ್ನು ಮಾಡುತ್ತಾ ಮಾಡುತ್ತಾ ವಿಶ್ರಾಂತಿಯು ದೊರೆಯಲಿಲ್ಲ. ಸಾಕ್ಷಾತ್ಕಾರವಾಗಲಿಲ್ಲ. ಪುನಃ ಹಿಂತಿರುಗಿ ಬಂದು ಹೇಳಿದ, "ಹೆ! ಕೃಪಾನಾಥನೆ, ಕೃಪೆಯನ್ನು ಮಾಡು, ನನಗೆ ಬ್ರಹ್ಮಸಾಕ್ಷಾತ್ಕಾರವನ್ನು ಮಾಡಿಕೊಡು. ಪರಮಾತ್ಮನಲ್ಲಿ ವಿಶ್ರಾಂತಿಯನ್ನು ದೊರಕಿಸಿಕೊಡು. ಆದರ ಹೊರತು 'ಜೀವ' ನು ಅಭಾಗಿಯು. ಎಲ್ಲಿಯವರೆಗೆ ಆತ್ಮಸಾಕ್ಷಾತ್ಕಾರವಾಗುವುದಿಲ್ಲವೊ ಅಲ್ಲಿಯವರೆಗೆ ನನ್ನ ಇಂದ್ರಪದವಿಯೂ ಸಹ ತುಚ್ಛವಾಗಿದೆ ಎಂದು ನನಗನ್ನಿಸುತ್ತದೆ. ಈಗ ನಿನ್ನಲ್ಲಿ ಶರಣಾಗಿದ್ದೇನೆ. ನನಗೆ ಪರಮತತ್ವದ ಬೋಧೆಯನ್ನು ಮಾಡು ಪ್ರಭುವೆ!"

ಬ್ರಹ್ಮದೇವನ ಹೃದಯದಲ್ಲಿ ಪ್ರಸನ್ನತೆ ಉಂಟಾಯಿತು. ಈಗ ಶಿಷ್ಯನು ಅಧಿಕಾರಿಯಾಗಿದ್ದಾನೆ. ಬ್ರಹ್ಮಜ್ಞಾನದ ಮೌಲ್ಯವನ್ನು ಅರಿತಿದ್ದಾನೆ. ತನ್ನ ಜೀವನದ ಮತ್ತು ಆತ್ಮಬೋಧದ ಮೌಲ್ಯವನ್ನು ತಿಳಿದಿದ್ದಾನೆ. ಬ್ರಹ್ಮದೇವನು ಹೇಳಿದನು "ಮನಸ್ಸನ್ನು ಯಾರು ನೋಡುತ್ತಾನೆ ಅವನೇ ಬ್ರಹ್ಮ, ಪುನಃ ಏಕಾಂತ ವಾಸದಲ್ಲಿದ್ದು ಶೋಧಿಸು, ಚಿಂತನೆಯನ್ನು ಮಾಡು".

ಏಕಾಂತದಲ್ಲಿ ಹೋಗಿ ಇಂದ್ರನು ಪುನಃ ವಿಚಾರಶೀಲನಾದ, ಚಿಂತನೆಯನ್ನು ಮಾಡಹತ್ತಿದ, "ಯಾರು ಮನಸ್ಸನ್ನು ನೋಡುತ್ತಾನೆ?" ಅವನು ಅಂತರ್ಮುಖನಾಗಲು ಪ್ರಾರಂಭಿಸಿದ, ಮೆಲ್ಲಮೆಲ್ಲನೆ ಇಂದ್ರಿಯಗಳು ಮನಸ್ಸಿನಲ್ಲಿ ಇಳಿಯಲಾರಂಭಿಸಿದವು. "ಮನಸ್ಸನ್ನು ಯಾರು ನೋಡುತ್ತಾರೆ?" ಈ ಪ್ರಶ್ನೆಯನ್ನು ಮಾಡುತ್ತಾ ಮಾಡುತ್ತಾ ಸಂಕಲ್ಪ ವಿಕಲ್ಪಗಳು ಕಡಿಮೆಯಾಗುತ್ತಾ ಬಂದವು. ಇಂದ್ರಿಯಗಳು ಸಂಯಮಗೊಂಡವು. ಮನಸ್ಸು ಏಕಾಗ್ರತೆಯನ್ನು ಹೊಂದಿತು. ಮನಸ್ಸು ಸಂಯಮವಾದ ಕೂಡಲೇ ಬುದ್ಧಿಪ್ರಕಾಶ ಉಂಟಾಗಲು ಪ್ರಾರಂಭವಾಯಿತು. ಮನಸ್ಸಿನ ಚೇಷ್ಟೆಗಳನ್ನು ನೋಡುತ್ತಾ ನೋಡುತ್ತಾ ಅವನ ಮನಸ್ಸು ಸೂಕ್ಷ್ಮವಾಗುತ್ತಾ ಹೋಯಿತು. ಇಂತಹ ಗಹನ ಚಿಂತನೆಯಲ್ಲಿ ಇಳಿಯುತ್ತಾ ಇಳಿಯುತ್ತಾ ಇಂದ್ರ, ಇಂದ್ರನಾಗಿ ಉಳಿಯಲಿಲ್ಲ, ಇಂದ್ರನು ತಾನೇ ತಾನಾದನು. ಯಾವುದರಿಂದ ಬ್ರಹ್ಮನು ಬ್ರಹ್ಮನೇ ಆಗಿದ್ದಾನೆಯೋ ಆ ಸ್ಥಿತಿಯನ್ನು ಹೊಂದ ಹತ್ತಿದನು. ಇಂದ್ರನ ಎಲ್ಲಾ ಇಚ್ಛೆಗಳು ಭಾದಿತವಾದವು. ಅವನು ಪರಮಾತ್ಮನಲ್ಲಿ ಪ್ರತಿಷ್ಠಿತನಾದನು.

ಸ್ವಚ್ಛವಾದ ಬುದ್ಧಿಯು ಪರಮಾತ್ಮನಲ್ಲಿ ಶಾಂತಿಯನ್ನು ಹೊಂದಿರುತ್ತದೆ ಮತ್ತು ಮಲಿನ ಬುದ್ಧಿ ಜಗತ್ತಿನಲ್ಲಿ ತೊಡಗಿರುತ್ತದೆ. ಬುದ್ಧಿಯು ಎಷ್ಟು ಪವಿತ್ರವಾಗಿರುತ್ತದೋ ಅಷ್ಟು ಪರಮಶಾಂತಿಯಿಂದ ತುಂಬಿರುತ್ತದೆ. ಬುದ್ಧಿ ಎಷ್ಟು ಮಲಿನವಾಗಿರುತ್ತದೋ ಅಷ್ಟು ಸಂಸಾರದ ವಾಸನೆಗಳ ವಿಚಾರಗಳಲ್ಲಿ ವಿಹರಿಸುತ್ತಿರುತ್ತದೆ. ಇಲ್ಲಿಯವರೆಗೆ ಏನನ್ನು ಕೇಳಿದ್ದೇವೆಯೋ, ನೋಡಿದ್ದೇವೆಯೋ ಅದರಲ್ಲಿ ಬುದ್ಧಿಯು ತೊಡಗಿ ಹೋಗಿದೆ. ಆದರೆ ದೊರೆತದ್ದೇನು? ಇಂದಿನಿಂದ ಏನು ನೋಡುವಿರೋ, ಕೇಳುವಿರೋ ಅದರಲ್ಲಿ ಬುದ್ಧಿಯನ್ನು ತೊಡಗಿಸುವಿರಿ. ಅಂತ್ಯದಲ್ಲಿ ದೊರೆತದ್ದೇನು? ಶ್ರೀ ಕೃಷ್ಣನು ಹೇಳುವುದೇನೆಂದರೆ –

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯದಾ ತೆ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ ।
ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ ॥

- ಗೀತಾ ೨-೫೨

ಅರ್ಥ : "ಎಂದಿಗೆ ನಿನ್ನ ಬುದ್ಧಿ ಮೋಹರೂಪ ಕೆಸರಿನ ಮಡುವಿನಿಂದ ವ್ಯವಸ್ಥಿತವಾಗಿ ಪಾರಾಗಿ ಮುಂದೆ ಹೋಗುವುದೋ, ಆಗ ನೀನು ಕೇಳಿರುವ ಮತ್ತು ಕೇಳಲಿರುವ ಈ ಲೋಕದ ಮತ್ತು ಪರಲೋಕದ ಎಲ್ಲಾ ಭೋಗಗಳಿಂದ ವೈರಾಗ್ಯವು ಪ್ರಾಪ್ತವಾಗುತ್ತದೆ".

ಮೋಹದಿಂದ ತುಂಬಿರುವ ಬುದ್ಧಿ ಹಲವಾರು ಬಣ್ಣಗಳನ್ನು ಬದಲಾಯಿಸುತ್ತಿರುತ್ತದೆ. ಹಲವಾರು ಬಣ್ಣಗಳನ್ನು ಬದಲಾಯಿಸುವುದರ ಜೊತೆಗೆ ಅನೇಕ ಜನ್ಮಗಳಿಗೂ ಕರೆದುಕೊಂಡು ಹೋಗುತ್ತದೆ. ಈ ಲೋಕ ಮತ್ತು ಪರಲೋಕವೆಂಬ ಏಳುಲೋಕಗಳು ಮೇಲಿವೆ. (ಭೂಃ, ಭುವಃ, ಸ್ವಃ, ಜನಃ, ತಪಃ, ಮಹಃ ಮತ್ತು ಸತ್ಯ). ಏಳು ಲೋಕಗಳು ಕೆಳಗಿವೆ (ತಳ, ಅತಳ, ವಿತಳ, ತಳಾತಳ, ಮಹಾತಳ, ರಸಾತಳ ಮತ್ತು ಪಾತಾಳ), ಯಾವಾಗ ಬುದ್ಧಿಗೆ ಮೋಹ ಉಂಟಾಗುತ್ತದೋ ಆಗ ಮನುಷ್ಯನು ಈ ಯಾವುದಾದರೊಂದು ಲೋಕದ ಯಾತ್ರೆಯನ್ನು ಮಾಡುತ್ತಿರುತ್ತಾನೆ. ಮೋಹದ ಕೆಸರಿನ ಮಡುವಿನಲ್ಲಿ ಮನುಷ್ಯನು ಸಿಲುಕಿಕೊಂಡಾಗ ಅವನ ಬುದ್ಧಿಯಲ್ಲಿ ಮೋಹದ ಒಂದು ತೆರನಾದ ಭ್ರಮೆಯು ಉಂಟಾಗುತ್ತದೆ.

ಯಾವನಾದರೋ ಒಬ್ಬ ಸಾಧಾರಣ ಸಾಧಕನಿಗಷ್ಟೇ ಅಲ್ಲ ಅರ್ಜುನನಂತಹನಿಗೂ ಸಹ ಈ ಭ್ರಮೆ ಉಂಟಾಗಿತ್ತು. ಅರ್ಜುನನಿಗೆ ಸಾಕ್ಷಾತ್ಕಾರವಾಗಿರಲಿಲ್ಲ, ಅರ್ಜುನನು ಹೇಳಿದುದೇನೆಂದರೆ "ಭಗವಂತ! ನಿನ್ನ ಪ್ರಸಾದದಿಂದ ಈಗ ನಾನು ಶಾಂತಚಿತ್ತನಾಗಿದ್ದೇನೆ". ಯಾವಾಗ ಭಗವಂತನು ತನ್ನ ವಿಶ್ವರೂಪವನ್ನು ಆರಂಭಗೊಳಿಸಿ ಚತುರ್ಭುಜ ರೂಪದಲ್ಲಿ ದರ್ಶನವನ್ನು ಕೊಟ್ಟ ಮೇಲೆ ಮತ್ತು ಸ್ವಾಭಾವಿಕ ಮನುಷ್ಯನ ರೂಪದಿಂದ ಯುಕ್ತನಾದ ಮೇಲೆ, ಆಗ ಅರ್ಜುನನು ಸಾವಧಾನ ಚಿತ್ತನಾಗಿ ಹೇಳಿದ -

ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ಧನ ।
ಇದಾನಿಮಸ್ಮಿ ಸಂವೃತಃ ಸಚೇತಾಃ ಪ್ರಕೃತಿಂ ಗತಃ ॥

- ಗೀತಾ ೧೧-೫೧

"ಹೇ ಜನಾರ್ಧನ! ತಮ್ಮ ಈ ಅತಿ ಶಾಂತ ಮನುಷ್ಯ ರೂಪವನ್ನು ನೋಡಿ ಈಗ ನಾನು ಸ್ಥಿರ ಚಿತ್ತನಾಗಿದ್ದೇನೆ ಮತ್ತು ನನ್ನ ಸ್ವಾಭಾವಿಕವಾದ ಸ್ಥಿತಿಗೆ ಪ್ರಾಪ್ತನಾಗಿದ್ದೇನೆ"

ಇದರ ಅಭಿಪ್ರಾಯವೇನೆಂದರೆ, ನಿನ್ನ ಈ ಶ್ಯಾಮಸುಂದರ ಮಧುರವಾದ ಮನುಷ್ಯ ರೂಪವನ್ನು ನೋಡಿ ಈಗ ನಾನು ಸ್ಥಿರಚಿತ್ತನಾಗಿದ್ದೇನೆ, ಅರ್ಥಾತ್ ನನ್ನ ಮೋಹ, ಭ್ರಮೆ ಮತ್ತು ಭಯಗಳು ದೂರವಾಗಿವೆ ಮತ್ತು ನಾನು ನನ್ನ ವಾಸ್ತವಿಕವಾದ ಸ್ಥಿತಿಯನ್ನು ಪಡೆದುಕೊಂಡಿದ್ದೇನೆ, ಭಯ ಮತ್ತು ವ್ಯಾಕುಲತೆ ಏವಂ ಕಂಪ ಇತ್ಯಾದಿ ಅನೇಕ ಪ್ರಕಾರದ ವಿಕಾರಗಳು ನನ್ನ ಮನ ಇಂದ್ರಿಯ ಮತ್ತು ಶರೀರದಲ್ಲಿ ಉತ್ಪನ್ನವಾಗಿದ್ದವೊ ಅವೆಲ್ಲವುಗಳೂ ದೂರವಾಗಿರುವುದರಿಂದ ಈಗ ನಾನು ಪೂರ್ವದಂತೆ ಸ್ವಸ್ಥನಾಗಿದ್ದೇನೆ.

ಹೀಗೆಂದು ಹನ್ನೊಂದನೆಯ ಅಧ್ಯಾಯದಲ್ಲಿ ಅರ್ಜುನನು ಹೇಳಿದನು ಮತ್ತು ಪುನಃ ಮುಂದೆ ಏಳು ಅಧ್ಯಾಯಗಳು ಹೇಳಲ್ಪಟ್ಟವು. ಅವನಿಗೆ ಸಾಕ್ಷಾತ್ಕಾರವೆಂದರೆ ಏನು ಎಂಬುದು ತಿಳಿದೇ ಇರಲಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವಾತ್ಮನ ಸ್ವಭಾವವೆಂದರೆ, ಸ್ವಲ್ಪ ಶಾಂತಿ, ಸ್ವಲ್ಪ ಸಾಮರ್ಥ್ಯ, ಸ್ವಲ್ಪ ಹರ್ಷ ಬಂದರೆ, ನಾನು ಬಹಳಷ್ಟು ಪಡೆದುಕೊಂಡೆನು ಎಂದು ತಿಳಿಯುತ್ತಾನೆ. ಸ್ವಲ್ಪ ಮಟ್ಟಿಗೆ ಅಭಾಸವಾಗುತ್ತದೆ. ಸ್ವಲ್ಪ ಮಿಂಚಿದಂತಾಗುತ್ತದೆ. ಅದನ್ನೇ ಜನರು ಸಾಕ್ಷಾತ್ಕಾರವೆಂದು ತಿಳಿಯುತ್ತಾರೆ. ಯಾವಾಗ ಮೋಹಪಾಶವನ್ನು ತೊಡೆದು ಬುದ್ಧಿಯು ಪಾರಾಗುತ್ತದೆಯೋ ಆಗ ಕೇಳಿದ್ದು, ನೋಡಿದ್ದು ಏನಾದರೂ ಇದ್ದರೂ ಸಹ ಅದರ ಬಗ್ಗೆ ವೈರಾಗ್ಯವುಂಟಾಗುತ್ತದೆ. ಇಂದ್ರನು ಬಂದು ಕೈ ಜೋಡಿಸಿ ನಿಂತುಕೊಳ್ಳಬಹುದು. ಕುಬೇರನು ಖಜಾನೆಯ ಕೀಲಿಯನ್ನು ಕೈಯಲ್ಲಿ ಹಿಡಿದು ಮುಂದೆ ಬಂದು ನಿಂತು ಹೇಳಬಹುದು "ನಡೆಯಿರಿ ಬ್ರಹ್ಮಪುರಿಯ ಸುಖವನ್ನು ಅನುಭವಿಸಿರಿ", ಆದರೂ ಸಹ ಮನಸ್ಸು ಆ ಪದಾರ್ಥಗಳ ಬಗ್ಗೆ ಅರ್ಥಾತ್ ಆ ಭೋಗಗಳ ಆಕರ್ಷಣೆ ಉಂಟಾಗುವುದಿಲ್ಲ. ಆಗ ಸಾಕ್ಷಾತ್ಕಾರವಾಗಿದೆಯೆಂದು ತಿಳಿಯಬೇಕು.

ತ್ರೈಲೋಕ್ಯಾಧಿಪತಿತ್ವಮೇವ ವಿರಸಂ ಯಸ್ಮಿನ್ ಮಹಾಶಾಸನೇ
ತಲ್ಲ ಭ್ದ್ವಾಶನವಸ್ತ್ರಮಾನಘಟನೆ ಭೋಗೆ ರತಿಂ ಮಾ ಕೃಥಾಃ ।
ಭೋಗಃ ಕೋsಪಿ ಸ ಏಕ ಏವ ಪರಮೋ ನಿತ್ಯೋದಿತೋ ಜೃಂಭತೆ
ಯತ್ಸ್ವಾದಾಧಿರಸಾ ಭವಂತಿ ವಿಷಯಾಸ್ತ್ರೈಲೋಕ್ಯರಾಜ್ಯಾದಯಃ ॥

ಅರ್ಥಾತ್ : "ಯಾವ ಪರಬ್ರಹ್ಮನ ಮಹಾಶಾಸನದಲ್ಲಿ ತ್ರಿಭುವನದ ಸಾಮ್ರಾಜ್ಯವೂ ಸಹ ಕಳೆಹೀನವಾಗಿ ಕಾಣುತ್ತದೊ, ಅಂತಹ ಶಾಸನವನ್ನು ಪ್ರಾಪ್ತಿಯಾಗಿಸಿಕೊ. ಭೋಜನ, ವಸ್ತ್ರ ಮತ್ತು ಮಾನರೂಪದ ಭೋಗದಲ್ಲಿ ಪ್ರೀತಿಯನ್ನಿಡಬೇಡ. ಅದೇ ಒಂದು ಭೋಗ, ಯಥಾರ್ಥ ಭೋಗವಾಗಿದೆ. ಯಾವುದು ಸದಾಸ್ಥಾಯಿಯಾಗಿಯೂ ಮತ್ತು ಪ್ರಕಾಶಮಾನವಾಗಿದೆಯೋ ಅದರ ಸ್ವಾದದಿಂದ ತ್ರೈಲೋಕ್ಯದ ರಾಜ್ಯ ಮುಂತಾದವುಗಳು ರಸಹೀನವಾಗುತ್ತವೆ."

ಶ್ರೀಮದ್ ಆದ್ಯ ಶಂಕರಾಚಾರ್ಯರು ಕೋಟಿ ಗ್ರಂಥಗಳ ಸಾರವನ್ನು ತಿಳಿಸುತ್ತಾ ಹೇಳಿರುವುದೇನೆಂದರೆ -

ಶ್ಲೋಕಾರ್ಧೇನ ಪ್ರವಕ್ಷಾಮಿ ಯದುಕ್ತಂ ಗ್ರಂಥಕೋಟಿಭಿಃ ।
ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾ ಪರಃ ॥

ಯಾವುದಕ್ಕೆ ನಾವು ಜೀವಾತ್ಮ ಎಂದು ಹೇಳುತ್ತೇವೆಯೋ ಅದು ಬ್ರಹ್ಮನಿಂದ ಭಿನ್ನವಾಗಿಲ್ಲ. ಯಾವುದನ್ನು ನಾವು ತರಂಗವೆಂದು ಕರೆಯುತ್ತೇವೆಯೋ ಅದು ಸಾಗರದಿಂದ ಭಿನ್ನವಾಗಿಲ್ಲ. ಯಾವುದನ್ನು ನಾವು ಘಟಾಕಾಶವೆನ್ನುತ್ತೇವೆಯೋ ಅದು ಮಹಾಕಾಶದಿಂದ ಭಿನ್ನವಾಗಿಲ್ಲ. ಯಾವುದನ್ನು ನಾವು ಬಂಗಾರದ ಆಭರಣಗಳೆನ್ನುತ್ತೇವೆಯೋ ಅದು ಬಂಗಾರಕ್ಕಿಂತ ಭಿನ್ನವಾಗಿಲ್ಲ. ಯಾವುದನ್ನು ನಾವು ಎರಡು ಗಜ ಭೂಮಿಯನ್ನುತ್ತೇವೆಯೋ ಅದು ಪೂರ್ಣ ಪೃಥ್ವಿಯಿಂದ ಭಿನ್ನವಾಗಿಲ್ಲ. ಗೋಡೆಯನ್ನು ಕಟ್ಟಿಕೊಂಡು ಗಡಿಯನ್ನು ನಿರ್ಮಾಣ ಮಾಡಬಹುದು. ಆದರೆ ಭೂಮಿಯನ್ನು ಬೇರೆಯಾಗಿ ಮಾಡಲು ಸಾಧ್ಯವಿಲ್ಲ, ಇದು ನಮ್ಮ ನೆಲ, ನಿಮ್ಮ ನೆಲ ಎಂದು ಮನಸ್ಸಿನಲ್ಲಿ ರೇಖೆಗಳನ್ನು ಸೃಷ್ಟಿಸಬಹುದು, ಆದರೆ ಭೂಮಿಯನ್ನು ಬೇರೆ ಬೇರೆ ಮಾಡಲು ಸಾಧ್ಯವಿಲ್ಲ. ಮಡಕೆಗಳು ಬೇರೆ ಬೇರೆಯಾಗಿರಬಹುದು ಆದರೆ ಮಡಕೆಯಲ್ಲಿರುವ ಆಕಾಶವು ಬೇರೆ ಬೇರೆಯಾಗಿರುವುದಿಲ್ಲ. ಚಿತ್ತಗಳು ಬೇರೆ ಬೇರೆಯಾಗಿರಬಹುದು. ಆದರೆ ಚಿತ್ತವು ಯಾವ ಆಧಾರದಿಂದ ಸ್ಫುರಿಸುತ್ತದೆಯೋ ಆ ಚಿದಾಕಾಶವು ಬೇರೆ ಬೇರೆಯಾಗಲು ಸಾಧ್ಯವಿಲ್ಲ. ಆ ಚಿದಾಕಾಶ ಆತ್ಮ ನಾನು - ಎಂಬ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನವನ್ನುಂಟು ಮಾಡುವ ಭಗೀರಥ ಪ್ರಯತ್ನ ವೇದಾಂತದ್ದಾಗಿದೆ. ವಾಸ್ತವದಲ್ಲಿ ನೀನು ಆತ್ಮನಾಗಿದ್ದೀಯಾ. ವಿಶ್ವಾತ್ಮನಾಗಿದ್ದೀಯಾ, ಪರಬ್ರಹ್ಮ ಪರಮಾತ್ಮನಾಗಿದ್ದೀಯಾ. ಸಾಯುವ ಮತ್ತು ಜನನ ಹೊಂದುವ ಗೊಂಬೆಯಲ್ಲ ಎಂಬುದನ್ನು ವೇದಾಂತದರ್ಶನ ತಿಳಿಸುತ್ತದೆ. ಇಂತಹ ಜ್ಞಾನವನ್ನು ಅರಗಿಸಿಕೊಳ್ಳುವ ಸಿದ್ಧ ಪುರುಷನು ಶೂಲೆಯಲ್ಲಿ ನಿಂತಿದ್ದರೂ ಸಹ ನಿರ್ಭಯನಾಗಿರುತ್ತಾನೆ. ಅಳುತ್ತಿದ್ದರೂ ಅಳುವುದಿಲ್ಲ ನಗುತ್ತಿದ್ದರೂ ನಗುವುದಿಲ್ಲ.

ಸಂತುಷ್ಟೋऽಪಿ ನ ಸಂತುಷ್ಟಃ ಖಿನ್ನೋऽಪಿ ನಚ ಖಿದ್ಯತೆ ।
ತಸ್ಯಾಶ್ಚರ್ಯದಶಾಂ ತಾಂ ತಾಂ ತಾದೃಶಾ ಏವ ಜಾನತೆ ॥

ಅರ್ಥ : "ಜ್ಞಾನಿ ಪುರುಷರು ಲೋಕದ ದೃಷ್ಟಿಯಲ್ಲಿ ಸಂತೋಷಗೊಂಡವರಂತೆ ಕಂಡರೂ ಸಂತುಷ್ಟರಾಗಿರುವುದಿಲ್ಲ ಮತ್ತು ಖಿನ್ನರಂತೆ ಕಾಣುತ್ತಿದ್ದರೂ ಅವರು ಖೇದವನ್ನು ಹೊಂದಿರುವುದಿಲ್ಲ. ಆ ಆಶ್ಚರ್ಯಕರವಾದ ಸ್ಥಿತಿಯನ್ನು ಜ್ಞಾನಿಗಳು ಹಾಗೆಯೇ ಅನುಭವಿಸುತ್ತಾರೆ."

ಯಾರಿಗೆ ತಮ್ಮ ಸ್ವರೂಪದ ವಿಸ್ಮರಣೆ ಉಂಟಾಗಿದೆಯೋ ಆ ಅಜ್ಞಾನಿಗಳು ಜನ್ಮ-ಮರಣ ದುಃಖದಿಂದ ಪೀಡಿತರಾಗಿರುತ್ತಾರೆ. ಸ್ವಸ್ವರೂಪದ ವಿಸ್ಮರಣೆಯೇ ಮಹಾನ್ ದುಃಖವಾಗಿದೆ. ಅದೇ ಕಾರಣದಿಂದ ಅವನು ತನ್ನನ್ನು ತಾನು ಅಲ್ಪಜ್ಞ, ಅಲ್ಪಶಕ್ತ, ಕಿಂಚಿಜ್ಞ, ಬದ್ಧ, ಸಂಸಾರಿ, ಸುಖಿ, ದುಃಖಿ ಸನ್ಯಾಸಿ ಎಂದು ಹೇಳುತ್ತಾನೆ. ವಾಸ್ತವದಲ್ಲಿ ಅವನು ಸ್ವಯಂ ಮಹಾನ್ ಆತ್ಮನಾಗಿದ್ದಾನೆ. ಹೇಗೆಂದರೆ:-

ಕಾಡಿನಲ್ಲಿ ಹೆಣ್ಣುಸಿಂಹವು ಬೇಟೆಗಾಗಿ ಓಡುತ್ತಿತ್ತು, ಗರ್ಭವತಿಯಾಗಿತ್ತು, ತನ್ನ ಮರಿಗೆ ಜನ್ಮ ಕೊಟ್ಟಿತು, ಅದು ಓಡುತ್ತಿರುವಾಗ ಅಲ್ಲಿಯೇ ಆ ಮರಿಯು ರಸ್ತೆಯಲ್ಲಿ ಬಿದ್ದಿತು. ಮೇಕೆಗಳ ಗುಂಪು ಅಲ್ಲಿಂದ ಹಾದು ಹೋಗುತ್ತಿತ್ತು. ಆ ಮರಿಯು (ಸಿಂಹದ) ಮೇಕೆಗಳ ಗುಂಪಿನಲ್ಲಿಯೆ ಸೇರಿಕೊಂಡಿತು ಮತ್ತು ಮೇಕೆಗಳ ಮಧ್ಯೆಯಲ್ಲಿಯೇ ಸಿಂಹದ ಮರಿಯು ಬೆಳೆದು ದೊಡ್ಡದಾಯಿತು. ಅದು ನಾಲ್ಕು ಕಡೆಗೂ ಮೇಕೆಗಳನ್ನೇ ನೋಡುತ್ತಿತ್ತು. ಅದಕ್ಕೆ ನಾನು ಸಿಂಹದ ಮರಿಯೆಂಬುದು ತಿಳಿಯಲೇ ಇಲ್ಲ. ನಾನು ಮೇಕೆಯೇ ಎಂದು ತಿಳಿದಿತ್ತು. ಮೇಕೆಗಳು ಓಡುತ್ತಿದ್ದರೆ ಅದೂ ಸಹ ಬಾಲವನ್ನು ಮುದುರಿಕೊಂಡು ಓಡುತ್ತಿತ್ತು. ಎಲ್ಲಿಯಾದರೂ ನಾಯಿಗಳು ಬೊಗಳಿದರೆ ಅದು ಮೇಕೆಗಳ ಮಧ್ಯದಲ್ಲಿ ಸೇರಿ ಓಡಿಹೋಗುತ್ತಿತ್ತು. ತಾನು ಯಾರೆಂಬುದು ಅದಕ್ಕೆ ಗೊತ್ತೇ ಇರಲಿಲ್ಲ ಮತ್ತು ತಾನು ಯಾರೆಂಬುದನ್ನು ತಿಳಿಯಲಿಕ್ಕೆ ಯಾವ ಕಾರಣವು ಇರಲಿಲ್ಲ. ಏಕೆಂದರೆ ಅದರ ಸುತ್ತಮುತ್ತಲೂ ಕೇವಲ ಮೇಕೆಗಳೇ ಕಾಣುತ್ತಿದ್ದವು. ಮೇಕೆಗಳ ಜೊತೆಯಲ್ಲಿ ಬೆಳೆದಿತ್ತು. ಅದು ಮೇಕೆಯೇ ಆಗಿ ಹೋಗಿತ್ತು. ಈಗ ಅದು ಬೆಳೆದು ಪೂರ್ಣ ದೊಡ್ಡದಾಗಿತ್ತು. ಎಲ್ಲಾ ಮೇಕೆಗಳಿಗಿಂತ ಎತ್ತರವಾಗಿ ಕಾಣಿಸುತ್ತಿತ್ತು. ಆದರೂ ಅದಕ್ಕೆ ತಾನು ಯಾರೆಂಬುದು ಗೊತ್ತಿರಲಿಲ್ಲ.

ಒಂದು ದಿನ ಕಾಡಿನಲ್ಲಿ ಮೇಕೆಗಳ ಗುಂಪಿನ ಜೊತೆಯಲ್ಲಿ ಹೋಗುತ್ತಿರುವಾಗ ಒಂದು ಸಿಂಹವು ಇದನ್ನು ಕಂಡಿತು. ಇದು ಮೇಕೆಗಳ ಗುಂಪಿನ ಮಧ್ಯದಲ್ಲಿ ಹೋಗುತ್ತಿದೆ ಮತ್ತು ಮೇಕೆಗಳು ಇದಕ್ಕೆ ಹತ್ತಿಕೊಂಡು, ಮೈಗೆ ಮೈಯನ್ನು ತಗುಲಿಸಿಕೊಂಡು ಹೋಗುತ್ತಿವೆ. ಮೇಕೆಗಳಿಗೆ ಯಾವ ಭಯವೂ ಇಲ್ಲ, ಇದನ್ನು ಕಂಡು ಆ ಕಾಡಿನ ಹೊಸ ಸಿಂಹಕ್ಕೆ ಬಹಳ ಆಶ್ಚರ್ಯವಾಯಿತು. "ಏನಾಗಿದೆ ಇಲ್ಲಿ, ಈ ರೀತಿಯಾಗಿರುವುದನ್ನು ಎಂದೂ ಕಂಡಿಲ್ಲ. ಮೇಕೆಗಳ ಮಧ್ಯೆ ಸಿಂಹ! ಮೇಕೆಗಳಿಗೆ ಸಿಂಹದ ಹೆದರಿಕೆಯೇ ಇಲ್ಲ, ಇದೆಂತಹ ಆಶ್ಚರ್ಯ, ನಂಬಲಿಕ್ಕೆ ಸಾಧ್ಯವಾಗುತ್ತಿಲ್ಲ" ಎಂದು ಮನದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಚಾರ ಮಾಡಹತ್ತಿತು. ಕಾಡಿನ ಸಿಂಹವು ಆ ಮೇಕೆಯ ಗುಂಪಿನ ಮೇಲೆ ಧಾಳಿ ಮಾಡಿತು. ಮೇಕೆಗಳೆಲ್ಲಾ ದಿಕ್ಕಾಪಾಲಾಗಿ ಓಡಹತ್ತಿದವೂ, ಮೇಕೆಯ ಜೊತೆಯಲ್ಲಿ ಬೆಳೆದ ಸಿಂಹವೂ ತನ್ನ ಪ್ರಾಣರಕ್ಷಣೆಗಾಗಿ ಓಡಹತ್ತಿತು. ಕಾಡಿನ ಸಿಂಹವು ಈ ಸಿಂಹದ ಹಿಂದೆ ಓಡಿ ಅದನ್ನು ಕಷ್ಟಪಟ್ಟು ಹಿಡಿಯಿತು. ಅದು ಬಾಲವನ್ನು ಮುರಿದುಕೊಂಡು ಬೆವತು ಓಡಿ ಓಡಿ ಸುಸ್ತಾಗಿತ್ತು. ಹಿಡಿದ ಕೂಡಲೆ, ಹೆದರಿ ನಡುಗಲು ಶುರುಮಾಡಿತ್ತು. "ನನ್ನನ್ನು ಬಿಟ್ಟು ಬಿಡು" ಎಂದು ಪ್ರಾರ್ಥಿಸಿಕೊಂಡಿತು. ಕಾಡಿನ ಸಿಂಹ ಅದನ್ನು ಹಿಡಿದುಕೊಂಡು ನದಿಯ ದಂಡೆಯ ಕಡೆಗೆ ಕರೆದೊಯ್ಯಿತು. ಅದು ಗೋಗರೆಯುತ್ತಿತ್ತು. "ನನ್ನನ್ನು ಬಿಟ್ಟು ಬಿಡು" ಎಂದು ಅಳುತ್ತಿತ್ತು. ಕಾಡಿನ ಸಿಂಹವು ಅದನ್ನು ನದಿಯ ನೀರಿನ ಹತ್ತಿರ ಕರೆದುಕೊಂಡು ಹೋಯಿತು. ಎರಡೂ ಸಿಂಹಗಳು ನೀರಿನಲ್ಲಿ ತಮ್ಮ ಪ್ರತಿಬಿಂಬವನ್ನು ನೋಡಿದವು. ಮೇಕೆಯ ಮಧ್ಯೆ ಬೆಳೆದಿದ್ದ ಸಿಂಹವೂ ನೋಡಿತು, ತನ್ನ ಪ್ರತಿಬಿಂಬವನ್ನು ಕಂಡು ಅದಕ್ಕೆ ಅತ್ಯಾಶ್ಚರ್ಯವಾಯಿತು. ಯಾವುದರಿಂದ ಅದು ಭಯ ಗೊಂಡಿತ್ತೋ ಆ ಸಿಂಹವೂ ಸಹ ತನ್ನ ಹಾಗೆಯೇ ಇದೆ ಎಂಬುದು ತಿಳಿಯಿತು. ಆಗ ಅದು ದುರುಗುಟ್ಟಿಗೊಂಡು ಕಾಡಿನ ಸಿಂಹದ ಕಡೆಗೆ ನೋಡಹತ್ತಿತ್ತು. ಅದರ ಬಾಲ ಪುನಃ ಮೊದಲಿನಂತೆ ಸೆಟೆದು ನಿಂತು ಕೊಂಡಿತು. ಅದು ಜೋರಾಗಿ ಒಂದು ಸಾರಿ ಘರ್ಜಿಸಿತು. ಆಗ ಕಾಡಿನ ಸಿಂಹ ಹೇಳಿತು "ನನಗೆ ಬಹಳ ಆಶ್ಚರ್ಯವಾಗಿತ್ತು, ನಿನಗೆ ಆಗಿದ್ದಾದರೂ ಏನು? ಮೇಕೆಗಳಂತೆ ಏಕೆ ಇದ್ದಿಯಾ?" ಅದಕ್ಕೆ ಆ ಸಿಂಹ ಹೇಳಿತು "ನಾನು ಮೇಕೆಗಳ ಜೊತೆಯಲ್ಲಿಯೇ ಬೆಳೆದು ದೊಡ್ಡವನಾಗಿದ್ದೆನೆ, ಆದುದರಿಂದ ನಾನು ಸಹ ಒಂದು ದೊಡ್ಡ ಮೇಕೆಯೆಂದೇ ಭಾವಿಸಿಕೊಂಡಿದ್ದೆ. ಒಂದು ಪಕ್ಷ ನಾನು ಇವತ್ತು ನೀರಿನಲ್ಲಿ ನಿನ್ನನ್ನು ಮತ್ತು ನನ್ನ ಮುಖವನ್ನು ನೋಡದೆ ಇದ್ದಿದ್ದರೆ ಬಹಳ ತೊಂದರೆಯಾಗುತ್ತಿತ್ತು." ಮಾತು ಇಲ್ಲಿಗೆ ಮುಗಿಯಿತು. ಆ ಘಳಿಗೆಯಿಂದ ಅದು ಸಿಂಹನಂತೆ ವರ್ತಿಸಲಾರಂಭಿಸಿತು.

ಈ ಎಲ್ಲಾ ಜೀವನದ ಪ್ರಕ್ರಿಯೆಗಳು ಕೇವಲ ಇಷ್ಟು ಮಾತ್ರವಾಗಿದೆ. ಯಾರಾದರೂ ಒಬ್ಬ ವ್ಯಕ್ತಿಯ ಕಡೆಯಿಂದ ನಮ್ಮ ಮುಖವನ್ನು ನೋಡುವ ಅವಕಾಶ ಸಿಕ್ಕರೆ ಸಾಕು, ಅಲ್ಲಿಗೆ ಮಾತು ಮುಗಿಯಿತು. ಸಿಂಹದ ಜೊತೆಗೆ ಯಾವ ವ್ಯವಹಾರದ ಅವಶ್ಯಕತೆಯೂ ಇಲ್ಲ. ಈ ಸಿಂಹಕ್ಕೆ ಆ ಸಿಂಹದ ತರಹ ಮುಖವನ್ನು ಮಾರ್ಪಾಡು ಮಾಡುವ ಅವಶ್ಯಕತೆಯಿಲ್ಲ ಅಥವಾ ಅದರ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆಯುವ ಯಾವ ಅವಶ್ಯಕತೆಯೂ ಇಲ್ಲ. ಸಿಂಹದ ಒಂದು ಭ್ರಮೆಯಿತ್ತು. ಅದು ಒಡೆದುಹೋಯಿತು. ಯಾವ ಭ್ರಮೆ ನಮ್ಮ ಮನದಲ್ಲಿದೆಯೋ ಅದು ಒಡೆಯಬೇಕು. ದೂರಾಗಬೇಕು. ಆ ಕಾಡಿನ ಸಿಂಹವು ಆ ಮೇಕೆಗಳ ಜೊತೆಯಲ್ಲಿ ಬೆಳೆದ ಸಿಂಹಕ್ಕೆ ಹೊಡೆದು ಬಡಿದು ಮತ್ತು ತಿಳಿಸಿ ಹೇಳಿದ್ದರೂ, ನೀನು ಸಿಂಹವಿದ್ದಿಯಾ ಎಂದು ಉಪದೇಶವನ್ನು ಹೇಳಿ, ಉದಾಹರಣೆಯನ್ನು ಕೊಟ್ಟು, ಎಲ್ಲಾ ರೀತಿಯ ತರ್ಕದಿಂದ ಸಿದ್ಧಪಡಿಸಿ ತೋರಿಸಿದ್ದರೂ, ಏನೂ ಉಪಯೋಗಕ್ಕೆ ಬರುತ್ತಿರಲಿಲ್ಲ. ಅದು ಇಷ್ಟನ್ನೇ ಹೇಳುತ್ತಿತ್ತು, "ನೀನು ಹೇಳುವ ಮಾತೇನೋ ಸರಿ, ಆದರೆ ನಾನು ಸಿಂಹವೇ ಅಲ್ಲ. ನೀನು ಮಾಡುತ್ತಿರುವ ತರ್ಕ ಬಹಳ ಚೆನ್ನಾಗಿದೆ ಆದರೆ ದಯವಿಟ್ಟು ನನ್ನನ್ನು ಬಿಟ್ಟು ಬಿಡು, ನಾನು ಹೋಗುತ್ತೇನೆ. ನನ್ನ ಜೊತೆಯಲ್ಲಿರುವವರೆಲ್ಲರೂ ಹೋಗುತ್ತಿದ್ದಾರೆ, ನಾನು ಬೇಗ ಹೋಗಿ ಅವರ ಜೊತೆ ಸೇರಿಕೊಳ್ಳಬೇಕು, ನಾನು ಬಹಳ ಕಷ್ಟದಲ್ಲಿದ್ದೇನೆ. ನನ್ನನ್ನು ಬಿಟ್ಟುಬಿಡು."

ನಾವು ನಡೆಯಬೇಕಾಗಿರುವ ರಸ್ತೆಯನ್ನು ಸರಿಯಾಗಿ ಗುರುತಿಸಿಕೊಂಡರೆ ಅದರ ಮೇಲೆ ನಡೆಯಲು ಯಾವ ತೊಂದರೆಯೂ ಬಾರದು. ಸರಿಯಾದ ರಸ್ತೆಯಲ್ಲಿ ನಮಗೆ ಹೋಗಲಿಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಧ್ಯವಾಗದೆ ಹೋದರೆ, ಇದರ ಅರ್ಥವಿಷ್ಟೆ. ರಸ್ತೆಯನ್ನು ಸರಿಯಾಗಿ ಗುರುತಿಸಿ ಕೊಂಡಿಲ್ಲವೆಂಬುದು. ಯಾಕೆಂದರೆ ಸರಿಯಾಗಿ ಗುರುತಿಸಿಕೊಳ್ಳುವುದರಲ್ಲಿ ಮತ್ತು ಅದರ ಮೇಲೆ ನಡೆಯುವುದರಲ್ಲಿ ಎಂದಿಗೂ ಭೇದ ಉಂಟಾಗುವುದಿಲ್ಲ.

ಇದೇ ರೀತಿಯಾಗಿ ತುಲಸೀದಾಸರು ತಮ್ಮ ಜೀವನದಲ್ಲಿ ಅನುಭವಸಿದ್ದಾರೆ. ತಮ್ಮ ಹಿಂದಿನ ಜೀವನ. ಯಾವ ಕೇವಲ ರಾಗ-ದ್ವೇಷಾದಿಗಳಿಂದ ಕೂಡಿ ಕೊಂಡಿತ್ತೋ ಅದರ ಬಗ್ಗೆ ಪಶ್ಚಾತ್ತಾಪವನ್ನು ಪಡುತ್ತಾ ಭಾವಿ ಜೀವನದ ಬಗ್ಗೆ ಸಂಕಲ್ಪವನ್ನು ಮಾಡುತ್ತಾರೆ. ಸರಿಯಾದ ಮಾರ್ಗದಲ್ಲಿ ಜೀವನವನ್ನು ತೊಡಗಿಸಿ ಜ್ಞಾನವನ್ನು ಹೊಂದುತ್ತಾರೆ. ತುಲಸಿದಾಸರು ಹೇಳುವುದೇನೆಂದರೆ, "ಇಲ್ಲಿಯವರೆಗೆ ನಾನು ಸಾಂಸರಿಕ ರಾಗ-ದ್ವೇಷಾದಿ ಪ್ರವೃತ್ತಿಗಳಿಂದ ಮತ್ತು ವಿಷಯ ವಾಸನೆಗಳಿಂದ ಲಿಪ್ತನಾಗಿದ್ದೆ. ನನ್ನ ಕರ್ಮಗಳು ಕೆಟ್ಟು ಹೋಗಿದ್ದವು. ಆದರೆ ಇನ್ನು ಮುಂದೆ ಕರ್ಮಗಳನ್ನು ಕೆಡೆಸಿಕೊಳ್ಳುವುದಿಲ್ಲ. ರಾಮನ ಕೃಪೆಯಿಂದ ಸಂಸಾರ ರೂಪಿ ರಾತ್ರಿಯು ಸಮಾಪ್ತವಾಯಿತು (ಅರ್ಥಾತ್ ಅಜ್ಞಾನ ಕಾರಣದಿಂದ ಸಾಂಸಾರಿಕ ಪ್ರವೃತ್ತಿಯಲ್ಲಿ ಆಸಕ್ತನಾಗಿದ್ದೆ. ಅವು ಸಮಾಪ್ತಿಯನ್ನು ಹೊಂದಿವೆ). ಈಗ ಜಾಗೃತನಾಗಿದ್ದೇನೆ ಪುನಃ ಹಾಸಿಗೆಯನ್ನು ಹಾಕುವುದಿಲ್ಲ (ಅರ್ಥಾತ್ ಃ ಸಂಸಾರಿಕ ಮೋಹ - ಮಾಯಾದಿಗಳಲ್ಲಿ ಪ್ರವೃತ್ತನಾಗಿ ಅಜ್ಞಾನ ರೂಪಿ ನಿದ್ರೆಯ ವಶನಾಗುವುದಿಲ್ಲ). ನನಗೆ ಸಮಸ್ತ ಚಿಂತೆಗಳನ್ನು ದೂರಮಾಡುವ ಚಿಂತಾಮಣಿ ಪ್ರಾಪ್ತವಾಗಿದೆ. ಅದನ್ನು ನನ್ನ ಹೃದಯ ರೂಪಿ ಕೈಯಿಂದ ಕೆಳಗೆ ಬೀಳಿಸಲಾರೆ".

"ಸ್ವ-ಸ್ವರೂಪವನ್ನು ಒರೆಗಲ್ಲಾನ್ನಾಗಿ ಮಾಡಿ ಅದರ ಮೇಲೆ ನನ್ನ ಚಿತ್ತರೂಪಿ ಬಂಗಾರವನ್ನು ಉಜ್ಜುತ್ತೇನೆ. ಮೊದಲು ನನ್ನ ಮನಸ್ಸು ಇಂದ್ರಿಯಗಳ ಅಧೀನವಾಗಿತ್ತು. ಆಗ ಇಂದ್ರಿಯಗಳು ನನ್ನನ್ನು ಅಪಹಾಸ್ಯಕ್ಕೆ ಈಡುಮಾಡಿದ್ದವು. ಆದರೆ, ಈಗ ನಾನು ಮನವನ್ನು ವಶಪಡಿಸಿಕೊಂಡಿದ್ದೇನೆ. ಈಗ ನಾನು, ನನ್ನ ಮನಸ್ಸು ಮತ್ತು ಇಂದ್ರಿಯಗಳ ಮೂಲಕ ಅಪಹಾಸ್ಯಕ್ಕೆ ಈಡಾಗುವುದಿಲ್ಲ". ತುಲಸಿದಾಸರು ಹೇಳುವುದೇನೆಂದರೆ, "ನನ್ನ ಮನರೂಪಿ ಭ್ರಮರವು ಭಗವಂತ ರೂಪಿ ಕಮಲ ಕೋಶದಲ್ಲಿ ನಿವಾಸಮಾಡುತ್ತಿರುವುದರಿಂದ, ಅದು ಹಾರಿ ಬೇರೆ ಕಡೆಗೆ ಹೋಗಲಾರದು. ಎಷ್ಟು ನನಗೆ ಪ್ರಾಪ್ತವಾಗುವುದೋ ಅಷ್ಟರಲ್ಲೇ ನಾನು ಸಂತುಷ್ಟನಾಗಿರುತ್ತೇನೆ. ಬೇರೆಯಾರಿಂದಲೂ ಏನನ್ನೂ ಪಡೆಯುವ ಇಚ್ಛೆಯನ್ನಿಡುವುದಿಲ್ಲ. ಕಾಯಾ, ವಾಚಾ, ಮನಸಾ, ಸದಾಕಾಲದಲ್ಲಿ ಪರರ ಕಲ್ಯಾಣವನ್ನು ಮಾಡುತ್ತೇನೆ ಮತ್ತು ಈ ನಿಯಮವನ್ನು ಸದೈವ ಪಾಲನೆ ಮಾಡುತ್ತೇನೆ. ನನ್ನ ಕಿವಿಗಳಿಂದ ಕಠೋರ ಮತ್ತು ಅಸಹ್ಯ ವಚನವನ್ನು ಕೇಳಿಯೂ ಸಹ ಕ್ರೋಧದ ಅಗ್ನಿಯಲ್ಲಿ ಸುಡುವುದಿಲ್ಲ. ಮಾನ-ಅಪಮಾನದ ಇಚ್ಛೆಯ ತ್ಯಾಗವನ್ನು ಮಾಡಿ ಮನಸ್ಸನ್ನು ಶೀತಲವಾಗಿಡುತ್ತೇನೆ. ಬೇರೆಯವರ ಗುಣಗಳ ವರ್ಣನೆಯನ್ನು ಮಾಡುವೆನು ದೋಷಗಳನ್ನು ಮುಚ್ಚಿಡುವೆನು. ಶಾರೀರಿಕ ಚಿಂತೆಗಳನ್ನು ತ್ಯಾಗ ಮಾಡಿ ಸುಖದಲ್ಲಿ ಪ್ರಸನ್ನತೆ ಮತ್ತು ದುಃಖದಲ್ಲಿ ಕಷ್ಟವನ್ನು ಅನುಭವಿಸುವುದಿಲ್ಲ".

ಗೀತೆಯಲ್ಲಿ ಸಹ ಹೇಳಿರುವುದೇನೆಂದರೆ,

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ।
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ॥
ಸಂತುಷ್ಟಃ ಸತತಂ ಯೋಗೀಯತಾತ್ಮಾ ದೃಢನಿಶ್ಚಯಃ।
ಮಯ್ಯರ್ಪಿತಮನೋಬುದ್ಧಿರ್ಯೋ ಮದ್ಭಕ್ತಃ ಸ ಮೇ ಪ್ರಿಯಃ॥

- ಗೀತಾ ೧೨-೧೩, ೧೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಥಾತ್ : "ಯಾವ ಪುರುಷನು ಎಲ್ಲಾ ಭೂತಗಳಲ್ಲಿಯೂ ದ್ವೇಷಭಾವ ರಹಿತನಾಗಿ, ಸ್ವಾರ್ಥರಹಿತವಾಗಿ, ಎಲ್ಲರನ್ನೂ ಪ್ರೇಮಿಸುವನೋ ಅವನು ಹೇತು ರಹಿತನಾದ ದಯಾಳುವಾಗಿರುತ್ತಾನೆ ಹಾಗೂ ಮಮತಾ, ಅಂಹಕಾರ ರಹಿತನಾಗಿ, ಸುಖ-ದುಃಖದ ಪ್ರಾಪ್ತಿಯಲ್ಲಿ ಸಮ ಮತ್ತು ಕ್ಷಮಾಶೀಲನಾಗಿರುತ್ತಾನೆ. ಅರ್ಥಾತ್ ಅಪರಾಧವನ್ನು ಮಾಡುವವರಿಗೂ ಸಹ ಅಭಯವನ್ನು ಕೊಡುತ್ತಾನೆ. ಹಾಗೂ ಯಾವ ಯೋಗಿಯು ನಿರಂತರ ಸಂತುಷ್ಟನಾಗಿ, ಮನ-ಇಂದ್ರಿಯಗಳ ಸಹಿತ ಶರೀರವನ್ನು ವಶಪಡಿಸಿಕೊಂಡಿರುವನೋ ಅವನು ನನ್ನಲ್ಲಿ ದೃಢ ನಿಶ್ಚಯವನ್ನು ಹೊಂದಿರುತ್ತಾನೆ. ನನಗೆ ಸಮರ್ಪಣ ಮಾಡಿರುವ ಮನ-ಬುದ್ಧಿವುಳ್ಳವನಾಗಿರುವ ನನ್ನ ಭಕ್ತನು ನನಗೆ ಪ್ರೀಯನಾಗಿರುತ್ತಾನೆ". ಜ್ಞಾನಿ ಭಕ್ತರ ಲಕ್ಷಣವನ್ನು ಗೀತೆಯಲ್ಲಿ ಪರಮಾತ್ಮನು ವಿಸ್ತಾರವಾಗಿ ಹೇಳಿದ್ದಾನೆ. ಜ್ಞಾನಿ ಭಕ್ತನು ಪರಮಾನಂದದ ಅಕ್ಷಯ ಮತ್ತು ಅನಂತ ಭಂಡಾರವಾದ ಶ್ರೀ ಭಗವಾನನನ್ನು ಪ್ರತ್ಯಕ್ಷಗೊಳಿಸಿಕೊಳ್ಳುತ್ತಾನೆ. ಈ ಕಾರಣದಿಂದ ಅವನು ಸದಾ ಸಂತುಷ್ಟನಾಗಿರುತ್ತಾನೆ. ಅವನಿಗೆ ಯಾವುದೇ ಸಮಯದಲ್ಲಿ, ಯಾವುದೇ ಅವಸ್ಥೆಯಲ್ಲಿ, ಸಂಸಾರದ ಯಾವುದೇ ವಸ್ತುವಿನ ಅಭಾವದಿಂದ ಅಸಂತೋಷದ ಅನುಭವವಾಗುವುದಿಲ್ಲ. ಅವನು ಪೂರ್ಣಕಾಮನಾಗುತ್ತಾನೆ. ಆದುದರಿಂದ ಸಂಸಾರದ ಯಾವುದೇ ಘಟನೆಯಿಂದ ಅವನ ಸಂತೋಷಕ್ಕೆ ಬಾಧೆ ಉಂಟಾಗುವುದಿಲ್ಲ. ಸಂಸಾರಿ ಮನುಷ್ಯರ ಯಾವ ಸಂತೋಷವಿದೆಯೋ ಅದು ಕ್ಷಣಿಕವಾಗಿರುತ್ತದೆ. ಯಾವ ಕಾಮನೆಯ ಪೂರ್ತಿಯಿಂದ ಸಂತೋಷ ಉಂಟಾಗುತ್ತದೋ ಅದರ ಅಭಾವವಾದೊಡನೆ ಪುನಃ ಅಸಂತೋಷ ಉತ್ಪನ್ನವಾಗುತ್ತದೆ. ಆದುದರಿಂದ ಸಂಸಾರಿಗಳು ಸದಾ ಸಂತುಷ್ಟರಾಗಿರುವುದಿಲ್ಲ.

ಜ್ಞಾನಿ ಭಕ್ತನ ಶರೀರದಲ್ಲಿ ಸ್ವಲ್ಪವಾದರೂ ಅಭಿಮಾನ ಅಥವಾ ಮಮತ್ವವಿರುವುದಿಲ್ಲ. ಅವನು ಸ್ತುತಿಗಳಿಂದ ಹರ್ಷಿತನಾಗುವುದಿಲ್ಲ ನಿಂದನೆಯಿಂದ ದುಃಖಿತನಾಗುವುದಿಲ್ಲ. ಅವನಿಗೆ ಅವೆರಡರಲ್ಲೂ ಸಮಭಾವವಿರುತ್ತದೆ. ಸರ್ವತ್ರವೂ ಭಗವದ್ಬುದ್ಧಿಯಾಗಿರುವುದರಿಂದ ಸ್ತುತಿಯನ್ನು ಮಾಡುವವರು ಅಥವಾ ನಿಂದನೆಯನ್ನು ಮಾಡುವವರ ಬಗ್ಗೆ ಸ್ವಲ್ಪವಾದರೂ ಭೇದ ಬುದ್ಧಿ ಉಂಟಾಗುವುದಿಲ್ಲ. ಅವನು ಮನನ ಶೀಲನಾಗಿರುತ್ತಾನೆ. ಮನುಷ್ಯ ಕೇವಲ ವಾಣಿಯಿಂದಲೇ ಮಾತನಾಡುವುದಿಲ್ಲ. ಅವನು ಮನಸ್ಸಿನಿಂದಲೂ ಸಹ ಮಾತನಾಡುತ್ತಾನೆ. ವಿಷಯಗಳ ಅನವರತ ಚಿಂತನೆಯೇ ಮನದ ನಿರಂತರ ಮಾತುಗಳಾಗಿವೆ. ಜ್ಞಾನಿ ಭಕ್ತನ ಚಿತ್ತವು ಭಗವಂತನಲ್ಲಿ ಎಷ್ಟೊಂದು ಸಂಲಗ್ನವಾಗಿರುತ್ತದೆಯೆಂದರೆ ಅದರಲ್ಲಿ ಭಗವಂತನನ್ನು ಬಿಟ್ಟು ಬೇರೆ ಯಾವುದರ ಸ್ಮೃತಿಯೇ ಇರುವುದಿಲ್ಲ. ಅವನು ಯಾವಾಗಲೂ ಭಗವಂತನ ಚಿಂತನೆಯಲ್ಲಿಯೇ ಇರುತ್ತಾನೆ. ಇದೇ ನಿಜವಾದ ಮೌನವಾಗಿದೆ. ಮಾತನಾಡುವುದನ್ನು ನಿಲ್ಲಿಸಿ ಮತ್ತು ಮನದಲ್ಲಿ ವಿಷಯಗಳ ಚಿಂತನೆಯಾಗುತ್ತಿದ್ದರೆ ಅಂತಹ ಮೌನ ತೋರಿಕೆಯ ಮೌನವಾಗುತ್ತದೆ. ಮನಸ್ಸನ್ನು ನಿರ್ವಿಷಯವನ್ನಾಗಿ ಮಾಡಿ, ವಾಣಿ ಪರಿಶುದ್ಧಹಾಗೂ ಸಂಯಮಿತವಾಗಿರುವುದರಿಂದ ಬಾಹ್ಯ ಮೌನವೂ ಸಹ ಲಾಭದಾಯಕವಾಗುತ್ತದೆ.

ಮುನಿಭಾವದ ಹೆಸರೇ ಮೌನವಾಗಿದೆ ಮತ್ತು ಈ ಮುನಿಭಾವ ಯಾರಲ್ಲಿ ಇರುತ್ತದೋ, ಅವನೇ ಮೌನಿ ಅಥವಾ ಮನನ ಶೀಲನಾಗಿರುತ್ತಾನೆ. ಅವನು ಪ್ರಾರಬ್ಧಾನುಸಾರವಾಗಿ ಸುಖ-ದುಃಖಾದಿಗಳ ಹೇತು ಪೂರ್ವಕವಾಗಿ ಯಾವದೊಂದು ಪದಾರ್ಥಗಳು ಅವನಿಗೆ ಪ್ರಾಪ್ತವಾಗುತ್ತವೆಯೋ ಅದರಲ್ಲಿ ಅವನು ಸಂತುಷ್ಟನಾಗಿರುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನಿಯು ಮನಸ್ಸಿನಿಂದ ಮನೆ ಮಠಾದಿಗಳನ್ನು ತ್ಯಾಗಮಾಡಿರುತ್ತಾನೆ. ಅವನಿಗೆ ಯಾವುದೇ ಸ್ಥಾನ-ವಿಶೇಷದಲ್ಲಿ ಆಸಕ್ತಿ ಮಮತಾ ಅಥವಾ ಯಾವುದೇ ಪ್ರಕಾರದ ರುಚಿ ಇರುವುದಿಲ್ಲ. ಅವುಗಳನ್ನು ಬಿಟ್ಟು ತನ್ನ ಸರ್ವಸ್ವವನ್ನು ಭಗವಂತನಿಗೆ ಅರ್ಪಿಸಿ ಸರ್ವಥಾ ಅಕಿಂಚನನಾಗಿರುತ್ತಾನೆ. ಮನೆ-ಮಠ, ಶರೀರ, ವಿದ್ಯಾಬುದ್ಧಿ ಮುಂತಾದ ಎಲ್ಲವನ್ನೂ ಭಗವಂತನಿಗೆ ಅರ್ಪಿಸಿರುತ್ತಾನೆ. ಅವರು ಬ್ರಹ್ಮಚಾರಿಗಳಾಗಿರಬಹುದು. ಗೃಹಸ್ಥ ಅಥವಾ ವಾನಪ್ರಸ್ಥರಾಗಿರಬಹುದು, ಆದರೂ ಅವರು ಜ್ಞಾನಿಯೇ ಆಗಿರುತ್ತಾರೆ. ಶರೀರದಲ್ಲಿ ಅಹಂತಾ, ಮಮತಾ ಮತ್ತು ಆಸಕ್ತಿಯಿಲ್ಲದಿರುವುದರಿಂದ, ಶರೀರವು ಹೇಗಿದ್ದರೂ ಸಹ ಜ್ಞಾನಿಗಳನ್ನು ವಿದೇಹಿಗಳೆಂದು ಕರೆಯುತ್ತಾರೋ ಹಾಗೆಯೇ ಯಾರಿಗೆ ಮನೆಯಲ್ಲಿ ಮಮತಾ-ಆಸಕ್ತಿ ಇಲ್ಲವೊ, ಅವರು ಮನೆಯಲ್ಲಿದ್ದರೂ ಸಹ ಜ್ಞಾನಿಗಳಾಗಿರುತ್ತಾರೆ.

ಇತರೆ ಶಾಸ್ತ್ರಗಳಲ್ಲಿಯೂ ಸಹ, ಇದರ ಅನೇಕ ಉದಾಹರಣೆಗಳು ಸಿಗುತ್ತವೆ. ಮಹರ್ಷಿ ವಶಿಷ್ಠ, ಯಾಜ್ಞವಲ್ಕ್ಯ, ವ್ಯಾಸ, ಜನಕ, ತುಕಾರಾಮ, ಕರ್ನಾಟಕದ ಮಹಾತ್ಮ ಬಸವೇಶ್ವರ ಮುಂತಾದ ಮಹಾಪುರುಷರು ಗ್ರಹಸ್ಥಾಶ್ರಮದಲ್ಲಿದ್ದರೂ ಸಹ ಜ್ಞಾನದ ಪ್ರಾಪ್ತಿಯಾಗಿತ್ತು. ಆದರೆ ಮಮತಾ ಮತ್ತು ರಾಗ-ದ್ವೇಷದಿಂದ ಕೂಡಿದ ಸಂಸಾರಿಕ ಪದಾರ್ಥಗಳ ಚಿಂತನೆಯನ್ನು ಮಾಡುವ ಯಾವ ಅಂತಃಕರಣದ ವೃತ್ತಿ ಇದೆಯೋ ಅದಕ್ಕೆ 'ಸಂಕಲ್ಪ' ವೆಂದು ಕರೆಯುತ್ತಾರೆ. ಅಂತಹ ಸಂಕಲ್ಪಗಳಿಂದ ಪೂರ್ಣ ರೂಪ ತ್ಯಾಗವಾಗದೇ ಹೊರತು ಚಿತ್ತವು ಪರಮಾತ್ಮನಲ್ಲಿ ಪೂರ್ಣ ಸಂಯೋಗವನ್ನು ಹೊಂದುವುದಿಲ್ಲ. ಸಂಕಲ್ಪಗಳ ತ್ಯಾಗ ಎಲ್ಲರಿಗೂ ಅವಶ್ಯಕವಾಗಿದೆ.

ಒಬ್ಬ ಸಾಧಕನು ಏಕಾಂತದಲ್ಲಿ ಕುಳಿತು ಆಸನ-ಪ್ರಾಣಾಯಾಮಗಳ ಮೂಲಕ ಪರಮಾತ್ಮನ ಧ್ಯಾನದ ಅಭ್ಯಾಸವನ್ನು ಮಾಡುತ್ತಿರಬಹುದು, ಮತ್ತೊಬ್ಬ ನಿಷ್ಕಾಮಭಾವದಿಂದ ಸದಾ-ಸರ್ವದಾ ಕೇವಲ ಭಗವಂತನಿಗೋಸ್ಕರ ಭಗವದಾಜ್ಞಾನುಸಾರ ಕರ್ಮವನ್ನು ಮಾಡುತ್ತಿರಬಹುದು. ಮೂರನೆಯವ ಸಮಯ-ಸಮಯದಲ್ಲಿ ಧ್ಯಾನದ ಅಭ್ಯಾಸವನ್ನೂ ಮಾಡಬಹುದು ಮತ್ತು ನಿಷ್ಕಾಮಭಾವದಿಂದ ಕರ್ಮವನ್ನೂ ಮಾಡುತ್ತಿರಬಹುದು, ಇವರಲ್ಲಿ ಯಾವುದೇ ಸಾಧಕನಿಗೆ, ಎಲ್ಲಿಯ ತನಕ ಅವರು ಸಂಕಲ್ಪಗಳನ್ನು ಸರ್ವಥಾ ತ್ಯಾಗವನ್ನು ಮಾಡುವುದಿಲ್ಲವೋ ಅಲ್ಲಿಯ ತನಕ ಜ್ಞಾನಿಯೆಂದು ಕರೆಯಲಾಗುವುದಿಲ್ಲ.

ಈ ಜ್ಞಾನಮಾರ್ಗದ ಬಗ್ಗೆ ವಿಚಾರ ಮಾಡಿದಾಗ ಇದು ಎಷ್ಟು ವಿಚಿತ್ರವಾಗಿದೆ ಎಂದೆನಿಸುತ್ತದೆ. ಒಂದು ಪಕ್ಷ ಸಾಧಕನು ಜ್ಞಾನಮಾರ್ಗವನ್ನು ಬಿಟ್ಟು ಅನ್ಯಮಾರ್ಗಗಳಿಂದ ಪಾರಾಗುವ ಆಕಾಂಕ್ಷೆಯನ್ನಿಟ್ಟುಕೊಂಡಿದ್ದರೆ, ಅವನು ಮಧ್ಯೆಯಲ್ಲಿಯೇ ಮುಳುಗಿ ಹೋಗುವ ಶಕ್ಯತೆಯಿದೆ. ಯಾರು ಭೌತಿಕತೆಯ ತ್ಯಾಗವನ್ನು ಮಾಡಿ ಜ್ಞಾನಮಾರ್ಗಕ್ಕೆ ಬರುತ್ತಾರೋ ಅವರು ಸುಗಮವಾಗಿ ಪಾರಾಗುತ್ತಾರೆ. ಯಾರು ಸುಗಮ ಮಾರ್ಗವನ್ನು ಬಿಟ್ಟು ಕಠಿಣವಾದ ಮಾರ್ಗದಿಂದ ಮುಂದುವರೆಯುತ್ತಾರೋ ಅವರು ಪಾರಾಗುತ್ತಾರೆ. ಅರ್ಥಾತ್ ಲಕ್ಷ್ಯವನ್ನು ತಲುಪುತ್ತಾರೆ. ಹೇಗೆ ಒಬ್ಬ ಪಥಿಕನು ಗ್ರಾಮವನ್ನು ಸೇರಲು ಸರಳವಾದ ಮಾರ್ಗವನ್ನು ಆರಿಸಿಕೊಂಡು ಹೊರಟರೆ ಅದು ಮಧ್ಯದಲ್ಲಿಯೇ ಬಿಟ್ಟು ಹೋಗುತ್ತದೆ. ಅದೇ ರೀತಿಯಾಗಿ ಸಾಧನೆಯ ಮಾರ್ಗಗಳು ನಿಷ್ಠಾ ಮತ್ತು ಕಠೋರ ಸಾಧನೆಗಳ ಮೂಲಕ ಲಕ್ಷ್ಯದ ಕಡೆಗೆ ಮುಟ್ಟುತ್ತವೆ. ಆದರೆ ಸುಗಮವಾದ ಮಾರ್ಗವನ್ನು ಹುಡುಕುವವವರಿಗೆ ಲೌಕಿಕ ಆಕರ್ಷಣೆಯು ಮಧ್ಯೆದಲ್ಲಿಯೇ ಲಕ್ಷ್ಯಭ್ರಷ್ಟನನ್ನಾಗಿ ಮಾಡುತ್ತವೆ. ಈ ರೀತಿ ಲೌಕಿಕ ಜೀವನವಿದೆ. ಎಲ್ಲರೂ ಮಾಯಾರೂಪಿ ಹಗ್ಗದಿಂದ ಕಟ್ಟಲ್ಪಟ್ಟಿದ್ದಾರೆ. ಆದರೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಲವರು ಬಂಧಕರಾಗುತ್ತಾರೆ ಮತ್ತು ಕೆಲವರು ಮುಕ್ತರಾಗುತ್ತಾರೆ. ಲೌಕಿಕ ಜೀವನದಲ್ಲಿ ಯಾರು ಹೊರಗಡೆ ಇರುತ್ತಾರೋ ಅವರು ಮಳೆಯಲ್ಲಿ ನೆನೆಯುತ್ತಾರೆ ಮತ್ತು ಮನೆಯಲ್ಲಿರುವವರು ನೆನೆಯುವುದರಿಂದ ತಪ್ಪಿಸಿಕೊಳ್ಳುತ್ತಾರೆ. ಆದರೆ ಪ್ರೇಮ ಮತ್ತು ಭಕ್ತಿಯಲ್ಲಿ ಇದಕ್ಕೆ ವಿರುದ್ಧವಾಗಿ ನಡೆಯುತ್ತದೆ. ಭಗವತ್ಪ್ರೇಮದಲ್ಲಿ ಲೀನವಾಗಿರುವವರು ಮಂದಿರದಲ್ಲಿದ್ದರೂ ನೆನೆಯುತ್ತಾರೆ ಮತ್ತು ಹೊರಗಡೆ ಇದ್ದು ಒಣಗಿರುತ್ತಾರೆ. ಪ್ರೇಮ ಮತ್ತು ಭಕ್ತಿಯ ಬಾಣವು ತಗುಲಿದ ಮೇಲೆಯೂ ಸಹ ಅವರು ಸುಖಿಯಾಗಿರುತ್ತಾರೆ. ಅರ್ಥಾತ್ ಯಾರು ಗಾಯಗೊಂಡಿದ್ದಾರೋ ಅವರು ಸುಖಿಯಾಗಿದ್ದಾರೆ. ಯಾರಿಗೆ ಬಾಣವು ನಾಟಿಲ್ಲವೋ ಅವರು ದುಃಖಿಯಾಗಿರುತ್ತಾರೆ. ಯಾರ ಹತ್ತಿರ ಜ್ಞಾನ-ಚಕ್ಷುವಿದೆಯೋ ಅವರಿಗೆ ಚರ್ಮಚಕ್ಷುವಿಲ್ಲದಿದ್ದರೂ ಸಹ ಎಲ್ಲವನ್ನೂ ನೋಡಬಲ್ಲರು. ಅರ್ಥಾತ್ ಎಲ್ಲಾ ತಿಳುವಳಿಕೆಯನ್ನು ಹೊಂದಿರುತ್ತಾರೆ. ಆದರೆ ಯಾರಿಗೆ ಜ್ಞಾನರೂಪಿ ನೇತ್ರಗಳಿಲ್ಲವೋ ಅವರು ಕಣ್ಣಿದ್ದು ಕುರುಡ ಸಮಾನರು.

ಯಾವಾಗ ಗುರುವು ಶಿಷ್ಯನ ಶರೀರರೂಪಿ ದೀಪದಲ್ಲಿ ಈಶ್ವರನ ಪ್ರೇಮ ರೂಪಿ ಎಣ್ಣೆಯಿಂದ ತುಂಬಿಸಿ ಅದರಲ್ಲಿ ಜ್ಞಾನ ರೂಪಿಯಾದ ಎಂದಿಗೂ ಸಮಾಪ್ತಿಯನ್ನು ಹೊಂದದ ಬತ್ತಿಯನ್ನು ಹಾಕಿದ್ದಾನೋ ಆಗ ಜ್ಯೋತಿರ್ಮಯ ಪ್ರಕಾಶದಿಂದ ಸಂಸಾರಿಕ ವಾಸನೆ ಮುಂತಾದ ವಿಷಯಗಳು ನಷ್ಟವಾಗುತ್ತವೆ ಮತ್ತು ಜೀವಾತ್ಮನಿಗೆ ಆವಾಗಮನ ಚಕ್ರದಿಂದ ಮುಕ್ತಿಯು ಸಿಕ್ಕುತ್ತದೆ. ಅರ್ಥಾತ್ ಸಂಸಾರಿಕ ಕಾರ್ಯ ವ್ಯಾಪಾರವು ಸಮಾಪ್ತಿಯಾಗುವುದರಿಂದ ಸಾಂಸಾರಿಕ ಮಾಯಾಚಕ್ರದಲ್ಲಿ ಪುನಃ ಮರಳುವ ಹಾಗಿಲ್ಲ.

ಜ್ಞಾನ ಪ್ರಾಪ್ತಿಯಿಂದ ಜಾತಿ, ಮತ ಮುಂತಾದ ಭೇದಗಳು ಸಂಪೂರ್ಣವಾಗಿ ನಶಿಸಿ ಹೋಗುತ್ತವೆ. ಯಾರು ಒಳ್ಳೆಯವರು, ಯಾರು ಕೆಟ್ಟವರು ಎಂಬ ಸಮಸ್ತ ಸಾಂಸಾರಿಕ ಭೇದ ಭಾವವನ್ನು ಬಿಟ್ಟು ಪರಮಾತ್ಮನಲ್ಲಿ ಲೀನವಾಗುತ್ತಾನೆ. ಆದರೆ, ಸಾಧಕನು ಮೋಹ, ಮಾಯದ ಕಡೆಗೆ ಆಕರ್ಷಿತನಾದರೆ ಆಗ ಅವನ ದಶೆ ಯಾವ ರೀತಿಯಾಗುತ್ತದೆಯೆಂದರೆ, ಹೇಗೆ ಒಬ್ಬ ಬಾಲಕನು ಮಿಠಾಯಿಯಿಂದ ಆಕರ್ಷಿತನಾಗಿ ತನ್ನ ಮಾರ್ಗವನ್ನು ಮರೆಯುತ್ತಾನೋ ಹಾಗೆಯೇ ಸಾಧಕ ಮೋಹ ಮಾಯೆಯಲ್ಲಿ ಸಿಲುಕಿಕೊಂಡು ತನ್ನ ಲಕ್ಷ್ಯದಿಂದ ಭ್ರಷ್ಟನಾಗುತ್ತಾನೆ. ತನ್ನನ್ನು ತಾನು ಮರೆತು ಭಗವಂತನಿಂದ ದೂರನಾಗಿ ಸಾಂಸಾರಿಕ ಸುಖಗಳಿಂದ ಲಿಪ್ತನಾಗಿ ಅದರಲ್ಲಿಯೇ ತಲ್ಲೀನನಾಗುತ್ತಾನೆ. ವಾಸನಾರೂಪಿ ಕರಪಾತ್ರೆಯನ್ನು ತೆಗೆದುಕೊಂಡು ಸಾಧನೆಯನ್ನು ಮಾಡುವ ಸಾಧಕನು ಯಾವಾಗ ವಾಸನೆಗಳ ಮೇಲೆ ವಿಜಯವನ್ನು ಹೊಂದುತ್ತಾನೋ ಆಗ ಅವನ ವಾಸನಾ ರೂಪಿ ಕರಪಾತ್ರೆಯು ಸುಟ್ಟು ಹೋಗುತ್ತದೆ. ಯಾರು ನಿಜವಾದ ಸಾಧಕರಿದ್ದಾರೋ ಅವರು ಮಾತ್ರ ವಾಸನೆಗಳಿಂದ ಮುಕ್ತರಾಗಿ ಆ ಪರಮಲಕ್ಷ್ಯದ ಪ್ರಾಪ್ತಿಯನ್ನು ಹೊಂದುತ್ತಾರೆ. ಯಾಕೆಂದರೆ ಮನಸ್ಸಿಗೆ ಅನ್ಯತ್ರ ಎಲ್ಲಿಯೂ ಸುಖಶಾಂತಿಗಳು ದೊರಕುವುದಿಲ್ಲ. ಹೇಗೆ ಹಡಗಿನ ಮೇಲೆ ಕುಳಿತ ಪಕ್ಷಿಯು ಅನ್ಯತ್ರ ಆಶ್ರಯಕ್ಕೋಸ್ಕರ ಹಡಗಿನಿಂದ ಹಾರುವುದೇನೋ ನಿಜ, ಆದರೆ ಎಲ್ಲೆಡೆಯಲ್ಲೂ ಜಲರಾಶಿಯನ್ನು ಕಂಡು ಪುನಃ ಹಡಗಿನ ಮೇಲೆ ಬಂದು ಹೇಗೆ ಕುಳಿತುಕೊಳ್ಳುತ್ತದೆಯೋ, ಹಾಗೆಯೆ ಸಂಸಾರದ ಭವಸಾಗರದಲ್ಲಿ ಈ ಮನಸ್ಸಿಗೆ ಎಲ್ಲಿಯೂ ಸ್ಥಾನವಿಲ್ಲ. ಅದು ವಿಷಯಗಳ ಕಡೆಗೆ ಹೋಗಲು ಇಷ್ಟಪಡುತ್ತದೆ. ಆದರೆ ಅದಕ್ಕೆ ಪುನಃ ತಿರುಗಿ ಭಗವಂತನ ಹತ್ತಿರ ಬರಲೇಬೇಕಾಗುತ್ತದೆ. ಮೂರ್ಖ ವ್ಯಕ್ತಿ ತನ್ನ ಬಾಯಾರಿಕೆಯನ್ನು ನಿವಾರಿಸಿಕೊಳ್ಳಲು ಪವಿತ್ರ ಗಂಗಾಜಲವನ್ನು ಬಿಟ್ಟು ಬಾವಿಯನ್ನು ಅಗೆಯಲು ಪ್ರಯತ್ನಿಸುತ್ತಾನೆ. ಯಾವ ಭ್ರಮರವು ಕಮಲದ ರಸಪಾನವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿರುವುದೋ ಅದು ಹಾಗಲಕಾಯಿಯ ರಸವನ್ನು ಏಕೆ ಕುಡಿಯುವುದು? ಎಲ್ಲಾ ಕಾಮನೆಗಳನ್ನು ಪೂರ್ಣಗೊಳಿಸುವ ಕಾಮಧೇನುವನ್ನು ಬಿಟ್ಟು ಯಾರಾದರೂ ಕುರಿಯ ಹಾಲನ್ನು ಹಿಂಡುವುರೇಕೆ? ಅದೇ ರೀತಿ ಸಾಧಕನ ಮನಸ್ಸು ಪರಮ ಪ್ರೇಮಾಸ್ಪದ ಪರಮೇಶ್ವರ ರೂಪಿ ಕಾಮಧೇನುವನ್ನು ಬಿಟ್ಟು ಅನ್ಯತ್ರ ಸುಖ-ಶಾಂತಿಗೋಸ್ಕರ ಯತ್ನ ಮಾಡುವುದಿಲ್ಲ.

ಎಲ್ಲಿಯವರೆಗೆ ಮನಸ್ಸು ಮತ್ತು ವಾಸನೆಯ ನಾಶವಾಗುವುದಿಲ್ಲವೋ ಅಲ್ಲಿಯವರೆಗೆ ಧ್ಯಾನದಲ್ಲಿ ಸ್ಥಿರತೆಯು ಬರುವುದಿಲ್ಲ, ವಾಸನೆಗಳ ಪ್ರಭಾವದಿಂದ ಹಲವು ಬಾರಿ ಜ್ಞಾನವು ಬೇರೆಡೆಗೆ ಹರಿದು ಹೋಗುತ್ತದೆ. ಯಾರು ವೈರಾಗ್ಯದ ಹೊರತು ಗೃಹತ್ಯಾಗವನ್ನು ಮಾಡುತ್ತಾರೋ ಅವರು ವನದಲ್ಲಿಯೂ ಸಹ ಹೊಸ ಸಂಸಾರವನ್ನು ಹೂಡುತ್ತಾರೆ. ಸಂಸಾರವನ್ನು ಬಿಟ್ಟು ಎಲ್ಲಿ ಹೋಗುವುದು. ಎಲ್ಲಿ ಹೋದರೂ ಅಲ್ಲಿ ಸಂಸಾರವು ಉಪಸ್ಥಿತವಾಗುತ್ತದೆ. ಈ ಕಾರಣದಿಂದಲೇ ಮಹಾಪುರುಷರು ಹೇಳಿರುವುದೇನೆಂದರೆ, ಸಂಸಾರವನ್ನು ತನ್ನ ಮನದಿಂದ ಮೆಲ್ಲಮೆಲ್ಲಗೆ ದೂರ ಮಾಡು. ಸಂಸಾರವನ್ನು ಎಂದೂ ಮನಸ್ಸಿನಲ್ಲಿಟ್ಟುಕೊಳ್ಳಬೇಡ. ಮನಸ್ಸಿಗೆ ಯಾವುದೇ ವಿಷಯವನ್ನು ಕೊಡದೇ ಇದ್ದರೆ ಅದು ಆತ್ಮಸ್ವರೂಪಕ್ಕೆ ಹೋಗಿ ತಲುಪುತ್ತದೆ ಮತ್ತು ಅಂತಹ ಲಯವೇ ಮುಕ್ತಿಯಾಗಿದೆ.

ವಿಷಯಗಳ ಚಿಂತನೆಯಿಂದ ಮನಸ್ಸು ಜೀವಂತವಾಗಿರುತ್ತದೆ ಮತ್ತು ಅವುಗಳ ತ್ಯಾಗದಿಂದ ಮನಸ್ಸು ಸತ್ತುಹೋಗುತ್ತದೆ. ಸಾಂಸಾರಿಕ ವಿಷಯಗಳಿಂದ ದೂರವಾದೊಡನೆ ಮನಸ್ಸು ಶಾಂತಗೊಳ್ಳುತ್ತದೆ. ದೀಪದಲ್ಲಿ ಯಾವಾಗ ಎಣ್ಣೆ ಮುಗಿದುಹೋಗುತ್ತದೋ ಆಗ ಅದು ಆರಿ ಹೋಗುತ್ತದೆ. ಅದೇ ಪ್ರಕಾರ ಮನಸ್ಸಿನಿಂದ ಸಾಂಸಾರಿಕ ವಿಷಯಗಳ ತ್ಯಾಗದಿಂದಾಗಿ ಅದು ಶಾಂತವಾಗುತ್ತದೆ. ಮನಸ್ಸಿಗೆ ಯಾವಾಗಲೂ ಯಾವುದಾದರೂ ಆಧಾರದ ಅವಶ್ಯಕತೆಯಿರುತ್ತದೆ.

ಮೃತ್ಯುವಿನ ನಂತರವೂ ಸಹ ಮನಸ್ಸು ಜೊತೆಯಲ್ಲಿ ಬರುತ್ತದೆ. ಪತಿ-ಪತ್ನಿ, ಮಾತಾ-ಪಿತಾ, ಪುತ್ರ-ಪರಿವಾರ ಮೃತ್ಯು ನಂತರ ಇಲ್ಲಿಯೇ ಉಳಿಯುತ್ತಾರೆ. ಆದರೆ ಮನಸ್ಸು ಮಾತ್ರ ಬರುತ್ತದೆ. ಒಂದು ಪಕ್ಷ ಯಾವುದಾದರೂ ಸಾಂಸಾರಿಕ ವಸ್ತು ಹಾಳಾಗಿ ಹೋಗಿದ್ದರೆ, ಕಳೆದುಹೋಗಿದ್ದರೆ ಮತ್ತೆ ಸಿಗಬಲ್ಲದು. ಮನಸ್ಸು ಕೆಟ್ಟುಹೋಗಿದ್ದರೆ ಬೇರೆ ಮನಸ್ಸು ಎಲ್ಲಿಯೂ ದೊರಕುವುದಿಲ್ಲ. ಜೀವಾತ್ಮಾ ಶರೀರವನ್ನು ಬಿಡುತ್ತಾನೆ. ಆದರೆ ಮನಸ್ಸನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಾನೆ. ಗೀತೆಯಲ್ಲಿ ಹೇಳಿದಂತೆ -

ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ

- ಗೀತಾ ೧೫

"ಈ ದೇಹದಲ್ಲಿ ಸನಾತನ ಜೀವಾತ್ಮ ನನ್ನ ಅಂಶವಾಗಿದ್ದಾನೆ ಮತ್ತು ಅವನೇ ಈ ಪ್ರಕೃತಿಯಲ್ಲಿ ಸ್ಥಿತವಾಗಿರುವ ಮನ ಮತ್ತು ಪಂಚೇಂದ್ರಿಯಗಳನ್ನು ಆಕರ್ಷಿಸುತ್ತಾನೆ. ಮನದ ಆಶ್ರಯ ಪಡೆದು ಜೀವಾತ್ಮನು ವಿಷಯಗಳ ಉಪಭೋಗವನ್ನು ಪಡೆಯುತ್ತಾನೆ. ಮನುಷ್ಯನು ಸತ್ತ ಮೇಲೆಯೂ ಸಹ ಮನಸ್ಸಂತೂ ಜೊತೆಯಲ್ಲಿಯೇ ಇರುತ್ತದೆ".

ಶರೀರವಂತೂ ಸತ್ತು ಹೋಗುತ್ತದೆ ಆದರೆ ಮನಸ್ಸು ಸತ್ತು ಹೋಗುವುದಿಲ್ಲ. ಮನಸ್ಸು ಸಾಯುವುದು ಮುಕ್ತಿ ದೊರೆತಾಗ ಮಾತ್ರ. ಶರೀರವು ಪದೇ ಪದೇ ಹುಟ್ಟುತ್ತದೆ ಮತ್ತು ಸಾಯುತ್ತದೆ. ಆತ್ಮವಂತು ಹುಟ್ಟುವುದಿಲ್ಲ ಸಾಯುವುದಿಲ್ಲ, ಅವನು ಕರ್ತನೂ ಅಲ್ಲ ಭೋಕ್ತನೂ ಅಲ್ಲ. ಆದರೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಜ್ಞಾನ ಜನಿತವಾದ ಅನಾದಿ ಸಂಬಂಧವಿದೆ. ಆದುದರಿಂದ ಅವನು ಕರ್ತಾ-ಭೋಕ್ತಾನಾಗಿದ್ದಾನೆ. ಶ್ರುತಿಯಲ್ಲಿ ಹೇಳುವುದೇನೆಂದರೆ -

"ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ"

- ಕಠೋಪನಿಷತ್ತು ೧-೩-೪

"ಮನ, ಬುದ್ಧಿ ಮತ್ತು ಇಂದ್ರಿಯಗಳಿಂದ ಯುಕ್ತವಾದ ಆತ್ಮನನ್ನೇ ಭೋಕ್ತಾ ಎಂದು ಕರೆಯುತ್ತಾರೆ"

ವಿಷಯಗಳ ಕಡೆಗೆ ಓಡುತ್ತಿರುವ ಮನಸ್ಸು ಸಾಯುವುದಿಲ್ಲ. ಯಾವಾಗ ಅದು ಪರಮಾತ್ಮನ ಜೊತೆಯಲ್ಲಿ ಏಕರೂಪವಾಗುತ್ತದೋ ಆಗ ಅದು ಸಾಯುತ್ತದೆ. ಮನಸ್ಸು, ಒಂದು ವೇಳೆ ಈಶ್ವರನ ಚಿಂತನೆ, ಧ್ಯಾನ, ಮನನವನ್ನು ಮಾಡಿದರೆ ಈಶ್ವರನೊಂದಿಗೆ ಸಮರಸವಾಗುತ್ತದೆ. ಸಂಸಾರದ ವಿಷಯ ಚಿಂತನೆಯನ್ನು ಮಾಡುವುದರಿಂದ ಮನಸ್ಸು ಕಲುಷಿತಗೊಳ್ಳುತ್ತದೆ. ಅದೇ ಮನಸ್ಸು ಸ್ವ-ಸ್ವರೂಪ ಚಿಂತನೆ ಮಾಡುವುದರಿಂದ ಅದು ಸುಸಂಸ್ಕಾರಯುಕ್ತವಾಗುತ್ತದೆ.

ಶ್ರೀ ರಾಮದಾಸಸ್ವಾಮಿಗಳು ಹೇಳುವುದೇನೆಂದರೆ -

ಮನಾ ಸಜ್ಜನಾ ಭಕ್ತಿ ಪಂಥೇಚಿ ಜಾವೇ ।
ತರೀ ಶ್ರೀ ಹರೀ ಪಾವಿಜೇತೋ ಸ್ವಭಾವೆ ॥
ಜನೀನಿಂದ್ಯತೆ ಸರ್ವಸೋಡೋನಿ ಧ್ಯಾವೆ ।
ಜನೀ ವಂದ್ಯತೆ ಸರ್ವಭಾವೇ ಕರಾವೆ ॥

"ಹೇ ಮನಸ್ಸೇ! ಯಾವ ಭಕ್ತಿಮಾರ್ಗದಲ್ಲಿ ಸಜ್ಜನರು ಹೋಗುತ್ತಾರೋ ಅದನ್ನೇ ನೀನು ಅನುಸರಿಸು, ಆಗ ನಿನಗೆ ಸಹಜವಾಗಿ ಶ್ರೀಹರಿಯು ಪ್ರಾಪ್ತನಾಗುತ್ತಾನೆ. ಸಂಸಾರದ ನಿಂದನೀಯ ಕರ್ಮಗಳನ್ನು ತ್ಯಾಗ ಮಾಡು. ಸಂಸಾರದ ವಂದನೀಯ ಕಾರ್ಯಗಳನ್ನು ಏಕಾಗ್ರತೆಯಿಂದ ಮಾಡು".

ಹೇ ಮನಸ್ಸೇ! ನೀನು ಪಾಪವನ್ನು ಏಕೆ ಮಾಡುತ್ತೀಯಾ, ನೀನು ಸಜ್ಜನನಾಗಿದ್ದರೂ ಸಹ ದುರ್ಜನರಂತೆ ಏಕೆ ವರ್ತಿಸುತ್ತೀಯಾ. ಮಿಠಾಯಿಯಲ್ಲಿ ವಿಷವಿದೆ ಎಂದು ಯಾರಾದರೂ ಹೇಳಿದರೆ ಅದನ್ನು ನೀನು ತಿನ್ನುತ್ತೀಯೇನು? ಈ ರೀತಿಯಾಗಿ ಮನಸ್ಸಿಗೆ ತಿಳುವಳಿಕೆಯನ್ನು ಹೇಳುತ್ತಾ ಎಲ್ಲಾ ವಿಷಯಗಳು ವಿಷಮಯವಾಗಿವೆ, ಅವುಗಳನ್ನು ಎಂದಿಗೂ ಉಪಭೋಗಿಸಬೇಡ ಎಂಬುದನ್ನು ಮನಸ್ಸಿನ ಮೇಲೆ ಬಿಂಬಿಸಬೇಕು.

ಸಂಸಾರದ ವಿಷಯಗಳನ್ನು ಯಾವಾಗಲೂ ಶಂಕಾಸ್ಪದ ದೃಷ್ಟಿಯಿಂದ ನೋಡಬೇಕು. ಜೀವಾತ್ಮನು ಹೇಳುವುದೇನೆಂದರೆ, ನನ್ನ ಮನಸ್ಸು ಕೆಟ್ಟು ಹೋಯಿತು. ನನ್ನ ಮನಸ್ಸು ಸಿಕ್ಕಿ ಹಾಕಿಕೊಂಡಿತು. ಯಾರೂ ಸಹ ನಾನು ಕೆಟ್ಟು ಹೋದೆ. ನನ್ನ ಆತ್ಮಭ್ರಷ್ಟವಾಯಿತು ಎಂದು ಹೇಳುವುದಿಲ್ಲ.

ಆತ್ಮ ಮನಸ್ಸಿನ ದೃಷ್ಟವಾಗಿದೆ. ಸಾಕ್ಷಿಯಾಗಿದೆ. ಮನಸ್ಸಿಗೆ ಯಾವುದೇ ಸ್ವತಂತ್ರವಾದ ಸತ್ತಾ ಇಲ್ಲ. ಅದು ವಿಷಯದಲ್ಲಿ ಸಿಕ್ಕಿಕೊಂಡು ಸುಖಿ-ದುಃಖಿಯಾಗುತ್ತದೆ. ಆದರೆ ಅದು ಆತ್ಮನ ಮೇಲೆ ಆರೋಪಿತವಾಗುತ್ತದೆ.

ತುಲಸೀದಾಸರ ಒಂದು ಪ್ರಸಿದ್ಧ ಉದಾಹರಣೆ ಇದೆ. ಮಂಗಗಳನ್ನು ಹಿಡಿಯಲು ಒಬ್ಬ ಶಿಕಾರಿಯು ಕಾಡಿನಲ್ಲಿ ಒಂದು ಯುಕ್ತಿಯನ್ನು ಮಾಡಿದ. ಕಾಡಿನಲ್ಲಿ ಎಲ್ಲಿ ಮರದ ಮೇಲೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂಗವಿದೆಯೋ ಆ ಮರದ ಕೆಳಗೆ ಒಂದು ಸಣ್ಣ ಕಂಠದ ಕೊಡದಲ್ಲಿ ಕಡಲೆಯನ್ನು ತುಂಬಿಡುತ್ತಿದ್ದ. ಮಂಗಗಳು ತಮ್ಮ ಕೈಗಳಿಂದ ಕಡಲೆಯನ್ನು ಮುಷ್ಠಿಯಲ್ಲಿ ಹಿಡಿದುಕೊಂಡು ಕೈಗಳನ್ನು ಹೊರತೆಗೆಯಲು ಪ್ರಯತ್ನಿಸುತ್ತಿದ್ದವು. ಆದರೆ ಕೈ ತುಂಬಾ ಕಡಲೆ ಇರುವುದರಿಂದ ಕೊಡದ ಸಣ್ಣ ಕಂಠದಿಂದ ಕೈಗಳು ಹೊರಕ್ಕೆ ಬರುತ್ತಿರಲಿಲ್ಲ. ಕೊಡದ ಒಳಗಡೆ ಯಾವುದೋ ಭೂತವು ನಮ್ಮ ಕೈಯನ್ನು ಹಿಡಿದುಕೊಂಡಿದೆ ಎಂದು ತಿಳಿಯುತ್ತಿದ್ದವು. ವಾಸ್ತವದಲ್ಲಿ ಯಾವ ಭೂತವೂ ಅವುಗಳ ಕೈಯನ್ನು ಹಿಡಿದಿರಲಿಲ್ಲ. ಅವು ಮುಷ್ಠಿಯನ್ನು ತೆರೆದಿದ್ದರೆ ಕೈಗಳು ಹೊರಕ್ಕೆ ಬರುತ್ತಿದ್ದವು.

ಸಂಸಾರವು ಸಹ ಇದೇ ತರಹದ ಕೊಡವಾಗಿದೆ. ಸಾಂಸಾರಿಕ ವಿಷಯಗಳು ಕಡಲೆ ಮತ್ತು ಮನಸ್ಸು ಮಂಗವಿದ್ದಂತೆ. ಮನಸ್ಸು ಅಹಂಕಾರದ ವಶನಾಗಿ ವಿಷಯಗಳನ್ನು ತನ್ನ ಮುಷ್ಠಿಯಲ್ಲಿ ಹಿಡಿದುಕೊಂಡಿರುತ್ತದೆ. ಆದರೂ ತಾನು ತಿಳಿಯುವುದೇನೆಂದರೆ ಬೇರೆ ಯಾರೋ ನನ್ನನ್ನು ಬಂಧಿಸಿದ್ದಾರೆಂದು. ವಿಷಯಗಳೆಂಬ ಮಮತೆಯನ್ನು ಅಹಂಕಾರದ ಮುಷ್ಠಿಯಿಂದ ಮನಸ್ಸು ಹಿಡಿದುಕೊಂಡಿದೆ ಮತ್ತು ತಾನೇ ಅದನ್ನು ಬಿಡುತ್ತಿಲ್ಲ. ಜೀವದ ಬಂಧನವೂ ಸಹ ಮಂಗನ ತರಹವೇ ಇದೆ. ಈ ಎರಡರ ಬಂಧನವೂ ಸಹ ಅಜ್ಞಾನ ಮೂಲವಾಗಿದೆ. ಅಜ್ಞಾನದ ನಾಶವಾದ ಮೇಲೆ ಬಂಧನವು ಉಳಿಯುವುದಿಲ್ಲ. ಅಜ್ಞಾನದ ಉಪಾಧಿಯು ದೂರವಾಯಿತೆಂದರೆ ಆತ್ಮ-ಪರಮಾತ್ಮ ಒಂದಾಗುತ್ತವೆ. ಮಾಯೆಯು ಸಾಂಸಾರಿಕ ಕೊಡದಲ್ಲಿ ವಿಷಯಗಳ ಕಡಲೆಯನ್ನು ತುಂಬಿಟ್ಟಿದೆ. ಅರಿವು-ತಿಳುವಳಿಕೆಯಿಂದ ಈ ವಿಷಯರೂಪಿ ಕಡಲೆಯನ್ನು ಬಿಟ್ಟು ಬಿಟ್ಟರೆ ಮುಕ್ತಿಯು ಪ್ರಾಪ್ತಿಯಾದಂತೆಯೆ ಸರಿ.

ಅನಾದಿಕಾಲದಿಂದ ವಿಷಯಗಳ ಚಿಂತನೆಯನ್ನು ಮಾಡುವುದು ಮನಸ್ಸಿಗೆ ಅಭ್ಯಾಸವಾಗಿ ಹೋಗಿದೆ. ಆದುದರಿಂದ ವಾಸನೆಗಳ ವಿಷಯ ಬೇರೆ ಬೇರೆಯಾಗಿರಬಹುದು ಆದರೆ ವಾಸನೆ ಮನಸ್ಸಿನಲ್ಲಿ ಉಳಿದೇ ಇರುತ್ತದೆ. ಭಾಗವತದಲ್ಲಿ ಜಡಭರತನ ಕಥೆಯೊಂದು ಬರುತ್ತದೆ.

ಸೊಂಟದವರೆಗಿನ ನೀರಿನಲ್ಲಿ ಜಡಭರತನು ನಿಂತಿದ್ದನು. ಗ್ರೀಷ್ಮ ಋತುವಾಗಿತ್ತು. ಒಂದು ಗರ್ಭವತಿಯಾದ ಜಿಂಕೆಯು ಬೆಳಗಿನ ಹೊತ್ತಿನಲ್ಲಿ ನೀರನ್ನು ಕುಡಿಯಲು ಬಂದಿತು. ಅಷ್ಟರಲ್ಲಿ ಎಲ್ಲಿಂದಲೋ ಸಿಂಹವು ಘರ್ಜಿಸಿತು. ಜಿಂಕೆಯು ಭಯಭೀತಗೊಂಡಿತು. ಈ ಗಂಡಕೀ ನದಿಯಿಂದ ಪಾರಾಗಿ ಹೋಗೋಣವೆಂದು ಯೋಚಿಸಿತು. ಅದು ನೀರಿನಲ್ಲಿ ತಟ್ಟನೆ ಜಿಗಿಯಿತು. ಪ್ರಸವ ಕಾಲ ಹತ್ತಿರ ಬಂದಿತ್ತಾದ್ದರಿಂದ ಜಿಂಕೆಮರಿಯ ಜನ್ಮವಾಯಿತು ಮತ್ತು ನದಿಯ ನೀರಿನಲ್ಲಿ ಬಿದ್ದು ಹೋಯಿತು. ಇನ್ನೊಂದು ದಡದಲ್ಲಿ ಆ ಹೆಣ್ಣು ಜಿಂಕೆಯು ಮೃತ್ಯುವನ್ನಪ್ಪಿತು.

ಜಡಭರತನು ಆ ಜಿಂಕೆಮರಿಯು ನದಿಯಲ್ಲಿ ಬಿದ್ದದ್ದನ್ನು ಕಂಡಿದ್ದನು. ಅವನು ಆ ಜಿಂಕೆಮರಿಯಲ್ಲಿ ಭಗವಂತನ ದರ್ಶನ ಮಾಡಿದನು ಅವನು ಯೋಚನೆಗೀಡಾದನು, ಇದರ ತಾಯಿಯಂತೂ ಸತ್ತುಹೋಯಿತು, ಜಗತ್ತಿನಲ್ಲಿ ಇದಕ್ಕೆ ಯಾರೂ ದಿಕ್ಕಿಲ್ಲ, ಈಗ ಇದರ ಲಾಲನೆ ಪೋಷಣೆ ರಕ್ಷಣೆಯನ್ನು ಯಾರು ಮಾಡುತ್ತಾರೆ? ಅವನು ದಯಾಪೂರಿತನಾಗಿ ಆ ಮರಿಯನ್ನು ತನ್ನ ಆಶ್ರಮಕ್ಕೆ ತಂದನು. ಅವನು ಯೋಚಿಸಹತ್ತಿದನು. ಈ ಮರಿಯು ನನ್ನನ್ನು ಬಿಟ್ಟರೆ ಬೇರೆ ಯಾರನ್ನೂ ಗುರುತಿಸುವುದಿಲ್ಲ, ಇದರ ಪಾಲನೆ ಪೋಷಣೆಯನ್ನು ಮಾಡುವುದು ನನ್ನ ಧರ್ಮ, ನಾನು ಇದರ ಉಪೇಕ್ಷೆಯನ್ನು ಮಾಡಿದರೆ ಇದು ಸತ್ತು ಹೋಗುತ್ತದೆ. ನಾನೇ ಇದರ ತಂದೆ, ನಾನೇ ಇದರ ತಾಯಿ. ಇದರ ಪಾಲನೆ-ಪೋಷಣೆಯನ್ನು ಮಾಡುವುದೇ ನನ್ನ ಕರ್ತವ್ಯ. ನಾನೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಜಿಂಕೆಮರಿಯ ರಕ್ಷಕ ಪಿತ, ಎಲ್ಲ ರೀತಿಯಿಂದಲೂ ನಾನು ಇದರ ರಕ್ಷಣೆಯನ್ನು ಮಾಡಬೇಕು ಎಂದು ತೀರ್ಮಾನಿಸಿದ.

ಜಿಂಕೆಮರಿಯನ್ನು ನೀರಿನಿಂದ ಹೊರತೆಗೆಯುವುದು ಭರತನ ಧರ್ಮವಾಗಿತ್ತು. ಅವನು ಆ ಮರಿಯ ರಕ್ಷಕ ಪಿತನೆಂಬ ಸಂಬಂಧವನ್ನು ಕಲ್ಪಿಸಿಕೊಂಡಿದ್ದನು. ಇಲ್ಲಿ ಮಾತ್ರ ಜಡಭರತನು ಎಡವಿದ್ದನು.

ಈಗ ಆ ಜಿಂಕೆಯಮರಿಯ ಲಾಲನೆ-ಪಾಲನೆಯನ್ನು ಮಾಡತೊಡಗಿದ. ಮೆಲ್ಲಮೆಲ್ಲಗೆ ಆ ಮರಿಯು ದೊಡ್ಡದಾಗುತ್ತಾ ಬಂತು. ಜಡಭರತನು ಅದನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದ, ಅದರ ಜೊತೆಯಲ್ಲಿ ಆಟವಾಡುತ್ತಿದ್ದ.

ಜಡಭರತನು ತನ್ನ ಪೂರ್ವಾಶ್ರಮದಲ್ಲಿ ಮಕ್ಕಳ ಲಾಲನೆ-ಪಾಲನೆಯನ್ನು ಮಾಡಿದ್ದ. ಆ ಪೂರ್ವಚಿತ್ತದ ಅಪ್ಸರೆಯರು (ಸಂಸ್ಕಾರಗಳು) ಅಲ್ಲಿಗೆ ಬಂದರು. ಹಳೆಯ ಸಂಸ್ಕಾರಗಳನ್ನು ಮರೆಯುವುದು ಬಹಳ ಕಠಿಣವಾದ ಕೆಲಸ. ಸೂಕ್ಷ್ಮ ಸಂಸ್ಕಾರಗಳು ಮನಸ್ಸಿನಲ್ಲಿ ಇನ್ನೂ ಮನೆಮಾಡಿಕೊಂಡಿದ್ದವು. ಆದ್ದರಿಂದ ಅವನ ಮನಸ್ಸು ಆ ಜಿಂಕೆಯ ಮರಿಯಲ್ಲಿ ಮೋಹಾವೃತಗೊಂಡಿತು. ಧ್ಯಾನದಲ್ಲಿ ಪ್ರತಿ ಐದು-ಹತ್ತು ಕ್ಷಣಗಳಿಗೆ ಒಂದು ಸಾರಿ ಆ ಮರಿಯು ಕಾಣಿಸುತ್ತಿತ್ತು. ವಾಸನೆಯ ವಿಷಯ ಬೇರೆಯಾಯಿತು. ಆದರೆ ವಾಸನೆ ಮನಸ್ಸಿನಲ್ಲಿ ಉಳಿಯಿತು. ಜಡಭರತ ಮಹಾಜ್ಞಾನಿಯಾಗಿದ್ದರೂ ಸಹ, ಅವನಲ್ಲಿನ ವಾಸನೆಗಳು ಸಂಪೂರ್ಣನಾಶವನ್ನು ಹೊಂದಿರಲಿಲ್ಲ. ಜ್ಞಾನಿಗಳಲ್ಲಿ ಎರಡು ಪ್ರಕಾರಗಳಿವೆ. ಯಾರು ಅಧಿಕ ಉಪಾಸನೆಯನ್ನು ಮಾಡಿರುತ್ತಾನೋ ಅವನು ಕೃತೋಪಾಸ್ತಿ ಜ್ಞಾನಿಯಾಗಿರುತ್ತಾನೆ. ಅವನಿಗೆ ಮಾಯೆಯು ತೊಂದರೆಯನ್ನು ಕೊಡುವುದಿಲ್ಲ. ಆದರೆ ಯಾರು ಅಕೃತೋಪಾಸ್ತಿ ಜ್ಞಾನಿಯಾಗಿರುತ್ತಾನೋ, ಅವನಿಗೆ ಮಾಯೆಯು ವಿಘ್ನಕರ್ತವಾಗಿದೆ. ವಾಸನೆಗಳ ನಾಶದ ಹೊರತು, ತತ್ವಜ್ಞಾನದ ಪ್ರಾಪ್ತಿಯಾದರೂ ಸಹ ಬ್ರಹ್ಮನಿಷ್ಠನಾಗುವುದಿಲ್ಲ.

ಜಡಭರತನಿಗೆ ಇನ್ನೂವರೆವಿಗೆ ಅಪರೋಕ್ಷ ಸಾಕ್ಷಾತ್ಕಾರವಾಗಿರಲಿಲ್ಲ. ಒಂದು ಪಕ್ಷ ಆಗಿದ್ದಿದ್ದರೆ ಅವನ ಮನಸ್ಸು ಜಿಂಕೆಯ ಮರಿಯಲ್ಲಿ ಮೋಹಿತವಾಗುತ್ತಿರಲಿಲ್ಲ. ಈಗ ಪ್ರತಿದಿನವೂ ಆ ಮರಿಯ ಪಾಲನೆಯಲ್ಲಿ ನಿರತವಾಗಿರುತ್ತಿದ್ದನು. ಪರಿಣಾಮತಃ ಪೂಜೆ ಮುಂತಾದ ನಿತ್ಯಕರ್ಮಗಳು ತಪ್ಪಿಹೋಗುತ್ತಿದ್ದವು. ಅದಕ್ಕೆ ಮೃದುವಾದ ಹುಲ್ಲನ್ನು ತಿನ್ನಿಸುತ್ತಿದ್ದನು. ಅದು ಚಿನ್ನಾಟವಾಡುತ್ತಿತ್ತು ಮತ್ತು ಅವನ ಮೈಯ್ಯನ್ನು ನೆಕ್ಕುತ್ತಿತ್ತು. ಅವನು ಯೋಚಿಸುತ್ತಿದ್ದ, "ಇದು ಎಷ್ಟು ಸುಂದರವಾಗಿದೆ, ಎಷ್ಟು ಜಾಣನಾಗಿದೆ ಎಂದು ಮನಸ್ಸಿನಲ್ಲಿಯೇ ಆನಂದಿಸುತ್ತಿದ್ದ".

ದಿನ-ಪ್ರತಿದಿನ ಈ ಆಸಕ್ತಿ ಬೆಳೆಯುತ್ತಾ ಹೋಯಿತು. ಒಂದು ದಿವಸ ಆ ಜಿಂಕೆಮರಿಯು ಜಿಗಿದಾಡುತ್ತಾ, ಆಟವನ್ನು ಆಡುತ್ತಾ ದಟ್ಟಕಾಡಿನಲ್ಲಿ ಹೋಯಿತು. ರಾತ್ರಿಯಾದರೂ ಹಿಂತಿರುಗಲಿಲ್ಲ. ಜಡಭರತನಿಗೆ ಚಿಂತೆಯಾಗಹತ್ತಿತು. "ನನ್ನ ಮಗುವಿಗೆ ಏನಾಗಿರಬಹುದು, ಯಾವಾಗ ಹಿಂತಿರುಗಬಹುದು" ಎಂದು ಯೋಚಿಸಹತ್ತಿದ.

ಕಾಲನಿಗೆ ಯಾರ ಮೇಲೂ ದಯೆ ಬರುವುದಿಲ್ಲ. ಸದಾ ಸರ್ವದಾ ಸಾವಧಾನದಿಂದಿರುತ್ತಾನೆ.

"ನ ಹಿ ಪ್ರತಿಕ್ಷತೆ ಮೃತ್ಯುಃ ಕೃತಮ್ ಅಸ್ಯ ನ ವಾ ಕೃತಮ್"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೃತ್ಯುವು ಎಂದಿಗೂ ಈ ಮಾತನ್ನು ಯೋಚಿಸುವುದಿಲ್ಲ, "ಈ ವ್ಯಕ್ತಿಯು ತನ್ನ ಕೆಲಸವನ್ನು ಪೂರ್ಣ ಮಾಡಿದ್ದಾನೆಯೋ ಅಥವಾ ಇಲ್ಲವೋ?" ಆದುದರಿಂದ ಪ್ರತಿಯೊಂದು ಕ್ಷಣ ಸಾವಧಾನವಾಗಿರಿ, ಮೃತ್ಯುವಿಗೋಸ್ಕರ ಯಾವಾಗಲೂ ತಯಾರಾಗಿರಬೇಕು. ಇನ್ನೂ ನಮ್ಮ ತಯಾರಿಯೇ ಆಗಿಲ್ಲ ಅಷ್ಟರಲ್ಲಿ ಮೃತ್ಯುವು ಬಂದು ಎತ್ತಿಕೊಂಡು ಹೋದ ಎನ್ನುವ ತರಹ ಆಗಬಾರದು.

ಜಡಭರತನನ್ನು ಕರೆದುಕೊಂಡು ಹೋಗಲು ಕಾಲನು ಬಂದನು. ಭರತನಿಗೆ ಆ ಬಾಲಮೃಗದ ಸ್ಮರಣೆಯು ಅಂಟಿಕೊಂಡಿತ್ತು. ಅವನು ಭಗವಂತನ ಚಿಂತನೆಯನ್ನು ಬಿಟ್ಟು ಬಾಲಮೃಗದ ಚಿಂತನೆಯಲ್ಲಿಯೇ ದೇಹ-ತ್ಯಾಗವನ್ನು ಮಾಡಿದನು.

ಭಗವಾನನು ಗೀತೆಯಲ್ಲಿ ಹೇಳಿರುವುದೇನೆಂದರೆ -

ಯಂ ಯಂ ವಾಪಿ ಸ್ಮರನ್ಭಾವಂ ತ್ಯಜತ್ಯಂತೇ ಕಲೇವರಮ್ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥

- ಗೀತಾ ೮-೬

"ಹೇ! ಕುಂತೀಪುತ್ರ ಅರ್ಜುನ! ಈ ಮನುಷ್ಯನು ಅಂತ್ಯಕಾಲದಲ್ಲಿ ಯಾವ ಯಾವ ಭಾವದ ಸ್ಮರಣೆಯನ್ನು ಮಾಡುತ್ತಾ ಶರೀರವನ್ನು ತ್ಯಾಗ ಮಾಡುತ್ತಾನೋ, ಅವನು ಅದನ್ನೇ ಹೊಂದುತ್ತಾನೆ, ಯಾಕೆಂದರೆ ಅವನು ಯಾವಾಗಲೂ ಅದೇ ಭಾವದಿಂದ ಭಾವಿತನಾಗಿರುತ್ತಾನೆ".

ಜಡ ಭರತನೂ ಸಹ ಮೃತ್ಯುವಿನ ಸಮಯದಲ್ಲಿ ಬಾಲಮೃಗದ ಚಿಂತನೆಯನ್ನು ಮಾಡುತ್ತಿದ್ದರಿಂದ ಅವನಿಗೆ ಮುಂದಿನ ಜನ್ಮದಲ್ಲಿ ಮೃಗದ ಶರೀರ ಪ್ರಾಪ್ತಿಯಾಯಿತು.

ಪಶು-ಪಕ್ಷಿಗಳ ಅನಾದರವನ್ನು ಎಂದಿಗೂ ಮಾಡಬಾರದು. ಯಾವುದೇ ಕಾರಣದಿಂದಾಗಿ ಯಾರಾದರೂ ಸಾಧು-ಮಹಾತ್ಮ ಪಶು-ಪಕ್ಷಿ ರೂಪದಲ್ಲಿ ಬಂದಿದ್ದರೆ? ಅಹಲ್ಯೆಯಂತಹ ಮಹಾಸತಿ ಕಲ್ಲಾಗಿ ಬಂದಿದ್ದರೆ? ಯಾವುದೇ ಆತ್ಮದಿಂದ ಕೆಲ ಅಪರಾಧಗಳಾಗಿದ್ದರೆ ಅದು ಪಶು-ಪಕ್ಷಿಗಳ ಯೋನಿಯಲ್ಲಿ ಭ್ರಮಣವನ್ನು ಮಾಡುತ್ತಿರುತ್ತದೆ.

ಜಡಭರತನು ಮೃಗಸ್ವರೂಪದಲ್ಲಿ ತಿರುಗಾಡುತ್ತಿದ್ದನು. ಅವನಿಗೆ ಪೂರ್ವಜನ್ಮದ ಜ್ಞಾನವಿತ್ತು. ಅವನು ಯೋಚಿಸುತ್ತಿದ್ದುದೇನೆಂದರೆ "ನಾನು ಗಂಡಕಿ ನದಿಯ ದಡದಲ್ಲಿ ತಪಶ್ಚರ್ಯವನ್ನು ಮಾಡುತ್ತಿದ್ದೆ. ಅದೇ ಜಾಗದಲ್ಲಿ ಒಂದು ಜಿಂಕೆಯಮರಿಯನ್ನು ಎತ್ತಿಕೊಂಡು ಬಂದಿದ್ದೆ ಮತ್ತು ಅದನ್ನು ನನ್ನ ಆಶ್ರಮದಲ್ಲಿಟ್ಟುಕೊಂಡು ಬೆಳೆಸುತ್ತಿದ್ದೆ. ಅದರಲ್ಲಿ ನಾನು ಬಹಳ ಆಸಕ್ತಿಯನ್ನು ಹೊಂದಿದ್ದ ಕಾರಣದಿಂದಾಗಿ ನನಗೆ ಮೃಗ ಯೋನಿಯಲ್ಲಿ ಜನ್ಮವೆತ್ತಬೇಕಾಯಿತು. ನಾನು ಹಿಂದೆ ಮಹಾಜ್ಞಾನಿಯಾಗಿದ್ದೆ, ಯೋಗಿಯಾಗಿದ್ದೆ. ಆದರೆ ಈಗ ನಾನು ನಾಲ್ಕು ಕಾಲಿನ ಪ್ರಾಣಿಯಾಗಿ ಜೀವಿತನಾಗಿದ್ದೇನೆ. ಈಗ ನಾನು ಹೊಸ ಪ್ರಾರಬ್ಧವನ್ನು ಆರಂಭ ಮಾಡುವುದಿಲ್ಲ. ಏನನ್ನು ನಾನು ಜೊತೆಯಲ್ಲಿ ತಂದಿದ್ದೆನೋ ಅದನ್ನೇ ಭೋಗಿಸುವೆನು".

ಈ ಜಿಂಕೆಯು (ಭರತನು) ನದಿಯಲ್ಲಿ ಸ್ನಾನವನ್ನು ಮಾಡುತ್ತದೆ. ವೃಕ್ಷಗಳ ಒಣಗಿದ ಎಲೆಗಳನ್ನು ತಿನ್ನುತ್ತದೆ. ಅದು ಹುಲ್ಲನ್ನು ತಿನ್ನುತ್ತಿರಲಿಲ್ಲ. ಏಕೆಂದರೆ ಅದರ ಮೇಲೆ ಜೀವಜಂತುಗಳಿರುತ್ತವೆ. ಹಿಂಸೆಯಾದರೆ ಪುನಃ ಹೊಸ ಪ್ರಾರಬ್ಧ ಅಂಟಿಕೊಳ್ಳುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂದೆ ಜಡಭರತನು ಮೃಗದೇಹವನ್ನು ತ್ಯಜಿಸಿದನು ಮತ್ತು ಒಬ್ಬ ಬ್ರಾಹ್ಮಣನ ಮನೆಯಲ್ಲಿ ಜನ್ಮವೆತ್ತಿದನು. ಜಡಭರತನ ಇದು ಕೊನೆಯ ಜನ್ಮವಾಗಿತ್ತು. ಅವನಿಗೆ ಪೂರ್ವಜನ್ಮದ ಜ್ಞಾನವಿತ್ತು. ಜಿಂಕೆಯ ಮಾಯೆಯಲ್ಲಿ ಸಿಲುಕ್ಕಿದ್ದರಿಂದ ಅವನಿಗೆ ಪಶುದೇಹವನ್ನು ಧಾರಣೆ ಮಾಡಬೇಕಾಗಿತ್ತು.

ಯಾರ ಬುದ್ಧಿಯು 'ಕಾಮ' ವನ್ನು ಬಿಟ್ಟಿದೆಯೋ, ಅವನಿಗೆ ಅದೇ ಕೊನೆಯ ಜನ್ಮವಾಗಿದೆ. ಎಲ್ಲಿಯ ತನಕ ಬುದ್ಧಿಯಲ್ಲಿ 'ಕಾಮ' ವಿದೆಯೋ, ಅಲ್ಲಿಯ ತನಕ ಜನ್ಮವೆತ್ತುವುದು ಬಾಕಿಯಿದೆ ಎಂದು ತಿಳಿಯಬೇಕು. ಪ್ರತಿಯೊಂದು ವಸ್ತುವಿನಲ್ಲಿ ಯಾರು ಭಗವತ್ ದರ್ಶನವನ್ನು ಮಾಡುತ್ತಾನೋ ಅವನಿಗೆ ಅದೇ ಕೊನೆಯ ಜನ್ಮ.

ಈಶಾ ವಾಸ್ಯಮಿದಂ ಸರ್ವ. ಯತ್ಕಿಂಚ ಜಗತ್ಯಾಂ ಜಗತ್

- ಈಶಾವಸ್ಯೋಪನಿಷತ್-೧

ಜಗತ್ತಿನಲ್ಲಿ ಯಾವುದೊಂದು ಸ್ಥಾವರ-ಜಂಗಮಾತ್ಮಕ ಸಂಸಾರವಿದೆಯೋ ಅದೆಲ್ಲವೂ ಪರಮಾತ್ಮನಿಂದ ವ್ಯಾಪಿಸಲ್ಪಟ್ಟಿದೆ. ಈ ರೀತಿಯಾಗಿ ಜ್ಞಾನವಿದೆ ಮತ್ತು ಎಲ್ಲಿ ದೃಷ್ಟಿ ಹರಿಯುತ್ತದೆಯೋ ಅಲ್ಲಿ ಭಗವಂತನೇ ಕಾಣುತ್ತಾನೋ ಅಂತಹವನಿಗೆ ಈ ಜನ್ಮ ಅಂತಿಮವಾಗಿದೆ. ಜಡಭರತನ ಈ ಜನ್ಮವು ಅಂತಿಮವಾಗಿತ್ತು.

ಸಾಂಸಾರಿಕ ದೃಷ್ಟಿಯಲ್ಲಿ ಸಂತರು ಜಡರಂತೆ ಕಾಣುತ್ತಾರೆ. ಆದರೆ ತನ್ನನ್ನು ತಾನು ಮರೆತು, ಸಾಂಸಾರಿಕ ಸುಖದಲ್ಲಿ ಸಿಲುಕಿಕೊಂಡಿರುವ ಮನುಷ್ಯನು ನಿಜವಾಗಿಯೂ ಜಡನಾಗಿರುತ್ತಾನೆ. ಭಗವಂತನ ಪ್ರೇಮದಲ್ಲಿ ತಲ್ಲೀನನಾಗಿದ್ದು ದೇಹಭಾವವನ್ನು ಮರೆತಿರುವ ಮಹಾಪುರುಷನನ್ನು ಹೇಗೆ ಜಡವೆನ್ನಲಿಕ್ಕಾಗುತ್ತದೆ? ಆದರೆ ಸಂಸಾರದ ವಿಪರೀತ ಮಾನ್ಯತೆಯ ಕಾರಣದಿಂದ ಸಾಂಸಾರಿಕ ಜನರು ಭರತನ ಹೆಸರನ್ನು 'ಜಡಭರತ' ನೆಂದು ಇಟ್ಟಿದ್ದರು.

ಗೀತೆಯಲ್ಲಿ ಜ್ಞಾನಿ ಮಹಾಪುರುಷನನ್ನು "ಜ್ಞಾನ ವಿಜ್ಞಾನ ತೃಪ್ತಾತ್ಮ" ಎಂದು ಕರೆದಿದ್ದಾರೆ. "ಯಾವ ಪುರುಷನಿಗೆ ಪರಮಾತ್ಮನ ಸಗುಣ-ನಿರ್ಗುಣ, ಸಾಕಾರ-ನಿರಾಕಾರ, ತತ್ವಗಳ ತನ್ನಿಚ್ಛೆಯಂತೆ ಜ್ಞಾನವಾಗಿದೆಯೋ, ಯಾರ ಅಂತಃಕರಣ ಜ್ಞಾನ-ವಿಜ್ಞಾನದಿಂದ ತೃಪ್ತವಾಗಿದೆಯೋ, ಯಾರಲ್ಲಿ ಮತ್ತೇನನ್ನೂ ತಿಳಿಯುವ ಇಚ್ಛೆ ಉಳಿದಿಲ್ಲವೋ ಅವನನ್ನು "ಜ್ಞಾನ ವಿಜ್ಞಾನ ತೃಪ್ತಾತ್ಮಾ" ಎಂದು ಕರೆಯುತ್ತಾರೆ".

ಸಾಧಾರಣವಾಗಿ ಹೇಳುವುದೇನೆಂದರೆ, ಜ್ಞಾನವೆಂದರೆ ಪರೋಕ್ಷ ಜ್ಞಾನ ಮತ್ತು ವಿಜ್ಞಾನವೆಂದರೆ ಅಪರೋಕ್ಷ ಜ್ಞಾನ. ಅಪರೋಕ್ಷ ಜ್ಞಾನದಲ್ಲಿ ಪರೋಕ್ಷಜ್ಞಾನವು ಅಂತರ್ಭೂತವಾಗಿದೆ.

ಜ್ಞಾನ ಮತ್ತು ವಿಜ್ಞಾನಗಳ ಸ್ವರೂಪ : ಪುರಾಣಗಳಲ್ಲಿ ಸನಕಾದಿ ಋಷಿಗಳು ಬಹಳ ಪ್ರಸಿದ್ಧರು. ಅವರು ಕುಮಾರರಾಗಿದ್ದರು. ಕುಮಾರವೆಂಬುದರ ಅರ್ಥ ಅವಿವಾಹಿತನೆಂದು ಮತ್ತು ಯಾರು ಸನ್ಯಾಸಿಯಾಗಿರುವರೋ ಅವರು ಸನಕಾದಿ ಋಷಿಕುಮಾರರೆಂದು ಕರೆಯಲ್ಪಡುತ್ತಾರೆ. ಅವರು ನಿವೃತ್ತಿ ಮಾರ್ಗಪರಾಯಣರಾಗಿದ್ದರು. ಪರಿವ್ರಾಜಕರಾಗಿದ್ದರು. ಸದಾ ಸಂಚಾರದಲ್ಲಿರುತ್ತಿದ್ದರು. "ಪರಿವ್ರಾಜಕ" ದ ಅರ್ಥವೆಂದರೆ -

"ಪರಿತ್ಯಜ್ಯ ಸರ್ವಂ ವ್ರಜತಿ"

ಎಲ್ಲವನ್ನೂ ತ್ಯಾಗ ಮಾಡಿ ಯಾರು ಸಂಚರಿಸುತ್ತಿರುತ್ತಾರೋ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಪರಿತಃ ಸರ್ವದೇಶೇಷು ವ್ರಜತಿ"

"ಯಾರು ಎಲ್ಲಾ ದೇಶಗಳಲ್ಲಿ ಸಂಚರಿಸುತ್ತಾರೋ" ಸಂನ್ಯಾಸಿಯು ಒಂದೇ ಜಾಗದಲ್ಲಿ ಕುಳಿತುಕೊಂಡಿರಬಾರದು. ಹರಿಯುತ್ತಿರುವ ನೀರು ಮತ್ತು ಸಂಚರಿಸುತ್ತಿರುವ ಸಾಧು ಈ ಇಬ್ಬರೂ ನಿರ್ಮಲ ಮತ್ತು ಪವಿತ್ರ. ಒಂದೇ ಜಾಗದಲ್ಲಿ ಇರುವವನು ಗೃಹಸ್ಥನಾಗಿರುತ್ತಾನೆ.

"ಗೃಹೇ ಸ್ಥಿತಃ ಗೃಹಸ್ಥಃ"

ಯಾರು ಮನೆಯಲ್ಲಿ ಸ್ಥಾಯಿ ರೂಪದಿಂದ ಇರುತ್ತಾನೋ, ಎಲ್ಲಿ ಹೋದರೂ ಪುನಃ ತಿರುಗಿ ಮನೆಗೆ ಬರುತ್ತಾನೋ ಅವನೇ ಗೃಹಸ್ಥ.

ಜನರು ಜ್ಞಾನಿ ಸಾಧು ಸತ್ಪುರುಷರಿಗೆ ಕೇಳುತ್ತಿರುತ್ತಾರೆ ತಮ್ಮ ಸ್ಥಾಯಿ ವಿಳಾಸವೇನು? ಸ್ಥಾಯಿ ಸ್ಥಳ ಎಲ್ಲಿದೆ? ಜನರು ತೃಪ್ತಿಗೋಸ್ಕರ ಹೇಳಬೇಕಾಗುತ್ತದೆ. ಕೆಲವರು ಕಾಶಿ ಎಂದರೆ, ಕೆಲವರು ಮೈಸೂರು ಮತ್ತು ಕೆಲವರು ಮಹಾರಾಷ್ಟ್ರ ಅಥವಾ ಕರ್ನಾಟಕ ಅಥವಾ ಇನ್ನಾವುದೋ ಸ್ಥಾನ. ಸ್ಥಾಯಿಯಂತೂ ಎಲ್ಲೂ ಇಲ್ಲ. ಇಲ್ಲಿ ಸ್ವಲ್ಪ ದಿವಸ ಅಲ್ಲಿ ಸ್ವಲ್ಪ ದಿವಸಗಳನ್ನು ಕಳೆಯುತ್ತಾರೆ. ಆದರೆ ಸನಕಾದಿ ಋಷಿಗಳು ಊರು-ಊರು ತಿರುಗುತ್ತಾ ಏನು ಮಾಡುತ್ತಿದ್ದರು? ಅವರ ದಿನಚರ್ಯೆ ಹೇಗಿರುತ್ತಿತ್ತು? ಕೆಲ ಜನರು ಹೇಳುವುದೇನೆಂದರೆ ಅವರು ಲೋಕ ಕಲ್ಯಾಣಕ್ಕಾಗಿ ಸಂಚರಿಸುತ್ತಿದ್ದರು. ಕೆಲ ಜನರು ಹೇಳುವುದೆಂದರೆ ಸ್ಥಾನಗಳ ತೀರ್ಥಿಕರಣ. ಎಲ್ಲಿ ಎಲ್ಲಿ ಅವರು ಹೋಗುತ್ತಿದ್ದರೋ ಆ ಸ್ಥಾನಗಳು ತೀರ್ಥಗಳಾಗುತ್ತಿದ್ದವು, ಅದಕ್ಕೋಸ್ಕರ ಅವರು ಸಂಚರಿಸುತ್ತಿದ್ದರು. ವಸ್ತುತಃ ಅವರಿಗೆ ಲೋಕ ಪರಲೋಕದ ಚಿಂತೆಯೂ ಇರಲಿಲ್ಲ, ಅವರ ನಿಯಮವಿಷ್ಟೆ, ಯಾವುದೇ ಊರಿನಲ್ಲಿ ಅಥವಾ ಕಾಡಿನಲ್ಲಿ ಮತ್ತೆ ಯಾವುದೇ ಸ್ಥಾನದಲ್ಲಿದ್ದರೂ ನಾಲ್ವರಲ್ಲಿ ಒಬ್ಬರು ವಕ್ತ ಆಗುತ್ತಿದ್ದರು. ಉಳಿದ ಮೂವರು ಶ್ರೋತೃಗಳಾಗುತ್ತಿದ್ದರು. ವಕ್ತನು ಎತ್ತರದಲ್ಲಿ ಕುಳಿತಿರಬೇಕು ಮತ್ತು ಶ್ರೋತೃಗಳು ಕೆಳಗೆ ಎಂಬ ಮಾನಾಪಮಾನದ ಮಾತೂ ಇರಲಿಲ್ಲ. ಏಕೆಂದರೆ ಎರಡನೆಯ ದಿನ ವಕ್ತನು ಬೇರೆಯವನಿರುತ್ತಿದ್ದ. ಇವತ್ತು ಸನಕ ವಕ್ತನಿದ್ದರೆ ಸನಂದನಾದಿಗಳು ಶ್ರೋತೃಗಳು. ನಾಳೆ ಸನಂದನು ವಕ್ತ ಮತ್ತು ಸನಕಾದಿಗಳು ಶ್ರೋತೃಗಳು. ಈ ರೀತಿಯಾಗಿ ಕಾರ್ಯಕ್ರಮ ನಡೆಯುತ್ತಿರುತ್ತಿತ್ತು. ವಕ್ತನು ಮೇಲೆ ಕುಳಿತುಕೊಳ್ಳುವ ಉದ್ದೇಶವಿಷ್ಟೆ. ಇದು ಕೇವಲ ಶಿಷ್ಟಾಚಾರ, ಗಂಗೆಯು ಮೇಲಿನಿಂದ ಕೆಳಕ್ಕೆ ಹರಿಯುತ್ತಾಳೆ. ಹಾಗೆಯೇ ಜ್ಞಾನಗಂಗೆಯು ಸಹ ಮೇಲಿನಿಂದ ಕೆಳಕ್ಕೆ ಹರಿಯುತ್ತಾಳೆ. ಮೂವರು ಶ್ರೋತೃಗಳಿದ್ದರಾಯಿತು ಬಹುವಚನವಾಯಿತು. ಎಷ್ಟು ಶ್ರೋತೃಗಳಿದ್ದರು? ಬಹಳ ಜನರಿದ್ದರು. ಆದರೆ ಅವರ ಕಥಾ ಪ್ರಸಂಗದಲ್ಲಿ ಮೂವರೇ ಉಳಿಯುತ್ತಿದ್ದಿಲ್ಲ ಊರಿಗೆ ಊರೇ ಬರುತ್ತಿತ್ತು. ಎಲ್ಲರೂ ಅದರ ಲಾಭವನ್ನು ಪಡೆಯುತ್ತಿದ್ದರು. ಗಂಗೆಯಲ್ಲಿ ಯಾರಾದರೂ ಸ್ನಾನ ಮಾಡುತ್ತಿದ್ದರೂ ಅದು ಹರಿಯುತ್ತಿರುತ್ತದೆ. ಯಾರೂ ಸ್ನಾನ ಮಾಡದೇ ಇದ್ದರೂ ಸಹ ಅದು ಹರಿಯುತ್ತಿರುತ್ತದೆ. ಗಂಗೆಗೆ ಇದರ ಬಗ್ಗೆ ಯಾವ ಯೋಚನೆಯೇ ಇರುವುದಿಲ್ಲ. ತನ್ನಲ್ಲಿ ಯಾರಾದರೂ ಸ್ನಾನ ಮಾಡುತ್ತಿದ್ದಾರೆಯೇ ಅಥವಾ ಇಲ್ಲವೆ ಎಂದು.

ಆದರೆ ಒಂದು ಪ್ರಶ್ನೆಯಂತೂ ಉಪಸ್ಥಿತವಾಗುತ್ತದೆ. ಅದೇನೆಂದರೆ ಋಷಿಗಳು ಶಾಸ್ತ್ರ ಚರ್ಚೆಯನ್ನೇಕೆ ಮಾಡುತ್ತಿದ್ದರು? ಎಂಬುದು. ಶಾಸ್ತ್ರ ಚರ್ಚೆಯು ಪರೋಕ್ಷಜ್ಞಾನವನ್ನು ಉಂಟು ಮಾಡುವುದಾಗಿದೆ. ಸನಕಾದಿ ಋಷಿಗಳಿಗೆ ಅಪರೋಕ್ಷ ಜ್ಞಾನವಾಗಿರಲಿಲ್ಲವೆ? ಈ ಮಾತನ್ನು ಯಾರೂ ಹೇಳಲಾಗುವುದಿಲ್ಲ. ಅವರಾದರೋ- "ಸಾಕ್ಷಾತ್ಕೃತ ಪರಬ್ರಹ್ಮಾಣಃ" ರಾಗಿದ್ದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಬ್ರಹ್ಮ ಸಾಕ್ಷಾತ್ಕಾರಿಗೂ ಸಹ ಶಾಸ್ತ್ರ ಚರ್ಚೆ ಮತ್ತು ಶಾಸ್ತ್ರೀಯ ಜ್ಞಾನದ ಬಗ್ಗೆ ವಿಚಾರವನ್ನು ಮಾಡುತ್ತಿರಬೇಕು. ಶಾಸ್ತ್ರಜನಿತವಾದ ಜ್ಞಾನವು ಬೋಧೆಯಾಗಿದೆ. ಸಮಾಧಿಜನಿತ ಸಾಕ್ಷಾತ್ಕಾರವು ವಿಜ್ಞಾನವಾಗಿದೆ. ಎರಡಕ್ಕೂ ತಮ್ಮ ತಮ್ಮ ಸ್ಥಾನವಿದೆ. ಬ್ರಹ್ಮಸಾಕ್ಷಾತ್ಕಾರದಲ್ಲಿ ಕೇವಲ ಬ್ರಹ್ಮನು ವಿಷಯವಾಗಿರುತ್ತಾನೆ. ಶಾಸ್ತ್ರ ಚರ್ಚೆಯ ಜ್ಞಾನದಲ್ಲಿ ಸಾಧನೆಯ ಜ್ಞಾನ, ಹೇಯ ದೋಷ, ಹೇಯ ವಾತಾವರಣಗಳ ಜ್ಞಾನ, ಉಪಾಧಿಯ ಗುಣಗಳ ಜ್ಞಾನ ಮುಂತಾದ ಅನೇಕ ವಿಷಯಗಳ ಪರಾಮರ್ಶೆ ನಡೆಯುತ್ತದೆ. ಪ್ರಮಾದಿ ನಿವೃತ್ತಿಗೋಸ್ಕರ ಬ್ರಹ್ಮಜ್ಞಾನಿಗೂ ಸಹ ಈ ಎಲ್ಲವುಗಳ ಅನುಸಂಧಾನವಿರಬೇಕಾಗುತ್ತದೆ. ಆದುದರಿಂದ ಸನಕಾದಿ ಋಷಿಗಳು ಒಂದು ದಿವಸವೂ ಕೂಡ ಸತ್ಸಂಗವಿಲ್ಲದೆ ಇರುತ್ತಿರಲಿಲ್ಲ. ಸತ್ಸಂಗ ರಹಿತವಾದ ದಿವಸವೆಂದರೆ ಅದು ವಂಧ್ಯ ದಿವಸ. ದಿವಸವನ್ನು ಅವಂಧ್ಯವನ್ನಾಗಿ ಮಾಡಬೇಕು. ಬ್ರಹ್ಮಜ್ಞಾನಿಯೂ ಸಹ ಶಾಸ್ತ್ರ ಚರ್ಚೆಯನ್ನು ಮಾಡುತ್ತಿರಬೇಕು ಮತ್ತು ಮಾಡಿಸುತ್ತಿರಬೇಕು.

ಈ ಜ್ಞಾನಕ್ಕೆ ಸಂಪ್ರಜ್ಞಾತವೆಂದೂ ಮತ್ತು ವಿಜ್ಞಾನಕ್ಕೆ ಅಸಂಪ್ರಜ್ಞಾತವೆಂದೂ ಒಪ್ಪಿಕೊಂಡಿದ್ದಾರೆ. ಸಂಪ್ರಜ್ಞಾತ ಸಮಾಧಿಯೆಂದು ಏಕಾಗ್ರತೆಗೆ ಕರೆಯುತ್ತಾರೆ. ಅಸಂಪ್ರಜ್ಞಾತ ಸಮಾಧಿಯನ್ನು ನಿರೋಧಕ್ಕೆ ಕರೆಯುತ್ತಾರೆ.

ಸಂಮ್ಯಕ್ ಪ್ರಜ್ಞಾಯತೇ ತತ್ವಂ ಯತ್ರಸ ಸಂಪ್ರಾಜ್ಞಾತಃ ।

ಎಲ್ಲಿ ತತ್ವದ ಸಂಮ್ಯಕ್ ಜ್ಞಾನವಾಗುತ್ತದೋ ಅದನ್ನು ಸಂಪ್ರಜ್ಞಾತವೆಂದು ಕರೆಯುತ್ತಾರೆ. "ಯತ್ರ ನಾನಾವಸ್ತೂನ ಪ್ರಜ್ಞಾಯತ ಇತ್ಯ ಸಂಪ್ರಜ್ಞಾತಃ" ಎಲ್ಲಿ ವಿವಿಧ ವಸ್ತುಗಳ ಜ್ಞಾನವಾಗುವುದಿಲ್ಲವೋ ಅದನ್ನು ಅಸಂಪ್ರಜ್ಞಾತವೆನ್ನುತ್ತಾರೆ. ಮನೆಯಲ್ಲಿ ಧ್ಯಾನವನ್ನು ಮಾಡುತ್ತಾ ಕುಳಿತರೆ ಏಕಾಗ್ರತೆ ಉಂಟಾಗುವುದಿಲ್ಲ. ಶ್ರವಣದಲ್ಲಿ ಏಕಾಗ್ರತೆ ಉಂಟಾಗುತ್ತದೆ, ಅರ್ಥವು ತಿಳಿಯುತ್ತಿದ್ದರೆ ಮಾತ್ರ ಅನ್ಯಥಾ ನಿದ್ದೆಯು ಬರಬಹುದು ಮತ್ತು "ಸಮಂತಾತ್ ಪ್ರಕೃಷ್ಟಂ ಜ್ಞಾನಂ" ವೂ ಸಹ ಆಗಬಹುದು (ಪರಿಪೂರ್ಣ ಉತ್ಕೃಷ್ಟ ಜ್ಞಾನವು ಉಂಟಾಗುವುದು). ಅಸಂಪ್ರಜ್ಞಾತದಲ್ಲಿನ ಕಿಂಚಿತ್ ಸಮಂತಾತ್ ಪ್ರಜ್ಞಾಯತೇ. (ಯಾವುದನ್ನು ಸಹ ಪರಿಪೂರ್ಣ ರೂಪದಿಂದ ತಿಳಿಯಲಾಗುವುದಿಲ್ಲ) ಇಲ್ಲಿ ನಿರೋಧವಿದೆ. ಏನನ್ನೂ ತಿಳಿಯದಿರುವುದಿಲ್ಲ, ಆತ್ಮನನ್ನು ತಿಳಿಯುತ್ತೀರೋ ಇಲ್ಲವೊ? ವಿಜ್ಞಾನವೆಂದರೆ ಆತ್ಮಸಾಕ್ಷಾತ್ಕಾರವೇ ಆಗಿದೆ. ಆದರೆ ಆತ್ಮವು ಸ್ವಯಂಪ್ರಕಾಶವಾಗಿದೆ. ಅವನನ್ನು ತಿಳಿಯುವುದೆಂದರೇನು? ಇತರೆ ವೃತ್ತಿ ನಿರೋಧಗಳಾಗುವುದರಿಂದ ಸ್ವಪ್ರಕಾಶಿತನಾದ ಅವನು ಪ್ರಕಾಶಿತನಾಗುತ್ತಾನೆ. ಸಮಂತಾತ್ ಪ್ರಜ್ಞಾತವ್ಯ (ತಿಳಿಯಲು ಯೋಗ್ಯ) ಏನನ್ನೂ ಅಲ್ಲಿ ತಿಳಿಯುವುದು ಇರುವುದಿಲ್ಲ. ಸೂರ್ಯನನ್ನು ಪ್ರಕಾಶಿತಗೊಳಿಸಲು ದೀಪ, ವಿದ್ಯುತ್‌ಶಕ್ತಿ ಅಥವಾ ಟಾರ್ಚು (ಬಾಹ್ಯ ವಸ್ತುಗಳ) ಗಳ ಅವಶ್ಯಕತೆ ಇರುವುದಿಲ್ಲ, ವ್ಯವಧಾನ ಮೋಡಗಳು ದೂರವಾದರೆ ಅವನು ತನಗೆ ತಾನೇ ಪ್ರಕಾಶಿತನಾಗುತ್ತಾನೆ. ಇಲ್ಲಿ ಯಾವ ವೃತ್ತಿಯನ್ನು ಪ್ರಕಾಶಕನು ಎಂದು ಕರೆಯುತ್ತೇವೆಯೋ ಅದೇ ವ್ಯವಧಾನವಾಗಿ ಪರಿಣಮಿಸುತ್ತದೆ. ಅಸಂಪ್ರಜ್ಞಾತದಲ್ಲಿ ಸರ್ವವೃತ್ತಿ ನಿರೋಧವಾದರೆ ಚಿತ್ತ ಸತ್ವ ಆಗೋಣದಿಂದ ಬ್ರಹ್ಮನ ಸ್ವಪ್ರಕಾಶ ಉಂಟಾಗುತ್ತದೆ. ಚಿತ್ತವೂ ಕೂಡ ಪ್ರಕಾಶಮಯವಾಗುತ್ತದೆ. ಅಂದರೆ ಏಕಾಗ್ರತಾ ಪೂರ್ವಕವಾಗಿ ಶಾಸ್ತ್ರದ ಶ್ರವಣ ಮಾಡುವುದರಿಂದ ಯಾವ ಜ್ಞಾನವು ಉಂಟಾಗುವುದೋ ಅದು ಸಂಪ್ರಜ್ಞಾತವಾಗಿದೆ ಮತ್ತು ಸಮಾಧಿ ಜನಿತ ಆತ್ಮಸಾಕ್ಷಾತ್ಕಾರ ಅಸಂಪ್ರಜ್ಞಾತವಾಗಿದೆ. ಈ ಎರಡಕ್ಕೆ ಜ್ಞಾನ ಮತ್ತು ವಿಜ್ಞಾನವೆಂದು ಕರೆಯುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನ ಮತ್ತು ವಿಜ್ಞಾನದಿಂದ ತೃಪ್ತಾತ್ಮವಾದೆವು. ಅದರಿಂದ ಹೊಟ್ಟೆ ತುಂಬಿತು. ತೃಪ್ತಿಯಾಯಿತು. ಮತ್ತೆ ಅನ್ನ ಯಾವ ಆಕಾಂಕ್ಷೆಯೂ ಉಳಿದಿಲ್ಲ. ಖೀರನ್ನು ತಿಂದು ಹೊಟ್ಟೆ ತುಂಬಿತು. ತೃಪ್ತಿಯಾಯಿತು. ಈಗ ಕಡಲೆಯನ್ನು ಯಾರು ಜಗಿಯುತ್ತಾ ಕುಳಿತುಕೊಳ್ಳುತ್ತಾರೆ?

ಯಾವನರ್ಥ ಉದಪಾನೆ ಸರ್ವತಃ ಸಂಪ್ಲುತೋದಕೆ ।

ಸಣ್ಣ ಜಲಾಶಯಗಳಲ್ಲಿ ಏನು ಪ್ರಯೋಜನಗಳು ಸಿದ್ಧವಾಗುತ್ತವೆಯೋ, ಅವೆಲ್ಲವೂ ಸಹ ಒಂದೇ ಮಹಾಜಲಶಯದಲ್ಲಿ ಸಿದ್ಧಿಸಲ್ಪಡುತ್ತದೆ.

ಈ ಪರಿ ತೃಪ್ತಿಯೇ ಪರಮಪುರುಷಾರ್ಥವಾಗಿದೆ. ಜೀತಾತ್ಮನಾದ ಮೇಲೆ ಪರಮಾತ್ಮ ಸಾಕ್ಷಾತ್ಕಾರ ಆಗಬೇಕೆಂದು ಏನೇನು ವರ್ಣಿಸಿದ್ದಾರೋ ಅದೇ ಈ ಜ್ಞಾನ-ವಿಜ್ಞಾನವಾಗಿದೆ. ಪರಮಾತ್ಮನು ಎಷ್ಟು ದೊಡ್ಡವನಿದ್ದಾನೆ ಎಂದರೆ ಅವನಿಂದ ತೃಪ್ತಿ ಪಡೆದ ಮೇಲೆ ಮತ್ತೂ ತೃಪ್ತಿಯನ್ನು ಪಡೆಯಲಿಕ್ಕೆ ಜಾಗವೇ ಉಳಿಯುವುದಿಲ್ಲ. ಹೇಗೆಂದರೆ, ಕಾಶಿಯಲ್ಲಿ ಒಬ್ಬ ಪಂಡಿತನಿದ್ದ. ಯಾರೊ ಒಬ್ಬ ಯಾತ್ರಿಯು ಅವನಿಗೆ ಭೋಜನದ ನಿಮಂತ್ರಣವನ್ನು ಕೊಟ್ಟನು ಮತ್ತು ಭೋಜನದಲ್ಲಿ ಲಡ್ಡುವನ್ನು ಮಾಡಿಸಿದ್ದನು. ಲಡ್ಡುಗಳೆಂದರೆ ಆ ಪಂಡಿತನಿಗೆ ಬಹಳ ಇಷ್ಟ. ಲಡ್ಡುಗಳನ್ನು ಕಂಠಪೂರ್ತಿಯಾಗಿ ತಿಂದನು. ಅವನಿಗೆ ತೃಪ್ತಿಯಾಯಿತು. ಮತ್ತೆ ಪಚನ ಮಾಡಿಕೊಳ್ಳಲಿಕ್ಕೆ ಪಾಚಕ ಗುಳಿಗೆಗಳನ್ನು ತಿನ್ನಲೂ ಸಹ ಜಾಗವಿರಲಿಲ್ಲ. ಈ ತರಹ ಜ್ಞಾನವಿಜ್ಞಾನ ವಿಷಯದಿಂದ ಪರಮಾತ್ಮನಲ್ಲಿ ತೃಪ್ತತೆ ಹೊಂದಿದ ಮೇಲೆ ಬೇರೆ ಕಡೆಗೆ ಧ್ಯಾನವೇ ಹೋಗುವುದಿಲ್ಲ.

ಆದರೆ ಇಂದ್ರಿಯಗಳ ವಿಷಯ ಪ್ರಾಪ್ತಿಗಳಿಗೋಸ್ಕರ ಯಾವ ಹಸಿವೆ ಇದೆಯೋ ಅದೇ ಈ ತೃಪ್ತಿಗೆ ವಿರೋಧವಾಗಿದೆ. ವಿಷಯಗಳ ಹಸಿವು ಮನುಷ್ಯನನ್ನು ಬ್ರಹ್ಮನಿಂದ ದೂರ ಮಾಡಿ, ವಿಷಯಗಳಲ್ಲಿ ನೂಕುತ್ತದೆ. ಹೇಗೆ ಒಬ್ಬ ವೇಶ್ಯಗಾಮಿಗೆ ತನ್ನ ಸ್ವಪತ್ನಿಯಲ್ಲಿ ಪರಿತೃಪ್ತಿಯಾಗುವುದಿಲ್ಲವೋ ಹಾಗೆ.

ಒಬ್ಬ ಸಾಹುಕಾರನ ಮನೆಗೆ ಒಬ್ಬ ಸಾಧುವು ತನ್ನ ಶಿಷ್ಯವರ್ಗವನ್ನು ಕರೆದುಕೊಂಡು ಊಟಕ್ಕೆ ಹೋಗಿದ್ದರು. ಸಾಹುಕಾರನು ಹೇಳಿದನು "ಮಹಾರಾಜ! ಈ ನನ್ನ ಮಕ್ಕಳಿಗೆ ಸ್ವಲ್ಪ ಉಪದೇಶವನ್ನು ಮಾಡಿ. ಮನೆಯಲ್ಲಿ ಮೋಟಾರ್ ಇದೆ. ಕಾರ್ ಇದೆ. ಆದರೆ ರಸ್ತೆಯಲ್ಲಿರುವ ಹುಡುಗರ ಸಂಗಡ ಸೇರಿಕೊಂಡು, ಕುದುರೆಗಾಡಿ ಹೋಗುತ್ತಿದ್ದರೆ ಅದರ ಹಿಂದೆ ಹೋಗುತ್ತಾ ಅದನ್ನು ಹಿಡಿದುಕೊಂಡು ಜೋತಾಡುತ್ತಿರುತ್ತವೆ. ಗಾಡಿಯವನು ಚಾಬೂಕಿನಿಂದ ಹಿಂದಕ್ಕೆ ಹೊಡೆಯುತ್ತಿರುತ್ತಾನೆ". ಆಗ ಮಹರಾಜರು ಮಕ್ಕಳಿಗೆ ಹೇಳಿದರು. "ನೋಡಿ, ನೀವು ಗಂಭೀರವಾಗಿರಬೇಕು. ಗಾಡಿಯ ಹಿಂದೆ ಜೋತಾಡುವುದು ಕೀಳು ಸಂಸ್ಕಾರದ ಹುಡುಗರ ಲಕ್ಷಣ. ನಿಮಗೆ ಮುಂದೆ ಉನ್ನತ ಸ್ಥಾನಕ್ಕೆ ಹೋಗಬೇಕಾಗಿದೆ. ನೀವು ಎಂದಾದರೂ ಉನ್ನತಸ್ಥಾನಕ್ಕೆ ಹೋದವರನ್ನು ಮತ್ತೆ ಗಾಡಿಯ ಹಿಂದೆ ಜೋತಾಡುವುದನ್ನು ನೋಡಿದ್ದೀರೇನು?" ಹುಡುಗರು ಹೇಳಿದರು "ಆಯಿತು ಮಹಾರಾಜರೇ, ಇನ್ನು ಮುಂದೆ ಆ ರೀತಿಯಾಗಿ ಮಾಡುವುದಿಲ್ಲ". ತಾಯಿಯು ಹೇಳಿದಳು - "ಈ ತರಹ ಈಗ ಹೇಳುತ್ತಾರೆ ಮತ್ತು ಅದೇ ಕೆಲಸವನ್ನು ಮಾಡುತ್ತಾರೆ". ಆಗ ಮಹರಾಜರು "ಆಣೆ ಮಾಡಿ" ಎಂದು ಅವರ ಕಡೆಯಿಂದ ಆಣೆ ಮಾಡಿಸಿಕೊಂಡರು. ಮುಂದೆ ಇನ್ನೆಂದಿಗೂ ಮಾಡುವುದಿಲ್ಲ ಎಂದರು. ಮಹರಾಜರು ತಂದೆತಾಯಿಗಳ ಹತ್ತಿರ ಏನನ್ನೋ ಮಾತಾಡುತ್ತಿರುವಾಗ, ಒಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುದುರೆಗಾಡಿ ಬಂತು. ಆಗ ಹುಡುಗರು ಓಡಿಕೊಂಡು ಹೋಗಿ ಗಾಡಿಯ ಹಿಂದೆ ಜೋತುಬಿದ್ದರು. ಸಾಹುಕಾರನು, "ನೋಡಿ ಮಹರಾಜರೆ, ಇವರು ಆಣೆಯನ್ನು ಮಾಡಿದ್ದರು. ಈಗ ಏನು ಮಾಡುತ್ತಿದ್ದಾರೆ ನೋಡಿ". ಸ್ವಲ್ಪ ಹೊತ್ತಿನ ನಂತರ ಅಲ್ಲಿ ಗಾಡಿಯವನು ಚಾಬೂಕಿನಿಂದ ಹಿಂದಕ್ಕೆ ಹೊಡೆದ ಕೂಡಲೆ ಆ ಗಾಡಿಯನ್ನು ಬಿಟ್ಟು ಹುಡುಗರು ಮನೆಗೆ ಬಂದರು. ಆಗ ಮಹರಾಜರು ಕೇಳಿದರು "ಅರೆ! ನೀವು ಆಣೆಯನ್ನು ಮಾಡಿ ಇಲ್ಲಿ ಕುಳಿತಿದ್ದಿರಿ, ಇನ್ನು ಮುಂದೆ ಎಂದೂ ಹಾಗೆ ಮಾಡುವುದಿಲ್ಲವೆಂದು. ಆದರೂ ಯಾಕೆ ಹಾಗೆ ಮಾಡಿದಿರಿ?" ಹುಡುಗರು ಹೇಳಿದರು "ನಮಗೆ ಅದರಲ್ಲಿ ಮಜ ಬರುತ್ತದೆ". ಇದನ್ನೇ ಸಂಗದೋಷವೆನ್ನುತ್ತಾರೆ. ಇದೇ ರೀತಿ ಈ ಇಂದ್ರಿಯಗಳು ವಿಷಯಗಳ ಸಂಗದಿಂದ ವಿಷಯಲಂಪಟವಾಗಿವೆ. ವಿಷಯಗಳಲ್ಲಿ ಇವಕ್ಕೆ ಮಜ ಸಿಗುತ್ತದೆ. ಮನೆಯ ಮೋಟಾರನ್ನು ಬಿಟ್ಟು ಟಾಂಗಾದ ಹಿಂದೆ ಜೋತು ಬೀಳುವುದಕ್ಕೆ ಸಮನಾಗಿದೆ ಈ ಆತ್ಮಾನಂದ ಬಿಟ್ಟು ವಿಷಯ ಲೋಲುಪ್ತನಾಗುವುದು. ಆದುದರಿಂದ ಇಂದ್ರಿಯಗಳನ್ನು ಜಯಿಸುವುದು ಪರಮ ಅವಶ್ಯಕವಾಗಿದೆ. ಹುಡುಗರು ದೊಡ್ಡವರಾದ ಮೇಲೆ ಗಾಡಿಯ ಹಿಂದೆ ಜೋತು ಬೀಳುವುದನ್ನು ಬಿಟ್ಟು ಬಿಡುತ್ತಾರೆ ಆದರೆ ಈ ಇಂದ್ರಿಯಗಳು ಎಂದಿಗೂ ಜಾಣರಾಗುವುದಿಲ್ಲ. ಅವುಗಳನ್ನು ಜಾಣರನ್ನಾಗಿ ಮಾಡಿದರೆ ಜಾಣರಾಗುತ್ತವೆ. ಇಂದ್ರಿಯಗಳನ್ನು ಗೆಲುವ ಉಪಾಯ.

ವಿಷಯಾ ವಿನಿವರ್ತಂತೆ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥

- ಗೀತಾ ೨-೫೯

ಇಂದ್ರಿಯಗಳ ಮೂಲಕ ವಿಷಯಗಳನ್ನು ಗ್ರಹಿಸದಿರುವ ಪುರುಷನಲ್ಲಿ ಕೂಡ ಕೇವಲ ವಿಷಯಗಳಾದರೋ ನಿವೃತ್ತಿಯಾಗಿಬಿಡುತ್ತವೆ, ಆದರೆ ಅವುಗಳಲ್ಲಿರುವ ಆಸಕ್ತಿಯು ನಿವೃತ್ತಿಯಾಗುವುದಿಲ್ಲ. ಆದರೆ ಈ ಸ್ಥಿತಪ್ರಜ್ಞ ಪುರುಷನ ಆಸಕ್ತಿಯೂ ಕೂಡ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡು ನಿವೃತ್ತಿ ಹೊಂದುತ್ತದೆ.

ವಿಷಯಗಳನ್ನು ಇಂದ್ರಿಯಗಳಿಂದ ದೂರಪಡಿಸಿ ವಾಸನಾರಹಿತವಾದ ಸ್ಥಿತಿಯನ್ನು ತಲುಪಲಿಕ್ಕೆ ಬಹಳ ಕಠಿಣವಾಗುತ್ತೆ. ಹದಿನೈದು ಇಪ್ಪತ್ತು ದಿನಗಳು ಯಾವ ಸಿಹಿ ಪದಾರ್ಥವನ್ನು ತಿನ್ನದೇ ಇದ್ದರೆ ನಾಲಿಗೆಯು ಹೇಳುತ್ತದೆ- "ಬಹಳ ದಿನವಾಯ್ತು ಈವತ್ತಾದರೂ ಮಿಠಾಯಿಯನ್ನು ತಿನ್ನಲೇಬೇಕು". ಹದಿನೈದು ದಿನಗಳಲ್ಲಿ ರಸನೇಂದ್ರಿಯದಲ್ಲಿ ಚಪಲವು ಒಂದುಗೂಡುತ್ತಾ ಹೋಗುತ್ತದೆ ಮತ್ತು ಅದು ಒಂದು ಪ್ರಕಾರದ ಅಸಮಾಧಾನದ ರೂಪವನ್ನು ಧಾರಣೆ ಮಾಡುತ್ತದೆ. ಮಗನು ದೂರದ ಊರಿನಲ್ಲಿ ನೌಕರಿ ಮಾಡುತ್ತಿದ್ದಾನೆ. ತಿಂಗಳು ಎರಡು ತಿಂಗಳು ಕಳೆದುಹೋಗುತ್ತದೆ. ಕಣ್ಣುಗಳಲ್ಲಿ ಒಂದು ತರಹ ಆಸಕ್ತಿ ನಿರ್ಮಾಣಗೊಳ್ಳುತ್ತದೆ. ಕೊನೆಗೆ ಮಗನನ್ನು ನೋಡದೇ ಹೊರತು ಸಮಾಧಾನವೇ ಆಗುವುದಿಲ್ಲ, ಅತ್ಯಂತ ಪ್ರಿಯವಾಗಿದ್ದರೆ ಪ್ರತಿದಿನವೂ ಇಚ್ಛೆ ನಿರ್ಮಾಣವಾಗುತ್ತದೆ. ಒಂದು ಸಾರಿ ನೋಡಿ ಬಿಟ್ಟರೆ ನಿರ್ಮಾಣಗೊಂಡ ಸಂಕಲಿತವಾದ ಇಚ್ಛೆ ಹೊರಟುಹೋಗುತ್ತದೆ. ಆದರೆ ಮತ್ತೆ ಸಂಕಲಿತವಾಗುತ್ತಾ ಹೋಗುತ್ತದೆ. ಹೇಗೆ, ಪ್ರೆಶರ್ ಕುಕ್ಕರ್‌ನಲ್ಲಿ ಒಂದು ಸಾರಿ ಗ್ಯಾಸ್ ಹೊರಟು ಹೋದರೆ ಸ್ವಲ್ಪ ಹೊತ್ತು ಶಾಂತವಾಗುತ್ತದೆ. ಪುನಃ ಮತ್ತೆ ಗ್ಯಾಸ್ ತುಂಬಿಕೊಳ್ಳುತ್ತಾ ಹೋಗುತ್ತದೆ, ಪೂರ್ತಿ ತುಂಬುವ ತನಕ ಶಾಂತವಾಗಿರುತ್ತದೆ. ಮತ್ತೆ ಉಗ್ರವಾಗುತ್ತದೆ. ಮತ್ತೆ ಗ್ಯಾಸ್ ಹೊರಟುಹೋದರೆ ಪುನಃ ಶಾಂತವಾಗುತ್ತದೆ. ಶಬ್ದ ಸ್ಪರ್ಶಾದಿ ಸಮಸ್ತ ವಿಷಯಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದೇ ಸ್ಥಿತಿಯಾಗಿರುತ್ತದೆ. ಎಲ್ಲ ಕಡೆಯಿಂದಲೂ ಚಪಲವು ಕೂಡಿಕೊಳ್ಳಲು ಶುರುವಾಗುತ್ತದೆ. ಇದು ಒಂದು ರೀತಿಯ ವ್ಯಸನವೇ ಆಗಿದೆ.

ಜ್ಞಾನೇಂದ್ರಿಯಗಳಂತೆ ಕರ್ಮೇಂದ್ರಿಯಗಳ ಸ್ಥಿತಿಯೂ ಹಾಗೆಯೆ. ಇಬ್ಬರು ವ್ಯಕ್ತಿಗಳು ಮಾತನಾಡುತ್ತಿದ್ದರೆ ಮಧ್ಯದಲ್ಲಿ ನೀವೂ ಮಾತನಾಡಲು ಉದ್ಯುಕ್ತರಾಗುತ್ತೀರಿ. ಹೇಗೆ "ದ್ವಾಭ್ಯಾಂ ತೃತಿಯೋ ಭವಾಮಿ", ಎಂದಂತೆ ಇದು ಮೂರ್ಖರ ಲಕ್ಷಣವಾಗಿದೆ. ವಾಗೀಂದ್ರಿಯಗಳ ಕೆಲಸ ಮಾತನಾಡುವುದಾಗಿದೆ. ಮೌನವಾಗಿರುವುದು ಬಹಳ ಕಠಿಣವಾದ ಕೆಲಸ. ಮೌನವಾಗಿರುವ ಅಭ್ಯಾಸವಾದರೆ ಎಲ್ಲಾ ಜಗಳಗಳು ಸಮಾಪ್ತವಾಗುತ್ತದೆ.

"ಮೌನೇನ ಕಲಹೋ ನಾಸ್ತಿ ನಾಸ್ತಿ ಜಾಗರತೋ ಭಯಂ"

ಆದರೂ ಸಹ ಯಾರೂ ಸುಮ್ಮನೆ ಇರುವುದಿಲ್ಲ. ಒಂದು ಸಾರಿ ಗಂಗಾತೀರದಲ್ಲಿ ಮೂರು ಜನ ಪಂಡಿತರು ಸಂಧ್ಯಾವಂದನೆ ಮಾಡುತ್ತಿದ್ದರು. ಒಬ್ಬ ಯಾತ್ರಿಯು ಬಂದ, ಚಳಿಗಾಲದ ದಿನವಾಗಿತ್ತು. ಚಳಿಗಾಲದ ದಿನಗಳಲ್ಲಿ ಒಂದೇ ಸಾರಿಗೆ ನೀರಿನಲ್ಲಿ ಬಿದ್ದು ಸ್ನಾನ ಮಾಡಿದರೆ ಚಳಿ ಎನಿಸುವುದಿಲ್ಲ. ಅವನು ಆ ರೀತಿ ಮಾಡಿದಾಗ ಒಬ್ಬ ಪಂಡಿತನ ಮೇಲೆ ಹನಿಗಳು ಚಿಮ್ಮಿದವು ಪಂಡಿತನು ಹೇಳಿದ "ಅರೆ! ನಿಧಾನವಾಗಿ ಯಾಕೆ ಸ್ನಾನ ಮಾಡಬಾರದು?" ಎರಡನೆಯವ ಹೇಳಿದ "ಸಂಧ್ಯಾವಂದನೆಯ ಸಮಯದಲ್ಲಿ ಯಾಕೆ ಮಾತಾಡುತ್ತೀ?" ಮೂರನೆಯವನಿಗೆ ತಡೆಯಲಾಗಲಿಲ್ಲ. ಹೇಳಿದ - "ನೀನು ಮಾತನಾಡಿದೆಯಲ್ಲ". ಆಗ ಆ ಯಾತ್ರಿಯು ಹೇಳಿದ- "ಮೂರೂ ಜನರು ಮಾತನಾಡಿದ್ದೀರಿ, ಈಗ ಮೂವರೂ ಪುನಃ ಸ್ನಾನ ಮಾಡಿ ಪುನಃ ಸಂಧ್ಯೆಯನ್ನು ಮಾಡಿರಿ". ವಾಗೀಂದ್ರಿಯಗಳ ಚಮತ್ಕಾರವಿದು. ಇದಕ್ಕೊಂದು ಚಪಲವಿರುತ್ತದೆ.

ಮತ್ತೊಂದು ಉದಾಹರಣೆ ಹೀಗಿದೆ- ಅಕ್ಬರನು ತಾನ್‌ಸೇನನಿಗೆ ಕೇಳಿದನು, "ನೀನು ಎಷ್ಟು ಚೆನ್ನಾಗಿ ಹಾಡುತ್ತೀಯ, ನಿನ್ನ ಗುರು ಯಾರು? ನನಗೆ ಅವರಿಂದ ಹಾಡನ್ನು ಕೇಳಬೇಕು". ತಾನ್‌ಸೇನನು ಹೇಳಿದನು "ಅವರು ನಿಮಗೆ ಹಾಡಿ ತೋರಿಸುವುದಿಲ್ಲ". ಆದಕ್ಕೆ ಅಕ್ಬರನು "ನಾನು ಲಕ್ಷ ಸುವರ್ಣಮುದ್ರೆಯನ್ನು ಕೊಡುವೆನು". ಆಗ ತಾನ್‌ಸೇನನು ಹೇಳಿದ, ಲಕ್ಷವೇನು, ಅರ್ಧರಾಜ್ಯವನ್ನೂ ಕೊಟ್ಟರೂ ಸಹ ಅವರು ನಿಮ್ಮ ಮುಂದೆ ಹಾಡುವುದಿಲ್ಲ. ಆದಕ್ಕೆ ರಾಜನು "ಅವನನ್ನು ಹಿಡಿದು ಜೈಲಿನಲ್ಲಿ ಹಾಕುತ್ತೇನೆ". ತಾನ್‌ಸೇನ್ ಹೇಳಿದ "ಮರಣದಂಡನೆಯನ್ನು ವಿಧಿಸಿದರೂ ಅವರು ಬಗ್ಗುವುದಿಲ್ಲ". ತಾನ್‌ಸೇನನ ಮಾತುಗಳನ್ನು ಕೇಳಿ ಅಕ್ಬರನು ಆಶ್ಚರ್ಯಚಕಿತನಾದನು. ಕೊನೆಗೆ ಯಾವ ಉಪಾಯದಿಂದ ಅವರ ಹಾಡನ್ನು ಕೇಳಬಹುದು ಎಂದು ಅಕ್ಬರನು ತಾನ್‌ಸೇನನಿಗೆ ಕೇಳಿದ. ಆಗ ತಾನ್‌ಸೇನನು "ಒಂದು ಉಪಾಯವಿದೆ. ಒಂದು ಗೀತೆಗೆ ಸ್ವರವನ್ನು ನನಗೆ ಹೊಂದಿಸಲಿಕ್ಕೆ ಆಗುತ್ತಿಲ್ಲ, ಹೊಂದಿಸುವ ಪ್ರಯತ್ನ ಮಾಡುತ್ತಿದ್ದೇನೆ. ನಾನು ತಪ್ಪು ಹಾಡಿದರೆ ಅವರು ಅದನ್ನು ಸುಧಾರಿಸಬಲ್ಲರು. ತಾವು ವೇಷ ಮರೆಸಿಕೊಂಡು ಬಂದು ಬಚ್ಚಿಟ್ಟುಕೊಂಡು ಕೇಳಿ" ಎಂದನು. ಹಾಗೆಯೇ ಮಾಡಿದನು. ತಾನ್‌ಸೇನನ ಗುರು ಹರಿದಾಸರು ತಪ್ಪುಸ್ವರವನ್ನು ಕೇಳಿದ ಕೂಡಲೆ ಅವರು ಸ್ವತಃ ಎದ್ದುಬಂದರು. ನೋಡಿದರೆ ತಾನ್‌ಸೇನ ಹಾಡುತ್ತಿದ್ದ. ಸ್ವತಃ ಅದನ್ನು ಸುಧಾರಿಸಿ ಹಾಡಿ ತೋರಿಸಿದರು. ಅಕ್ಬರನಿಗೆ ಆ ಹೊತ್ತಿನಲ್ಲಿ ಸಂತನಾಗುವ ಇಚ್ಛೆಯುಂಟಾಯಿತು. ಹೇಳುವ ತಾತ್ಪರ್ಯವಿಷ್ಟೆ ವಾಗೀಂದ್ರಿಯದ ವೇಗವನ್ನು ಹರಿದಾಸರಿಗೂ ಸಹ ತಡೆಯಲಾಗಲಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಬ್ಬ ಸಂತನಿದ್ದ. ಅವನು ಕೈಯಿಂದ ಮೀನು ಹಿಡಿಯುತ್ತಿದ್ದ ಮತ್ತು ಅದನ್ನು ನದಿಯಲ್ಲಿ ಬಿಟ್ಟು ಬಿಡುತ್ತಿದ್ದ. ಯಾರೋ ಒಬ್ಬರು "ಹೀಗೇಕೆ ಮಾಡುತ್ತೀರಿ?" ಎಂದು ಕೇಳಿದ. ಅದಕ್ಕೆ ಅವರೆಂದರು "ಮೊದಲಿನ ಅಭ್ಯಾಸ, ಮೀನು ಹಿಡಿಯುವುದರಲ್ಲಿ ನಾನು ಎಲ್ಲರಿಗಿಂತಲೂ ನಿಪುಣ ಮತ್ತು ಚತುರನಿದ್ದೆ. ಈಗ ಸಂತನಾಗಿರುವುದರಿಂದ ಹಿಡಿದು ಮತ್ತೆ ನದಿಯಲ್ಲಿ ಬಿಟ್ಟು ಬಿಡುತ್ತೇನೆ". ಈ ರೀತಿ ಇಂದ್ರಿಯಗಳಿಗೆ ಯಾವುದಾದರೊಂದು ಅಭ್ಯಾಸ ತಾಗಿದರೆ ಅದರಿಂದ ಬಿಡಿಸಿಕೊಳ್ಳುವುದು ಬಹಳ ಕಷ್ಟ. ಕೆಲವರಿಗೆ ಕಾಲಿನಲ್ಲಿ ವೇಗವಿರುತ್ತದೆ. ಕೆಲವರಿಗೆ ಕಾಲಿನಲ್ಲಿ ಚಕ್ರವಿರುತ್ತದೆ, ದಿನವಿಡೀ ತಿರುಗುತ್ತಲೇ ಇರುತ್ತಾರೆ. ರಜದ ದಿವಸದಲ್ಲೂ ತಿರುಗಾಡದಿದ್ದರೆ ಸಮಾಧಾನವಿರುವುದಿಲ್ಲ. 'ಪಾಯೂಪಸ್ಥೇಂದ್ರಿಯ' ದ ವೇಗ ಸಂಸಾರದಲ್ಲಿ ಬಹಳ ಪ್ರಸಿದ್ಧವಾಗಿದೆ.

"ಉದ್ಧತಸ್ಯ ಹಿ ಕಾಮಸ್ಯ ಪ್ರತಿವಾದೋ ನ ಶಸ್ಯತೆ"

ಈ ರೀತಿ ಪ್ರಜಾಪತಿ ಕಶ್ಯಪನೂ ಹೇಳಿದ್ದಾನೆ. ಅದೇನೆಂದರೆ, ಅದ್ಭುತ 'ಕಾಮ' ದ ಪ್ರತಿವಾದವನ್ನು ಮಾಡುವುದು ಒಳ್ಳೆಯದಲ್ಲ. ಇಂದ್ರಿಯಗಳ ವೇಗವೇ "ಕಾಮ" ವಾಗಿದೆ. ಅದರ ವೇಗವನ್ನು ಎಲ್ಲಿ ತಡೆಗಟ್ಟಲಾಗುತ್ತೋ ಅಲ್ಲಿ ಮರಳಿನ ಸೇತುವೆಯಂತೆ ಅದು ನಾಲ್ಕೂ ಕಡೆಯಿಂದಲೂ ಬಿದ್ದು ಹೋಗುತ್ತದೆ. ಅದರ ಅಪೇಕ್ಷೆಯ ದಿಶೆಯನ್ನು ಬದಲಿಸುವುದೇ ಒಳ್ಳೆಯದು. ಸಿಮೆಂಟ್ ಕಾಂಕ್ರೀಟ್‌ನ ಸೇತುವೆ ಎಲ್ಲಿಯವರೆಗೆ ತಯಾರಾಗುವುದಿಲ್ಲವೋ, ಅಲ್ಲಿಯವರೆಗೆ ಅದರ ದಿಶೆಯನ್ನು ಬದಲಿಸುತ್ತಿರಬೇಕು. ಇಂದ್ರಿಯಗಳಲ್ಲಿ ಶಕ್ತಿಯು ಭಗವತ್ ಪ್ರದತ್ತವಾಗಿದೆ. ವೇಗ ಬಂದ ಮೇಲೆ ಆ ಶಕ್ತಿಯು ಕೆಲಸ ಮಾಡಲು ಪ್ರಾರಂಭಿಸುತ್ತದೆ. ಅದನ್ನು ಒಳ್ಳೆಯ ಸ್ಥಾನದಲ್ಲಿ ತೊಡಗಿಸಬೇಕು. ಆ ಶಕ್ತಿಯ ದುರುಪಯೋಗವನ್ನು ಮಾಡಬೇಡಿ. ಹಾಳು ಮಾಡಬೇಡಿ. ನಗ್ನಾವಸ್ಥೆಯಲ್ಲಿರುವ ಒಬ್ಬ ಭಿಕಾರಿಯನ್ನು ನೋಡಿ, ಒಬ್ಬ ವ್ಯಕ್ತಿಯು ಬಟ್ಟೆಯನ್ನು ಕೊಟ್ಟ. ಅವನು ಅವನ ಮುಂದೆಯೇ ಆ ಬಟ್ಟೆಯನ್ನು ಹರಿದು ಚಿಂದಿಚಿಂದಿಯನ್ನಾಗಿ ಮಾಡಿದರೆ ಆ ವ್ಯಕ್ತಿಗೆ ಸಿಟ್ಟು ಬರುವುದಿಲ್ಲೇನು? ಅವಶ್ಯವಾಗಿ ಸಿಟ್ಟು ಬರುತ್ತದೆ. ಏಕೆ? ತಾವು ತಮ್ಮ ಸ್ವತ್ವವನ್ನು ಸಮಾಪ್ತಿ ಮಾಡಿದ್ದೀರಿ. ಮತ್ತೆ ಸಿಟ್ಟು ಯಾಕೆ ಆಗಬೇಕು? ಹೊಟ್ಟೆ ಹಸಿದ ಒಬ್ಬ ಭಿಕಾರಿಗೆ ತಾವು ಇಪ್ಪತ್ತೈದು ರೂಪಾಯಿಗಳ ಮಿಠಾಯಿಗಳನ್ನು ಕೊಟ್ಟಿರಿ. ಅವನು ಅದನ್ನು ನಿಮ್ಮ ಮುಂದೆಯೇ ಚರಂಡಿಯಲ್ಲಿ ಬಿಸಾಕಿದರೆ? ಇದರರ್ಥವೆಂದರೆ, ತಾವು ಕೊಟ್ಟಿರಿ ಆದರೆ ಕೊಟ್ಟ ಉದ್ದೇಶ ಸಫಲವಾಗಲಿಲ್ಲವೆಂಬುದಕ್ಕೆ ಸಿಟ್ಟು ಬಂತು. ಇದು ನಮ್ಮ ಬಗೆಗಿನ ದೃಷ್ಟಾಂತವಾಯಿತು, ಇದೇ ಮಾತು ಈಶ್ವರನಲ್ಲಿಯೂ ಸಹ ಇದೆ. ಅಲ್ಲಿಗೂ ಅನ್ವಯಿಸುತ್ತದೆ. ಈಶ್ವರನು ನಮಗೆ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳನ್ನು ಕೊಟ್ಟಿದ್ದಾನೆ. ಕೈಯನ್ನು ಕೊಟ್ಟಿದ್ದಾನೆ ಇನ್ನೊಬ್ಬರನ್ನು ಹೊಡೆಯಲಿಕ್ಕಲ್ಲ, ಸಂರಕ್ಷಣೆಗೋಸ್ಕರ. ಕಾಲನ್ನು ಕೊಟ್ಟಿದ್ದಾನೆ. ಇನ್ನೊಬ್ಬರನ್ನು ಕಾಲಿನಿಂದ ಝಾಡಿಸಲಿಕ್ಕಲ್ಲ, ತೀರ್ಥಗಮನ ಮಾಡಲಿಕ್ಕೆ. ಕಿವಿಗಳನ್ನು ಕೊಟ್ಟಿದ್ದಾನೆ ಇನ್ನೊಬ್ಬರ ಚಾಡಿ ಮತ್ತು ನಿಂದೆಗಳನ್ನು ಕೇಳಲಿಕ್ಕಲ್ಲ ಶಾಸ್ತ್ರ ಶ್ರವಣಕ್ಕೋಸ್ಕರ.

ಹಸ್ತೌ ದಾನವಿವರ್ಜಿತೌ ಶ್ರುತಿಪುಟೌ ಸಾರಸ್ವತ ದ್ವೇಷಿಣೌ ।
ನೇತ್ರೇ ಸಾಧುವಿಲೋಕನೇನ ರಹಿತೆ ಪಾದೌ ನ ತೀರ್ಥಂಗತೌ ॥

- ಚಾಣಕ್ಯ ನೀತಿ ದರ್ಪಣ

ಅರ್ಥಾತ್ : ಕೈಗಳು ದಾನರಹಿತವಾಗಿವೆ, ಕಿವಿಗಳು ವೇದ ಮತ್ತು ಶಾಸ್ತ್ರಗಳ ವಿರೋಧಿಯಾಗಿವೆ, ಕಣ್ಣುಗಳು ಸಾಧುಗಳ ದರ್ಶನ ಮಾಡಲಿಲ್ಲ. ಕಾಲುಗಳು ತೀರ್ಥಗಮನವನ್ನು ಮಾಡಲಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದುದರಿಂದ ಕೈಗಳಿಂದ ಅವಶ್ಯವಾಗಿ ದಾನವನ್ನು ಮಾಡಿ, ಕಿವಿಗಳಿಂದ ಸಾರಸ್ವತ ಶ್ರವಣವನ್ನು ಮಾಡಿ, ಕಣ್ಣುಗಳಿಂದ ಸಾಧು ಸಂತರ ದರ್ಶನವನ್ನು ಪಡೆಯಿರಿ. ಸಂತರ ದರ್ಶನ ಪಡೆಯುವುದರಿಂದ ಮನಸ್ಸು ಶಾಂತಿ, ನಿರ್ಲೋಭತೆ, ವೈರಾಗ್ಯವನ್ನು ಹೊಂದುತ್ತದೆ. ಕಾಲುಗಳಿಂದ ತೀರ್ಥಗಮನವನ್ನು ಮಾಡಿ ಭಗವತ್ ದರ್ಶನದಿಂದ ಚಿತ್ತ ನಿರ್ಮಲ ಮತ್ತು ಸ್ಥಿರವಾಗುತ್ತದೆ. ಸತ್ಸಂಗವೂ ತೀರ್ಥವಾಗಿದೆ ಗುರುಜನರನ್ನೂ ಸಹ ತೀರ್ಥವೆಂದು ಕರೆಯುತ್ತಾರೆ. ಆದುದರಿಂದ ಶಾಸ್ತ್ರ ಶ್ರವಣವನ್ನು ಮಾಡಿರಿ, ಸಾಧು ಸಂತರ ದರ್ಶನವನ್ನು ಮಾಡಿರಿ. ಇದಕ್ಕೆ ವಿಪರೀತವಾಗಿ ನಡೆದರೆ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ದುರುಪಯೋಗವೆಂದು ತಿಳಿಯಲಾಗುತ್ತದೆ. ಹೇಗೆ ನೀವು ಆ ಭಿಕಾರಿಯ ಮೇಲೆ ಸಿಟ್ಟಾದಿರೋ ಹಾಗೆಯೇ ಭಗವಂತನೂ ಸಹ ನಮ್ಮ ಮೇಲೆ ಸಿಟ್ಟಾಗುತ್ತಾನೆ. ಇಂದ್ರಿಯಗಳ ಉಪಯೋಗ ಎರಡು ಪ್ರಕಾರದ್ದಾಗಿವೆ. ಒಂದು ಸದುಪಯೋಗ. ಇನ್ನೊಂದು ದುರಪಯೋಗ, ಸದುಪಯೋಗದಿಂದ ಭಗವಂತನು ಪ್ರಸನ್ನನಾಗುತ್ತಾನೆಯಾದರೆ ದುರುಪಯೋಗದಿಂದ ಸಿಟ್ಟಾಗಲೂ ಬಹುದು. ಯಾರು ಸಿಟ್ಟಾಗುವುದಿಲ್ಲವೊ ಅವರು ಪ್ರಸನ್ನರೂ ಆಗುವುದಿಲ್ಲ. ಶುದ್ಧ ಬ್ರಹ್ಮನು ಸಿಟ್ಟೂ ಆಗುವುದಿಲ್ಲ ಮತ್ತು ಪ್ರಸನ್ನನೂ ಆಗುವುದಿಲ್ಲ. ಸೊಪಾಧಿಕ ಬ್ರಹ್ಮನಲ್ಲಿ ಉಪಾಧಿಯ ಮೂಲಕ ಪ್ರಸನ್ನತೆ ಮತ್ತು ಕೋಪ ಉಂಟಾಗುತ್ತದೆ.

ಪುಣ್ಯ ಮತ್ತು ಪಾಪವೆಂಬ ಎರಡು ನೀತಿಯನ್ನು ಎಲ್ಲರೂ ಒಪ್ಪುತ್ತಾರೆ. ಈ ಪುಣ್ಯ ಮತ್ತು ಪಾಪವೆಂಬುದೇನು? ಸಂಸಾರಿಕ ವಸ್ತು ಹೇಗೆ ನಮ್ಮೆದುರಿನಲ್ಲಿ ಕಾಣುತ್ತವೆಯೋ ಹಾಗೆ ಅವುಗಳು ಕಾಣುತ್ತವೆಯೆ? ಯಾರಾದರೂ ನೋಡಿದ್ದಾರೆಯೆ? ಕಪ್ಪು, ಬಿಳುಪು, ನೀಲಿ, ಹಳದಿ ಯಾವ ಬಣ್ಣವಿದೆ ಅವುಗಳಿಗೆ? ವಾಸ್ತವವಾಗಿ ವೇದಾಂತ ಸಿದ್ಧಾಂತವೆಂದರೆ ಭಗವಂತನಿಗೆ ಏನು ಪ್ರಸನ್ನತೆ ಉಂಟುಮಾಡುತ್ತದೋ ಅದು ಪುಣ್ಯ, ಭಗವಂತನಿಗೆ ಅಪ್ರಸನ್ನತೆ ಉಂಟುಮಾಡುವುದೇ ಪಾಪ.

"ಫಲಮತ ಉಪ ಪತ್ತೇಃ" ಈ ಅಧಿಕರಣದಲ್ಲಿ ಬ್ರಹ್ಮಸೂತ್ರದಲ್ಲಿ ವ್ಯಾಸರು ಈ ವಿಷಯದಲ್ಲಿ ನಿರ್ಣಯವನ್ನು ಕೊಟ್ಟಿದ್ದಾರೆ. ಪೂರ್ವ ಮೀಮಾಂಸಕ ಮತವು ಏನೇ ಇದ್ದರೂ, ವೇದಾಂತ ಸಿದ್ಧಾಂತದ ಪ್ರಕಾರ ಇಂದ್ರಿಯ ಶಕ್ತಿಗಳ ಸದುಪಯೋಗವನ್ನು ಕಂಡು ಭಗವಂತನು ಪ್ರಸನ್ನನಾಗುತ್ತಾನೆ, ಇದೇ ಪುಣ್ಯವು ಇಂದ್ರಿಯ ಶಕ್ತಿಗಳ ದುರಪಯೋಗವನ್ನು ಕಂಡು ಭಗವಂತನು ಅಪ್ರಸನ್ನನಾಗುತ್ತಾನೆ. ಇದೇ ಪಾಪವು. ಒಬ್ಬ ತಾಯಿಯು ಒಬ್ಬ ಸಂತನಿಗೆ ದಕ್ಷಿಣೆಯ ರೂಪದಲ್ಲಿ ಐವತ್ತು ರೂಪಾಯಿಗಳನ್ನು ಕೊಟ್ಟಳು. ಅವನು ರಾಮೇಶ್ವರಕ್ಕೆ ಹೋಗಬೇಕೆಂದು ಹೇಳುತ್ತಿದ್ದ. ಆಮೇಲೆ ನೋಡಿದರೆ ಅವನು ಹೋಟೆಲ್‌ನಲ್ಲಿ ಊಟಮಾಡುತ್ತಿದ್ದ. ರಾಮೇಶ್ವರಕ್ಕೆ ಹೋಗಲೆಂದು ಏನು ದುಡ್ಡು ಪಡೆದನೋ ಆ ದುಡ್ಡಿನಿಂದ ಅವನು ಅಭಕ್ಷ್ಯ ಭಕ್ಷಣವನ್ನು ಮಾಡುತ್ತಿದ್ದ. ಹೀಗಾದರೆ ಆ ಮಾತೆಗೆ ಸಿಟ್ಟು ಬರುವುದಿಲ್ಲವೆ? ಭಗವಂತನೂ ಕೂಡ ಇದೇ ರೀತಿ ಕೋಪಗೊಳ್ಳುತ್ತಾನೆ. ಆದುದರಿಂದ ಇದು ಪಾಪವೆಂದು ಕರೆಯಲ್ಪಡುತ್ತದೆ.

ಭಗವಾನನು ಅರ್ಜುನನಿಗೆ ಹೇಳುತ್ತಾನೆ "ಹೇ! ಅರ್ಜುನ, ಪರಮೇಶ್ವರ ಪ್ರದತ್ತವಾಗಿದೆ ನಿನ್ನ ಇಂದ್ರಿಯ ಶಕ್ತಿ ಮತ್ತು ನಿನ್ನಲ್ಲಿ ಈಗ ವೇಗವೂ ಇದೆ. ಕರ್ಮತ್ಯಾಗದ ಮಾತನ್ನು ಆಡುತ್ತಿರುವೆಯಲ್ಲ! ಕಾಡಿನಲ್ಲಿ ಹೋಗಿ ಕುಳಿತುಕೊಳ್ಳುವ ಮಾತನಾಡುತ್ತಿದ್ದೀಯಾದರೂ, ನಿನಗೆ ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ. ಅಲ್ಲಿ ಜಿಂಕೆಯು ಹೋಗುತ್ತಿರುವುದನ್ನು ಕಂಡರೆ ತಕ್ಷಣವೇ ಬಾಣವನ್ನು ಬಿಡುವೆ, ಸಿಂಹವು ಘರ್ಜಿಸುತ್ತಾ ಬಂದರೆ ಅದರ ಮೇಲೆ ಬಾಣಗಳ ಮಳೆಯನ್ನು ಸುರಿಸುವೆ. ಹೇ! ಅರ್ಜುನ, ನಿನಗೆ ಅನುಭವವಿದೆ. ಶಂಕರನ ಆರಾಧನೆಗೆಂದು ನೀನು ಗಂಧಮಾದನಕ್ಕೆ ಹೋಗಿದ್ದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲಿ ಕಿರಾತರೂಪಧಾರಿಯಾದ ಶಂಕರನು ಒಂದು ಹಂದಿಯ ಮೇಲೆ ಬಾಣವನ್ನು ಬಿಡುತ್ತಿದ್ದನು, ಆಗ ನೀನೂ ಸಹ ಬಾಣವನ್ನು ಬಿಟ್ಟೆ, ಕಿರಾತನ ಜೊತೆಯಲ್ಲಿ ವಿವಾದ ಉಂಟಾಯಿತು, ಯುದ್ಧವಾಯಿತು. ಅಂತಹ ನೀನು ಸಂನ್ಯಾಸಿಯಾಗುವ ಮಾತನ್ನು ಆಡುತ್ತಿರುವೆಯಲ್ಲ, ಏನು ಇದು ಸಂಭವವೇ? ಕರ್ಮವೇಗವನ್ನು ನೀನು ತಡೆಯಲಾರೆ. ವಿಪರೀತವಾದ ಕರ್ಮವನ್ನು ಮಾಡಿಬಿಟ್ಟೆಯಾ?"

ಯೋಗಿಯಲ್ಲಿ ಕರ್ಮವು ಅಶುಕ್ಲ ಮತ್ತು ಅಕೃಷ್ಣವಾಗಿದೆ. ಯಾವ ಕರ್ಮಗಳು? ಯೋಗಸಿದ್ಧಿಯ ನಂತರ ಸಂಚಿತ ಪುಣ್ಯ-ಪಾಪಗಳು ವಿಲಯವಾಗುವುದು. ಆದರೆ ಪ್ರಾರಬ್ಧ ಕರ್ಮವು ಯೋಗಿಗಳದ್ದೂ ಸಹ ಹೇಗಿದೆಯೋ ಹಾಗೆಯೇ ಇರುತ್ತದೆ. ಯೋಗಿಯಾಗಿರಲಿ ಅಥವಾ ಭೋಗಿಯಾಗಿರಲಿ ಪ್ರಾರಬ್ಧ ಕರ್ಮವು ಯಾರನ್ನೂ ಸಹ ಬಿಡುವುದಿಲ್ಲ.

ಒಂದು ಪ್ರಾಚೀನ ಕಥೆಯಿದೆ - ರಾಜಾ ವಿಕ್ರಮಾದಿತ್ಯನ ರಾಜ್ಯಭಾರ ನಡೆಯುತ್ತಿತ್ತು. ಈ ವರ್ತಮಾನ ಯುಗದಲ್ಲಿ, ಕಲಿಯುಗದಲ್ಲಿ ವಿಕ್ರಮಾದಿತ್ಯನ ಸಮಾನ ಸತ್ಯನಿಷ್ಠ ನ್ಯಾಯಪ್ರಿಯನಾದ ರಾಜನು ಮತ್ತೊಬ್ಬನಾಗಿಲ್ಲ. ಅವನು ಸಂತರನ್ನು ಬಹಳ ಭಕ್ತಿಯಿಂದ ಕಾಣುತ್ತಿದ್ದನು. ಒಬ್ಬ ಯೋಗಿಸಂತನ ದರ್ಶನಕ್ಕಾಗಿ ಅವನು ಮಠಕ್ಕೆ ಹೋದನು. ಏಕೆಂದರೆ, ಅವನಿಗೆ ದೃಢವಾದ ವಿಶ್ವಾಸವಿತ್ತು; ಸಂತರ ಆಶೀರ್ವಾದದಲ್ಲಿ, ಅವರ ಕೃಪಾಶೀರ್ವಾದಗಳಿಲ್ಲದೆ ಜೀವನದ ಸಫಲತೆ ಉಂಟಾಗುವುದಿಲ್ಲವೆಂಬ ನಂಬಿಕೆ ಇತ್ತು. ಅದು ಯೋಗ ಲಕ್ಷಣ ಸಂಪನ್ನವಾದ ಮಠವಾಗಿತ್ತು. ಬಹಳ ವಿಶಾಲವಾಗಿ ಮತ್ತು ಸುಂದರವಾಗಿತ್ತು. ತನ್ನ ಸೈನಿಕರನ್ನು ದೂರದಲ್ಲಿ ನಿಲ್ಲಿಸಿ, ತಾನು ಬರಿಗಾಲಿನಲ್ಲಿ ಅಲ್ಲಿಂದ ಮಠದ ತನಕ ವಿಕ್ರಮಾದಿತ್ಯನು ಬಂದನು. ಅಲ್ಲಿ ಹೊರಗಡೆ ವೇದಿಕೆಯೊಂದಿತ್ತು. ಯೋಗ ಮಠದ ಹೊರಗಡೆ ಮಂಟಪವಿರುತ್ತದೆ. ಕುಳಿತುಕೊಳ್ಳಲು ವೇದಿಕೆ ಇರುತ್ತದೆ. ಯಾರಾದರೂ ಆಗಂತುಕನು ಬಂದರೆ ಮೊದಲು ಅಲ್ಲಿ ಕುಳಿತುಕೊಂಡು ವಿಶ್ರಮಿಸುತ್ತಾನೆ. ರಾಜಾ ವಿಕ್ರಮಾದಿತ್ಯನು ಮಂಟಪಕ್ಕೆ ಬಂದನು. ಯೋಗಿಯ ಶಿಷ್ಯರು ಅವನಿಗೆ ಸ್ವಾಗತವನ್ನು ಬಯಸಿದರು ಮತ್ತು ಅವನನ್ನು ಅಲ್ಲಿ ಕುಳ್ಳಿರಿಸಿದರು. ರಾಜನು ತನ್ನ ಆಶಯವನ್ನು ಬಹಳ ನಮ್ರತಾ ಪೂರ್ವಕವಾಗಿ ನಿವೇದಿಸಿದನು. "ನಾನು ಯೋಗಿರಾಜನ ದರ್ಶನ" ಕ್ಕೆ ಬಂದಿರುವುದಾಗಿ ತಿಳಿಸಿದನು. ಶಿಷ್ಯರು ಹೇಳಿದರು "ಒಂದೆರಡು ದಿವಸದಿಂದ ಗುರೂಜಿಯವರು ಜನರನ್ನು ಭೇಟಿ ಮಾಡುವುದನ್ನು ನಿಲ್ಲಿಸಿದ್ದಾರೆ" ಎಂದರು. ವಿಕ್ರಮಾದಿತ್ಯನು ರಾಜನಿದ್ದನು. ರಾಜರಿಗೆ ಅಹಂ ಅನ್ನುವುದು ಇದ್ದೇ ಇರುತ್ತದೆ, ಅವನು ಹೇಳಿದ. "ನಾನು ರಾಜಾ ವಿಕ್ರಮಾದಿತ್ಯ, ಯೋಗಿಯವರನ್ನು ಭೇಟಿ ಮಾಡುವುದು ಅವಶ್ಯಕವಾಗಿದೆ. ತಾವು ಅವರಿಗೆ ತಿಳಿಸಿ". ರಾಜನ ಹೆಸರನ್ನು ಕೇಳಿ ಶಿಷ್ಯರು ಚಕಿತರಾದರು, ಅವರು ಒಳಗಡೆ ಹೋದರು, ಸ್ವಲ್ಪ ಹೊತ್ತಿನ ನಂತರ ಬಂದು ಹೇಳಿದರು, "ಗುರೂಜಿಯವರು ಈ ಸಮಯದಲ್ಲಿ ಭೇಟಿಯಾಗಲು ಅಸಮರ್ಥರಾಗಿದ್ದಾರೆ, ಸ್ವಲ್ಪ ಕಾಲದ ನಂತರ ಭೇಟಿಯ ಸಂಭವವಿದೆ" ಎಂದರು. ಕಾರಣವನ್ನು ಕೇಳಿದ್ದಕ್ಕೆ, "ಗುರುಗಳು ಸನ್ನಿಪಾತ ಜ್ವರದಿಂದ ಬಳಲುತ್ತಿದ್ದಾರೆ ತಾವು ಎರಡು ದಿವಸ ಬಿಟ್ಟು ಭೇಟಿಯಾಗಬಹುದು" ಎಂದರು. ಆಗ ವಿಕ್ರಮಾದಿತ್ಯನು ಆಶ್ಚರ್ಯದಿಂದ ಹೇಳಿದ "ಯೋಗಿಗೆ ಸನ್ನಿಪಾತ ಜ್ವರ! ಯಾವ ತರಹದ ಜ್ವರ, ಸರಿ, ಜ್ವರವಿದ್ದಿದ್ದೇ ಆದರೆ, ಈಗ ಅವರನ್ನು ಭೇಟಿ ಮಾಡಲೇಬೇಕು. ಖಾಯಿಲೆಯಾದವರ ಶುಶ್ರೂಷೆಯನ್ನು ಮಾಡುವುದು ನನ್ನ ಕರ್ತವ್ಯ" ಎಂದನು. ಶಿಷ್ಯರು ಪುನಃ ಒಳಗಡೆ ಹೋದರು. ಸ್ವಲ್ಪ ಹೊತ್ತಿನ ಮೇಲೆ ಹೊರಬಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳಿದರು, "ಗುರುಗಳು ಹೊರಗಡೆಗೆ ಬರುತ್ತಿದ್ದಾರೆ". ಅದಕ್ಕೆ ವಿಕ್ರಮಾದಿತ್ಯನು "ಅವರನ್ನು ನಡೆಯಿಸುವ ಕಷ್ಟವೇಕೆ. ನಾನೇ ಒಳಗೆ ಹೋಗಿ ಭೇಟಿಯಾಗಿದ್ದರೆ ಏನು ಹಾನಿಯಾಗುತ್ತಿತ್ತು" ಎಂದು ಹೇಳುತ್ತಿರುವಷ್ಟರಲ್ಲಿ ಗುರುಗಳು ಹೊರಗೆ ಕಾಣಿಸಿಕೊಂಡರು. ರಾಜನು ಅವರ ಚರಣವನ್ನು ಸ್ಪರ್ಶಿಸಿದನು. ಇಬ್ಬರೂ ಕುಳಿತುಕೊಂಡರು. ವಿಕ್ರಮಾದಿತ್ಯನು ಸೂಕ್ಷ್ಮವಾಗಿ ಅವಲೋಕಿಸಿದ ಗುರುಗಳು ಆರೋಗ್ಯವಾಗಿಯೇ ಕಾಣುತ್ತಿದ್ದರು. ಯೋಗಿರಾಜರು ಕುಶಲವನ್ನು ಕೇಳಿದರು. ರಾಜನು ಹೇಳಿದ "ಮೊದಲು ನನ್ನ ಒಂದು ವಿಶೇಷ ಜಿಜ್ಞಾಸೆಗೆ ಉತ್ತರವನ್ನು ಕೃಪೆ ಮಾಡಿ ಕೊಡಬೇಕು" ಎಂದನು. ಯೋಗಿರಾಜನು ಆಯಿತು ಎಂದರು ಅದಕ್ಕೆ ರಾಜನು "ನಾನು ತಮ್ಮ ಹೆಸರನ್ನು ಬಹಳ ದೊಡ್ಡವರ ಬಾಯಿಯಿಂದ ಕೇಳಿದ್ದೇನೆ. ಇಂತಹ ಯೋಗೇಶ್ವರನ ಸೇವೆಯಲ್ಲಿರುವವರು ಅನೃತ (ಸುಳ್ಳು) ವನ್ನು ಹೇಗೆ ನುಡಿಯುತ್ತಾರೆ?" ಯೋಗಿ ಹೇಳಿದರು "ಎಂತಹ ಅನೃತ?" ಅದಕ್ಕೆ ವಿಕ್ರಮಾದಿತ್ಯನು "ತಮ್ಮ ಶಿಷ್ಯರು, ತಾವು ಸನ್ನಿಪಾತ ಜ್ವರದಿಂದ ಪೀಡಿತರಾಗಿದ್ದೀರಿ ಆದುದರಿಂದ ತಮ್ಮನ್ನು ಭೇಟಿ ಮಾಡಲು ಆಗುವುದಿಲ್ಲ ಎಂದರು. ಆದರೆ ತಾವುಗಳು ಒಳ್ಳೆಯ ಆರೋಗ್ಯದಿಂದಲೇ ಇದ್ದಿರಿ" ಎಂದನು. ಯೋಗಿಯು ನಗುತ್ತಾ ಒಳಗೆ ನಡಿಯಿರಿ ಎಂದು ಹೇಳಿ ರಾಜನನ್ನು ಕರೆದುಕೊಂಡು ಒಳಗೆ ಹೋದರು. ಅಲ್ಲಿ ಹಾಸಿಗೆಯ ಮೇಲೆ ಕಂಬಳಿಯು ಬಿದ್ದಿತ್ತು ಮತ್ತು ಆ ಕಂಬಳಿಯು ಜೋರಾಗಿ ನಡುಗುತ್ತಿತ್ತು. ರಾಜನಿಗೆ ಆಶ್ಚರ್ಯವಾಯಿತು, "ಈ ಕಂಬಳಿಯು ಹೀಗೇಕೆ ನಡುಗುತ್ತಿದೆ?" ಎಂದನು. ಅದಕ್ಕೆ ಯೋಗಿಯು - "ನನ್ನನ್ನು ಭೇಟಿ ಮಾಡುವ ನಿಮ್ಮ ಒತ್ತಾಯದ ಆಗ್ರಹವನ್ನು ಕಂಡು, ನಾನು ನನ್ನ ಜ್ವರವನ್ನು ಈ ಕಂಬಳಿಗೆ ಕೊಟ್ಟು ನಾನು ಹೊರಕ್ಕೆ ಬಂದೆ" ಎಂದರು. ವಿಕ್ರಮಾದಿತ್ಯನು ಆಶ್ಚರ್ಯ ಮತ್ತು ವಿಚಾರಕ್ಕೊಳಗಾದನು. ರಾಜನು ಹೇಳಿದ "ಭಗವನ್! ಈಗ ನನ್ನ ಜಿಜ್ಞಾಸೆ ಇನ್ನೂ ತೀವ್ರಗೊಂಡಿದೆ" ಮತ್ತು ಗುರುಗಳ ಆದೇಶವನ್ನು ಪಡೆದು ಮುಂದೆ ಇತೆಂದನು "ಯಾವ ಯೋಗಿಯು ಇಷ್ಟೊಂದು ಬಲಶಾಲಿಯಾಗಿದ್ದಾನೋ ತನ್ನ ಜ್ವರವನ್ನು ಕಂಬಳಿಗೆ ಕೊಡಬಲ್ಲನೋ ಅವನು ಆ ಜ್ವರವನ್ನು ನಾಶಪಡಿಸಲಿಲ್ಲವೇಕೆ?" ಅದಕ್ಕೆ ಯೋಗಿಯು ನಗುತ್ತಾ ಹೇಳಿದನು. "ರಾಜನ್! ಯೋಗಬಲದಿಂದ ನಾನು ಜ್ವರವನ್ನು ಕಂಬಳಿಗೆ ಕೊಡಬಲ್ಲೆನು ಆದರೆ, ಇದು ಪ್ರಾರಬ್ಧವಾಗಿದೆ. ಇದನ್ನು ನಾನು ನಷ್ಟಪಡಿಸಲಾರೆ". ಅದಕ್ಕೆ ವಿಕ್ರಮಾದಿತ್ಯನು ಮುಂದೆ ಪ್ರಶ್ನಿಸಿದನು, "ಆದರೆ ತಮ್ಮ ಹತ್ತಿರ ಬರುವ ಜನರ ಕಷ್ಟ ನಿವಾರಣೆಯಾಗುತ್ತದೆ, ಅದೂ ಸಹ ಪ್ರಾರಬ್ಧವಲ್ಲವೆ". ಅದಕ್ಕೆ ಯೋಗೀಶ್ವರರು "ರಾಜನ್! ಮಂದ ಪ್ರಾರಬ್ಧಗಳನ್ನು ಔಷಧಿಗಳಿಂದ ಸಾಮಾನ್ಯ ಪುರುಷಾರ್ಥದಿಂದ ನಷ್ಟಮಾಡಬಹುದು. ತೀವ್ರ ಪ್ರಾರಬ್ಧವನ್ನು ಯೋಗಿಯು ತನ್ನ ಯೋಗಬಲದ್ದಿಂದ ನಷ್ಟಮಾಡಬಲ್ಲನು. ಆದರೆ ತೀವ್ರತರವಾದ ಪ್ರಾರಬ್ಧವನ್ನು ಸ್ವಯಂ ಬ್ರಹ್ಮನಿಗೂ ಸಹ ಅಳಿಸಲಾಗುವುದಿಲ್ಲ".

ನಾವುಗಳು ದೇವತೆಗಳಿಗೆ ನಮಸ್ಕಾರವನ್ನು ಮಾಡುತ್ತೇವೆ. ಆದರೆ ಅವರೂ ಸಹ ದುಷ್ಟವಿಧಿಗಳ ಆಧೀನರಾಗಿರುತ್ತಾರೆ. ಆದುದರಿಂದ, ಒಂದು ಪಕ್ಷ ನಾವು ವಿಧಾತನಿಗೂ ನಮಸ್ಕಾರ ಮಾಡಿದರೆ, ಆ ವಿಧಾತನೂ ಸಹ ಸ್ವತಂತ್ರ ರೀತಿಯಿಂದ ನಮಗೆ ಫಲಗಳನ್ನು ಕೊಡಲು ಸಮರ್ಥನಾಗಿಲ್ಲ, ಕರ್ಮಕ್ಕನುಗುಣವಾಗಿಯೇ ಫಲವನ್ನು ಕೊಡತ್ತಾನೆ. ಫಲಗಳು ಕರ್ಮಕ್ಕನುಗುಣವಾಗಿಯೇ ದೊರೆಯುತ್ತವೆ ಎಂದ ಮೇಲೆ ದೇವತೆಗಳು ಮತ್ತು ವಿಧಾತನ ಸಂಬಂಧವಾದರೂ ಏಕೆ ಬೇಕು. ಯಾವುದರ ಮೇಲೆ ವಿಧಾತಾನದೂ ಸಹ ಏನೂ ನಡೆಯುವುದಿಲ್ಲವೂ ಆ ಕರ್ಮಕ್ಕೆಯೇ ಏಕೆ ನಮಸ್ಕಾರ ಮಾಡಬಾರದು. ಭತೃಹರಿ ಹೇಳುವುದೇನೆಂದರೆ -

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಹ್ಮಾಯೇನ ಕುಲಾಲವನ್ನಿಯಮಿತೊ ಬ್ರಹ್ಮಾಂಡಭಾಂಡೋದರೆ ।
ವಿಷ್ಣುರ್ಯೇನ ದಶಾವತಾರಗಹನೆ ಕ್ಷಿಪ್ತೊ ಮಹಾಸಂಕಟೆ ॥
ರುದ್ರೋಯೇನ ಕಪಾಲ ಪಾಣಿಪುಟಕೆ ಭಿಕ್ಷಾಟನಂ ಕಾರಿತಃ ।
ಸೂರ್ಯೋ ಬ್ರಾಮ್ಯತಿ ನಿತ್ಯಮೇವ ಗಗನೆ ತಸ್ಮೈ ನಮಃ ಕರ್ಮಣೆ ॥

- ಭ-ನೀತಿಶತಕಮ್

ಅರ್ಥಾತ್ : "ಯಾರು ಬ್ರಹ್ಮಾಂಡ ರೂಪಿ ಪಾತ್ರೆಯನ್ನು ಮಾಡಲು ಕುಂಬಾರನ ರೀತಿ ಬ್ರಹ್ಮನನ್ನು ನಿಯುಕ್ತಿ ಮಾಡಿದನೋ, ವಿಷ್ಣುವನ್ನು ದಶಾವತಾರ ಮಾಡುವ ಸಲುವಾಗಿ ಮಹಾವಿಪತ್ತಿನಲ್ಲಿ ಹಾಕಿದನೋ, ಯಾರು ಮಹಾದೇವನನ್ನೂ ಸಹ ಕೈಯಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿದು ಭಿಕ್ಷೆಯನ್ನು ಬೇಡಲು ಕಳುಹಿಸಿದನೋ ಮತ್ತು ಯಾರ ಕಾರಣದಿಂದ ಸೂರ್ಯನಿಗೂ ಸಹ ಆಕಾಶದಲ್ಲಿ ನಿತ್ಯವೂ ಭ್ರಮಣ ಮಾಡಲು ಹಚ್ಚಿದನೋ ಅಂತಹ ಕರ್ಮಕ್ಕೆ ನಮಸ್ಕಾರಗಳು".

ಬ್ರಹ್ಮಾದಿಗಳು ಸ್ವಯಂ ತಮ್ಮ ಪ್ರಾರಬ್ಧಗಳನ್ನು ನಾಶಪಡಿಸಿಕೊಳ್ಳಲಾಗಲಿಲ್ಲ. ಪ್ರಾರಬ್ಧ ವಶವಾಗಿ ಬ್ರಹ್ಮನು ಅನೃತ (ಸುಳ್ಳು) ವನ್ನು ಹೇಳಿದನು. ಅದರ ಪರಿಣಾಮವಾಗಿ ಶಂಕರನು ಅನೃತವಾದಿ ಬ್ರಹ್ಮನ ಶಿರವನ್ನು ಕಡಿದು ಹಾಕಿದನು.

"ಪ್ರಾರಬ್ಧಂ ತ್ವಿಹ ಭುಜ್ಯತಾಮಥ ಪರಬ್ರಹ್ಮಾತ್ಮನಾ ಸ್ಥೀಯತಾಮ್"

ಪ್ರಾರಬ್ಧ ಫಲವು ಏನೇ ಇದ್ದರೂ ಸಹ ಅದನ್ನು ಭೋಗಿಸಬೇಕಾಗುತ್ತದೆ. ಬ್ರಹ್ಮ ಸ್ಥಿತಿಯಲ್ಲಿದ್ದರೂ ಸಹ ದುಃಖೋತ್ಪತ್ತಿಯಾಗದೇ ಇರುವುದು ಅಸಂಭವವಾಗಿದೆ -

ಬೀಜಂ ಮನೋ ಭವತಿ ಸಂಸೃತಿಬಂಧನೇ ಚ
ತನ್ಮೋಕ್ಷಣೆ ಚ ನ ತು ಜಾತು ಬಹಿಃ ಪ್ರಪಂಚಃ ।
ಬಂಧೇ ವಿಕಲ್ಪವಿಷಯಂ ಮನ ಏವ ಹೇತುರ್
ಮೋಕ್ಷೇ ಸಮಂ ಸಹಜವೃತ್ತಿ ನಿಜಪ್ರತಿಷ್ಠಿತಮ್ ॥

ಅರ್ಥಾತ್ : "ಸಂಸಾರದ ಬಂಧನದಲ್ಲಿ ಮತ್ತು ಮೋಕ್ಷದಲ್ಲಿ ಮನಸ್ಸೇ ಬೀಜವಾಗಿದೆಯೇ ಹೊರತು ಬಾಹ್ಯ ಪ್ರಪಂಚವಲ್ಲ, ಬಂಧನದಲ್ಲಿ ವಿಕಲ್ಪದಿಂದ ವಿಷಮವಾಗಿರುವ ಮನಸ್ಸು ಹೇತುವಾಗಿದೆ ಮತ್ತು ಮೋಕ್ಷದಲ್ಲಿ ಸಹಜ ಪ್ರವೃತ್ತಿಯಿಂದ ಕೂಡಿ ತನ್ನಲ್ಲಿ ತಾನು ಪ್ರತಿಷ್ಠಿತವಾದ ಮನಸ್ಸು ಕಾರಣವಾಗಿದೆ. ಎಲ್ಲದಕ್ಕಿಂತ ಮೊದಲು ತಿಳಿಯಬೇಕಾಗಿರುವುದೆಂದರೆ ಸಂಸಾರವು ಬಂಧನವಾಗಿದೆಯೇ ಹೊರತು ಜಗತ್ತು ಬಂಧನವಲ್ಲ, ಸಂಸಾರವೆಂದರೇನು? ಎಲ್ಲಿ ಅನುಕೂಲತೆ ಮತ್ತು ಪ್ರತಿಕೂಲತೆಯ ಪ್ರಥಮವಾಗಿ ಭಾನವಾಗುತ್ತದೆಯೋ (ಅನುಭವ) ಹಾಗೂ ಹೇಯತೆ ಮತ್ತು ಉಪಾದೇಯುತೆಯು ಭಾವವುಂಟಾಗುತ್ತದೆಯೋ, ಪುನಃ ರಾಗ ಮತ್ತು ದ್ವೇಷಗಳುಂಟಾಗುತ್ತದೆಯೋ ಮತ್ತು ಇವೆಲ್ಲವುಗಳನ್ನು ಒಡಗೂಡಿ ಒಳಗೆ ಪ್ರವೇಶಿಸುತ್ತದೆಯೋ ಅದಕ್ಕೆ ಸಂಸಾರವೆನ್ನುತ್ತಾರೆ. ಗುಲಾಬಿ ಹೂವಿನ ಹಾರವನ್ನು ಕಂಡಾಗ ಅನುಕೂಲತೆ ಪ್ರತೀತವಾಯಿತು. ಉಪಾದೇಯ ಭಾವ (ಗ್ರಹಿಸುವ ಇಚ್ಛೆ) ಉಂಟಾಯಿತು. ಅರ್ಥಾತ್ ರಾಗ ಉಂಟಾಯಿತು. ಅದು ಒಳಗೆ ಪ್ರವಿಷ್ಟವಾಯಿತು. ಕಪ್ಪು ಸರ್ಪವು ಕಂಡಾಗ, ಪ್ರತಿಕೂಲತೆ ಪ್ರತೀತವಾಯಿತು, ಹೇಯ ಭಾವವು ಹುಟ್ಟಿತು, ದ್ವೇಷ ಉಂಟಾಯಿತು. ಒಳಗಡೆ ಭಯಭಾವದಿಂದ ಪ್ರವಿಷ್ಟವಾಯಿತು. ಯಾವುದು ಒಳಗಡೆ ಪ್ರವಿಷ್ಟವಾಯಿತೋ ಅದೇ ಸಂಸಾರ. ಸರ್ವಾಂಗ ಸುಂದರವಾದ ವ್ಯಕ್ತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಣಿಸಿತು. ಅನುಕೂಲತೆ, ಉಪಾದೇಯತೆ ಮತ್ತು ರಾಗಗಳು ಜೊತೆಯಲ್ಲಿಯೇ ಉಂಟಾದವು. ಆ ವ್ಯಕ್ತಿ ಮನಸ್ಸಿನಲ್ಲಿ ಪ್ರವಿಷ್ಟವಾಯಿತು. ಒಂದು ಕುರೂಪ ವ್ಯಕ್ತಿ ಕಾಣಿಸಿತು, ಶರೀರವು ಸುಕ್ಕುಗಟ್ಟಿದೆ, ಖಾಯಿಲೆಯಿಂದ ಪೀಡಿತನಾಗಿದೆ, ಘೃಣಾ ಉತ್ಪನ್ನವಾಗುವಂತೆ ಕಾಣುತ್ತಿವೆ. ಆಗ ಪ್ರತಿಕೂಲತೆ, ಹೇಯತೆ ಮತ್ತು ದ್ವೇಷ ಅರ್ಥಾತ್ - ಈ ವ್ಯಕ್ತಿ, ಇನ್ನು ನನ್ನ ಮುಂದೆ ಎಂದಿಗೂ ಬರಬಾರದು ಎಂಬುವ ದ್ವೇಷ ಉಂಟಾಯಿತು. ಅದೇ ರೂಪದಲ್ಲಿ ಅದು ಒಳಗಡೆ ಪ್ರವಿಷ್ಟವಾಯಿತು, 'ಇದೇ ಸಂಸಾರವಾಗಿದೆ. ರಾಗ-ದ್ವೇಷ, ಮೋಹ, ಮಮತಾ ಮುಂತಾದವುಗಳಿಂದ ಅಂತಃ ಪ್ರವಿಷ್ಟ ಜಗತ್ತಿನ ಚಿತ್ರವೇ ಸಂಸಾರವಾಗಿದೆ. ಹೊರಗಿನ ಪ್ರಪಂಚ ಸಂಸಾರವಲ್ಲ, ಸಂಸಾರ ಒಳಗಡೆ ಇದೆ. ಮನಸ್ಸಿನಲ್ಲಿದೆ.

ಯಾವಾಗ ಸಂಸಾರ ಅಂತಃ ಪ್ರವಿಷ್ಟವಾಯಿತೋ, ಆಗ ಅನೇಕ ವಿಕಲ್ಪಗಳು ಪ್ರಾರಂಭವಾದವು. ವಿರುದ್ಧ ಕಲ್ಪವೇ ವಿಕಲ್ಪವಾಗಿದೆ. ಇದು ನನಗೆ ಸಿಗುತ್ತದೋ ಇಲ್ಲವೊ, ನನಗೆ ಅನುಕೂಲವಾಗಿ ಇರುತ್ತದೋ ಅಥವಾ ಇಲ್ಲವೊ. ನನ್ನ ಉಪಭೋಗದ ವಿಷಯವಾಗುತ್ತೊ ಅಥವಾ ಇಲ್ಲವೊ ಇತ್ಯಾದಿ ರೀತಿಗಳಿಂದ ಅವುಗಳ ಚಿಂತನೆ, ವಿರುದ್ಧ ಕಲ್ಪನೆಗಳ ಮೂಲಕ ಆಗುತ್ತಿರುತ್ತದೆ. ಮನಸ್ಸು ಈ ತರಹ ವಿಕಲ್ಪಾ ಕ್ರಾಂತವಾಗಿರುತ್ತದೆ. ಆಗ ಮನಸ್ಸು ವಿಷಮವಾಗುತ್ತದೆ. ಮೇಲೆ-ಕೆಳಗೆ ತೂಗುತ್ತಿರುತ್ತದೆ. ಅದರಲ್ಲಿ ಕೆಲವು ಸಾರಿ ಸುಖಾನುಭೂತಿ ಕೆಲಸಾರಿ ದುಃಖಾನುಭೂತಿ, ಕೆಲ ಸಲ ಮೂಢತೆ ಈ ಎಲ್ಲಾ ವಿಕಲ್ಪಗಳಾಗುತ್ತಿರುತ್ತವೆ. ಈ ವಿಕಲ್ಪಗಳಲ್ಲಿ ಆತ್ಮ ಕಾಣಿಸಿಕೊಳ್ಳುವುದಿಲ್ಲ. ಆತ್ಮ ಅಖಂಡವಾಗಿದೆ. ಭಿನ್ನ ವೃತ್ತಿಯಿಂದ ಕೂಡಿದ ವಿಷಮ ಮನಸ್ಸಿನಲ್ಲಿ ಅವನು ಪ್ರಕಾಶಿತನಾಗುವುದಿಲ್ಲ. ಹೇಗೆ ಚಂಚಲವಾದ ನೀರಿನಲ್ಲಿ ನಮ್ಮ ಮುಖವು ಪ್ರತಿಬಿಂಬಿತವಾಗುವುದಿಲ್ಲವೋ ಹಾಗೆ. ಒಂದನೆಯದಾಗಿ ರಾಗ-ದ್ವೇಷಾದಿಮಯ ಸಂಸಾರವನ್ನು ಒಳಗಡೆ ಪ್ರತಿಷ್ಠೆ ಮಾಡಿದ್ದಾಯಿತು ಮತ್ತು ಒಳಗಡೆ ಯಾವ ಆತ್ಮವಿತ್ತೋ ಅದರ ವಿಸ್ಮರಣೆಯಾಯಿತು. ಇದನ್ನೇ ಹೇಳಿರುವುದು.

"ಬಂಧೇ ವಿಕಲ್ಪವಿಷಮ ಮನ ಏವ ಹೇತುಃ"

ಇದಕ್ಕೆ ವಿಪರೀತವಾಗಿ, ಸಮವಾದ ಮನಸ್ಸು ಮೋಕ್ಷಕ್ಕೆ ಹೇತುವಾಗುತ್ತದೆ. ಬ್ರಹ್ಮನು ಸ್ವಯಂ ಸಮರೂಪನಾಗಿದ್ದಾನೆ. ಚಿತ್ತವು ಯಾವಾಗ ಸಮವಾಗಿರುತ್ತದೋ ಆಗ ಆ ಸಮಬ್ರಹ್ಮನ ಗ್ರಹಣ ಮಾಡುತ್ತದೆ. "ಸಹಜ ವೃತ್ತಿ" ಸಹಜ ಸ್ವಭಾವದಿಂದ ಅವನು ಇರುತ್ತಾನೆ. ಪ್ರಕಾಶಿತವನ್ನಾಗಿ ಮಾಡುವುದೇ ಚಿತ್ತದ ಸ್ವಭಾವವಾಗಿದೆ. ರಾಗ-ದ್ವೇಷಾದಿ ದೋಷಾಂತರಗಳು ಯಾವಾಗ ಇರುವುದಿಲ್ಲವೋ ಆಗ ಚಿತ್ತವು ಕೇವಲ ಪ್ರಕಾಶವನ್ನು ಮಾತ್ರ ಮಾಡುತ್ತಿರುತ್ತದೆ. ರಾಗ-ದ್ವೇಷಾದಿ ದೋಷಗಳು ಆಗವುದರಿಂದ ಸಂಸಾರವು ಪ್ರವಿಷ್ಟವಾಗುತ್ತದೆ. ರಾಗ-ದ್ವೇಷಾದಿಗಳ ಅಭಾವದಿಂದ ಸಂಸಾರವು ಒಳಗಡೆ ಪ್ರವಿಷ್ಟವಾಗುವುದಿಲ್ಲ. ಆಗ ಚಿತ್ತ ಆತ್ಮಪ್ರತಿಷ್ಠಿತವಾಗುತ್ತದೆ. ರಾಗ-ದ್ವೇಷ ಮೋಹ-ಮಮತಾ ಇವುಗಳು ಸಂಸಾರವನ್ನು ಒಳಗೆ ಎಳೆದುಕೊಂಡು ಬರುತ್ತವೆ. ಆಗ ಚಿತ್ತವು ಅದನ್ನು ಪ್ರಕಾಶಿತಗೊಳಿಸುತ್ತದೆ ಮತ್ತು ಅದರಲ್ಲಿ ಪ್ರತಿಷ್ಠಿತವಾಗುತ್ತದೆ. ಅವು ಒಳಗಡೆ ಬರದೇ ಇದ್ದರೆ ಏನೇನು ಒಳಗಡೆ ಇರುತ್ತದೋ ಅವುಗಳನ್ನೇ ಪ್ರಕಾಶಿತಗೊಳಿಸುತ್ತದೆ ಮತ್ತು ಅದರಲ್ಲಿ ಪ್ರತಿಷ್ಠಿತನಾಗುತ್ತದೆ. ಚಿತ್ತದ ಸ್ವಭಾವವೆಂದರೆ ಏನು ಎದುರಿಗೆ ಇದೆಯೋ ಅದನ್ನು ನೋಡುವುದು ಮತ್ತು ಅದರಲ್ಲಿಯೇ ಪ್ರತಿಷ್ಠಿತವಾಗುವುದು. ಯೋಗಶಾಸ್ತ್ರಕಾರರು ರಾಗ-ದ್ವೇಷಗಳನ್ನು ಚಿತ್ತದ ಸಾಕ್ಷಾತ್ ಕಾರ್ಯವೆಂದು ತಿಳಿಯುವುದಿಲ್ಲ. ಚಿತ್ತದ ಮೇಲೆ ಬರುವ ಆಗಂತುಕ ಗುಣಗಳೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಗ-ದ್ವೇಷಾದಿಗಳನ್ನುಂಟು ಮಾಡುತ್ತವೆ ಮತ್ತು ಸಂಸಾರವನ್ನು ಒಳಕ್ಕೆ ಬರಮಾಡಿಕೊಳ್ಳುತ್ತವೆ. ಈ ರಾಗ-ದ್ವೇಷಗಳಿಂದ ರಹಿತನಾಗುವುದೇ ಮನಸ್ಸನ್ನು ಜಯಿಸುವುದು ಎಂದರ್ಥ. ರಾಗ-ದ್ವೇಷಗಳ ಸಹಿತನಾಗಿರುವುದೇ "ಅಜಿತ ಮನಸ್ಕತಾ" ಅರ್ಥಾತ್ ಮನಸ್ಸನ್ನು ಜಯಿಸಿಲ್ಲದವನು.

ಇದನ್ನೇ ಬೇರೆ ಉದಾಹರಣೆಯಿಂದ ಸ್ಪಷ್ಟಪಡಿಸಿದೆ :

ಬೇಸಿಗೆಯ ಕಾಲದಲ್ಲಿ ನಾವು ಧೂಳಿನ ರಸ್ತೆಯಲ್ಲಿ ನಡೆದಾಡುತ್ತೇವೆ. ಆಗ ಏನೂ ಆಗುವುದಿಲ್ಲ. ಮನೆಗೆ ಬಂದು ಕಾಲನ್ನು ತೊಳೆಯಬಹುದು ಅಥವಾ ತೊಳೆಯದೇ ಇರಬಹುದು. ಅಂಥಹ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ. ಆದರೆ ಮಳೆಗಾಲದಲ್ಲಿ, ಮಳೆಯಿಂದ ಧೂಳು ಮಣ್ಣು ಕೆಸರಾಗುತ್ತದೆ. ಕಾಲುಗಳು ಕೊಳೆಯಾಗುತ್ತವೆ. ಯಾಕೆ ಹೀಗಾಯಿತು? ಕೇವಲ ಧೂಳು ಮತ್ತು ಮಣ್ಣಿನಿಂದಲೆ? ಇಲ್ಲ, ಹಾಗಾಗಿದ್ದರೆ ಬೇಸಿಗೆಯಲ್ಲೂ ಸಹ ಕಾಲುಗಳು ಕೊಳೆಯಾಗಬೇಕಿತ್ತು. ನೀರು ಬಿದ್ದು, ಅದರಿಂದ ಕೆಸರಾಯಿತು. ಕಾಲು ಕೊಳೆಯಾದವು. ಅರ್ಥಾತ್ ಕಾಲು ಕೊಲೆಯಾಗಲಿಕ್ಕೆ ನೀರೇ ಕಾರಣವೆಂದಾಯಿತು. ಕಾಲು ಕೊಳೆಯಾದವು ನೀರಿನಿಂದಾಗಿ. ಈಗ ಕಾಲನ್ನು ಯಾವುದರಿಂದ ಸ್ವಚ್ಛಗೊಳಿಸುವಿರಿ? ನೀರಿನಿಂದಲೇ. ಆಗ ಕಾಲು ಕೊಳೆಯಾಗಲಿಕ್ಕೆ ನೀರು ಕಾರಣವಾಯಿತು ಮತ್ತು ಸ್ವಚ್ಛವಾಗುವುದಕ್ಕೂ ನೀರೇ ಕಾರಣವಾಯಿತು. ಹೀಗೆ, ಇದೇ ಮನಸ್ಸು ಬಂಧನಕ್ಕೆ ಮತ್ತು ಮೋಕ್ಷಕ್ಕೆ ಕಾರಣವಾಗಿದೆ. ಧೂಳು, ಮಣ್ಣಿನ ಜಾಗದಲ್ಲಿ ಇಲ್ಲಿ ಭೋಗಗಳಿವೆ, ವಿಷಯಗಳಿವೆ. ಭೋಗದಲ್ಲಿ ಬಿದ್ದಿರುವ ಮನಸ್ಸು ಬಂಧನಕ್ಕೆ ಕಾರಣ ಮತ್ತು ಅದೇ ಭೋಗ ವಾಸನೆ ರಹಿತವಾದರೆ ಮೋಕ್ಷಕ್ಕೆ ಕಾರಣವಾಗುತ್ತದೆ.

"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ"

ಇದನ್ನೇ ಬೇರೆ ಇನ್ನೊಂದು ದೃಷ್ಟಾಂತದಿಂದ ಸ್ಪಷ್ಟಪಡಿಸಿದೆ.

'ಸಾದಿ' ಎನ್ನುತ್ತಾರೆ ಕುದುರೆ ಸವಾರನಿಗೆ. ಒಬ್ಬ ಕುದುರೆ ಸವಾರ ಅಭ್ಯಸ್ತನಾಗಿದ್ದಾನೆ. ಇನ್ನೊಬ್ಬ ಅನಭ್ಯಸ್ತ, ಹೊಸಬನಾಗಿದ್ದಾನೆ. ಕುದುರೆಗೆ ತಕ್ಷಣವೇ ತಿಳಿಯುತ್ತದೆ ಈ ಸವಾರನು ಅಭ್ಯಸ್ತನೊ ಅಥವಾ ಅನಭ್ಯಸ್ತನೋ ಎನ್ನುವುದು. ಯಾರು ಸುಸಾದಿಯಾಗಿದ್ದಾನೋ ಅವನು ಕುದುರೆಯನ್ನು ಹಿಡಿತದಲ್ಲಿಟ್ಟುಕೊಳ್ಳಬಲ್ಲ. ಅವನು ಅದನ್ನು ಹತ್ತಿ ಸವಾರಿ ಮಾಡಬಲ್ಲ ಮತ್ತು ತನ್ನ ಇಚ್ಛಿತ ಸ್ಥಳಕ್ಕೆ ಮುಟ್ಟಬಲ್ಲ. ಆದರೆ "ಕುಸಾದಿ" ಯಾಗಿದ್ದವನು ಕುದುರೆಯನ್ನು ಹಿಡಿತದಲ್ಲಿಟ್ಟುಲಾರ, ಕುದುರೆ ಎಲ್ಲೆಂದರಲ್ಲಿ ಓಡುತ್ತದೆ. ಗುಂಡಿ, ತಗ್ಗು-ದಿಬ್ಬಗಳಲ್ಲಿ ಜಿಗಿಯುತ್ತಾ ಓಡುತ್ತದೆ ಮತ್ತು ಸವಾರನನ್ನು ಗುಂಡಿಯಲ್ಲಿ ಕೆಡುವುತ್ತದೆ. ಈ ಮನಸ್ಸು ಕುದುರೆಯಂತೆ, "ಸುಸಾದಿ" ಎಂದರೆ "ಸುಯೋಗಿ" ಯು ಮತ್ತು "ಕುಸಾದಿ" ಎಂದರೆ "ಕುಯೋಗಿ" ಯು. ಯಾರು ಯೋಗಾಭ್ಯಾಸವನ್ನು ಸಂಮ್ಯಕ್ ರೀತಿಯಿಂದ ಮಾಡಿದ್ದಾನೋ ಅವನು ಸುಯೋಗಿ. ಯಾರು ಯೋಗಾಭ್ಯಾಸವನ್ನು ಮಾಡಿಲ್ಲವೊ ಅವನು ಕುಯೋಗಿ. "ಸುಯೋಗಿ" ಯನ್ನು ಮನಸ್ಸು ಸಂಸಾರ ಮಾರ್ಗದಿಂದ ಪಾರು ಮಾಡುತ್ತದೆ. "ಕುಯೋಗಿ" ಯನ್ನು ಸಂಸಾರ ಮಾರ್ಗದಲ್ಲಿ ಬೀಳಿಸುತ್ತದೆ. ಭಾಗವತದಲ್ಲಿ ಸುಯೋಗಿ ಕುಯೋಗಿ ಬಗ್ಗೆ ಚರ್ಚಿಸಲಾಗಿದೆ. ನಾರದರು ತನ್ನ ಪೂರ್ವಜನ್ಮದ ವೃತ್ತಾಂತವನ್ನು ವ್ಯಾಸ ಭಗವಾನರಿಗೆ ಹೀಗೆ ಹೇಳುತ್ತಾರೆ.

"ನಾನು ದಾಸೀ ಪುತ್ರನಾಗಿದ್ದೆ. ಸಂತರ ಸೇವೆಯನ್ನು ಮಾಡುವ ಅವಕಾಶ ನನಗೆ ದೊರೆಯಿತು. ಸಂತರು ನನಗೆ ವಾಸುದೇವ ಗಾಯತ್ರಿಯನ್ನು ಬೋಧಿಸಿದರು". ತಾಯಿಯ ಮರಣಾ ನಂತರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಊರನ್ನು ಬಿಟ್ಟು ಬಹಳ ದೂರ ಹೋದೆ. ಬಹಳ ದೂರದ ಕಾಡುಗಳನ್ನು ದಾಟಿ ಪಾರಾಗಿ ಹೋದೆ. ಒಂದು ಸರೋವರವು ಕಾಣಿಸಿತು. ನೀರನ್ನು ಕುಡಿದೆ, ಸ್ನಾನವನ್ನು ಮಾಡಿದೆ, ದಡದಲ್ಲಿ ಒಂದು ಅರಳಿಮರವಿತ್ತು. ಅದರ ಕೆಳಗೆ ಕುಳಿತು ಮತ್ತು ಸಂತರು ಹೇಳಿದ ಕ್ರಮದಂತೆ ಧ್ಯಾನವನ್ನು ಮಾಡಹತ್ತಿದೆ. ಪ್ರೇಮದಿಂದ ನಿರ್ಭಿನ್ನ ಚಿತ್ತದ ಮೂಲಕ, ಭಗವಾನನ ಪಾದ ಕಮಲದ ಧ್ಯಾನವನ್ನು ಮಾಡುತ್ತಾ ನನ್ನ ಕಣ್ಣುಗಳಲ್ಲಿ ಅಶ್ರುಗಳು ತುಂಬಿಕೊಂಡವು. ಆಗ ಶ್ರೀಹರಿಯು ಮೆಲ್ಲಗೆ ಹೃದಯದಲ್ಲಿ ವಿರಾಜಿತನಾದನು. ಸಂತರ ಅಪಾರವಾದ ಕೃಪೆಯಿತ್ತು. ಭಗವಚ್ಚರಣ ಧ್ಯಾನವನ್ನು ಮಾಡುತ್ತಿದ್ದಂತೆ ನನ್ನ ಹೃದಯದಲ್ಲಿ ಹರಿಯ ದರ್ಶನವಾಗ ಹತ್ತಿತು. ಸ್ವಲ್ಪ ಹೊತ್ತು ಮಹಾನ್ ಆನಂದವು ಪ್ರಾಪ್ತವಾಯಿತು. ಆದರೆ ಸ್ವಲ್ಪ ಹೊತ್ತಿನ ನಂತರವೇ ಆ ರೂಪವು ಅದೃಶ್ಯವಾಯಿತು. ಆಮೇಲೆ ನಾನು ಬಹಳ ಪ್ರಯತ್ನ ಮಾಡಿದೆ. ಆದರೆ ಪುನಃ ದರ್ಶನವಾಗಲಿಲ್ಲ. ಆಕಾಶವಾಣಿ ಕೇಳಲು ಶುರುವಾಯಿತು".

ಹಂತಾಸ್ಮಿಂಜನ್ಮನಿ ಭವಾನ್ನ ಮಾಂ ದ್ರಷ್ಟುಮಿಹಾರ್ಹತಿ ।
ಅವಿಪಕ್ವಕಷಾಯಾಣಾಂ ದುರ್ದರ್ಶೋsಹಂ ಕುಯೋಗಿನಾಮ್ ॥

"ಹೇ ಬಾಲಕಾ! ಈಗ ಈ ಜನ್ಮದಲ್ಲಿ ನಿನಗೆ ನನ್ನ ದರ್ಶನವಾಗುವುದಿಲ್ಲ. ಅವಿಪಕ್ವ ಕಷಾಯದವರಾದ ಕುಯೋಗಿಗೆ ನನ್ನ ದರ್ಶನವಾಗುವುದಿಲ್ಲ. ಈಗ ಏನು ನಿನಗೆ ದರ್ಶನವಾಗಿದೆಯೋ ಅದು ಕೇವಲ ಸಂತರ ಕೃಪೆ ಮಾತ್ರದಿಂದ ಉಂಟಾಗಿದೆ. ಮಾರ್ಗದರ್ಶನವಾದಂತೆ ದರ್ಶನವನ್ನು ಪಡೆಯುವುದು ಬಹಳ ಕಠಿಣವಾಗಿದೆ. ಏಕೆಂದರೆ ನೀನು ಇನ್ನೂ ಕುಯೋಗಿಯಾಗಿದ್ದಿಯ, ಸುಯೋಗಿಯಲ್ಲ. ಕುಯೋಗಿ ಮತ್ತು ಸುಯೋಗಿಗಳ ಲಕ್ಷಣಗಳೇನು? ಯಾರು ಅವಿಪಕ್ವ ಕಷಾಯಗಳಾಗಿದ್ದಾರೋ ಅವರು ಕುಯೋಗಿಗಳು, ಯಾರು ಪಕ್ವಕಷಾಯಗಳಾಗಿದ್ದಾರೋ ಅವರು ಸುಯೋಗಿಗಳು. ಕಷಾಯವೆಂದು ಯಾವುದಕ್ಕೆ ಹೇಳುತ್ತಾರೆ?" "ರಾಗ ದ್ವೇಷಾದಯಃ ಕಷಾಯಾಃ". ರಾಗ-ದ್ವೇಷಾದಿಗಳೇ ಕಷಾಯವಾಗಿವೆ. ಮೈ ಮೇಲೆ ಉಂಟಾಗುವ ಕೀವು ತುಂಬಿದ ಗುಳ್ಳೆಗಳಂತೆ. 'ರಾಗ' ವು ಸಾವಿರಾರು ಪ್ರಕಾರಗಳಾಗಿರುತ್ತವೆ. ಕಾಮ, ಇಚ್ಛೆ, ತೃಷ್ಣಾ, ಮನೋರಥ, ಅಭಿಲಾಷೆ ಇತ್ಯಾದಿ. ಒಂದೊಂದು ಗುಳ್ಳೆಗೂ ನೂರಾರು ಮುಖಗಳಿರುತ್ತವೆ. ಧನದ ವಿಷಯದಲ್ಲಿ ರಾಗ, ಪುತ್ರರ ವಿಷಯದಲ್ಲಿ ರಾಗ ಇತ್ಯಾದಿ - ಇವೆಲ್ಲವೂ ಹಸೀ ಗುಳ್ಳೆಗಳು. ಭಯಂಕರ ನೋವನ್ನುಂಟು ಮಾಡುತ್ತವೆ. ಯಾರ ಈ ಗುಳ್ಳೆಗಳು ಪಕ್ವವಾಗಿವೆಯೋ ಅವರನ್ನು ಪಕ್ವ ಕಷಾಯವೆನ್ನುತ್ತಾರೆ. ಮತ್ತೆ ಹಸಿಯಾಗಿರುವುದನ್ನು ಅವಿಪಕ್ವ ಕಷಾಯವೆಂದು ಕರೆಯುತ್ತಾರೆ. ಕಷಾಯವು ಎಲ್ಲಿ ಪಕ್ವವಾಗಿದೆಯೋ ಅಲ್ಲಿ ಒತ್ತಡವನ್ನು ಕೊಟ್ಟು, ಹಿಸುಕಿ ಅಥವಾ ಶಸ್ತ್ರಚಿಕಿತ್ಸೆಯನ್ನು ಮಾಡಿ ಕೀವು, ಕೆಟ್ಟ ರಕ್ತವನ್ನು ತೆಗೆದು ಸ್ವಚ್ಛಗೊಳಿಸಿ, ಔಷಧಿಯನ್ನು ಹಚ್ಚಿ ಅಥವಾ ಔಷಧಿಯನ್ನು ಕುಡಿಸಿ ಈ ಕಷಾಯವನ್ನು ಪಕ್ವಗೊಳಿಸಬೇಕು. ಇವೆಲ್ಲವೂ ಮನಸ್ಸಿನ ಗುಳ್ಳೆಗಳು, ಸತ್ಸಂಗ ಬಾಹ್ಯ ಲೇಪ, ಭಗವತ್ಸ್ಮರಣಾದಿ ಅಂತರ ಔಷಧಿ ಸೇವನೆಗಳಾಗಿವೆ. ಸಂತರ ಸಂಗದಲ್ಲಿ ಕುಳಿತುಕೊಂಡರೂ ಸಹ ಲಾಭವಿದೆ. ಅವರ ಆಚರಣೆ ಉಪದೇಶಾತ್ಮಕವಾಗಿರುತ್ತದೆ.

"ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಸ್ತು ಛಿನ್ನಸಂಶಯಾಃ" ಈ ಉಕ್ತಿಯು ಬಹಳ ಪ್ರಸಿದ್ಧವಾಗಿದೆ. ಗುರುಗಳ ಮೌನವೇ ವ್ಯಾಖ್ಯಾನವಾಗಿದೆ ಮತ್ತು ಅದರಿಂದಲೇ ಶಿಷ್ಯನು ಸಂಶಯರಹಿತನಾಗುತ್ತಾನೆ. ಸತ್ಸಂಗದಲ್ಲಿ ಕುಳಿತಿದ್ದರೂ ಸಹ ಮನಸ್ಸು ಪವಿತ್ರವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸತ್ಸಂಗಾದ್ ಭವತಿಃ ಸಾಧುತಾ ಖಲಾನಾಂ
ಸಾಧೂನಾಂ ನ ಹಿ ಖಲಸಂಗಮಾತ್ ಖಲತ್ವಮ್ ।
ಆಮೋದಂ ಕುಸುಮಭವಂ ಮೃದೇವ ಧತ್ತೆ
ಮೃದುಗಂಧಂ ನಹಿ ಕುಸುಮಾನಿ ಧಾರಯಂತಿ ॥

ಅರ್ಥಾತ್ : "ಸಾಧುಗಳ ಸತ್ಸಂಗದಿಂದ ಖಳ (ಕೆಟ್ಟವನೂ) ನೂ ಸಹ ಸಾಧುತ್ವಕ್ಕೆ ಪ್ರಾಪ್ತಿಯಾಗುತ್ತಾನೆ. ಆದರೆ ಖಳನ ಸಂಗದಿಂದ ಸಾಧು ಖಳನಾಗುವುದಿಲ್ಲ. ಮಣ್ಣು ಪುಷ್ಪದ ಗಂಧ (ವಾಸನೆ) ವನ್ನು ಧಾರಣೆ ಮಾಡುತ್ತದೆ. ಆದರೆ ಪುಷ್ಪವು ಮಣ್ಣಿನ ಗಂಧವನ್ನು ಧಾರಣೆ ಮಾಡುವುದಿಲ್ಲ".

ಸತ್ಸಂಗದಿಂದ ಕಷಾಯಗಳು ಪಕ್ವವಾಗುತ್ತವೆ ಹಾಗೂ ಭವತ್ಸ್ಮರಣೆಯಿಂದಲೂ ಕಷಾಯಗಳು ಪಕ್ವಗೊಳ್ಳುತ್ತವೆ. ನಾರದರಿಗೆ ಪೂರ್ವಜನ್ಮದಲ್ಲಿ ಈ ಎರಡೂ ಸಂಪನ್ನವಾಗಿದ್ದವು ಸತ್ಸಂಗ ಹಾಗೂ ಭವತ್ಸ್ಮರಣೆ. ಆದರೆ ಅವು ಅಲ್ಪ ಪ್ರಮಾಣದಲ್ಲಿ ಆಗಿದ್ದಿತು. ಪೂರ್ಣ ಪ್ರಮಾಣದಲ್ಲಿ ಆಗಿದಿದ್ದರೆ ಪಕ್ವ ಕಷಾಯವಾಗಿರುತ್ತಿತ್ತು. ಈ ಮಾತು, ಆ ಪ್ರಸಂಗದಿಂದ ಸಿದ್ಧವಾಗುತ್ತದೆ, ಎಲ್ಲಿ ಕುಯೋಗಿಯ ಮನಸ್ಸು ಕುದುರೆಯ ತರಹ ಗುಂಡಿಯಲ್ಲಿ ಬೀಳುತ್ತದೆಯೋ ಅಲ್ಲಿ ಅವಿಪಕ್ವ ಕಷಾಯ ಕುಯೋಗಿಗಳಾಗಿರುತ್ತಾರೆ.

ಸೂರದಾಸರ ಜೀವನ ಚರಿತ್ರೆಯಲ್ಲಿ ಒಂದು ಸುಂದರವಾದ ಕಥೆಯಿದೆ.

ದಕ್ಷಿಣದ ಕೃಷ್ಣವೇಣಿ ನದಿಯ ದಂಡೆಯ ಮೇಲೆ ಒಂದು ಗ್ರಾಮದಲ್ಲಿ ರಾಮದಾಸನೆಂಬ ಹೆಸರಿನ ಭಕ್ತನಾದ ಬ್ರಾಹ್ಮಣನು ನಿವಾಸ ಮಾಡುತ್ತಿದ್ದನು. ಅವನಿಗೊಬ್ಬ ಮಗನಿದ್ದ. ಅವನು ವಿದ್ಯಾವಂತನಾಗಿದ್ದ. ಶಾಂತನೂ, ಶಿಷ್ಟನೂ ಹಾಗೂ ಸಾಧು ಸ್ವಭಾವದವನೂ ಆಗಿದ್ದ. ಆದರೆ ತಂದೆಯ ಮರಣಾ ನಂತರ ಕುಸಂಗದಲ್ಲಿ ಬಿದ್ದು ಅತ್ಯಂತ ದುರಾಚಾರಿಯಾಗಿದ್ದ. ವೇಶ್ಯೆಯ ಮನೆಯಲ್ಲಿ ಬಿದ್ದಿರುವುದು ಮತ್ತು ದಿನ ರಾತ್ರಿ ಪಾಪಕರ್ಮಗಳಲ್ಲಿ ತೊಡಗಿರುವುದೇ ಇವನ ಕೆಲಸವಾಗಿತ್ತು. ಚಿಂತಾಮಣಿ ಎಂಬ ಹೆಸರಿನ ವೇಶ್ಯೆಯಲ್ಲಿ ಇವನು ಅನುರಕ್ತನಾಗಿದ್ದನು. ವೇಶ್ಯೆಯು ನದಿಯ ಇನ್ನೊಂದು ದಂಡೆಯ ಮೇಲೆ ಇರುತ್ತಿದ್ದಳು. ಒಂದು ದಿನ ತಂದೆಯ ಶ್ರಾದ್ಧವಿತ್ತು. ಆದುದರಿಂದ ದಿನವಿಡೀ ಅವಳ ಮನೆಗೆ ಹೋಗಲಾಗಲಿಲ್ಲ. ದೇಹ ಮನೆಯಲ್ಲಿತ್ತು ಆದರೆ ಮನಸ್ಸು ಅವಳ ಮನೆಯಲ್ಲಿತ್ತು. ಶ್ರಾದ್ಧದ ವಿಧಿಗಳು ಸಮಾಪ್ತವಾಗಲಿಕ್ಕೆ ಸಾಯಂಕಾಲವಾಯಿತು. ಇವನು ಹೊರಡಲಿಕ್ಕೆ ತಯಾರಾದನು. ಜನಗಳು, "ಇವತ್ತು ನಿನ್ನ ತಂದೆಯ ಶ್ರಾದ್ಧವಾಗಿದೆ, ಹೋಗಬೇಡ" ಎಂದರು. ಆದರೆ ಯಾರ ಮಾತೂ ಕೇಳಲಿಲ್ಲ, ಓಡುತ್ತಾ ನದಿಯ ದಂಡೆಗೆ ಬಂದನು. ಬಿರುಗಾಳಿ ಎದ್ದಿತ್ತು. ಪ್ರಚಂಡ ಮಳೆ ಸುರಿಯುತ್ತಿತ್ತು. ದೋಣಿಯನ್ನು ನಡೆಸುವವರು ತಮ್ಮ ದೋಣಿಗಳನ್ನು ದಡದಲ್ಲಿ ಕಟ್ಟಿ ಹಾಕಿ ಹತ್ತಿರದಲ್ಲಿಯೇ ಗುಡಿಸಲಲ್ಲಿ ಆಶ್ರಯಿಸಿದ್ದರು. ಬಹಳ ಭಯಂಕರವಾದ ರಾತ್ರಿಯಾಗಿ ಪರಿಣಮಿಸಿತ್ತು. ಅವನು ದೋಣಿಚಾಲಕರಿಗೆ ವಿನಂತಿಸಿಕೊಂಡ, ಹಣದ ಆಸೆಯನ್ನು ತೋರಿಸಿದ, ಆದರೆ ಪ್ರಾಣವನ್ನು ಕಳೆದುಕೊಳ್ಳಲು ಯಾರು ತಾನೇ ಸಿದ್ಧವಾಗುತ್ತಾರೆ? ಇವನ ಧ್ಯಾನ ಬೇರೆ ಕಡೆಗೆಯೇ ಇತ್ತು. ಹಿಂದೂ ಮುಂದೂ ಏನೂ ಯೋಚನೆ ಮಾಡದೆ ನದಿಯಲ್ಲಿ ಹಾರಿದನು. ಯಾವುದೋ ಹೆಣ್ಣಿನ ಕೊಳೆತ ಶವ ತೇಲಿ ಹೋಗುತ್ತಿತ್ತು. ಕತ್ತಲಲ್ಲಿ ಏನೂ ತಿಳಿಯುತ್ತಿರಲಿಲ್ಲ. ಇವನು ಆ ಸಮಯದಲ್ಲಿ ಕಾಮಾಂಧನಾಗಿದ್ದ. ಆ ಶವವನ್ನು ಮರದ ತುಂಡೆಂದು ತಿಳಿದು ಅದನ್ನು ಹಿಡಿದುಕೊಂಡನು. ಶವವೆಂಬುದರ ಪರಿವೆಯಿಲ್ಲ, ದುರ್ಗಂಧದ ಅರಿವಿಲ್ಲ, ದೈವಯೋಗದಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇನ್ನೊಂದು ದಂಡೆಯನ್ನು ತಲುಪಿದನು ಮತ್ತು ಓಡುತ್ತಾ ಓಡುತ್ತಾ ಚಿಂತಾಮಣಿಯ ಮನೆಯನ್ನು ತಲುಪಿದನು. ಮನೆಯ ಬಾಗಿಲು ಮುಚ್ಚಿತ್ತು. ಅವನು ಗೋಡೆಯನ್ನು ಹತ್ತಿ ಕಿಟಕಿಯಿಂದ ಪ್ರವೇಶ ಮಾಡಲು ಆ ಕತ್ತಲಲ್ಲಿ ಕೈಯಾಡಿಸಿದ. ಒಂದು ರೇಷ್ಮೆಯಂತಹ ಕೋಮಲವಾದ ಹಗ್ಗವೊಂದು ಕೈಗೆ ಎಟುಕಿತು. ಅದು ಕಪ್ಪು ನಾಗಸರ್ಪವಾಗಿತ್ತು. ಹೆಡೆಯು ಮೇಲೆ ಗೋಡೆಯ ಕಡೆಗೆ ಮತ್ತು ಕೆಳಗಡೆ ಬಾಲ ಜೋತಾಡುತ್ತಿತ್ತು. ಅವನು ಅದರ ಬಾಲವನ್ನು ಹಿಡಿದು ಮೇಲೆ ಹತ್ತಿದನು. ಭಗವಂತ ಲೀಲೆಯಿಂದಾಗಿ ಸರ್ಪವು ಅವನನ್ನು ಕಚ್ಚಲಿಲ್ಲ, ಇವನು ಕಿಟಕಿಯಿಂದ ಒಳಗಡೆ ಹೋಗಿ ಚಿಂತಾಮಣಿಯನ್ನು ಎಚ್ಚರಗೊಳಿಸಿದ. ಅವಳು ಅವನನ್ನು ನೋಡಿದ ತಕ್ಷಣವೇ ಆಶ್ಚರ್ಯಚಕಿತಳಾದಳು, "ನೀನು ಈ ಭಯಂಕರ ರಾತ್ರಿಯಲ್ಲಿ ನದಿಯನ್ನು ದಾಟಿ ಕದವನ್ನು ಮುಚ್ಚಿದ್ದ ಈ ಮನೆಯೊಳಗೆ ಅದ್ಹೇಗೆ ಬಂದೆ?" ಎಂದಳು. ಆಗ ಅವನು ಮಂಚದ ಮೇಲೆ ಕುಳಿತು ನದಿಯನ್ನು ದಾಟಿದ ಮತ್ತು ಹಗ್ಗದ ಸಹಾಯದಿಂದ ಗೋಡೆಯನ್ನು ಹತ್ತಿ ಬಂದ ಕಥೆಯನ್ನು ಹೇಳಿದನು. ಮಳೆಯು ನಿಂತಿತ್ತು. ಚಿಂತಾಮಣಿಯು ದೀಪವನ್ನು ಹಿಡಿದು ಹೊರಗೆ ಬಂದಳು. ಅಲ್ಲಿ ನೋಡಿದಾಗ ಗೋಡೆಯ ಮೇಲೆ ಭಯಾನಕವಾದ ಕಪ್ಪನೆಯ ನಾಗಸರ್ಪವು ಜೋತಾಡುತ್ತಿತ್ತು ಮತ್ತು ನದಿಯ ತೀರದಲ್ಲಿ ಕೊಳೆತ ಶವವು ಬಿದ್ದಿತ್ತು. ಅವನೂ ಸಹ ನೋಡಿದ. ನೋಡುತ್ತಿದ್ದಂತೆ ನಡುಗಲಾರಂಭಿಸಿದ. ಚಿಂತಾಮಣಿಯು ಬಹಳ ನಿರ್ದಯತೆಯಿಂದ ಹೇಳಿದಳು "ನೀನು ಬ್ರಾಹ್ಮಣ, ಇವತ್ತು ನಿನ್ನ ತಂದೆಯ ಶ್ರಾದ್ಧವಿತ್ತು. ಆದರೆ ಒಂದು ಮೂಳೆ ಮಾಂಸದ ಗೊಂಬೆಯ ಮೇಲೆ ಇಷ್ಟೊಂದು ಆಸಕ್ತನಾಗಿರುವೆಯಾ? ತನ್ನ ಎಲ್ಲಾ ಧರ್ಮ-ಕರ್ಮಗಳಿಗೆ ತಿಲಾಂಜಲಿಯನ್ನು ಕೊಟ್ಟು ಈ ರಾತ್ರಿಯಲ್ಲಿ ಹೆಣ ಮತ್ತು ಸರ್ಪದ ಸಹಾಯದಿಂದ ಇಲ್ಲಿಗೆ ಓಡಿ ಬಂದಿರುವೆಯಾ. ನೀನು ಇವತ್ತು ಯಾವುದನ್ನು ಪರಮಸುಂದರವೆಂದು ತಿಳಿದು ಹುಚ್ಚನಾಗಿರುವೆಯೋ, ಅದೂ ಒಂದು ದಿನ ನಿನ್ನ ಕಣ್ಣ ಮುಂದೆ ಬಿದ್ದಿರುವ ಹೆಣದ ದಶೆಯನ್ನು ಹೊಂದುವುದು. ಧಿಕ್ಕಾರವಿರಲಿ ನಿನ್ನ ಈ ವೃತ್ತಿಗೆ, ಒಂದು ಪಕ್ಷ, ನೀನು ಇದೇ ರೀತಿಯ ಮೋಹವನ್ನು ಆ ಮನಮೋಹನ ಮೇಲೆ ಇಟ್ಟಿದ್ದರೆ, ಅವನನ್ನು ಪಡೆಯಲು ನಿನ್ನ ಮನಸ್ಸು ಚಡಪಡಿಸುತ್ತಿದ್ದರೆ, ಈ ಹೊತ್ತಿಗಾಗಲೆ ನೀನು ಅವನನ್ನು ಪಡೆದು ಕೃಥಾರ್ಥನಾಗುತ್ತಿದ್ದೆ".

ವೇಶ್ಯೆಯ ಉಪದೇಶವು ಜಾದುವಿನಂತೆ ಕೆಲಸ ಮಾಡಿತು, ಆಗ ಅವನ ಹೃದಯ ಗ್ರಂಥಿಗಳು ಹೊಸ ಸ್ವರವನ್ನು ಹಾಡಹತ್ತಿದವು. ವಿವೇಕದ ಅಗ್ನಿಯು ಧಗಧಗಿಸಿತು. ಅವನು, ಅವನ ಕಲ್ಮಷಗಳನ್ನು ಸುಟ್ಟು ಹಾಕಿದನು. ಅಂತಃಕರಣದ ಶುದ್ಧಿಯಾದ ತಕ್ಷಣ ಭಗವತ್ ಪ್ರೇಮದ ಸಮುದ್ರ ಉಕ್ಕತೊಡಗಿತು ಮತ್ತು ಅವನ ಕಣ್ಣುಗಳಿಂದ ಅಶ್ರುಗಳ ಧಾರೆ ಹರಿಯ ಹತ್ತಿದವು. ಆಗ ಅವನು ಚಿಂತಾಮಣಿಯ ಕಾಲನ್ನು ಹಿಡಿದು ಹೇಳ ಹತ್ತಿದ "ಮಾತೆ! ನೀನು ಇವತ್ತು ನನಗೆ ವಿವೇಕ ದೃಷ್ಟಿಯನ್ನು ಕೊಟ್ಟು ಕೃತಾರ್ಥನನ್ನಾಗಿ ಮಾಡಿದೆ. ಮನಸ್ಸಿನಲ್ಲಿಯೇ ಚಿಂತಾಮಣಿಯನ್ನು ಗುರು ಎಂದು ಭಾವಿಸಿ ಪ್ರಣಾಮ ಮಾಡಿದನು."

ಇದಾದ ಮೇಲೆ ರಾತ್ರಿಯೆಲ್ಲಾ ಚಿಂತಾಮಣಿಯು ಅವನಿಗೆ ಭಗವಾನ್ ಶ್ರೀ ಕೃಷ್ಣನ ಲೀಲೆಯನ್ನು ಹಾಡಿ-ಹಾಡಿ ಹೇಳಿದಳು. ಅವನ ಮೇಲೆ ಅದರ ಪ್ರಭಾವ ಬಿಂಬಿಸಿತು. ಅವನು ಪ್ರಾತಃಕಾಲವಾದ ಕೂಡಲೆ ಶ್ರೀ ಕೃಷ್ಣನ ಪವಿತ್ರ ಚಿಂತನೆಯಲ್ಲಿ ನಿಮಗ್ನನಾಗಿ ಉನ್ಮತ್ತನ ತರಹ ಚಿಂತಾಮಣಿಯ ಮನೆಯಿಂದ ಹೊರಬಿದ್ದನು. ಅವನ ಜೀವನ ನಾಟಕದ ಅಂಕ ಬದಲಾಯಿತು. ಕೃಷ್ಣವೇಣಿ ನದಿಯ ದಡದಲ್ಲಿರುವ ಮಹಾತ್ಮ ಸೋಮಗಿರಿಯವರ ಹತ್ತಿರ ಹೋಗಿ ಅವರ ಕಡೆಯಿಂದ ದೀಕ್ಷೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಡೆದು ಭಜನೆಯಲ್ಲಿ ತಲ್ಲೀನನಾದ. ಅವನು ಭಗವಂತನ ನಾಮಕೀರ್ತನೆಯನ್ನು ಮಾಡುತ್ತಾ ಕಾಲ ಕಳೆಯುತ್ತಿದ್ದನು. ಮನಸ್ಸಿನಲ್ಲಿ ಭಗವಂತನ ದರ್ಶನದ ಲಾಲಸೆ ಜಾಗೃತವಾಯಿತು. ಆದರೆ ಇನ್ನೂ ದುರಾಚಾರಿ ಸ್ವಭಾವ ಸರ್ವಥಾ ನಾಶವಾಗಿರಲಿಲ್ಲ. ಕೆಟ್ಟ ಅಭ್ಯಾಸಗಳಿಂದ ವಿವಶನಾಗಿ ಅವನ ಮನಸ್ಸು ಒಬ್ಬ ಯುವತಿಯ ಕಡೆ ಆಸಕ್ತವಾಯಿತು. ಆಗ ಅವಳ ಮನೆಯ ಬಾಗಿಲಿನಲ್ಲಿ ಹೋಗಿ ಕುಳಿತ. ಮನೆಯ ಮಾಲಿಕ ಹೊರಗೆ ಬಂದು ನೋಡಿದಾಗ ಕೊಳೆಯಿಂದ ಕೂಡಿದ ಮುಖವನ್ನು ಹೊಂದಿದ ಬ್ರಾಹ್ಮಣನು ಮನೆಯ ಬಾಗಿಲಿನಲ್ಲಿ ಕಂಡುಬಂದ. ಮಾಲಿಕನು ಕಾರಣವನ್ನು ಕೇಳಿದ. ಆಗ ಅವನು ಕಪಟವನ್ನು ಬಿಟ್ಟು ಎಲ್ಲಾ ಘಟನೆಯನ್ನು ವಿವರಿಸಿದ ಮತ್ತು ಹೇಳಿದುದೇನೆಂದರೆ "ನಾನು ಒಂದು ಸಾರಿ ಆ ಯುವತಿಯನ್ನು ಮನಪೂರ್ತಿಯಾಗಿ ನೋಡಲು ಬಯಸುತ್ತೇನೆ, ನೀವು ಅವಳನ್ನು ಇಲ್ಲಿಗೆ ಕರೆಯಿರಿ". ಮಾಲೀಕನು ಬಹಳ ಸಾಧುಸ್ವಭಾವದವನಾಗಿದ್ದನು. ಯೋಚನೆ ಮಾಡಿದ, ಇದರಲ್ಲೇನು ಹಾನಿಯಿದೆ. ಆ ಯುವತಿ ಮಾಲೀಕನ ಹೆಂಡತಿಯಾಗಿದ್ದಳು. ಅವಳನ್ನು ನೋಡುವುದರಿಂದಲೇ ಅವನಿಗೆ ತೃಪ್ತಿಯಾಗುತ್ತದೆಯಾದರೆ ಆಗಲಿ, ಒಳ್ಳೆಯದಾಯಿತು ಎಂದು ಯೋಚಿಸಿ ತನ್ನ ಪತ್ನಿಯನ್ನು ಕರೆಯಲು ಒಳಗಡೆ ಹೋದ. ಇಲ್ಲಿ ಇವನ ಮನ ಸಮುದ್ರದಲ್ಲಿ ತರತರಹದ ತರಂಗಗಳ ಬಿರುಗಾಳಿಯೇ ಎದ್ದಿತು. ಅವನು ಭಗವಂತನ ಭಕ್ತನಾಗಿ ಹೋಗಿದ್ದ. ಅವನ ಪತನವಾಗಲು ಹೇಗೆ ಸಾಧ್ಯ? ದೀನವತ್ಸಲ ಭಗವಂತನು ಅಜ್ಞಾನಾಂಧಕಾರದಲ್ಲಿರುವವನಿಗೆ ಜ್ಞಾನ ಚಕ್ಷುವನ್ನು ಪ್ರದಾನ ಮಾಡಿದನು. ಅವನಿಗೆ ತನ್ನ ಅವಸ್ಥೆಯ ಯಾಥಾರ್ಥಭಾನ ಉಂಟಾಯಿತು. ಹೃದಯವು ಶೋಕದಿಂದ ತುಂಬಿ ಹೋಯಿತು ಮತ್ತು ಏನು ಯೋಚನೆ ಮಾಡಿದನೋ ತಿಳಿಯದು. ತಕ್ಷಣವೇ ಹತ್ತಿರದಲ್ಲಿದ್ದ ಬಿಲ್ವಪತ್ರೆಯ ಮರದಿಂದ ಎರಡು ಮುಳ್ಳುಗಳನ್ನು ತಂದ. ಅಷ್ಟರಲ್ಲಿ ಮಾಲೀಕನ ಧರ್ಮಪತ್ನಿ ಹೊರಗಡೆ ಬಂದಳು. ಅವನು ಅವಳನ್ನು ನೋಡಿದ ಮತ್ತು ಮನಸ್ಸಿನಲ್ಲಿಯೇ ತನಗೆ ತಾನೆ ಧಿಕ್ಕಾರ ಮಾಡಿಕೊಳ್ಳುತ್ತಾ ಹೇಳತೊಡಗಿದ "ಅಭಾಗಿಯಾದ ಕಣ್ಣುಗಳೇ! ಒಂದು ಪಕ್ಷ ನೀವಿಲ್ಲದಿದ್ದರೆ ಇವತ್ತು ನನ್ನ ಪತನ ಏಕೆ ಆಗುತ್ತಿತ್ತು?" ಇಷ್ಟೊಂದು ಹೇಳಿ ಆ ಸಮಯದಲ್ಲಿ ಆ ಚಂಚಲವಾದ ಕಣ್ಣುಗಳಿಗೆ ದಂಡವನ್ನು ಕೊಡುವುದೇ ಉಚಿತವೆಂದು ತಿಳಿದು ತತ್ಕಾಲವೇ ಆ ಎರಡು ಮುಳ್ಳುಗಳನ್ನು ಎರಡು ಕಣ್ಣುಗಳಿಗೆ ಚುಚ್ಚಿಕೊಂಡನು. ಕಣ್ಣುಗಳಿಂದ ರಕ್ತವು ಧಾರೆಯಾಗಿ ಹರಿಯ ಹತ್ತಿತು. ಸೂರದಾಸರು ನಗುತ್ತಾ ಕುಣಿಯುತ್ತಾ ತುಮುಲವಾದ ಹರಿಧ್ವನಿಯನ್ನು ಆಕಾಶವನ್ನು ಮುಟ್ಟುವಂತೆ ಹಾಡುತ್ತಿದ್ದರು. ಮಾಲೀಕನಿಗೂ ಮತ್ತು ಅವನ ಪತ್ನಿಗೂ ಬಹಳ ದುಃಖವಾಯಿತು. ಆದರೆ, ಅವರು ನಿರುಪಾಯರಾಗಿದ್ದರು. ಸೂರದಾಸರ ಅಲ್ಪಸ್ವಲ್ಪ ಉಳಿದಿದ್ದ ಚಿತ್ತಮಲವೂ ಇಂದು ನಷ್ಟವಾಗಿ ಹೋಯಿತು. ಈಗ ಅವರು ಆ ಅನಾಥರ ನಾಥನನ್ನು ಅತಿ ಶೀಘ್ರವೇ ಪಡೆಯಲಿಕ್ಕೆ ಅತ್ಯಂತ ವ್ಯಾಕುಲರಾದರು.

ಪರಮ ಪ್ರಿಯತಮನಾದ ಶ್ರೀ ಕೃಷ್ಣನ ವಿಯೋಗದ ದಾರುಣ ವ್ಯಥೆಯಿಂದ ಅವರ ಕುರುಡು ಕಣ್ಣುಗಳು ಇಪ್ಪತ್ನಾಲ್ಕು ಗಂಟೆ ಕಣ್ಣೀರಿನ ಧಾರೆಯನ್ನು ಹರಿಸುತ್ತಿದ್ದವು. ಹಸಿವಿನ ಪರಿವೆಯಿಲ್ಲ. ಬಾಯಾರಿಕೆಯ ಭಾನವಿಲ್ಲ, ಮಲಗುವ ಜ್ಞಾನವಿಲ್ಲ ಮತ್ತು ಎಚ್ಚರದ ಹಂಬಲವಿಲ್ಲ. ಕೃಷ್ಣ-ಕೃಷ್ಣನೆಂಬ ಕೂಗಿನಿಂದ ದಿಕ್ಕುಗಳನ್ನು ತುಂಬುತ್ತಾ ಸೂರದಾಸರು ಕಾಡುಮೇಡುಗಳಲ್ಲಿ ಮತ್ತು ಊರು ಊರಿನಲ್ಲಿ ತಿರುಗಾಡುತ್ತಿದ್ದರು. ಯಾವ ದೀನ ಬಂಧುವಿಗೋಸ್ಕರ ತಿಳಿದೂ ತಿಳಿದೂ ಕಣ್ಣುಗಳನ್ನು ನಾಶಪಡಿಸಿಕೊಂಡೆನೋ, ಯಾವ ಪ್ರಿಯತಮನನ್ನು ಪಡೆಯಲಿಕ್ಕೆ ಭೋಗ-ವಿಲಾಸಗಳಿಗೆ ತಿಲಾಂಜಲಿಯನ್ನಿತ್ತೆನೋ, ಅವನು ಮಿಲನಕ್ಕೋಸ್ಕರ ಇಷ್ಟೊಂದು ವಿಳಂಬ ಮಾಡಿದರೆ, ಯಾರಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾನೇ ಸಹಿಸಲು ಸಾಧ್ಯ? ಇಂತಹ ದೆಸೆಯಲ್ಲಿ ಪ್ರೇಮಮಯ ಶ್ರೀ ಕೃಷ್ಣನೂ ಸಹ ಹೇಗೆ ನಿಶ್ಚಿಂತನಾಗಿರಬಲ್ಲ? ಒಬ್ಬ ಸಣ್ಣ ಗೋಪಾಲಕನ ವೇಷದಲ್ಲಿ ಭಗವಂತನು ಮಂದಿರದ ಹತ್ತಿರ ಬಂದು ತನ್ನ ಮುನಿಮನಮೋಹಿನಿಯಾದ ಮಧುರವಾಣಿಯಲ್ಲಿ ಹೇಳಿದ "ಸೂರದಾಸಜೀ! ನಿಮಗೆ ಬಹಳ ಹಸಿವಾಗಿರಬಹುದು. ನಾನು ಸ್ವಲ್ಪ ಮಿಠಾಯಿಯನ್ನು ತಂದಿದ್ದೇನೆ, ನೀರನ್ನೂ ತಂದಿದ್ದೇನೆ. ತಾವು ಇದನ್ನು ಸ್ವೀಕರಿಸಿರಿ". ಸೂರದಾಸಜೀಯ ಪ್ರಾಣವಂತೂ ಆ ಬಾಲಕನ ಮಧುರ ಸ್ವರದಿಂದಲೇ ಮೋಹಿತವಾಗಿತ್ತು. ಅವನ ಕೈಯಿಂದ ದುರ್ಲಭವಾದ ಆ ಪ್ರಸಾದವನ್ನು ಸ್ವೀಕರಿಸಿ ಅವರ ಹೃದಯವು ಹರ್ಷೋಲ್ಲಾಸದಿಂದ ಕುಣಿದಾಡುತ್ತಿತ್ತು. ಸೂರದಾಸಜೀಯವರು ಬಾಲಕನಿಗೆ ಕೇಳಿದರು "ಮಗು ನಿನ್ನ ಹೆಸರೇನು? ನೀನು ಏನು ಮಾಡುತ್ತಿದ್ದೀಯಾ? ನಿನ್ನ ಮನೆ ಎಲ್ಲಿದೆ?"

ಬಾಲಕನು ಹೇಳಿದನು "ನನ್ನ ಮನೆ ಹತ್ತಿರದಲ್ಲಿಯೇ ಇದೆ. ನನಗೆ ಯಾವುದೇ ಒಂದಾದ ಹೆಸರಿಲ್ಲ, ಯಾರು ನನ್ನನ್ನು ಯಾವ ಹೆಸರಿನಿಂದ ಕರೆಯುತ್ತಾರೋ, ಆ ಹೆಸರಿನಿಂದಲೇ ಮಾತನಾಡುತ್ತೇನೆ. ದನಗಳನ್ನು ಕಾಯುತ್ತಿರುತ್ತೇನೆ. ನನ್ನನ್ನು ಯಾರು ಪ್ರೇಮಿಸುತ್ತಾರೋ, ಅವರನ್ನು ನಾನೂ ಸಹ ಪ್ರೇಮಿಸುತ್ತೇನೆ". ಸೂರದಾಸಜೀಯವರು ಬಾಲಕನ ಮಧುರವಾಣಿಯನ್ನು ಕೇಳಿ ವಿಮುಗ್ಧರಾದರು. ಬಾಲಕನು ಹೋಗುತ್ತಾ ಹೋಗುತ್ತಾ ಹೇಳಿದ "ನಾನು ದಿನವೂ ಬಂದು ತಮಗೆ ಭೋಜನ ಮಾಡಿಸಿ ಹೋಗುತ್ತೇನೆ". ಅದಕ್ಕೆ ಸೂರದಾಸಜೀಯವರು "ಬಹಳ ಒಳ್ಳೆಯದು, ನೀನು ಪ್ರತಿದಿನವೂ ಬಂದು ಹೋಗು" ಎಂದರು. ಬಾಲಕನು ಹೊರಟು ಹೋದ ಮತ್ತು ಸೂರದಾಸಜೀಯ ಮನಸ್ಸನ್ನು ಜೊತೆಗೆ ತೆಗೆದುಕೊಂಡು ಹೋದ. ಬಾಲಕನು ಪ್ರತಿ ದಿನವೂ ಬಂದು ಭೋಜನ ಮಾಡಿಸಿ ಹೋಗುತ್ತಿದ್ದ.

ಸೂರದಾಸಜೀಗೆ ಕೆಲವು ಸಲ ಸಂಭ್ರಮ ಉಂಟಾಗುತ್ತಿತ್ತು. ಯಾರಿಗೋಸ್ಕರ ಕಣ್ಣಲ್ಲಿ ಮುಳ್ಳನ್ನು ಚುಚ್ಚಿಕೊಂಡೆನೊ ಅವನೇ ಇವನಾಗಿರಬಾರದೇಕೆ? ಎಂಬ ದಿಗಿಲು ಉಂಟಾಗುತ್ತಿತ್ತು. ಆ ಗೋಪಲಕನು ಅವರ ಹೃದಯದ ಮೇಲೆ ಅವಶ್ಯವಾಗಿ ಅಧಿಕಾರವನ್ನು ಪಡೆದುಕೊಂಡಿದ್ದ. ಸೂರದಾಸಜೀಗೆ ಬೇರೆಯವರ ಮಾತನ್ನು ಸಹ ಕೇಳಲು ಅಸಹ್ಯವಾಗುತ್ತಿತ್ತು. ಒಂದು ದಿನ ಅವರು ಮನದಲ್ಲಿ ಯೋಚನೆ ಮಾಡಹತ್ತಿದರು. "ಎಲ್ಲಾ ಆಪತ್ತುಗಳನ್ನು ದೂರಮಾಡಿಕೊಂಡು ಇಲ್ಲಿ ತನಕ ಬಂದೆನು. ಇಲ್ಲಿಯೂ ಸಹ ಅದೇ ಆಪತ್ತು ಕಂಡುಬರುತ್ತಿದೆ. ಸ್ತ್ರೀಯ ಮೋಹದಿಂದ ಪಾರಾಗಿ ಬಂದು ಇಲ್ಲಿ ಈ ಬಾಲಕನ ಮೋಹದಲ್ಲಿ ಸಿಕ್ಕಿಬಿದ್ದಂತಾಗಿದೆ". ಇದನ್ನು ವಿಚಾರ ಮಾಡುತ್ತಿರುವಂತೆಯೇ ಆ ರಸಿಕ ಬಾಲಕ ಬಂದು ಕುಳಿತುಕೊಂಡ ಮತ್ತು ತನ್ನ ಮೋಹಕವಾದ ವಾಣಿಯಿಂದ ಹೇಳಿದ "ಬಾಬಾಜಿ! ಸುಮ್ಮನೆ ಕುಳಿತುಕೊಂಡು ಏನು ಯೋಚನೆ ಮಾಡುತ್ತಿದ್ದೀರಿ? ವೃಂದಾವನಕ್ಕೆ ಬರುತ್ತೀರೇನು?" ವೃಂದಾವನದ ಹೆಸರನ್ನು ಕೇಳುತ್ತಲೇ ಸೂರದಾಸಜೀಯವರ ಹೃದಯ ಹಸಿರಾಯಿತು, ಆದರೆ ತಮ್ಮ ಅಸಮರ್ಥತೆಯನ್ನು ಪ್ರಕಟಿಸುತ್ತಾ ಹೇಳಿದರು "ಮಗು! ನಾನು ಕುರುಡ, ವೃಂದಾವನಕ್ಕೆ ಹೇಗೆ ಹೋಗಲಿ?" ಬಾಲಕನು ಹೇಳಿದ "ತೆಗೆದುಕೊ ನನ್ನ ಕೋಲನ್ನು, ನಾನು ಇದನ್ನು ಹಿಡಿದು ನಿಮ್ಮ ಜೊತೆಯಲ್ಲೇ ಬರುತ್ತೇನೆ". ಸೂರದಾಸಜೀಯವರ ಮುಖ ಕಮಲವು ಅರಳಿತು. ಕೋಲನ್ನು ಹಿಡಿದುಕೊಂಡು ಭಗವಂತನು ಭಕ್ತನ ಮುಂದೆ-ಮುಂದೆ ನಡೆಯುತ್ತಿದ್ದ. ಧನ್ಯವು ದಯಾಳುತನ. ಭಕ್ತನ ಕೋಲನ್ನು ಹಿಡಿದುಕೊಂಡು ಮಾರ್ಗವನ್ನು ತೋರಿಸುತ್ತಿದ್ದಾನೆ. ಸ್ವಲ್ಪ ಹೊತ್ತಿನಲ್ಲೇ ಬಾಲಕನು ಹೇಳಿದ "ಬಂತು! ವೃಂದಾವನವು ಬಂತು. ಈಗ ನಾನು ಹೋಗುತ್ತೇನೆ". ಸೂರದಾಸಜೀಯವರು ಬಾಲಕನ ಕೈಯನ್ನು ಹಿಡಿದುಕೊಂಡರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS
ಕೈಯನ್ನು ಸ್ಪರ್ಶಿಸಿದ ಕೂಡಲೇ ಶರೀರದಲ್ಲೆಲ್ಲಾ ವಿದ್ಯುತ್ ಸಂಚಾರವಾದದಂತಾಯಿತು. ಸಾತ್ವಿಕ ಪ್ರಕಾಶದಿಂದ ಎಲ್ಲಾ ದ್ವಾರಗಳು ಪ್ರಕಾಶಿತಗೊಂಡವು. ಸೂರದಾಸಜಿಗೆ ದಿವ್ಯದೃಷ್ಟಿ ಪ್ರಾಪ್ತಿಯಾಯಿತು ಮತ್ತು ಅವರು ನೋಡಿದಾಗ ಬಾಲಕನ ರೂಪದಲ್ಲಿ ಸಾಕ್ಷಾತ್ ಶ್ಯಾಮಸುಂದರನೇ ನಿಂತಿದ್ದಾನೆ. ಸೂರದಾಸಜಿಯವರು ಶರೀರ ಪುಲಕಿತವಾಯಿತು. ಕಣ್ಣಿನಿಂದ ಪ್ರೇಮದ ಅಶ್ರುಗಳು ಅನವರತವಾಗಿ ಹರಿಯ ಹತ್ತಿದವು. ಭಗವಂತನ ಕೈಯನ್ನು ಅವರು ಇನ್ನೂ ಜೋರಾಗಿ ಹಿಡಿದುಕೊಂಡರು ಮತ್ತು ಹೇಳಿದರು "ಈಗ ನಾನು ನಿನ್ನನ್ನು ಗೊತ್ತು ಹಿಡಿದೆ. ಬಹಳ ದಿನಗಳ ನಂತರ ಹಿಡಿದಿದ್ದೇನೆ. ಪ್ರಭೋ! ಈಗ ನಿನ್ನ ಬಿಡುವುದಿಲ್ಲ" ಭಗವಂತನು ಹೇಳಿದ "ಬಿಡುತ್ತಿಯೋ ಇಲ್ಲವೊ? ಸೂರದಾಸಜಿಯವರು" ಇಲ್ಲ ಎಂದೆಂದಿಗೂ ಇಲ್ಲ, ತ್ರಿಕಾಲದಲ್ಲಿಯೂ ಇಲ್ಲ.

ಭಗವಾನನು ಜೋರಾಗಿ ಕೈಝಾಡಿಸಿ ಕೈಯನ್ನು ಬಿಡಿಸಿಕೊಂಡನು. ಯಾರ ಬಲದಿಂದ ಬಲಶಾಲಿಯಾಗಿ ಮಾಯೆಯು ಜಗತ್ತನ್ನು ಪದದಲಿತವನ್ನಾಗಿ ಮಾಡಿದ್ದಾಳೊ, ಅಂತಹವನ ಬಲದ ಮುಂದೆ ಪಾಪ ಆ ಕುರುಡ ಸೂರದಾಸಜಿಯು ಏನು ಮಾಡಬಲ್ಲನು? ಆದರೆ ಅವನು ಒಂದು ಇಂತಹ ಹಗ್ಗದಿಂದ ಭಗವಂತನನ್ನು ಕಟ್ಟಿಹಾಕಿದ್ದನೆಂದರೆ ಅದರಿಂದ ಬಿಡಿಸಿಕೊಳ್ಳುವುದು ಭಗವಾನನಿಗೂ ಸಹ ಕಷ್ಟವಾಗಿತ್ತು; ಕೈಯನ್ನು ಬಿಡಿಸಿಕೊಂಡ ನಂತರ ಸೂರದಾಸನು ಹೇಳಿದನು "ಹೋಗುತ್ತೀಯಾ? ಆದರೆ ನೆನಪಿರಲಿ!"

ಹಸ್ತಮುತ್ಕ್ಷಿಪ್ಯ ಯಾತೋಽಸಿ ಬಲಾತ್ಕೃಷ್ಣ ಕಿಮ್‌ದ್ಭುತಮ್ ।
ಹೃದಯಾದ್ಯದಿ ನಿರ್ಯಾಸಿ ಪೌರುಷಂ ಗಣಯಾಮಿತೆ ॥

"ಹೇ! ಕೃಷ್ಣ! ನೀನು ಬಲಪೂರ್ವಕವಾಗಿ ನನ್ನಿಂದ ಕೈಬಿಡಿಸಿಕೊಂಡು ಹೋಗುತ್ತಿರುವೆ, ಇದರಲ್ಲಿ ಯಾವ ಆಶ್ಚರ್ಯವಿದೆ? ನಾನು ನಿನ್ನ ವೀರತ್ವವನ್ನು ಆಗ ಒಪ್ಪಿಕೊಳ್ಳುತ್ತೇನೆ, ಯಾವಾಗ ನೀನು ನನ್ನ ಹೃದಯದಿಂದ ಹೊರಟು ಹೋಗಬಲ್ಲವನಾಗುವಿಯೋ ಆಗ".

ಸೂರದಾಸ ಅತ್ಯಂತ ದುರಾಚಾರಿಯಾಗಿದ್ದ, ಭಕ್ತನಾದವನು ಮತ್ತು ಪತನದ ಕಾರಣ ಮುಂದೆ ಕಾಣುತ್ತಿದ್ದರೂ ಅದಕ್ಕೆ ಅಧೀನರಾಗಲಿಲ್ಲ ಅದುದರಿಂದ ಉಳಿದುಕೊಂಡರು ಹಾಗೂ ಅಂತ್ಯದಲ್ಲಿ ಭಗವಂತನ ಪ್ರಾಪ್ತಿಯನ್ನು ಹೊಂದಿ ಕೃಥಾರ್ಥರಾದರು.

ನಿರಂತರವಾಗಿ ಯಾರು ಭಗವಂತನ ವಿಯೋಗ ಮತ್ತು ವಿಸ್ಮರಣೆಯನ್ನು ಸಹಿಸುವುದಿಲ್ಲವೊ ಮನ-ಬುದ್ಧಿಯನ್ನು ಅಚಲಭಾವದಿಂದ ಭಗವಂತನಲ್ಲಿ ಸ್ಥಿರವಾಗಿಸಿ ನಿತ್ಯನಿರಂತರವಾಗಿ ಶ್ರದ್ಧ-ಪ್ರೇಮದಿಂದ ಅವನ ಚಿಂತನೆಯನ್ನು ಮಾಡುತ್ತಾರೋ, ಅವರು ಸೂರದಾಸಜಿಯವರಂತೆಯಾಗುತ್ತಾರೆ. ಈ ರೀತಿಯ ಜ್ಞಾನಿ ಭಕ್ತರ ಅನೇಕ ಉದಾಹರಣೆಗಳು ನಮಗೆ ಪುರಾಣದಲ್ಲಿ ದೊರೆಯುತ್ತವೆ. ಅವರುಗಳು ಭಗವತ್‌ತತ್ವದ ಜ್ಞಾನದ ಯಾಚನೆಯನ್ನು ಮಾಡಿದರು ಮತ್ತು ಭಗವಂತನ ಕೃಪೆಯಿಂದ ಅವರ ಅಜ್ಞಾನ ನಷ್ಟವಾಯಿತು ಭಗವತ್ ತತ್ವದ ಪ್ರಾಪ್ತಿಯನ್ನು ಹೊಂದಿ ಕೃಥಾರ್ಥರಾದರು. ಭಗವಂತನು ಹೇಳಿರುವುದೇನೆಂದರೆ "ನನ್ನ ಶರಣದಲ್ಲಿ ಬಂದು ಯಾರು ನನ್ನನ್ನು ಭಜಿಸುತ್ತಾರೋ, ಅವರಿಗೆ ಪರಮಗತಿ ದೊರಕುತ್ತದೆ ಮತ್ತು ಯಾರು ಭಗವಂತನ ಪ್ರಾಪ್ತಿಯನ್ನು ಹೊಂದಿದ್ದಾರೋ, ಯಾರ ದೃಷ್ಟಿಯಲ್ಲಿ ಕೇವಲ ಒಬ್ಬ ಪರಮಾತ್ಮನೇ ಉಳಿದಿರುತ್ತಾನೊ, ಸಮಸ್ತ ಕಾಮನೆಗಳು ಸಮಾಪ್ತವಾಗಿವೆಯೋ, ಸಹಜ ಭಾವದಿಂದ ಪರಮಾತ್ಮನನ್ನು ಭಜಿಸುತ್ತಾರೋ, ಅವರು ಜ್ಞಾನಿಗಳಾಗಿರುತ್ತಾರೆ".

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನದ ಸ್ಥಿತಿಯು ಎಲ್ಲರಿಗೂ ಇದ್ದಿದ್ದರೆ ಇನ್ನು ಮಾತನಾಡುವುದೇನು ಬಂತು? ದುರ್ಲಭವಾಗಿದೆ ಈ ಸ್ಥಿತಿ, "ಸ್ಮಶಾನಾಂತೆ" - ಸ್ಮಶಾನದಲ್ಲಿ ಪ್ರಿಯ ಬಂಧುವಿನ ಚಿತೆಯನ್ನು ಸುಟ್ಟ ಮೇಲೆ ಯಾವ ಬುದ್ಧಿ ಉಂಟಾಗುತ್ತದೋ - ಏನು ಈ ಸಂಸಾರ. ಎಲ್ಲಾ ಕ್ಷಣ ಭಂಗುರ! ಸ್ವಲ್ಪ ಹೊತ್ತಿನ ಮುಂಚೆ ಇಲ್ಲ ಸಲ್ಲದ ಎಲ್ಲಾ ಮಾತುಗಳನ್ನಾಡುತ್ತಿದ್ದರು, ಈಗೇನಾಯಿತು? ಇದೇ ಬುದ್ಧಿಯು ಸರ್ವದಾ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಈ ವಿಷಯಗಳಲ್ಲಿ ಆಕರ್ಷಣೆ ಸಮಾಪ್ತಿಯನ್ನು ಹೊಂದುತ್ತದೆ. ಒಂದು ಪಕ್ಷ, ಯಾವಾಗಲೂ ಮನುಷ್ಯನು ವಿಷಯಾಕರ್ಷಣೆ ರಹಿತನಾಗಿದ್ದಿದ್ದರೆ, ಯಾರೂ ಬಂಧನದಲ್ಲಿ ಸಿಲುಕಿಕೊಳ್ಳುತ್ತಿರಲಿಲ್ಲ. ಆದರೆ ಭಗವನ್ಮಾಯಾ ಬಹಳ ವಿಲಕ್ಷಣವಾಗಿದೆ. ಪುರಾಣ ಶ್ರವಣ ಅಥವಾ ಪ್ರವಚನ ಶ್ರವಣ ಸಮಾಪ್ತವಾಗಿ ಮತ್ತು ಮನೆಯನ್ನು ತಲುಪುತ್ತಲೆ ಮೊದಲಿನ ದಶೆ ಬಂದುಬಿಡುತ್ತದೆ. ಸ್ಮಶಾನದಲ್ಲಾದ ಭಾವನೆಗಳು ಸ್ಮಶಾನಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಸ್ವಲ್ಪ ಸಮಯ ಕಳೆದರೆ ಆಯಿತು ಪುನಃ ಪೂರ್ವವತ್ತಾಗಿಬಿಡುತ್ತದೆ.

ಚೈಂತನಿಕ ಸುಖವನ್ನು ಮನೋರಾಜ್ಯದ ಸುಖವೆಂದು ಕರೆಯುತ್ತಾರೆ. ಅರ್ಥಾತ್ ತಿರುಕನ ಕನಸಿನಂತೆ. ವಿಷಯ ಸಂಯೋಗದ ಹೊರತು ಈ ಸುಖ ದೊರೆಯುತ್ತದೆ. ಇದೆಲ್ಲವೂ ಕ್ಷಣಿಕವಾದದ್ದು. ಮನೋರಾಜ್ಯದ ಸುಖವನ್ನು ಎಷ್ಟು ದಿನಗಳವರೆಗೆ ಅನುಭವಿಸಬಲ್ಲರಿ. ಅದರಿಂದ ಯಾವ ಪ್ರಯೋಜನವೂ ಇಲ್ಲ. ಅದು ಅಂತ್ಯದಲ್ಲಿ ದುಃಖವನ್ನು ಕೊಡುವುದಾಗಿದೆ.

ಹೇಗೆ, ಒಣಗಿದ ಮೂಳೆಯನ್ನು ನಾಯಿಯು ಜಗಿಯುತ್ತಾ ರಸಸ್ವಾದನೆಯನ್ನು ಮಾಡುತ್ತೋ ಹಾಗೆ. ಒಣಗಿದ ಮೂಳೆಯಲ್ಲಿ ಯಾವ ರಸವೂ ಇಲ್ಲ, ಇರಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಯಾವಾಗ ನಾಯಿಯು ಒಣಗಿದ ಮೂಳೆಯನ್ನು ಜಗಿಯುತ್ತದೋ ಆಗ ಆ ಮೂಳೆಯ ಕಠಿಣತೆಯಿಂದ ನಾಯಿಯ ಒಸಡಿನಲ್ಲಿ ಸ್ವಲ್ಪ ಸಣ್ಣದಾದ ಗಾಯ ಉಂಟಾಗುತ್ತದೆ. ಆ ಗಾಯದಿಂದ ರಕ್ತ ಹರಿಯಲು ಪ್ರಾರಂಭಿಸುತ್ತದೆ. ಅದೇ ರಕ್ತವನ್ನು ನಾಯಿಯು ಕುಡಿಯುತ್ತದೆ ಮತ್ತು ಮೂಳೆಯಲ್ಲಿ ರಸವು ಬರುತ್ತಿದೆ ಎಂದು ತಿಳಿಯತ್ತದೆ. ಬಾಯಿಯಲ್ಲಿ ಗಾಯವಾಗಿದೆ, ಮೂಳೆಯಿಂದ ರಸವು ಬರುತ್ತಿಲ್ಲ. ನಾಯಿಯ ಯೋಚನೆಯಂತೆ ಅದರ ಕಂಠದಲ್ಲಿ ಯಾವ ರಕ್ತ ಒಳಹೋಗುತ್ತಿದೆಯೋ ಅದು ಮೂಳೆಯಿಂದ ಬಂದದ್ದು. ಆದರೆ ನಾಯಿಗೆ ಯಾರು ತಾನೆ ತಿಳಿಸಿ ಹೇಳುವವರು? ಚೈಂತಿನಿಕ ಸುಖವೇ ಮನೋರಾಜ್ಯವಾಗಿದೆ. ಅದನ್ನು ಕಲ್ಪನಾರಾಜ್ಯವೆಂದು ಕರೆಯುತ್ತಾರೆ. ಅದು ಕ್ಷಣಿಕವಾದದ್ದು ಮತ್ತು ಮಹಾನ್ ದುಃಖವನ್ನು ತಂದೊಡ್ಡುವಂತಹವುದು.

ಆತ್ಮಾನಂದದ ನಂತರ ಪರಮ ವೈರಾಗ್ಯ ಉಂಟಾಗುತ್ತದೆ. ಎರಡು ಸಂಸ್ಕಾರಗಳಿರುತ್ತವೆ. ಒಂದು ವೃತ್ತಿ ಸ್ವರೂಪ ಇನ್ನೊಂದು ಸೂಕ್ಷ್ಮ ಸ್ವರೂಪ. ಮಧ್ಯಮ ಅವಸ್ಥೆಯಲ್ಲಿ ಯಾವಾಗ ಸಂಸ್ಕಾರಗಳಿರುತ್ತವೆಯೋ ಆಗ ಯಾವುದೇ ಸಮಯದಲ್ಲಿ ವೃತ್ತಿ ರೂಪವನ್ನು ಹೊಂದುತ್ತವೆ. ಯಾವಾಗ ಧ್ಯಾನವನ್ನು ಮಾಡುತ್ತಾ ಇರುತ್ತೇವೆಯೋ ಆಗ ವೃತ್ತಿ ಪರಿಣಾಮದ ನಿವೃತ್ತಿಯಾಗುತ್ತದೆ. "ಧ್ಯಾನ ಹೇಯಾಸ್ತದ್ ವೃತ್ತಯಃ". ಈ ಸೂತ್ರದಲ್ಲಿ ಹೇಳಿರುವುದಿಷ್ಟೆ. ಆದರೆ ಸೂಕ್ಷ್ಮರೂಪದಲ್ಲಿ ಪ್ರವೇಶ ಆಗುವುದು ಯಾವಾಗ? ಅದರ ಸಾಧನೆ ಯಾವುದು? ಅದರ ಸಾಧನೆಯೆಂದರೆ, ಧ್ಯಾನ ಸಹಿತವಾದ ಪರಮ ವೈರಾಗ್ಯ. ಇದಕ್ಕೋಸ್ಕರ ಯೋಗಾದಿಗಳ ದರ್ಶನಗಳ ಅಂತ್ಯದಲ್ಲಿ ಅವುಗಳಿಗಿಂತ ಮೇಲಿರುವ ವೇದಾಂತ ದರ್ಶನಕ್ಕೆ ಬರಬೇಕಾಗುತ್ತದೆ. ಜ್ಞಾನದ ಪರಾಕಾಷ್ಠೆಯೆಂದರೆ - "ಆತ್ಮತತ್ವ ಸಾಕ್ಷಾತ್ಕಾರ". ಆತ್ಮದ ಸ್ವರೂಪ "ನಿತ್ಯಂ ವಿಜ್ಞಾನಮಾನಂದಂ ಬ್ರಹ್ಮ" ಎಂದು ಹೇಳಲ್ಪಟ್ಟಿದೆ. ಸೋಪಾಧಿಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೂಪದಿಂದ ಎಲ್ಲಿಯವರೆಗೆ ಆತ್ಮದರ್ಶನವಾಗುತ್ತದೋ ಅಲ್ಲಿಯವರೆಗೆ ಆನಂದವು ಪ್ರಾಯಶಃ ಆವೃತ್ತವಾಗಿರುತ್ತದೆ. ಜ್ಞಾನದ ನೈರ್ಮಲ್ಯ ಹೇಗೆ ಹೇಗೆ ಹೆಚ್ಚುತ್ತಾ ಹೋಗುತ್ತದೊ ಹಾಗೆ ಹಾಗೆ ಆವರಣವು ಶಿಥಿಲವಾಗುತ್ತಾ ಹೋಗುತ್ತದೆ. ಆದರೆ ನಿರುಪಾಧಿಕ ಆತ್ಮದರ್ಶನದ ಹೊರತು ಸರ್ವಥಾ ಆವರಣ ನಿವೃತ್ತಿಯಾಗುವುದಿಲ್ಲ. ನಿರುಪಾಧಿಕ ಆತ್ಮದರ್ಶನವಾಗುವುದರಿಂದ ವಿಷಯ ಕಾಮನೆಗಳು ಸ್ವಯಂ ಸಮಾಪ್ತಿಯನ್ನು ಹೊಂದುತ್ತವೆ.

ಶ್ರೀ ಮದ್ಭಾಗವತದಲ್ಲಿ ಹೇಳಿರುವಂತೆ :

ಮಯ್ಯಾರ್ಪಿತಾತ್ಮನಃ ಸಭ್ಯ ನಿರಪೇಕ್ಷಸ್ಯ ಸರ್ವತಃ ।
ಮಯಾತ್ಮನಾ ಸುಖಂ ಯತ್ತತ್ ಕುತಃ ಸ್ಯಾದ್ವಿಷಯಾತ್ಮನಾಮ್ ॥

ಎಲ್ಲಾ ಕಡೆಯಿಂದಲೂ ನಿರಪೇಕ್ಷನಾಗಿ ಯಾರು ಪರಮಾತ್ಮನಲ್ಲಿ ಆತ್ಮವನ್ನು ಸಮರ್ಪಿಸಿರುತ್ತಾನೊ ಅವನ ಆ ಅರ್ಪಿತವಾದ ಆತ್ಮವು ಸಿಂಧುವಿನಲ್ಲಿ ಸೇರಿಕೊಂಡ ಬಿಂದುವಿನ ಸಮಾನಪೂರ್ಣವಾಗುತ್ತಾನೆ. ಪರಮಾತ್ಮನ ಸ್ವರೂಪದಲ್ಲಿ ಒಂದಾಗಿರುವ ಆತ್ಮದಿಂದ ಯಾವ ಸುಖ ದೊರೆಯುತ್ತದೊ, ಅಂತಹ ಸುಖವು ವಿಷಯ ಸಮರ್ಪಿತವಾದ ಮತ್ತು ವಿಷಯಾಕಾರವಾಗಿರುವ ಆತ್ಮವನ್ನು ಉಳ್ಳವರಿಗೆ ಹೇಗೆ ಪ್ರಾಪ್ತವಾಗಲು ಸಾಧ್ಯ? ಆ ಹೊತ್ತಿನಲ್ಲಿ ನ್ಯಾಯ ಮುಂದೆ ಬಂದು ನಿಲ್ಲುವುದು.

"ವಿಕ್ರೀಡತೋಮೃತಾಂಬೋಧೌ ಕಿಂ ಕ್ಷುದ್ರೈಃ ಖಾತಕೋದಕೈಃ"

ಅಮೃತ ಸಾಗರದಲ್ಲಿ ಯಾರು ವಿಹರಿಸುತ್ತಿದ್ದಾನೊ ಅವನಿಗೆ ಕ್ಷುದ್ರವಾದ ಹಳ್ಳಕೊಳ್ಳಗಳ ಬಗ್ಗೆ ಯಾವ ಆಸಕ್ತಿಯೂ ಇರುವುದಿಲ್ಲ. ಆ ಸಮಯದ ವರ್ಣನೆ ಹೀಗಿದೆ -

"ನಿಸ್ಪೃಹಃ ಸರ್ವಕಾಮೇಭ್ಯಃ"

ಇದನ್ನು ಮಹರ್ಷಿ ಪಾತಂಜಲಿಯು ಉತ್ತರ ಸೂತ್ರದಲ್ಲಿ ಹೇಳಿದ್ದಾರೆ -

ಪ್ರಸಂಖ್ಯಾನೇಽಪ್ಯ ಕುಸಿದಸ್ಯ ಸರ್ವಥಾ ವಿವೇಕ ಖ್ಯಾತೆ ಧರ್ಮಮೇಧಃ ಸಮಾಧಿಃ ।

ಇದರ ಸಾಮಾನ್ಯ ಅರ್ಥವೆಂದರೆ, ಈಗ ಆ ಪ್ರಸಂಖ್ಯಾನವು ಪೂರ್ಣವಾಗಿರುವುದರಿಂದ, ಅದರಲ್ಲಿಯೂ ಸಹ ರಾಗರಹಿತನಾಗಿದ್ದಾನೆ. ಈಗ ಧರ್ಮಮೇಧ ಸಮಾಧಿಯಲ್ಲಿಯೇ ಅವನ ಸ್ಥಿತಿ ಇರುತ್ತದೆ.

ಸ್ವಾಮಿ ವಿವೇಕಾನಂದರ ಜೀವನದಲ್ಲಿ ಈ ಪ್ರಸಂಗ ಬರುತ್ತದೆ. ಅವರು ತಮ್ಮ ಗುರು ಬಂಧುಗಳ ಜೊತೆಯಲ್ಲಿ ಒಂದು ಕಡೆ ಹೋಗಿದ್ದರು. ರಾತ್ರಿಯಲ್ಲಿ ಒಂದು ಕಾಡಿನಲ್ಲಿ ಉಳಿದುಕೊಳ್ಳಬೇಕಾಯಿತು. ಹತ್ತಿರದಲ್ಲಿಯೇ ಒಂದು ಸರೋವರವಿತ್ತು. ಪ್ರಾತಃಕಾಲದಲ್ಲಿ ಅದರಲ್ಲಿ ಸ್ನಾನವನ್ನು ಮಾಡಿ ಸ್ವಾಮಿವಿವೇಕಾನಂದರು ಸಮಾಧಿಸ್ಥರಾದರು. ಗುರುಬಂಧುವಿಗೆ ರಾತ್ರಿಯಲ್ಲಿ ನಿದ್ದೆ ಸರಿಯಾಗಿ ಆಗಿರಲಿಲ್ಲ. ಬೆಳಿಗ್ಗೆ ಏಳುವುದರಲ್ಲಿ ಸ್ವಲ್ಪ ತಡವಾಯಿತು. ಅವರು ಸ್ನಾನವನ್ನು ಮಾಡಿ ಬಂದರು. ಅಷ್ಟರಲ್ಲಿ ಸ್ವಾಮಿ ವಿವೇಕಾನಂದರು ಸಮಾಧಿಸ್ಥಿತಿಯನ್ನು ತಲುಪಿದ್ದರು. ದೂರದಿಂದಲೇ ನೋಡಿದಾಗ ಅವರ ಶರೀರವೆಲ್ಲವೂ ಕಪ್ಪಾಗಿತ್ತು. ಅವರು ಕಪ್ಪು ಹೇಗಾದರು? ಕರೀಕಂಬಳಿಯನ್ನು ಹೊದ್ದುಕೊಂಡು ಕುಳಿತಿದ್ದಾರೇನು? ಗುರು ಬಂಧುವಿಗೆ ಸಂಶಯ ಬಂದಿತು. ಹತ್ತಿರ ಹೋಗಿ ನೋಡಿದಾಗ ಆಶ್ಚರ್ಯಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾರವೇ ಇರಲಿಲ್ಲ. ಅವರ ಶರೀರ ಕಪ್ಪಾಗಿರಲಿಲ್ಲ ಅಥವಾ ಕರಿ ಕಂಬಳಿಯನ್ನು ಹೊದ್ದಿರಲಿಲ್ಲ. ಕಗ್ಗನೆಯ ಸೊಳ್ಳೆಗಳು ಅವರ ಮೈತುಂಬ ಕುಳಿತುಕೊಂಡಿದ್ದವು. ಶರೀರವು ಈ ಸೊಳ್ಳೆಗಳಿಂದ ಮುಚ್ಚಲ್ಪಟ್ಟಿತ್ತು. ಈಗ ಬೇರೆ ತರಹದ ಸಂಶಯ ಬರಹತ್ತಿತು. ಯಾಕೆಂದರೆ ಗುರುಬಂಧುವಿಗೆ ಎಂದೂ ಸಮಾಧಿ ಹತ್ತಿರಲಿಲ್ಲ, ಅವನು ಯೋಚನೆ ಮಾಡಹತ್ತಿದ. ಈ ಸೊಳ್ಳೆಗಳ ಕಾರಣದಿಂದ ಅವರೇನಾದರೂ ಜ್ಞಾನ ತಪ್ಪಿದ್ದಾರೆಯೇ ಹೇಗೆ? ಸೂರ್ಯನು ಮೇಲೆ ಬಂದಂತೆ, ಸೊಳ್ಳೆಗಳು ಮೆಲ್ಲಮೆಲ್ಲನೆ ಹಾರಿಹೋಗತೊಡಗಿದವು, ಯಾಕೆಂದರೆ ಸೊಳ್ಳೆಗಳ ಸಮಯ ರಾತ್ರಿ ಹೊತ್ತು ಮಾತ್ರವಾಗಿರುತ್ತದೆ. ವಿವೇಕಾನಂದರು ಸಮಾಧಿಯಿಂದ ಎಚ್ಚೆತ್ತರು. ಗುರುಬಂಧುವು ಕೇಳಿದನು "ತಮ್ಮ ಮೇಲೆ ಇಷ್ಟೊಂದು ಸೊಳ್ಳೆಗಳು ಮುತ್ತಿಗೆ ಹಾಕಿದ್ದವು. ನಿಮಗೆ ಹೆದರಿಕೆ ಉಂಟಾಗಲಿಲ್ಲವೆ? ಮೈ ಕಡಿತ ಉಂಟಾಗಲಿಲ್ಲವೆ?" ಸ್ವಾಮಿ ವಿವೇಕಾನಂದರು ಹೇಳಿದರು "ಶರೀರದ ಧರ್ಮ ಶರೀರದಲ್ಲಿತ್ತು, ನನ್ನಲ್ಲಿರಲಿಲ್ಲ. ನಾನು ಸ್ವರೂಪಸ್ಥನಾಗಿದ್ದೆ. ಯಾವಾಗ ಜಾಗ್ರತಾವಸ್ಥೆಯಲ್ಲಿ ಶರೀರಸ್ಥನಾಗುತ್ತೇನೊ ಆಗ ನನಗೆ ಶರೀರಧರ್ಮದ ಪ್ರತೀತಿಯುಂಟಾಗುತ್ತದೆ. ಯಾವಾಗ ಸಮಾಧಿಸ್ಥನಾಗುತ್ತೇನೋ ಆಗ ಶರೀರದಿಂದ ಬೇರೆಯಾಗುತ್ತಾನೆ" ಎಂದರು. ಗುರುಬಂಧುವು ಹೇಳಿದನು "ಇದು ಹೇಗೆ? ಆಶ್ಚರ್ಯವಾಗಿದೆ. ನನಗಂತೂ ರಾತ್ರಿಯೆಲ್ಲಾ ನಿದ್ರೆಯೇ ಬರಲಿಲ್ಲ. ಧ್ಯಾನ ಮತ್ತು ಸಮಾಧಿಯ ಮಾತಂತೂ ಬಹಳ ದೂರ ಉಳಿಯಿತು" ಎಂದರು. ಅದಕ್ಕೆ ಸ್ವಾಮಿ ವಿವೇಕಾನಂದರು ಹೀಗೆಂದರು -

ಶೀತೋಷ್ಣ ಸುಖ ದುಃಖದ ಪ್ರಭಾವ ಮೊದಲು ಮನಸ್ಸಿನ ಮೇಲಾಗುತ್ತದೆ ಮತ್ತು ಅದು 'ಅಹಂ' ನ ಮೂಲಕ ಆತ್ಮನ ತನಕ ಹೋಗಿ ಮುಟ್ಟುತ್ತದೆ. ಇದೇ ಅಧ್ಯಾಸವಾಗಿದೆ. ಸುಖದುಃಖಾದಿಗಳ ಪ್ರಭಾವ ಯಾವಾಗ ಮನಸ್ಸಿನ ಮೇಲೆ ಬೀಳುವುದಿಲ್ಲವೋ, ಆಗ ಜೀವನ ತಪೋಮಯವಾಗುತ್ತದೆ ಮತ್ತು ಶರೀರದಲ್ಲಿ ಸಹಿಸಿಕೊಳ್ಳುವ ಶಕ್ತಿ ಉಂಟಾಗುತ್ತದೆ. ಒಂದು ಕೋಲಿನ ಹೊಡೆತ ಶರೀರದ ಮೇಲೆ ಬಿತ್ತು, ಒಂದು ಚಾಕುವಿನ ಹೊಡೆತ ಬಿತ್ತು. ಸ್ಪರ್ಶವಂತೂ ಸಮವಾಗಿ ಆಯಿತು. ಆದರೆ ಕೋಲಿನ ಸ್ಪರ್ಶವನ್ನು ಸಹಿಸುವ ಶಕ್ತಿಯಿರುವುದರಿಂದ ಅದರ ಪ್ರಭಾವ ಮನಸ್ಸಿನ ಮೇಲುಂಟಾಗಲಿಲ್ಲ. ಚಾಕುವಿನ ಸ್ಪರ್ಶವನ್ನು ಸಹಿಸುವ ಶಕ್ತಿಯಿಲ್ಲವಾದ್ದರಿಂದ ಅದರ ಪ್ರಭಾವ ಮನಸ್ಸಿನ ಮೇಲಾಯಿತು. ತಪೋಮಯ ಜೀವನದಿಂದ ಒಂದನೆಯದಾಗಿ ಶೀತೋಷ್ಣಾದಿಯಲ್ಲಿ ತಿತಿಕ್ಷಾ ಉಂಟಾಗುತ್ತದೆ. ಎರಡನೆಯದಾಗಿ ಶರೀರ ವಿಸ್ಮೃತಿಯಾಗುತ್ತದೆ ಮತ್ತು ಲಕ್ಷ್ಯ ಆತ್ಮನಲ್ಲಿರುತ್ತದೆ. ತಪದಿಂದ ಪರಮಾತ್ಮ ಪ್ರಸನ್ನನಾಗಿ ಚಿತ್ತವನ್ನು ಪೂರ್ಣತಯಾ ಧ್ಯೇಯಾಕಾರವನ್ನಾಗಿ ಮಾಡಿ ದರ್ಶನವನ್ನು ಮಾಡಿಸುತ್ತಾನೆ.

"ಸ್ವ ವರ್ಣಾಶ್ರಮ ಧರ್ಮೇಣ ತಪಸಾ ಹರಿತೋಷಣಾತ್"

ಈ ಹರಿತೋಷ - ಹರಿಯ ಪ್ರಸನ್ನತೆ ತಪದ ಫಲವಾಗಿದೆ.

ಪಾರ್ವತಿಯ ತಪಶ್ಚರ್ಯದ ಬಗ್ಗೆ ಒಂದು ಪ್ರಸಂಗ -

ಶಂಕರ ಭಗವಾನನು ಕಾಮದೇವನನ್ನು ಸುಟ್ಟು ಹೊರಟು ಹೋದನು. ಆಗ ಪಾರ್ವತಿಯು ಅರಿತುದೇನೆಂದರೆ; ಶಾರೀರಿಕ ಆಕರ್ಷಣೆಯ ಕಾಮನೆಯಿಂದ ಭಗವಾನ್ ಶಂಕರನು ಆಕರ್ಷಿತನಾಗುವುದಿಲ್ಲವೆಂಬುದನ್ನು ಈ ಶರೀರವನ್ನು ಮರೆಯುವುದರಿಂದಲೇ ಭಗವತ್ ಪ್ರಸನ್ನತೆಯುಂಟಾಗುವುದು. ಭಗವಂತನು ಶರೀರಾದಿ ಸೌಂದರ್ಯಗಳ ಅಧೀನನಲ್ಲ. ಪುಷ್ಪದಂತನು ಶಿವಮಹಿಮ್ನ ಸ್ತೋತ್ರದಲ್ಲಿ ಹೇಳಿದ್ದಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವಲಾವಣ್ಯಶಂಸಾದ್ಧೃತಧನುಷಮಹ್ನಾಯ ತೃಣವತ್ ।
ಪುರಃಪ್ಲುಷ್ಟಂ ದೃಷ್ಟವಾ ಪುರಮಥನಪುಷ್ಪಾಯುಧಮಪಿ ॥

ಕಾಮದೇವನು ಧನುಷ್ಯವನ್ನು ಎತ್ತಿದ್ದ ಏಕೆಂದರೆ ಪಾರ್ವತಿಯ ಲಾವಣ್ಯವನ್ನು ಕಂಡು ಶಂಕರನು ಮರುಳಾಗಬಲ್ಲ ಎಂಬ ಭರವಸೆ ಅವನಿಗಿತ್ತು. ಆದರೆ, ಪಾರ್ವತಿಯ ಎದುರಿನಲ್ಲೆಯೇ ಪುಷ್ಪಾಯುಧ (ಕಾಮದೇವ) ನನ್ನು ಸುಟ್ಟು ಭಸ್ಮ ಮಾಡಿದನು. ಭಗವಾನ್‌ನು ಪುರಮಥನನಾಗಿದ್ದಾನೆ. ತ್ರಿಪುರಮಥನನಾಗಿದ್ದಾನೆ. ಜಾಗ್ರತ, ಸ್ವಪ್ನ, ಸುಷುಪ್ತಿಯಲ್ಲಿ, ಸ್ಥೂಲ, ಸೂಕ್ಷ್ಮ, ಕಾರಣಗಳು ಮೂರು ಪುರವಾಗಿವೆ. ಆ ಮೂರನ್ನು ಮಥನವನ್ನು ಮಾಡುವವನ ಆ ಭಗವಾನನ್ನು ಸ್ಥೂಲ ಶರೀರ ಲಾವಣ್ಯದಿಂದ ಹೇಗೆ ಆಕರ್ಷಿಸಲಾಗುವುದು? ಪಾರ್ವತಿದೇವಿಯು ತಪಶ್ಚರ್ಯವನ್ನು ಮಾಡಲು ನಿರ್ಧರಿಸಿದಳು. ಘನಘೋರವಾದ ಕಾಡಿಗೆ ಹೋದಳು. ಬೇಸಿಗೆಯ ಕಾಲದಲ್ಲಿ ಪಂಚಾಗ್ನಿಯ ತಾಪದಿಂದ ತಪಸ್ಸನ್ನು ಮಾಡಿದಳು. ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣದಲ್ಲಿ ಅಗ್ನಿಕುಂಡವನ್ನು ರಚಿಸಿ ಅಗ್ನಿಯನ್ನು ಉರಿಸಿದಳು. ಒಳಗಡೆ ಆಸನಸ್ಥಳಾಗಿ ತಪಸ್ಸನ್ನು ಮಾಡಹತ್ತಿದಳು. ಮೇಲಿನಿಂದ ಸೂರ್ಯನ ತಾಪ, ಇವೇ ಪಂಚಾಗ್ನಿ ತಾಪಗಳಾಗಿವೆ. ಮಳೆಗಾಲದಲ್ಲಿ ನೀರಿನಲ್ಲಿ ಕಂಠದವರೆವಿಗೆ ಮುಳುಗಿ ಧ್ಯಾನ ಜಪವನ್ನು ಮಾಡಿದಳು. ನಾಲ್ಕೂ ಕಡೆಯಲ್ಲೂ ನೀರಿದೆ, ಮೇಲಿನಿಂದ ಮಳೆಯು ಸುರಿಯುತ್ತಿದೆ. ಈ ತರಹ ಶೀತ ಮತ್ತು ಉಷ್ಣದಲ್ಲಿ ಯಾವ ಸುಖದುಃಖವಿದೆ ಅದರಲ್ಲಿ ಕೂಟಸ್ಥಳಾಗಿ ತಪವನ್ನು ಮಾಡಿದಳು. ಮೆಲ್ಲಮೆಲ್ಲನೆ ಪಾರ್ವತಿಯು ಶರೀರವನ್ನು ಮರೆಯುತ್ತಾಳೆ. ದೀರ್ಘಕಾಲದ ಈ ತಪಸ್ಸಿನ ಫಲದಿಂದಾಗಿ ಧ್ಯೇಯನಾದ ಭಗವಾನ್ ಶಂಕರನು ಪ್ರತ್ಯಕ್ಷ ರೂಪದಲ್ಲಿ ಪ್ರಕಟನಾದನು. ಅನೇಕ ಋಷಿಮುನಿಗಳೂ ಸಹ ಇದೇ ತರಹ ತಪಸ್ಸನ್ನು ಮಾಡಿ ಭಗವತ್ಸಾಕ್ಷಾರವನ್ನು ಪಡೆದಿದ್ದಾರೆ.

ಇವೆಲ್ಲವೂ ಈ ಮನುಷ್ಯ ಜನ್ಮದಲ್ಲಿ ಮಾತ್ರವೇ ಸಾಧ್ಯವಾಗಿವೆ. ಆದುದರಿಂದ ನಮ್ಮ ಮನಸ್ಸು ಸಾಧನೆಯಲ್ಲಿ ನಿರಂತರ ತೊಡಗಿದರೆ ನಮಗೆ ನಮ್ಮ ಸಾಧ್ಯದ ಪ್ರಾಪ್ತಿಯಲ್ಲಿ ಸಂಶಯವೇ ಇಲ್ಲ.

"ಜ್ಞಾನಾದೇವತು ಕೈವಲ್ಯಂ", ಜ್ಞಾನದ ಮೂಲಕವೇ ಮನುಷ್ಯನಿಗೆ ಮೋಕ್ಷ ಲಭಿಸುತ್ತದೆ. ಅರ್ಥಾತ್ ಸಾಧ್ಯದ ಪ್ರಾಪ್ತಿಯಾಗುತ್ತದೆ. ಮಾನವ ಶಬ್ದದ ಅರ್ಥವೇ ಅದು. ಮಾ-ಅಜ್ಞಾನ, ನ-ಇಲ್ಲ, ವ-ವರ್ತಿಸುವನು. ಅಂದರೆ ಅಜ್ಞಾನವಿಲ್ಲದೆ ಯಾವನು ವರ್ತಿಸುವನೋ ಅವನು ಮಾನವ. ಮಾನವನು ಬೇರೆ ಬೇರೆ ಉದ್ಯೋಗಗಳನ್ನು, ವ್ಯವಸಾಯಗಳನ್ನೊ ಇನ್ನಿತರೆ ಕಾಮಗಾರಿಗಳನ್ನು ಮಾಡಬಹುದು, ಆದರೆ ಎಲ್ಲವೂ ಜೀವನೋಪಾಯಕ್ಕಾಗಿ ಇರುವ ಕೆಲಸಗಳು, ಸಾಧ್ಯ (ಮೋಕ್ಷ) ಪ್ರಾಪ್ತಿಗಲ್ಲ. ಮೋಕ್ಷ ಸಾಧನೆಗೆ ನಿತ್ಯಾನಿತ್ಯ ವಸ್ತು ವಿವೇಕ ಜ್ಞಾನವೇ ಪ್ರಾಮುಖ್ಯವಾದದ್ದು. ಇದು ಜ್ಞಾನಿಯಾದವನಿಗೆ ಮಾತ್ರವೇ ಮೋಕ್ಷದ ಅರ್ಹತೆ ಬರುತ್ತದೆ.

ಆಹಾರ ನಿದ್ರಾ ಭಯ ಮೈಥುನಂಚ
ಸಾಮಾನ್ಯ ಮೇತತ್ ಪಶುಭಿರ್ ನರಾಣಾಂ
ಜ್ಞಾನಂ ಹಿತೇಷ ಮದಿಕೊ ವಿಷೆಷ
ಜ್ಞಾನೇನ ಹೀನಾ ಪಶುಭಿ ಸಮಾನ

ಆಹಾರ ಸಂಪಾದನೆ, ನಿದ್ರೆ, ಭಯ, ಸಂತಾನೋತ್ಪತ್ತಿಯ ಗುಣಗಳು ಮನುಷ್ಯರಿಗೂ ಪಶುಗಳಿಗೂ ಸರಿಸಮಾನವಾಗಿಯೇ ಇರುವವು. ಆದರೆ ಮನುಷ್ಯರಿಗೆ ಪ್ರಾಣಿಗಳಿಗಿಂತ ಹೆಚ್ಚಿನದಾಗಿ,

SRI JAGADGURU VISHWARADHYA
JNANA SIMHASAN JNANAMANDIR
LIBRARY

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾರಾಸಾರವನ್ನು ವಿವೇಚಿಸಿ ನೋಡುವ ಬುದ್ಧಿಶಕ್ತಿಯನ್ನು, ಜ್ಞಾನಶಕ್ತಿಯನ್ನು ನೀಡಲಾಗಿದೆ. ಜ್ಞಾನಶೂನ್ಯರಾಗಿರುವಂತಹ ಮನುಷ್ಯರು ಪ್ರಾಣಿಹಂತದಲ್ಲೇ ಇರುತ್ತಾರೆ ಅಥವಾ ಪ್ರಾಣಿಗಳಿಗಿಂತಲೂ ಕೀಳೆಂದರೆ ತಪ್ಪಾಗಲಾರದು.

ಪವಿತ್ರವಾದ ಮಾನವ ಜನ್ಮಕ್ಕೆ ಬಂದು, ಜ್ಞಾನದ್ವಾರ ಮೋಕ್ಷ ಪಡೆದು, ಜನ್ಮ ಮರಣ ಭವ ಬಂಧನದಿಂದ ದೂರವಾಗುವುದೇ ನಮ್ಮ ಆದ್ಯ ಕರ್ತವ್ಯ.

****

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

by eGangotri and Sarayu Trust. Funding by MoE-IKS

॥ ಧರ್ಮಕ್ಕಾಗಿ ದುಡಿಯೋಣ, ಧರ್ಮವನ್ನು ದು[illegible]ಳುವುದು ಬೇಡ
ತಿಳಿದವರಿಂದ ತಿಳಿದುಕೊಳ್ಳೋಣ, ತಿಳಿಯದವ[illegible] ತಿಳಿಸೋಣ॥

ನಾನು ಕಂಡಂತೆ ಹಾಗೂ ನನಗೆ ತಿಳಿದಂತೆ ಶ್ರೀ ಶ್ರೀ ಶ್ರೀ ಶಿವಾನಂದ ಶ್ರೀಗಳವರು ನೋಡಲು ಏನೂ ಅರಿಯದವರಂತೆ ಕಂಡರೂ ಅವರು ಸುಕ್ಷೇತ್ರ ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಇದ್ದು ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿ ಪಡೆದಿದ್ದು ಹಾಗೂ ಮೈಸೂರಿನಲ್ಲಿ ಸಂಸ್ಕೃತ ಮಹಾರಾಜ ಕಾಲೇಜಿನಲ್ಲಿ 'ಆಗಮ ಪ್ರವೀಣ' ಮಾಡಿಕೊಂಡಿದ್ದಾರೆ. ಶ್ರೀ ಕಾಶೀ ಜ್ಞಾನಪೀಠದಿಂದ ಶಿವಾದ್ವೈತ ತತ್ವಭೂಷಣ ಎಂಬ ಪ್ರಶಸ್ತಿ ಪಡೆದಿದ್ದು ಕಾಶೀ ಸಂಪೂರ್ಣಾನಂದ ವಿಶ್ವವಿದ್ಯಾನಿಲಯದಿಂದ 'ವೇದಾಂತಾಚಾರ್ಯ' ಎಂಬ ಪದವಿಯನ್ನೂ ಪಡೆದಿದ್ದಾರೆ. ಮಹಾರಾಷ್ಟ್ರ, ಕರ್ನಾಟಕ ಉತ್ತರಪ್ರದೇಶದಲ್ಲಿ, ಮರಾಠಿ, ಹಿಂದಿ, ಕನ್ನಡದಲ್ಲಿ ಅಸ್ಖಲಿತವಾಗಿ ಪ್ರವಚನ ಮೂಲಕ ವೇದಾಂತ ತತ್ವಪ್ರಚಾರ ಮಾಡು[illegible]ಠಾರಿ, ಹಿಂದಿ, ಕನ್ನಡದಲ್ಲಿ ಗ್ರಂಥಗಳನ್ನು ಬರೆದು ತಮ್ಮದೇ ಆದ ಪ್ರವಚನ ಧ್ವನಿಸುರುಳಿಗಳ ಮುಖಾಂತರ ಧರ್ಮಪ್ರಚಾರ ಮಾಡುತ್ತಿದ್ದಾರೆ. ತತ್ವಚಿಂತಕರೂ, ಸುಶೀಲರೂ, ಸದ್ವಿಚಾರಿಗಳೂ ಅತೀ ವಿನಯಶೀಲರಾದ ಶ್ರೀಗಳು ತಮ್ಮ ಚಿಕ್ಕವಯಸ್ಸಿನಲ್ಲಿಯೇ ವಿದ್ವತ್ ಸಂನ್ಯಾಸ ಸ್ವೀಕಾರ ಮಾಡಿದ್ದಾರೆ. ಅವರ ಜೀವನದಲ್ಲಿ ಅನೇಕ ಕಷ್ಟಗಳು ಬಂದರೂ ಕೂಡ ಎಲ್ಲವನ್ನೂ ಸಹ ದೈವೀಶಕ್ತಿಯಿಂದ ಪಾರುಮಾಡಿದ್ದಾರೆ. ಯಾವುದೇ ಜಾತಿ, ಮತ, ಪಂಥ, ಪಂಗಡ ರಾಜಕೀಯಗಳಿಗೆ ಒಳಪಡದೇ ಸರ್ವಧರ್ಮಮತಸಮನ್ವಯ ಅದ್ವೈತ ತತ್ವ ಭೋದಕರೆನಿಸಿ ಶ್ರೀ ಜಡಸಿದ್ಧ ಶಿವಯೋಗೀಶ್ವರ, ಶಾಂತಾಶ್ರಮ ದಾವಣಗೆರೆ. ಶ್ರೀ ಆದ್ಯಾತ್ಮ ಆಶ್ರಮ ಹಿರೇಹಳ್ಳಿ, ಶ್ರೀ ಗುರುಶಾಂತಾಶ್ರಮ ದಾವಣಗೆರೆ, ಈ ಮಠತ್ರಯ ಅಧ್ಯಕ್ಷರಾದ ಶ್ರೀಗಳೂ ಎಪ್ಪತ್ತು ವರ್ಷಗಳ ಹಿಂದೆ ಶ್ರೀ ಜಡಸಿದ್ಧ ಶಿವಯೋಗಿಗಳು ಸ್ಥಾಪನೆ ಮಾಡಿರುವ ಶಾಂತಾಶ್ರಮದ ಪೀಠಾಧಿಕಾರ ಸ್ವೀಕಾರ ಮಾಡಿದ್ದಾರೆ.

ಶ್ರೀಗಳವರ ಪಾದಗಳಿಗೆ ಅನಂತ ನಮನಗಳನ್ನು ಸಲ್ಲಿಸುತ್ತಾ

ಓಂಕಾರಪ್ಪ
ತೆರಿಗೆ ಸಲಹೆಗಾರರು, ದಾವಣಗೆರೆ

blic Domain. Jangamwadi Math Collection, Varanasi